ಸೋಮವಾರ, ಮೇ 5, 2025 | ₹ 7.00
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

prajavani.net | prajavani | prajavani | prajavani

ಪರಾಗ್ 'ಪಂಚ ಸಿಕ್ಸರ್'

ರಾಜಸ್ಥಾನ ರಾಯಲ್ಸ್ ತಂಡದ ರಿಯಾನ್ ಪರಾಗ್ ಅವರು ಐಪಿಎಲ್‌ನ ಒಂದೇ ಓವರ್‌ನಲ್ಲಿ ಐದು ಸಿಕ್ಸರ್ ಸಿಡಿಸಿದ ಐದನೇ ಬ್ಯಾಟರ್ ಎಂಬ ಹೆಗ್ಗಳಿಕೆಗೆ ಪಾತ್ರವಾದರು. ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಮೊಯಿನ್ ಅಲಿ ಓವರ್‌ನಲ್ಲಿ ಈ ಸಾಧನೆ ಮಾಡಿದರು.

95	45	6	8
ರನ್	ಎಸೆತ	ಬೌಂಡರಿ	ಸಿಕ್ಸರ್

PARISHRAMA
PU COLLEGE | NEET ACADEMY

UNDER THE GUIDANCE OF PRADEEP ESHWAR

The No.1 NEET Academy of Karnataka to send students to AIIMS & JIPMER

EXPECTING OUTSTANDING RESULTS IN NEET 2025

OUR PREVIOUS YEAR'S SELECTIONS

and many more...

Why Parishrama?

- Integrated NEET preparation
- Everyday objective type exam
- Solving more than 1 lakh MCQ's
- Special focus on answer writing for board exams
- Guiding you through every sub topic in detail, followed by MCQ's
- Parishrama is one among the top institutes to send students to AIIMS & JIPMER

Merit Concession Available

Flexible Fee Payment in 3 Installments Available

ADMISSIONS OPEN 2025-26
PUC (PCMB) & NEET LONG TERM
Residential & Semi Residential

1st Batch starts from 8th May
2nd Batch starts from 10th May
3rd Batch starts from 12th May
4th Batch starts from 14th May
5th Batch starts from 16th May

080-24413400 7483830545
www.parishramagroup.com | Follow us on:

Every parent would be worried about hostel food. Scan the QR code to see the review of our kitchen and how extra care is taken to provide nutritious food..

ಸಮುದಾಯಗಳು ಹೇಳಿಕೊಳ್ಳುವ ಜನಸಂಖ್ಯೆ ಪ್ರಮಾಣ: ಸಚಿವ ಶಿವರಾಜ ತಂಗಡಗಿ ಅಸಮಾಧಾನ

ರಾಜ್ಯದಲ್ಲಿ ಜನಸಂಖ್ಯೆ 15 ಕೋಟಿಯೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಂತರಾಜ ನೇತೃತ್ವದ ಆಯೋಗದ ವರದಿ ಅವೈಜ್ಞಾನಿಕ, ನಮ್ಮ ಸಮುದಾಯದ ಜನಸಂಖ್ಯೆ ಕೋಟಿ ಮೇಲಿದೆ ಎಂದು ಹಲವು ಸಮುದಾಯಗಳು ಹೇಳಿಕೊಳ್ಳುತ್ತಿವೆ. ಆದರೆ, ಈ ಸಂಖ್ಯೆಗಳನ್ನೆಲ್ಲ ನೋಡಿದರೆ ರಾಜ್ಯದ ಜನಸಂಖ್ಯೆ 7 ಕೋಟಿ ಬದಲು 15 ಕೋಟಿ ತಲುಪಲಿದೆ' ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಭಾನುವಾರ ಆಯೋಜಿಸಿದ್ದ ಭಗೀರಥ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ವಿವಿಧ ಸಮುದಾಯಗಳ ಜನಸಂಖ್ಯೆ ಸಾವಿರ, ಲಕ್ಷಗಳಲ್ಲಿ ಇರುವುದನ್ನು ಒಪ್ಪಲು ಯಾರೂ ಸಿದ್ಧರಿಲ್ಲದೇ ಇರುವುದೇ ಸಮಸ್ಯೆಯಾಗಿದೆ' ಎಂದು ತಿಳಿಸಿದರು.

ಸಮಾಜದಲ್ಲಿ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಅಸಮಾನತೆ ಇರಬಾರದು. ಎಲ್ಲರಿಗೂ ಸಮನಾಗಿ ಸವಲತ್ತು ಸಿಗುವಂತಿರಬೇಕು. ಯಾವ ಸಮುದಾಯದ ಜನಸಂಖ್ಯೆ ಎಷ್ಟಿದೆ ಎಂದು ನಿಖರವಾಗಿ ತಿಳಿಯಬೇಕಿದ್ದರೆ ಜಾತಿ ಜನಗಣತಿ ವರದಿ ಅಗತ್ಯ ಎಂದು ಪ್ರತಿಪಾದಿಸಿದರು.

ಬಸವಾದಿ ಶರಣರು, ಬುದ್ಧ ಮತ್ತು ಅಂಬೇಡ್ಕರ್ ಅವರು ಹೇಳಿದ ಸಮ-ಸಮಾಜದ ನಿರ್ಮಾಣಕ್ಕಾಗಿ ಪ್ರತಿ ಸಮುದಾಯಕ್ಕೂ ಆದ್ಯತೆ ನೀಡಬೇಕು. ಆಗ ಮಾತ್ರ ಸಮ ಸಮಾಜದ ಕನಸು ಸಾಕಾರಗೊಳ್ಳಲು ಸಾಧ್ಯ ಎಂದು ಹೇಳಿದರು.

'ಉಪ್ಪಾರ ನಿಗಮಕ್ಕೆ ಪ್ರಸ್ತುತ ನಾನೇ ಅಧ್ಯಕ್ಷ. ಎರಡು ತಿಂಗಳಲ್ಲಿ ಹೊಸ ಅಧ್ಯಕ್ಷರ ನೇಮಕವಾಗಲಿದೆ. ಪ್ರಸಕ್ತ ವರ್ಷ ನಿಗಮಕ್ಕೆ ₹ 42 ಕೋಟಿ ಅನುದಾನ ನೀಡಲಾಗಿದೆ. ಇಷ್ಟು ಅನುದಾನವನ್ನು ಯಾವುದೇ ಪಕ್ಷದ ಸರ್ಕಾರವೂ ನೀಡಿರಲಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿವಿಧ ನಿಗಮಗಳಿಗೆ ಒಟ್ಟು ₹ 1,600 ಕೋಟಿ ಅನುದಾನ ಒದಗಿಸಿದ್ದಾರೆ' ಎಂದು ಮಾಹಿತಿ ನೀಡಿದರು.

ಭಗೀರಥ ಗುರುಪೀಠದ ಪುರುಷೋತ್ತಮಾನಂದಪುರಿ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ ಡಾ.ಕೆ.ಎನ್. ರವೀಂದ್ರನಾಥ್, ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಯು.ವೆಂಕೋಬ, ಉಪ್ಪಾರ ಸಂಘದ ಬೆಂಗಳೂರು ಜಿಲ್ಲಾ ಘಟಕದ ಅಧ್ಯಕ್ಷ ಎನ್. ಸುನೀಲ್ ಕುಮಾರ್, ಪ್ರಾಧ್ಯಾಪಕ ಸಂಗಮೇಶ್ ಎಸ್.ಗಣೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಕೆ.ಎಂ. ಗಾಯಿತ್ರಿ ಭಾಗವಹಿಸಿದ್ದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಭಾನುವಾರ ಆಯೋಜಿಸಿದ್ದ ಭಗೀರಥ ಜಯಂತಿ ಕಾರ್ಯಕ್ರಮದಲ್ಲಿ ಭಗೀರಥರ ಭಾವಚಿತ್ರಕ್ಕೆ ಕೆ.ಎಂ.ಗಾಯಿತ್ರಿ, ಶಿವರಾಜ ಎಸ್. ತಂಗಡಗಿ, ಪುರುಷೋತ್ತಮಾನಂದಪುರಿ ಸ್ವಾಮೀಜಿ ಪುಷ್ಪ ನಮನ ಸಲ್ಲಿಸಿದರು

'ಭೋವಿ ವಡ್ಡರ್ ಎಂದೇ ಬರೆಯಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಒಳಮೀಸಲಾತಿ ಸಂಬಂಧ ಗಣತಿದಾರರು ಮನೆ–ಮನೆಗೆ ಬಂದಾಗ ಭೋವಿ ಜನಾಂಗದವರು ಕಡ್ಡಾಯವಾಗಿ 'ಭೋವಿ ವಡ್ಡರ್' ಎಂದೇ ಬರೆಸಬೇಕು' ಎಂದು ಚಿತ್ರದುರ್ಗದ ಭೋವಿ ಗುರುಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಕರೆ ನೀಡಿದರು.

ಅಂತರರಾಷ್ಟ್ರೀಯ ಭಾರತೀಯ ಭೋವಿ (ವಡ್ಡರ) ಸಮಾಜ ನಗರದಲ್ಲಿ ಭಾನುವಾರ ಒಳಮೀಸಲಾತಿ ಕುರಿತು ಆಯೋಜಿಸಿದ್ದ ಜನಪ್ರತಿನಿಧಿಗಳ ಸಭೆಯಲ್ಲಿ ಅವರು ಮಾತನಾಡಿದರು.

'ಭೋವಿ ಜನರಲ್ಲಿ ತಮ್ಮ ಜಾತಿಯ ಬಗ್ಗೆ ಕೀಳರಿಮೆ ಇದೆ. ಹೀಗಾಗಿ ಅವರು ತಮ್ಮ ಜಾತಿಯ ಹೆಸರು ಹೇಳಿಕೊಳ್ಳುವುದಿಲ್ಲ. ಸರ್ಕಾರದ ಸವಲತ್ತುಗಳು ಸರಿಯಾಗಿ ಸಿಗಬೇಕೆಂದರೆ ಜಾತಿಯ ಹೆಸರನ್ನು ಸರಿಯಾಗಿ ಬರೆಸಬೇಕು' ಎಂದರು.

ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ್ ಎಸ್.ತಂಗಡಗಿ, 'ಇದು ಅತ್ಯಂತ ಮಹತ್ವದ ಕಾಲ. ಸಮುದಾಯದ ಅಕ್ಷರಸ್ತರು ಸ್ನೇಹಿತರು, ಸಂಬಂಧಿಗಳಿಗೆ ಸಮೀಕ್ಷೆ ವೇಳೆ 'ಭೋವಿ ವಡ್ಡರ್' ಎಂದೇ ಬರೆಸಬೇಕು ಎಂದು ತಿಳಿವಳಿಕೆ ಮೂಡಿಸಬೇಕು' ಎಂದರು.

ಸಂಸದ ಮಲ್ಲೇಶ್‌ಬಾಬು, 'ನಮ್ಮ ಜನಾಂಗದವರಿಗೆ ಸಾಮಾಜಿಕ ನ್ಯಾಯ, ಶಿಕ್ಷಣ, ಆರ್ಥಿಕ, ರಾಜಕೀಯ ಅಧಿಕಾರ ಸಿಗಲು ಸರಿಯಾಗಿ ಜಾತಿ ಹೆಸರು ಬರೆಸಬೇಕು. ಇಲ್ಲದಿದ್ದರೆ ಜನಾಂಗದ ಜನ ಕಡಿಮೆ ಇದ್ದಾರೆ ಎಂದಾಗುತ್ತದೆ. ಸವಲತ್ತು ಕಳೆದುಕೊಳ್ಳಬೇಕಾಗುತ್ತದೆ' ಎಂದರು.

ಭೋವಿ ಸಮಾಜದ ಜನಪ್ರತಿನಿಧಿಗಳ ಸಭೆಯಲ್ಲಿ ಚಿತ್ರದುರ್ಗದ ಭೋವಿ ಗುರುಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಮಾತನಾಡಿದರು. ಸಂಸದ ಮಲ್ಲೇಶ್ ಬಾಬು, ಸಮುದಾಯದ ಮುಖಂಡರಾದ ಜಿ.ವಿ.ಸೀತಾರಾಮು, ರವಿ ಮಾಕಳಿ, ಅರವಿಂದ ಲಿಂಬಾವಳಿ, ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ರವಿಕುಮಾರ್, ಸಚಿವ ಶಿವರಾಜ ಎಸ್.ತಂಗಡಗಿ ಉಪಸ್ಥಿತರಿದ್ದರು

'ಜಾತಿಜನಗಣತಿ, ಯೂ ಟರ್ನ್ ಹೊಡೆದ ಕೇಂದ್ರ'

ಪ್ರಜಾವಾಣಿ ವಾರ್ತೆ

ಸತೀಶ ಜಾರಕಿಹೊಳಿ

ಹುಬ್ಬಳ್ಳಿ: 'ಜಾತಿ ಜನಗಣತಿ ವಿರೋಧಿಸುತ್ತಿದ್ದ ಕೇಂದ್ರ ಸರ್ಕಾರ, ಇದೀಗ ಒಮ್ಮೆಲೆ ಯೂಟರ್ನ್ ಹೊಡೆದು, ತಾನು ಸಹ ಜಾತಿ ಗಣತಿ ಮಾಡಲು ಹೊರಟಿದೆ' ಎಂದು ಲೋಕೋಪಯೋಗಿ ಇಲಾಖೆ ಸಚಿವ ಸತೀಶ ಜಾರಕಿಹೊಳಿ ವ್ಯಂಗ್ಯವಾಡಿದರು.

ನಗರದ ವಿಮಾನ ನಿಲ್ದಾಣದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು,'ಜಾತಿ ಜನಗಣತಿ ಬಗ್ಗೆ ಬಿಜೆಪಿಗೆ ಒಮ್ಮೆಲೆ ಪ್ರೀತಿ ಬಂದು ಬಿಟ್ಟಿದೆ. ಅವರು ಗಣತಿ ಮಾಡುವುದಾಗಿದ್ದರೆ ಇಷ್ಟು ದಿನ ನಮ್ಮ ನಿಲುವು ವಿರೋಧಿಸಿದ್ದು ಏಕೆ' ಎಂದು ಪ್ರಶ್ನಿಸಿದರು.

'ಜಾತಿ ಜನಗಣತಿಯ ಕುರಿತು ಚರ್ಚಿಸಲು ಮೇ 9ರಂದು ಸಚಿವ ಸಂಪುಟ ಸಭೆ ನಡೆಯಲಿದೆ. ಅಲ್ಲಿ ಎಲ್ಲ ಸಚಿವರ ಅಭಿಪ್ರಾಯ ಸಂಗ್ರಹಿಸಿ ಚರ್ಚಿಸಲಾಗುವುದು. ಜನರ ಬೇಕು, ಬೇಡಗಳನ್ನು ಸರ್ಕಾರಕ್ಕೆ ತಿಳಿಸುವುದು ಸಚಿವರ ಹಕ್ಕು. ಸ್ವೀಕರಿಸುವುದು, ಬಿಡುವುದು ಸರ್ಕಾರಕ್ಕೆ ಬಿಟ್ಟಿದ್ದು' ಎಂದರು.

ಜನಿವಾರ ಪ್ರಕರಣ: 'ಕಲಬುರ್ಗಿಯಲ್ಲಿ ಭಾನುವಾರ ನೀಟ್ ಪರೀಕ್ಷೆ ವೇಳೆ ಕಾಲೇಜು ಸಿಬ್ಬಂದಿ ಜನಿವಾರ ತೆಗೆಸಿರಲೂ ಬಹುದು. ಅದು ಖಾಸಗಿ ಕೇಂದ್ರದಲ್ಲಿ ನಡೆಯುತ್ತಿದ್ದ ಪರೀಕ್ಷೆ. ಕೆಲವು ಕಡೆ ಸರ್ಕಾರಕ್ಕೆ ಕೆಟ್ಟ ಹೆಸರು ತರಲು ಇಂಥ ಕೃತ್ಯ ಎಸಗಿರಬಹುದು' ಎಂದು ಸಚಿವರು ಹೇಳಿದರು.

'ರಾಜ್ಯ ಸರ್ಕಾರ ಪೊಲೀಸರಿಗೆ ಫ್ರೀ ಹ್ಯಾಂಡ್ ನೀಡುತ್ತಿಲ್ಲ' ಎನ್ನುವ ಕೇಂದ್ರ ಸಚಿವ ವಿ. ಸೋಮಣ್ಣ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು,'ಕೊಲೆ ಪ್ರಕರಣಕ್ಕೆ ಸಂಬಂಧಿಸಿ ಬಿಜೆಪಿಯವರು ರಾಜಕೀಯ ಮಾಡುತ್ತಿರುವುದು ಸರಿಯಲ್ಲ. ಪೊಲೀಸರು ಮುಕ್ತವಾಗಿ ಕಾರ್ಯ ನಿರ್ವಹಿಸದಿದ್ದರೆ ಆರೋಪಿಗಳು ಇಷ್ಟು ಬೇಗ ಬಂಧನವಾಗುತ್ತಿದ್ದರೆ' ಎಂದು ಪ್ರಶ್ನಿಸಿದರು.

'ಪಾಕಿಸ್ತಾನದ ವಿರುದ್ಧ ಭಾರತ ಕಟ್ಟುನಿಟ್ಟಿನ ನಿರ್ಧಾರ ತೆಗೆದುಕೊಳ್ಳಲಿದೆ. ದೇಶದ ರಕ್ಷಣೆಗೆ 22 ಲಕ್ಷ ಸೈನಿಕರು ಇದ್ದಾರೆ. ಪಾಕಿಸ್ತಾನದ ವಿರುದ್ಧ ಹೋರಾಡಲು ಸಚಿವ ಜಮೀರ್ ಅಹ್ಮದ್ ಹೋಗುವ ಅಗತ್ಯವಿಲ್ಲ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ಸಿದ್ದರಾಮಯ್ಯದು ದೇಹ ಒಂದು, ನಾಲಗೆ ಎರಡು'

ಬೆಂಗಳೂರು: 'ಜಾತಿ ಜನಗಣತಿಯನ್ನು ದೇವೇಗೌಡರಾಗಲೀ, ನಮ್ಮ ಪಕ್ಷವಾಗಲೀ ವಿರೋಧಿಸಿಲ್ಲ. ರಾಜ್ಯ ಸರ್ಕಾರದ ಜಾತಿ ಜನಗಣತಿ ಸರಿಯಾಗಿಲ್ಲ ಎಂಬುದಷ್ಟೇ ನಮ್ಮ ಪ್ರತಿಪಾದನೆ. ಇದನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅರ್ಥಮಾಡಿಕೊಳ್ಳದೆ, ಲಘುವಾಗಿ ಮಾತನಾಡುತ್ತಿದ್ದಾರೆ' ಎಂದು ಜೆಡಿಎಸ್ ಪ್ರಕಟಣೆ ತಿಳಿಸಿದೆ.

ಜಾತಿಜನಗಣತಿ ವಿಷಯದಲ್ಲಿ ದೇವೇಗೌಡ ಅವರು ಇಬ್ಬಗೆಯ ನೀತಿ ಅನುಸರಿಸುತ್ತಿದ್ದಾರೆ ಎಂದು ಸಿದ್ದರಾಮಯ್ಯ ಅವರು ನೀಡಿದ್ದ ಹೇಳಿಕೆಗೆ ಜೆಡಿಎಸ್ ಪ್ರತಿಕ್ರಿಯೆ ನೀಡಿದೆ.

'ದೇವೇಗೌಡರ ಗರಡಿಯಲ್ಲೇ ಬೆಳೆದು, ಈಗ ಅವರ ವಿರುದ್ಧವೇ ಸಿದ್ದರಾಮಯ್ಯ ಮಾತನಾಡುತ್ತಿದ್ದಾರೆ. ನಿಜವಾಗಿಯೂ ಇಬ್ಬಗೆಯ ನೀತಿ ಅವರದ್ದೇ. ನಿಜವಾಗಿಯೂ ಅವರದ್ದು ಒಂದು ದೇಹ, ಎರಡು ನಾಲಿಗೆ. ದೇವೇಗೌಡರನ್ನು ರಚನಾತ್ಮಕವಾಗಿ ಟೀಕಿಸುವುದಕ್ಕೆ ನಮ್ಮ ಅಭ್ಯಂತರವಿಲ್ಲ. ಆದರೆ ಅನಗತ್ಯ ವಿಷಕಾರುವುದು ಸರಿಯಲ್ಲ' ಎಂದಿದೆ.

'ಇದೇ ಸಿದ್ದರಾಮಯ್ಯ ಅವರು ಜನತಾ ಪರಿವಾರದಲ್ಲಿದ್ದಾಗ ಇಂದಿರಾ ಗಾಂಧಿ ವಿರುದ್ಧ ಅಣಿಮುತ್ತುಗಳನ್ನು ಉದುರಿಸಿದ್ದರು. ಅದನ್ನು ಈಗಿನ ಕಾಂಗ್ರೆಸ್ ನಾಯಕರು ಸಹಿಸಿಕೊಳ್ಳಬಲ್ಲರೇ ಎಂದು ಪ್ರಶ್ನಿಸಿದರು.

'ಒಂದು ವಾರ ಗಾಳಿ ಮಳೆ ಸಾಧ್ಯತೆ'

ಬೆಂಗಳೂರು: ರಾಜ್ಯದಲ್ಲಿ ಮುಂದಿನ ಒಂದು ವಾರ ಗಾಳಿ–ಮಳೆ ಹೆಚ್ಚಳವಾಗುವ ಸಾಧ್ಯತೆಯಿದೆ. ಸೋಮವಾರದಿಂದ ನಾಲ್ಕು ದಿನಗಳು ಬಹುತೇಕ ಜಿಲ್ಲೆಗಳಿಗೆ ಹವಾಮಾನ ಇಲಾಖೆಯು 'ಯೆಲ್ಲೊ ಅಲರ್ಟ್' ಘೋಷಿಸಿದೆ.

ಕರಾವಳಿಯ ದಕ್ಷಿಣ ಕನ್ನಡದ ಕೆಲವೆಡೆ ಸೋಮವಾರ ಗುಡುಗು ಸಹಿತ ಮಳೆ ಆಗುವ ಸಾಧ್ಯತೆಯಿದೆ. ಉತ್ತರ ಒಳನಾಡಿನ ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು ಜಿಲ್ಲೆಯಲ್ಲಿ ಗಂಟೆಗೆ 40ರಿಂದ 50 ಕಿ.ಮೀ. ವೇಗದಲ್ಲಿ ಗಾಳಿ ಬೀಸುವ ಸಂಭವವಿದೆ.

ತುಮಕೂರು, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ಹಾಸನ, ಚಿಕ್ಕಮಗಳೂರು, ಬಳ್ಳಾರಿ, ಚಿತ್ರದುರ್ಗ, ಜಿಲ್ಲೆಯ ಕೆಲವೆಡೆ 30ರಿಂದ 40 ಕಿ.ಮೀ. ವೇಗದಲ್ಲಿ ಗಾಳಿ ಜೊತೆಗೆ ಮಳೆಯಾಗಲಿದೆ ಎಂದು ಇಲಾಖೆ ತಿಳಿಸಿದೆ.

ಸೋಮವಾರ 19 ಜಿಲ್ಲೆಗಳಿಗೆ, ಮಂಗಳವಾರ 26 ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ. ಬೆಳಗಾವಿ, ಬಾಗಲಕೋಟೆ, ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆ ಹೊರತುಪಡಿಸಿ ಉಳಿದ ಎಲ್ಲ ಜಿಲ್ಲೆಗಳಲ್ಲಿ ಗುಡುಗು ಸಹಿತ ಮಳೆಯಾಗುವ ಸಂಭವವಿದೆ. ಬುಧವಾರ ಹಾಗೂ ಗುರುವಾರ 25 ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ಹಾಗೂ ಚಿತ್ರದುರ್ಗ ಜಿಲ್ಲೆಗೆ 'ಆರೆಂಜ್ ಅಲರ್ಟ್' ನೀಡಲಾಗಿದೆ. ಕರಾವಳಿ, ಉತ್ತರ ಒಳನಾಡಿನ ಕೆಲವೆಡೆ ಭಾನುವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ 24 ಗಂಟೆಗಳಲ್ಲಿ ಉಷ್ಣಾಂಶ ಸಾಮಾನ್ಯಕ್ಕಿಂತ 1ರಿಂದ 3 ಡಿಗ್ರಿ ಸೆಲ್ಸಿಯಸ್‌ವರೆಗೆ ಹೆಚ್ಚಳವಾಗಿತ್ತು. ಕಲಬುರಗಿಯಲ್ಲಿ ಗರಿಷ್ಠ ಉಷ್ಣಾಂಶ (42 ಡಿಗ್ರಿ ಸೆಲ್ಸಿಯಸ್) ದಾಖಲಾಗಿದೆ.

ಸುದ್ದಿ 2 ನಿಮಿಷ

ಸುಹಾಸ್ ಶೆಟ್ಟಿ ಮೇಲೆ ಐದು ಕೇಸ್‌ಗಳಿವೆ– ಗೃಹ ಸಚಿವ

ಬೆಂಗಳೂರು: 'ಮಂಗಳೂರಿನ ಬಜಪೆ ಬಳಿ ಕೊಲೆಗೀಡಾದ ಸುಹಾಸ್ ಶೆಟ್ಟಿ ಮೇಲೆ ಐದು ಕೇಸ್‌ಗಳಿವೆ. ಹೀಗಾಗಿ ನಾವು ಯಾರೂ ಅವರ ಮನೆಗೆ ಭೇಟಿ ಕೊಟ್ಟಿಲ್ಲ' ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ಸುಹಾಸ್ ಶೆಟ್ಟಿ ಕುಟುಂಬವನ್ನು ಸರ್ಕಾರದ ಪರವಾಗಿ ಭೇಟಿ ಮಾಡಿ ಯಾರೂ ಸಾಂತ್ವನ ಹೇಳದಿರುವ ಕುರಿತು ಸುದ್ದಿಗಾರರ ಪ್ರಶ್ನೆಗೆ ಅವರು, 'ಇದು ಕೊಲೆ ಪ್ರಕರಣ. ಸುಹಾಸ್ ಶೆಟ್ಟಿ ಕುಟುಂಬಕ್ಕೆ ನ್ಯಾಯ ಕೊಡಿಸುವ ಕೆಲಸವನ್ನು ಸರ್ಕಾರ ಮಾಡಲಿದೆ' ಎಂದರು.

'ಈ ಪ್ರಕರಣದಲ್ಲಿ ಬಂಧಿತರು ನಿಜವಾದ ಆರೋಪಿಗಳೇ' ಎಂದು ಶಂಕೆ ವ್ಯಕ್ತವಾಗಿರುವ ಬಗ್ಗೆ ಮಾತನಾಡಿದ ಅವರು, 'ಯಾರನ್ನೋ ಆರೋಪಿ ಎಂದು ಹೇಳಲು ಆಗುತ್ತದೆಯೇ? ಕೊಲೆ ಪ್ರಕರಣದಲ್ಲಿ ಯಾರ್‍ಯಾರನ್ನೊ ಬಂಧಿಸಲು ಆಗುವುದಿಲ್ಲ' ಎಂದರು.

'ಮುಸ್ಲಿಂ ಸಮುದಾಯದ ಪ್ರಮುಖರು ಅವರೇ ಬಂದು ನನ್ನನ್ನು ಭೇಟಿ ಮಾಡಿದರು. ಭೇಟಿ ಮಾಡಲು ಬರುವವರಿಗೆ ಬೇಡ ಎಂದು ಹೇಳಲು ಆಗುತ್ತದೆಯೇ? ಬೇರೆ ಸಮುದಾಯದವರೂ ಬರಬಹುದಿತ್ತು. ಆದರೆ, ಬರಲಿಲ್ಲ' ಎಂದೂ ಹೇಳಿದರು.

ಸುಹಾಸ್ ಶೆಟ್ಟಿ ಕೊಲೆ ಪ್ರಕರಣವನ್ನು ಎನ್‌ಐಎ ತನಿಖೆಗೆ ವಹಿಸಬೇಕು ಎಂಬ ಬಿಜೆಪಿ ನಾಯಕರ ಒತ್ತಾಯ ಕುರಿತು 'ಅದು ಬಿಜೆಪಿಯವರ ಅಭಿಪ್ರಾಯ. ಪೊಲೀಸ್ ಇಲಾಖೆ ಸಮರ್ಥವಾಗಿ ಕೆಲಸ ಮಾಡುತ್ತಿದೆ ' ಎಂದರು.

ವಿಚಾರಣಾಧೀನ ಕೈದಿ ಪರಾರಿ

ಬೆಂಗಳೂರು: ಅನಾರೋಗ್ಯಕ್ಕೀಡಾಗಿ ಚಿಕಿತ್ಸೆ ಪಡೆಯುತ್ತಿದ್ದ ವಿಚಾರಣಾಧೀನ ಕೈದಿಯೊಬ್ಬ ಶನಿವಾರ ರಾತ್ರಿ ವಿಕ್ಟೋರಿಯಾ ಆಸ್ಪತ್ರೆಯಿಂದ ಪರಾರಿಯಾಗಿದ್ದಾನೆ.

ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕಿನ ಚಂದ್ರಶೇಖರ್ (32) ಪರಾರಿಯಾದ ಆರೋಪಿ. ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಜೈಲರ್ ಡಿ.ಗೋಪಿನಾಥ್ ಅವರ ದೂರು ಆಧರಿಸಿ ವಿ.ವಿ.ಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'2023ರಲ್ಲಿ ಸುಬ್ರಹ್ಮಣ್ಯನಗರ ಠಾಣೆಯಲ್ಲಿ ದಾಖಲಾಗಿದ್ದ ಡಕಾಯಿತಿ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿದ್ದ ಚಂದ್ರಶೇಖರ್, ಎರಡು ವರ್ಷಗಳಿಂದ ಪರಪ್ಪನ ಅಗ್ರಹಾರ ಜೈಲಿನಲ್ಲಿ ವಿಚಾರಣಾಧೀನ ಕೈದಿಯಾಗಿದ್ದ. ಮೇ 2ರಂದು ಎದೆ ನೋವು ಹಾಗೂ ವಾಂತಿ ಹೆಚ್ಚಾಗಿದ್ದರಿಂದ ಜೈಲಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿತ್ತು. ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ವೈದ್ಯರ ಸೂಚನೆ ಮೇರೆಗೆ ತುರ್ತುನಿಗಾ ಘಟಕದ 3ನೇ ಮಹಡಿಯಲ್ಲಿ ಒಳ ರೋಗಿಯಾಗಿ ಚಿಕಿತ್ಸೆ ಪಡೆಯುತ್ತಿದ್ದ. ಆತನ ಬೆಂಗಾವಲಾಗಿ ಜೈಲು ವೀಕ್ಷಕ ಸಂತೋಷ್ ರಾಥೋಡ್ ಅವರನ್ನು ನೇಮಿಸಲಾಗಿತ್ತು' ಎಂದು ಪೊಲೀಸರು ತಿಳಿಸಿದ್ದಾರೆ.

'ಮೇ 3ರ ರಾತ್ರಿ 11 ಗಂಟೆ ಸುಮಾರಿಗೆ ಆರೋಪಿ ತುರ್ತು ನಿಗಾ ಘಟಕದಿಂದ ಪರಾರಿಯಾಗಿದ್ದಾನೆ. ಈ ವಿಚಾರ ತಿಳಿದ ಸಂತೋಷ್ ರಾಥೋಡ್, ಆಸ್ಪತ್ರೆ ಹಾಗೂ ಸುತ್ತಮುತ್ತ ಹುಡುಕಾಟ ನಡೆಸಿದ್ದಾರೆ. ಆರೋಪಿ ಪತ್ತೆಯಾಗದ ಕಾರಣ ಜೈಲಿನ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ. ಜೈಲರ್ ಡಿ.ಗೋಪಿನಾಥ್ ಹಾಗೂ ಇತರೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಬಳಿಕ ಠಾಣೆಗೆ ಬಂದು ದೂರು ನೀಡಿ, ಆರೋಪಿಯನ್ನು ಮರು ಬಂಧಿಸುವಂತೆ ಕೋರಿದ್ದಾರೆ. ಪತ್ತೆ ಕಾರ್ಯ ನಡೆಯುತ್ತಿದೆ' ಎಂದು ಪೊಲೀಸರು ಹೇಳಿದರು.

ಪ್ರತಿಭಟನೆ... ಕೇಂದ್ರ ಸರ್ಕಾರ ವಕ್ಫ್ ತಿದ್ದುಪಡಿ ಕಾಯ್ದೆ ಹಿಂಪಡೆಯುವಂತೆ ಒತ್ತಾಯಿಸಿ ಕಲಬುರಗಿಯ ಪೀರ್ ಬಂಗಾಲಿ ದರ್ಗಾ ಮೈದಾನದಲ್ಲಿ ಭಾನುವಾರ ಸಂಜೆ ಅಖಿಲ ಭಾರತೀಯ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿ, ವಿವಿಧ ಪ್ರಗತಿಪರ, ಸಂವಿಧಾನ ಪರ ಸಂಘಟನೆಗಳ ಸಹಯೋಗದಲ್ಲಿ ಆಯೋಜಿಸಿದ್ದ ಪ್ರತಿಭಟನಾ ಸಮಾವೇಶದಲ್ಲಿ ಭಾಗವಹಿಸಿದ್ದ ಜನಸ್ತೋಮ

ಚಿತ್ರ: ತಾಜುದ್ದೀನ್ ಆಜಾದ್

ಸಿಎಸ್ ಅಧ್ಯಕ್ಷತೆಯಲ್ಲಿ 'ವ್ಯಾಪಕ ಆಧಾರಿತ ಹುಡುಕಾಟ ಸಮಿತಿ' ರಚಿಸಿ ಆದೇಶ

ಕೆಪಿಎಸ್‌ಸಿಗೆ ನೇಮಕ: ಸಮಿತಿ ರಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಅಧ್ಯಕ್ಷರು, ಸದಸ್ಯರ ನೇಮಕಾತಿಗೆ ಸರ್ಕಾರಕ್ಕೆ ಹೆಸರು ಶಿಫಾರಸು ಮಾಡಲು ಮುಖ್ಯ ಕಾರ್ಯದರ್ಶಿ (ಸಿಎಸ್) ಅಧ್ಯಕ್ಷತೆಯಲ್ಲಿ ಮೂವರು ಸದಸ್ಯರನ್ನು ಒಳಗೊಂಡ 'ವ್ಯಾಪಕ ಆಧಾರಿತ ಹುಡುಕಾಟ ಸಮಿತಿ' ರಚಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹುದ್ದೆಯಿಂದ ನಿವೃತ್ತರಾದ ಐಎಎಸ್ ಅಧಿಕಾರಿ ಅಥವಾ ಕೇಂದ್ರ ಸರ್ಕಾರದ ಹಿಂದಿನ ಕಾರ್ಯದರ್ಶಿ, ಬೆಂಗಳೂರಿನಲ್ಲಿರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸಂಸ್ಥೆ, ಭಾರತೀಯ ವಿಜ್ಞಾನ ಸಂಸ್ಥೆ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಅಥವಾ ಸಮಾನ ಹೆಸರಾಂತ ಕೇಂದ್ರೀಯ ಸಂಸ್ಥೆಗಳ ನಿವೃತ್ತ ಅಥವಾ ಅಧಿಕಾರರೂಢ ನಿರ್ದೇಶಕರು ಮತ್ತು ಸರ್ಕಾರದ ಕಾರ್ಯದರ್ಶಿ ಅಥವಾ ಕೇಂದ್ರ ಸರ್ಕಾರದ ಜಂಟಿ ಕಾರ್ಯದರ್ಶಿ ಹುದ್ದೆಯಿಂದ ನಿವೃತ್ತರಾಗಿರುವ ಐಎಎಸ್ ಅಥವಾ ಕೇಂದ್ರ ನಾಗರಿಕ ಸೇವೆಗಳ ಗ್ರೂಪ್ 'ಎ' ಅಧಿಕಾರಿ ಸಮಿತಿಯ ಸದಸ್ಯರು. ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ (ಡಿಪಿಎಆರ್) ಕಾರ್ಯದರ್ಶಿ ಈ ಸಮಿತಿಯ ಸದಸ್ಯ ಕಾರ್ಯದರ್ಶಿ.

ಸಮಿತಿ ಕೆಲಸವೇನು?: 'ಕೆಪಿಎಸ್‌ಸಿ ಅಧ್ಯಕ್ಷ, ಸದಸ್ಯರ ಸ್ಥಾನ ತೆರವಾಗುವ ಮೂರು ತಿಂಗಳ ಮೊದಲೇ ತೆರವಾಗುವ ಅಧಿಕಾರಿ/ ಅಧಿಕಾರೇತರ ಹುದ್ದೆಗಳ ಸಂಖ್ಯೆ, ಅರ್ಹತೆಯ ವಿವರ, ಸಂಬಳ ಮತ್ತು ಭತ್ಯೆಗಳು, ಅರ್ಜಿ ನಮೂನೆ ಮತ್ತು ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ ಹಾಗೂ ಇತರ ಅಗತ್ಯ ಮಾಹಿತಿಯನ್ನು ಒಳಗೊಂಡ ಪತ್ರಿಕಾ ಪ್ರಕಟಣೆಯನ್ನು ಸಮಿತಿಯ ಸದಸ್ಯ ಕಾರ್ಯದರ್ಶಿ ಹೊರಡಿಸಬೇಕು. ಸ್ವೀಕೃತವಾಗುವ ಅಭ್ಯರ್ಥಿಗಳ ಸ್ವಯಂ ವಿವರಗಳನ್ನು ಪರಿಶೀಲಿಸಿ ಆಯೋಗದ ಅಗತ್ಯವನ್ನು ಗಮನದಲ್ಲಿರಿಸಿ, ಅಗತ್ಯವಿದ್ದರೆ ವೈಯಕ್ತಿವಾಗಿ ಚರ್ಚೆಗೆ ಆಹ್ವಾನಿಸಿ ಮೌಲ್ಯಮಾಪನ ಮಾಡಬೇಕು. ನಂತರ ಒಬ್ಬರು ಅಧ್ಯಕ್ಷರು, ಸದಸ್ಯರ ಸ್ಥಾನಕ್ಕೆ ತಲಾ ಇಬ್ಬರು ಅಭ್ಯರ್ಥಿಗಳನ್ನು ಆಯ್ಕೆ ಮಾಡಿ, ಸೂಕ್ತ ಕಾರಣಗಳನ್ನು ನಮೂದಿಸಿ ಅಂತಿಮಗೊಳಿಸಿದ ಅಭ್ಯರ್ಥಿಗಳ ಕಿರುಪಟ್ಟಿಯನ್ನು ಮುಖ್ಯಮಂತ್ರಿಗೆ ಸಲ್ಲಿಸಬೇಕು. ಕಿರುಪಟ್ಟಿಯಲ್ಲಿರುವ ಇಬ್ಬರು ಅಭ್ಯರ್ಥಿಗಳಲ್ಲಿ ಹುದ್ದೆಗೆ ಸೂಕ್ತವಾದ ಒಬ್ಬರ ಹೆಸರನ್ನು ಅಂತಿಮಗೊಳಿಸಿ ನೇಮಕ ಮಾಡಲು ರಾಜ್ಯಪಾಲರಿಗೆ ಸಲ್ಲಿಸಬೇಕು' ಎಂದು ವಿವರಿಸಲಾಗಿದೆ.

ಕೆಪಿಎಸ್‌ಸಿ ಸುಧಾರಣೆಗಾಗಿ ರಾಜ್ಯ ಸರ್ಕಾರ 2013ರಲ್ಲಿ ರಚಿಸಿದ್ದ ಪಿ.ಸಿ. ಹೋಟಾ ಸಮಿತಿಯು ಕೆಪಿಎಸ್‌ಸಿ ಅಧ್ಯಕ್ಷರು, ಸದಸ್ಯರ ನೇಮಕಾತಿಗೆ ಮುಖ್ಯ ಕಾರ್ಯದರ್ಶಿಯ ಅಧ್ಯಕ್ಷತೆಯಲ್ಲಿ 'ವ್ಯಾಪಕ ಆಧಾರಿತ ಹುಡುಕಾಟ ಸಮಿತಿ' ರಚಿಸುವಂತೆ ಶಿಫಾರಸು ಮಾಡಿತ್ತು. ಈ ಶಿಫಾರಸಿಗೆ ಸಚಿವ ಸಂಪುಟ ಸಭೆಯು ಮಾರ್ಚ್ 14ರಂದು ಅನುಮೋದನೆ ನೀಡಿತ್ತು.

ನಿಧನ ವಾರ್ತೆ

ಆರ್‌ಎಸ್‌ಎಸ್ ಪ್ರಚಾರಕ ಸದಾಶಿವ

ಬೆಂಗಳೂರು: ಆರ್‌ಎಸ್‌ಎಸ್ ಪ್ರಚಾರಕ, ಆರೋಗ್ಯ ಭಾರತಿಯ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯ ಸದಾಶಿವ (70) ಭಾನುವಾರ ನಿಧನರಾದರು.

ಸೋಮವಾರ ಬೆಳಿಗ್ಗೆ 7ರಿಂದ 9ರ ವರೆಗೆ ನಗರದ ಕೇಶವಕೃಪಾದಲ್ಲಿ ಅಂತಿಮ ದರ್ಶನದ ವ್ಯವಸ್ಥೆ ಮಾಡಲಾಗಿದೆ. ನಂತರ ಹಾಸನ ಜಿಲ್ಲೆ ಆಲೂರು ಸಮೀಪದ ಯಡೂರಿನ ಅವರ ಜಮೀನಿನಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ಸೋನು ನಿಗಮ್‌ಗೆ ನೋಟಿಸ್ ನೀಡಲು ಸಿದ್ಧತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಭಿಮಾನಿಯೊಬ್ಬರ ಕನ್ನಡಾಭಿಮಾನವನ್ನು ಪಹಲ್ಗಾಮ್ ಘಟನೆಗೆ ಹೋಲಿಕೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಎಫ್‌ಐಆರ್ ದಾಖಲಾದ ಬೆನ್ನಲ್ಲೇ, ಬಾಲಿವುಡ್ ಗಾಯಕ ಸೋನು ನಿಗಮ್ ಅವರಿಗೆ ನೋಟಿಸ್ ನೀಡಲು ಆವಲಹಳ್ಳಿ ಠಾಣೆ ಪೊಲೀಸರು ಸಿದ್ಧತೆ ನಡೆಸಿದ್ದಾರೆ.

ಈ ವಿಷಯದಲ್ಲಿ ಸ್ಪಷ್ಟೀಕರಣ ಕೋರಿ ಇ ಮೇಲ್ ಅಥವಾ ನೋಂದಾಯಿತ ಅಂಚೆ ಮೂಲಕ ಎರಡು ದಿನದೊಳಗೆ ನೋಟಿಸ್ ಜಾರಿ ಮಾಡಲಾಗುವುದು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಯಾವ ಕಾರಣಕ್ಕೆ ಈ ಮಾತು ಹೇಳಿದ್ದೀರಿ? ಪಹಲ್ಗಾಮ್ ದಾಳಿಗೂ ಕನ್ನಡಕ್ಕೂ ಏನು ಸಂಬಂಧ? ಕನ್ನಡದ ಗೌರವಕ್ಕೆ ಧಕ್ಕೆ ಬರುವ ರೀತಿ ಮಾತನಾಡಲು ಯಾರಾದರೂ ಪ್ರಚೋದನೆ ನೀಡಿದ್ದರೆ?' ಎಂಬುದಾಗಿ ಸೋನು ನಿಗಮ್ ಹೇಳಿಕೆ ಕುರಿತು ಪ್ರಶ್ನೆ ಮಾಡಿ, ಪೊಲೀಸರು ವಿಚಾರಣೆ ನಡೆಸಲಿದ್ದಾರೆ ಎಂದು ಗೊತ್ತಾಗಿದೆ.

ಕರ್ನಾಟಕ ರಕ್ಷಣಾ ವೇದಿಕೆ (ನಾರಾಯಣಗೌಡ ಬಣ) ಬೆಂಗಳೂರು ನಗರ ಜಿಲ್ಲಾ ಘಟಕದ ಅಧ್ಯಕ್ಷ ಟಿ.ಎ.ಧರ್ಮರಾಜ ಅವರ ದೂರು ಆಧರಿಸಿ, ಭಾರತೀಯ ನ್ಯಾಯ ಸಂಹಿತೆಯ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಜನಿವಾರ ತೆಗೆಸಿ 'ನೀಟ್'ಗೆ ಅನುಮತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸಕ್ತ ಸಾಲಿನ ವೈದ್ಯಕೀಯ ಪ್ರವೇಶಕ್ಕೆ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ಭಾನುವಾರ ನಡೆಸಿದ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆಗೆ (ನೀಟ್-ಯುಜಿ) ಕಲಬುರಗಿ ನಗರದ ಸೇಂಟ್ ಮೇರಿ ಶಾಲೆಯ ಪರೀಕ್ಷಾ ಕೇಂದ್ರದಲ್ಲಿ ಬ್ರಾಹ್ಮಣ ಸಮುದಾಯದ ವಿದ್ಯಾರ್ಥಿಯೊಬ್ಬರಿಗೆ ಜನಿವಾರ ತೆಗೆಯಿಸಿ ಅನುಮತಿ ನೀಡಲಾಗಿದೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸಿದ್ದ ಸಿಇಟಿಯಲ್ಲಿ ವಿದ್ಯಾರ್ಥಿಯೊಬ್ಬರ ಜನಿವಾರ ತೆಗೆಯಲು ಸೂಚಿಸಿದ ಮತ್ತು ರೈಲ್ವೆ ಮಂಡಳಿಯ ಪರೀಕ್ಷೆಯಲ್ಲಿ ಜನಿವಾರ ಧರಿಸಿ ಬರುವುದನ್ನು ನಿಷೇಧಿಸಿ ಆದೇಶ ಹೊರಡಿಸಿದ್ದ ಬೆನ್ನಲ್ಲೆ ಈ ಘಟನೆ ನಡೆದಿದೆ.

ಬೀದರ್ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನ ಬೆಟಬೆಲಕುಂದಾ ಗ್ರಾಮದ, ನಗರದ ಖಾಸಗಿ ಕಾಲೇಜಿನ ಶ್ರೀಪಾದ ಪಾಟೀಲ ಜನಿವಾರ ಕಳಚಿ ಪರೀಕ್ಷೆ ಬರೆದ ವಿದ್ಯಾರ್ಥಿ.

'ಪರೀಕ್ಷಾ ಕೇಂದ್ರದಲ್ಲಿ ತಪಾಸಣೆಗೆ ನಿಯೋಜನೆಗೊಂಡಿದ್ದ ಶರಣು ಎಂಬುವವರು ಜನಿವಾರ ತೆಗೆಯಲು ತಾಕೀತು ಮಾಡಿದರು. ಮತ್ತೊಬ್ಬರು ಜನಿವಾರ ತೆಗೆಯಲೇಬೇಕು, ಇಲ್ಲದಿದ್ದರೆ ಪರೀಕ್ಷೆಗೆ ಅನುಮತಿ ಸಿಗದು ಎಂದರು' ಎಂದು ಮಾಧ್ಯಮಗಳಿಗೆ ಶ್ರೀಪಾದ ಹೇಳಿದರು.

'ಜನಿವಾರ ತೆಗೆದು ಹೊರಗೆ ನಿಂತಿದ್ದ ತಂದೆಗೆ ಕೊಟ್ಟೆ. ಒತ್ತಡದಲ್ಲಿ ಸರಿಯಾಗಿ ಪರೀಕ್ಷೆ ಬರೆಯಲು ಆಗಲಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

ಕೇಂದ್ರದ ಮುಂದೆ ಜನಿವಾರ ಧಾರಣೆ: ರಾಜ್ಯ ಸರ್ಕಾರ, ಪರೀಕ್ಷಾ ಕೇಂದ್ರ ಹಾಗೂ ಜನಿವಾರ ತೆಗೆಸಿದವರ ವಿರುದ್ಧ ಘೋಷಣೆ ಕೂಗಿ ಬ್ರಾಹ್ಮಣ ಸಮಾಜದ ಮುಖಂಡರು, ಎಬಿವಿಪಿ ಮುಖಂಡರು ಪ್ರತಿಭಟಿಸಿದರು. ಕೇಂದ್ರದ ಆವರಣಕ್ಕೆ ನುಗ್ಗಿದವರನ್ನು ಪೊಲೀಸರು ಹೊರಕ್ಕೆ ಕಳುಹಿಸಿದ್ದರು.

ಎಸ್.ಬಿ.ಟೆಂಪಲ್ ರಸ್ತೆಯಲ್ಲಿ ಟೈರ್‌ಗೆ ಬೆಂಕಿ ಹಚ್ಚಿ ಪ್ರತಿಭಟಿಸಿದರು. ಪರೀಕ್ಷೆ ಮುಗಿಸಿ ಹೊರಬಂದ ಶ್ರೀಪಾದಗೆ ಶಾಲೆ ಎದುರೇ ಮತ್ತೆ ಜನಿವಾರ ಧಾರಣೆ ಮಾಡಿಸಲಾಯಿತು.

ಬಹುತೇಕ ಕಡೆ ಸುಗಮ: ಹುಬ್ಬಳ್ಳಿ–ಧಾರವಾಡ ಅವಳಿ ನಗರದ 22 ಕೇಂದ್ರಗಳಲ್ಲಿ ನೀಟ್ ಸುಗಮವಾಗಿ ನಡೆಯಿತು. ಧಾರವಾಡದ 11 ಕೇಂದ್ರಗಳಲ್ಲಿ 4,200 ಹಾಗೂ ಹುಬ್ಬಳ್ಳಿಯ 11 ಕೇಂದ್ರಗಳಲ್ಲಿ 5 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಾಜರಾಗಿದ್ದರು.

ದಕ್ಷಿಣ ಕನ್ನಡ ಜಿಲ್ಲೆಯ 21 ಪರೀಕ್ಷಾ ಕೇಂದ್ರಗಳಲ್ಲಿ ಒಟ್ಟು 9,065 ಅಭ್ಯರ್ಥಿಗಳು ಹೆಸರು ನೋಂದಾಯಿಸಿದ್ದರು. 289 ಅಭ್ಯರ್ಥಿಗಳು ಗೈರಾದರು. ಕೆಲವು ಪರೀಕ್ಷಾ ಕೇಂದ್ರಗಳಲ್ಲಿ ಬಯೋಮೆಟ್ರಿಕ್ ಸಮಸ್ಯೆ ಕಾಣಿಸಿಕೊಂಡಿತ್ತಾದರೂ ತಕ್ಷಣವೇ ಸರಿಪಡಿಸಲಾಯಿತು. ಬೆಂಗಳೂರು ಗ್ರಾಮಾಂತರ 96, ತುಮಕೂರು 223 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದರು.

ರಾಜ್ಯದ ಒಟ್ಟು 381 ಪರೀಕ್ಷಾ ಕೇಂದ್ರಗಳಲ್ಲಿ ಮಧ್ಯಾಹ್ನ 2 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಪರೀಕ್ಷೆ ನಡೆಯಿತು. 1.49 ಲಕ್ಷ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿದ್ದರು.

ಕಲಬುರಗಿಯಲ್ಲಿ ಭಾನುವಾರ ನೀಟ್ ಪರೀಕ್ಷೆಯ ಸೇಂಟ್ ಮೇರಿ ಶಾಲೆಯ ಪರೀಕ್ಷಾ ಕೇಂದ್ರದ ಮುಂಭಾಗದ ರಸ್ತೆಯಲ್ಲಿ ವಿದ್ಯಾರ್ಥಿ ಶ್ರೀಪಾದಗೆ ಜನಿವಾರ ಧಾರಣೆ ಮಾಡಲಾಯಿತು

ಮೂಗುತಿಗೆ ಟೇಪ್!

ಚಿತ್ರದುರ್ಗ ಜಿಲ್ಲೆಯಲ್ಲಿ ಆರಂಭಿಕ ಗೊಂದಲ ನಡುವೆಯೂ ನೀಟ್ ಸುಸೂತ್ರವಾಗಿ ನಡೆಯಿತು. ತಪಾಸಣೆಗೆ ನಿಯೋಜಿಸಿದ್ದ ಸಿಬ್ಬಂದಿ ವಿದ್ಯಾರ್ಥಿಗಳ ಕೈ, ಕಾಲು ಹಾಗೂ ಕೊರಳಿಗೆ ಕಟ್ಟಿದ್ದ ದಾರ ಹಾಗೂ ತುಂಬು ತೋಳಿನ ಅಂಗಿಗಳನ್ನು ಕತ್ತರಿಸಿ ತೆಗೆದರು.

ಬೆಲ್ಟ್, ಚಪ್ಪಲಿಗಳನ್ನು ಬಿಚ್ಚಿಸಿ ಹೊರಗೆ ಹಾಕಿದರೆ, ಮೂಗುತಿಗೆ ಸೆಲೊ ಟೇಪ್ ಅಂಟಿಸಿದರು. ಜೀನ್ಸ್ ಪ್ಯಾಂಟ್ ಧರಿಸಿ ಬಂದವರಿಗೆ ಕೇಂದ್ರದ ಒಳಗೆ ಬಿಡಲು ನಿರಾಕರಿಸಿದರು. ಬಟ್ಟೆ ಬದಲಾಯಿಸಿಕೊಂಡ ಬಂದ ನಂತರ ಒಳಗೆ ಕಳುಹಿಸಲಾಯಿತು. ಸ್ಥಳದಲ್ಲಿದ್ದ ಪೋಷಕರು ಬಟ್ಟೆ ಅಂಗಡಿಗಳಿಗೆ ಕರೆದುಕೊಂಡು ಹೋಗಿ ಹೊಸ ಬಟ್ಟೆ ಕೊಡಿಸಿದ ಪ್ರಸಂಗವೂ ನಡೆಯಿತು.

ಭಿಕ್ಷಾಟನೆ ನಿರ್ಮೂಲನೆಗೆ ಕೋಟಿ ಖರ್ಚು–ಪರಿಣಾಮ ಶೂನ್ಯ

ರಾಜ್ಯದಲ್ಲಿ ಹೆಚ್ಚುತ್ತಲೇ ಇದೆ ಭಿಕ್ಷುಕರ ಸಂಖ್ಯೆ

• ಶಿವರಾಯ ಪೂಜಾರಿ

ಹುಬ್ಬಳ್ಳಿ: ಭಿಕ್ಷಾಟನೆ ಪದ್ಧತಿ ನಿರ್ಮೂಲನೆ ಸೇರಿ ಜನರಲ್ಲಿ ಅರಿವು ಮೂಡಿಸಲು ರಾಜ್ಯ ಸರ್ಕಾರ ಪ್ರತಿ ವರ್ಷ ಕೋಟ್ಯಂತರ ಹಣ ವ್ಯಯಿಸುತ್ತದೆ. 2024–25ರಲ್ಲಿ ಹೋರ್ಡಿಂಗ್ಸ್, ಬಸ್, ಡಿಜಿಟಲ್ ವಾಲ್ ಪೇಂಟಿಂಗ್, ಎಲ್‌ಇಡಿ ಡಿಜಿಟಲ್ ಫಲಕಗಳ ಜಾಹೀರಾತು ಪ್ರಕಟಣೆಗೆ ₹3.95 ಕೋಟಿ ವೆಚ್ಚ ಮಾಡಿದೆ. ಆದರೆ, ನಿರೀಕ್ಷಿತ ಪರಿಣಾಮ ಬೀರಿಲ್ಲ.

ಕೇಂದ್ರ ಪರಿಹಾರ ಸಮಿತಿ ಮತ್ತು ನಿರಾಶ್ರಿತರ ಪರಿಹಾರ ಕೇಂದ್ರಗಳ ನಿರ್ವಹಣೆಗೆ ಭಿಕ್ಷುಕರ, ನಿರಾಶ್ರಿತರ ಕೇಂದ್ರಗಳ ನಿರ್ವಹಣೆಗೆ ಕಳೆದ ಮೂರು ವರ್ಷಗಳಲ್ಲಿ ₹306 ಕೋಟಿ ವಿನಿಯೋಗಿಸಲಾಗಿದೆ. ವರ್ಷದಿಂದ ವರ್ಷಕ್ಕೆ ಹೆಚ್ಚಿನ ಹಣ ಮೀಸಲಿಡಲಾಗುತ್ತಿದೆ. 2021–22ರಲ್ಲಿ ₹63.72 ಕೋಟಿ, 2022–23ರಲ್ಲಿ 104.52 ಕೋಟಿ ಮತ್ತು 2023–24ರಲ್ಲಿ 137.97 ಕೋಟಿ ಖರ್ಚು ಮಾಡಲಾಗಿದೆ.

'ಬಸ್ ನಿಲ್ದಾಣ, ರೈಲು ನಿಲ್ದಾಣ, ವೃತ್ತಗಳು, ದೇವಸ್ಥಾನ ಆವರಣ ಸೇರಿದಂತೆ ಸಾರ್ವಜನಿಕರ ಸ್ಥಳಗಳಲ್ಲಿ ಭಿಕ್ಷುಕರ ಸಂಖ್ಯೆ ಹೆಚ್ಚಾಗಿದೆ. ಕೆಲವೆಡೆ ಪೋಷಕರೇ, ಮಕ್ಕಳನ್ನು ಮುಂದಿಟ್ಟುಕೊಂಡು ಭಿಕ್ಷಾಟನೆ ಮಾಡುತ್ತಾರೆ. ಪ್ರತಿ ಜಿಲ್ಲೆಯಲ್ಲೂ ಮಕ್ಕಳ ಕಲ್ಯಾಣ ಸಮಿತಿ, ಬಾಲನ್ಯಾಯ ಮಂಡಳಿ, ಮಕ್ಕಳ ವಿಶೇಷ ಪೊಲೀಸ್ ಘಟಕ, ಮಕ್ಕಳ ಪಾಲನಾ ಸಂಸ್ಥೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಇದ್ದರೂ ಬಾಲಭಿಕ್ಷಾಟನೆ ತಡೆಯುವಲ್ಲಿ ವಿಫಲವಾಗಿದೆ' ಎಂಬ ಆರೋಪವಿದೆ.

ಭಿಕ್ಷೆ ಬೇಡುವವರಲ್ಲಿ ಮಕ್ಕಳ ಸಂಖ್ಯೆಯೇ ಹೆಚ್ಚು. 2024–25ನೇ ಸಾಲಿನ ಏಪ್ರಿಲ್‌ನಿಂದ ಡಿಸೆಂಬರ್‌ವರೆಗೆ 306 ಮಕ್ಕಳನ್ನು ಭಿಕ್ಷಾಟನೆಯಿಂದ ರಕ್ಷಿಸಲಾಗಿದೆ. ಇದರಲ್ಲಿ ನಾಲ್ವರು ಮಕ್ಕಳನ್ನು ದತ್ತು ಕೇಂದ್ರಕ್ಕೆ, 79 ಮಕ್ಕಳನ್ನು ಸರ್ಕಾರ ಬಾಲಮಂದಿರಕ್ಕೆ ಹಾಗೂ 182 ಮಕ್ಕಳನ್ನು ಪೋಷಕರ ವಶಕ್ಕೆ ನೀಡಲಾಗಿದೆ. ತಾಯಿಯೊಂದಿಗೆ ಇರುವ 41 ಮಕ್ಕಳನ್ನು ಸ್ವಾಧಾರಗೃಹ ಸಂಸ್ಥೆಗೆ ದಾಖಲಿಸಲಾಗಿದೆ.

'ಭಿಕ್ಷಾಟನೆ ದಂಧೆಯಾಗಿ ಮಾರ್ಪಟ್ಟಿದೆ. ಜಿಲ್ಲೆಯಲ್ಲಿ ಜಾಲವೇ ಸಕ್ರಿಯವಾಗಿದೆ. ಸ್ಲಂ ಪ್ರದೇಶದ ಮಕ್ಕಳನ್ನು, ವಯೋವೃದ್ಧರನ್ನು ಬಳಸಿಕೊಂಡು ಭಿಕ್ಷಾಟನೆ ಮಾಡಿಸಲಾಗುತ್ತಿದೆ. ಭಿಕ್ಷೆ ರೂಪದಲ್ಲಿ ಬಂದ ಹಣದಲ್ಲಿ ಭಿಕ್ಷೆ ಬೇಡಿದವರಿಗೆ ಒಂದಿಷ್ಟು ಹಣ ನೀಡಿ ಉಳಿದ ಹಣವನ್ನು ತಾವು ತೆಗೆದುಕೊಂಡು ಹೋಗುತ್ತಾರೆ. ಪ್ರತಿ ಜಿಲ್ಲೆಯಲ್ಲಿಯೂ ಜಿಲ್ಲಾಡಳಿತ ನೇತೃತ್ವದಲ್ಲಿ ವಿವಿಧ ಇಲಾಖೆಗಳು ಸೇರಿ ಜಂಟಿ ಕಾರ್ಯಾಚರಣೆ ಮಾಡಿ ಭಿಕ್ಷಾಟನೆ ನಿರ್ಮೂಲನೆಗೆ ಮುಂದಾಗಬೇಕು' ಎಂದು ಸಾಮಾಜಿಕ ಕಾರ್ಯಕರ್ತ ಮೋಹನ್ ಅರ್ಕಸಾಲಿ ಹೇಳಿದರು.

'ಭಿಕ್ಷುಕರನ್ನು ರಕ್ಷಣೆ ಮಾಡಿ ನಿರಾಶ್ರಿತರ ಕೇಂದ್ರಗಳಿಗೆ ಕರೆದೊಯ್ದಾಗ ಅವರ ವಾರಸುದಾರರು ಬಂದು ಇನ್ನು ಮುಂದೆ ಭಿಕ್ಷಾಟನೆ ಮಾಡಿಸುವುದಿಲ್ಲ ಎಂದು ಹೇಳಿ ಕರೆದೊಯ್ಯುತ್ತಾರೆ. ಕೆಲವು ದಿನಗಳ ಬಳಿಕ ಮತ್ತೆ ಭಿಕ್ಷಾಟನೆ ಮುಂದುವರಿಸುತ್ತಾರೆ. ಕಷ್ಟಪಟ್ಟು ದುಡಿದಾಗ ಸಿಗುವ ಹಣಕ್ಕಿಂತ ಭಿಕ್ಷೆ ಬೇಡಿಯೇ ಹೆಚ್ಚಿನ ಹಣ ಗಳಿಸಬಹುದು ಎಂದು ಭಿಕ್ಷಾಟನೆಯನ್ನು ದಂಧೆ ಮಾಡಿಕೊಂಡಿದ್ದಾರೆ' ಎಂದು ಸಮಾಜ ಕಲ್ಯಾಣ ಇಲಾಖೆಯ ನಿವೃತ್ತ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ಹುಬ್ಬಳ್ಳಿಯ ಚನ್ನಮ್ಮ ವೃತ್ತದಲ್ಲಿ ಮಹಿಳೆಯೊಬ್ಬರು ಮಕ್ಕಳೊಂದಿಗೆ ಭಿಕ್ಷೆ ಬೇಡುತ್ತಿದ್ದರು ಚಿತ್ರ: ಗೋವಿಂದರಾಜ ಜವಳಿ

ರೈಲು ನಿಲ್ದಾಣ, ಬಸ್ ನಿಲ್ದಾಣಗಳಲ್ಲಿ ಕಾರ್ಯಾಚರಣೆ ನಡೆಸಿ ಭಿಕ್ಷುಕರನ್ನು ರಕ್ಷಿಸಿ ನಿರಾಶ್ರಿತರ ಕೇಂದ್ರಕ್ಕೆ ಸೇರಿಸಲಾಗಿತ್ತು. ಭಿಕ್ಷಾಟನೆ ನಿರ್ಮೂಲನೆಗೆ ಜಿಲ್ಲಾಡಳಿತ ಕೆಲಸ ಮಾಡುತ್ತಿದೆ

ದಿವ್ಯಪ್ರಭು, ಧಾರವಾಡ ಜಿಲ್ಲಾಧಿಕಾರಿ

ಭಿಕ್ಷಾಟನೆ ನಿರ್ಮೂಲನೆಗೆ ಜನರ ಸಹಕಾರ ಅಗತ್ಯ. ಭಿಕ್ಷುಕರು ಕಂಡಲ್ಲಿ, ಸಹಾಯವಾಣಿ 1098 ಸಂಖ್ಯೆಗೆ ಕರೆ ಮಾಡಿ

ನೀತಾ ವಾಡ್ಕರ್, ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿ, ಧಾರವಾಡ

ಸೋಮವಾರ, ಮೇ 5, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 124 | ಪುಟ 12

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಪ್ರತಿಕ್ರಿಯೆ

ರಾಹುಲ್ ಗಾಂಧಿ ಅವರು ಹಿಂದೂ ವಿರೋಧಿ. ಪಕ್ಷದ ಹೆಸರನ್ನು 'ಹಿಂದೂ ವಿರೋಧಿ ಕಾಂಗ್ರೆಸ್' ಎಂದು ಬದಲಾಯಿಸಿ. ಪಕ್ಷವು 'ಹಿಂದೂ ಭಯೋತ್ಪಾದಕತೆ' ಎಂಬ ಪದ ಬಳಕೆ ಮಾಡುತ್ತದೆ, ಶ್ರೀರಾಮನ ಅಸ್ತಿತ್ವವನ್ನು ಪ್ರಶ್ನಿಸುತ್ತದೆ. ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣ ತಡೆಯಲು ಎಲ್ಲಾ ರೀತಿಯ ಪ್ರಯತ್ನ ಮಾಡಿತ್ತು. ಈಗ ಪಕ್ಷದ ಹಿಂದೂ ವಿರೋಧಿ ನಿಲುವು ಅನಾವರಣವಾಗಿದೆ

ಪ್ರದೀಪ್ ಭಂಡಾರಿ, ಬಿಜೆಪಿ ರಾಷ್ಟ್ರೀಯ ವಕ್ತಾರ

(ರಾಹುಲ್ ಗಾಂಧಿ ಅವರು ಅಮೆರಿಕದ ವಿಶ್ವವಿದ್ಯಾಲಯ ಒಂದರಲ್ಲಿ ಕಳೆದ ತಿಂಗಳು ನಡೆದ ಸಂವಾದದಲ್ಲಿ ಶ್ರೀರಾಮನನ್ನು 'ಪುರಾಣ ಪುರುಷ' ಎಂದು ಹೇಳಿದ್ದಕ್ಕೆ ಪ್ರತಿಕ್ರಿಯೆ)

ಮಹಿಳಾ ಮತ

ಮಹಿಳೆಯರ ಮೇಲೆ ದೌರ್ಜನ್ಯ: ಕುಟುಂಬದಿಂದಲೇ ಹೆಚ್ಚು

ಗೋವಾಕ್ಕೆ ಹೆದರುವ ಪ್ರಧಾನಿ: ಸಿದ್ದರಾಮಯ್ಯ 4

'ಲವ್ ಜಿಹಾದ್ ತಡೆಗೆ ಸನಾತನಿ ಸೇನಾ' 9

ಸಚಿವ ಸಂಪುಟದ ಅನುಮೋದನೆಗೆ ಪ್ರಸ್ತಾವ ಮಂಡಿಸಲು ಮುಂದಾದ ಆಹಾರ ಇಲಾಖೆ

ಹೊಸ ಪಡಿತರ ಚೀಟಿ ಶೀಘ್ರ

• ರಾಜೇಶ್ ರೈ ಚಟ್ಲ

ಬೆಂಗಳೂರು: ರಾಜ್ಯದಲ್ಲಿ ಹೊಸದಾಗಿ ಬಿಪಿಎಲ್ (ಆದ್ಯತಾ ಕುಟುಂಬ), ಎಪಿಎಲ್ (ಆದ್ಯತೆಯೇತರ ಕುಟುಂಬ) ಪಡಿತರ ಚೀಟಿಗಳನ್ನು ವಿತರಿಸಲು ಆಹಾರ ಇಲಾಖೆ ಮುಂದಾಗಿದೆ.

ಹೊಸ ಪಡಿತರ ಚೀಟಿಗೆ ಅರ್ಜಿ ಆಹ್ವಾನಿಸಲು ಅನುಮತಿ ನೀಡುವ ಸಂಬಂಧ ಸಚಿವ ಸಂಪುಟದ ಅನುಮೋದನೆಗೆ ಪ್ರಸ್ತಾವ ಮಂಡಿಸಲು ಕ್ರಮ ತೆಗೆದುಕೊಳ್ಳುವಂತೆ ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಅವರು ಇಲಾಖೆಯ ಕಾರ್ಯದರ್ಶಿಗೆ ಸೂಚಿಸಿದ್ದಾರೆ.

ಹೊಸದಾಗಿ ಪಡಿತರ ಚೀಟಿ ಕೋರಿ 2023–24ರಲ್ಲಿ 2.96 ಲಕ್ಷ ಮತ್ತು 2024–25ರಲ್ಲಿ 97,464 ಸೇರಿ ಒಟ್ಟು 3.93 ಲಕ್ಷ ಅರ್ಜಿಗಳು ಸಲ್ಲಿಕೆ ಆಗಿದ್ದವು. ಈ ಪೈಕಿ 3.05 ಲಕ್ಷ ಅರ್ಹ ಅರ್ಜಿಗಳಿದ್ದವು. ಅವುಗಳಲ್ಲಿ 'ಇ-ಶ್ರಮ್' ನೋಂದಾಯಿತ ಕಾರ್ಮಿಕರಿಗೆ ವಿತರಿಸಿದ 8,766 ಮತ್ತು ಅರಣ್ಯ ವಾಸಿಗಳಿಗೆ ವಿತರಿಸಿದ 573 ಕಾರ್ಡ್ ಸೇರಿ ಒಟ್ಟು 2.04 ಲಕ್ಷ ಅರ್ಜಿಗಳಿಗೆ ಇಲಾಖೆಯು ಹೊಸ ಕಾರ್ಡ್‌ಗಳನ್ನು ವಿತರಿಸಿದೆ. 88,125 ಅರ್ಜಿಗಳು ತಿರಸ್ಕೃತಗೊಂಡಿವೆ. ವಿವಿಧ ಕಾರಣಗಳಿಗೆ 1,00,565 ಅರ್ಜಿಗಳಿಗೆ ಕಾರ್ಡ್ ವಿತರಣೆ ಬಾಕಿ ಇದೆ.

ಕೇಂದ್ರವು ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ (ಎನ್‌ಎಫ್‌ಎಸ್‌ಎ) ಪ್ರಕಾರ ರಾಜ್ಯದಲ್ಲಿ ಅಂತ್ಯೋದಯ ಅನ್ನ ಯೋಜನೆ (ಎಎವೈ) ಮತ್ತು ಬಿಪಿಎಲ್ ಕಾರ್ಡ್ ಸೇರಿ ಫಲಾನುಭವಿಗಳ ಮಿತಿಯನ್ನು 4.02 ಕೋಟಿಗೆ ನಿಗದಿಪಡಿಸಿದೆ. ನಗರದಲ್ಲಿ ಶೇ 50 ಹಾಗೂ ಗ್ರಾಮೀಣ ಪ್ರದೇಶದಲ್ಲಿ ಶೇ 75ರಷ್ಟು ಎಎವೈ ಮತ್ತು ಬಿಪಿಎಲ್ ಕಾರ್ಡ್ ವಿತರಿಸಲು ಕಾಯ್ದೆಯಡಿ ಅವಕಾಶವಿದೆ. 2011ರ ಜನಗಣತಿ ಪ್ರಕಾರ ರಾಜ್ಯದಲ್ಲಿ ನಗರ, ಗ್ರಾಮೀಣ ಪ್ರದೇಶ ಸೇರಿ ಶೇ 65.96ರಷ್ಟು ಬಿಪಿಎಲ್ ಫಲಾನುಭವಿಗಳಿದ್ದಾರೆ.

ಪಡಿತರ ಚೀಟಿಗಳು: ಯಾವುದು, ಎಷ್ಟು?

ಪಡಿತರ ಚೀಟಿಗಳ ವಿಧ	ಪಡಿತರ ಚೀಟಿಗಳು	ಒಟ್ಟು ಸದಸ್ಯರ ಸಂಖ್ಯೆ
ಅಂತ್ಯೋದಯ ಅನ್ನ ಯೋಜನೆ (ಎಎವೈ)	10.78 ಲಕ್ಷ	43.88 ಲಕ್ಷ
ಬಿಪಿಎಲ್ (ಕೇಂದ್ರ ಸರ್ಕಾರ)	1 ಕೋಟಿ	3.58 ಕೋಟಿ
ಒಟ್ಟು ಎಎವೈ ಮತ್ತು ಬಿಪಿಎಲ್ (ಕೇಂದ್ರ ಸರ್ಕಾರ)	1.11 ಕೋಟಿ	4.01 ಕೋಟಿ
ಬಿಪಿಎಲ್ (ರಾಜ್ಯ ಸರ್ಕಾರ)	17.49 ಲಕ್ಷ	49.67 ಲಕ್ಷ
ಒಟ್ಟು ಎಎವೈ, ಬಿಪಿಎಲ್ (ಕೇಂದ್ರ ಮತ್ತು ರಾಜ್ಯ ಸೇರಿ)	1.28 ಕೋಟಿ	4.51 ಕೋಟಿ
ಎಪಿಎಲ್ (ರಾಜ್ಯದಲ್ಲಿ)	25.36 ಲಕ್ಷ	86.85 ಲಕ್ಷ
ಒಟ್ಟು	1.54 ಕೋಟಿ	5.38 ಕೋಟಿ

ಕಾರ್ಡ್‌ಗಳಲ್ಲಿ ಹೆಸರು ಇರುವ ಪ್ರತಿ ಫಲಾನುಭವಿಗೆ 5 ಕಿಲೋ ಅಕ್ಕಿಯನ್ನು ಕೇಂದ್ರ ಸರ್ಕಾರವು ಎನ್‌ಎಫ್‌ಎಸ್‌ಎ ಅಡಿ ಉಚಿತವಾಗಿ ನೀಡುತ್ತಿದೆ. ರಾಜ್ಯ ಸರ್ಕಾರ ಹೆಚ್ಚುವರಿಯಾಗಿ 5 ಕಿಲೋ ಅಕ್ಕಿ ವಿತರಿಸುತ್ತಿದ್ದು, ಇದಕ್ಕಾಗಿ ಕಿಲೋಗೆ ₹22.50 ದರದಲ್ಲಿ ಆಹಾರ ನಿಗಮದಿಂದ ಖರೀದಿಸಿ ವಿತರಿಸುತ್ತಿದೆ. ಅಲ್ಲದೆ, ರಾಜ್ಯಸರ್ಕಾರ ಹೆಚ್ಚುವರಿಯಾಗಿ 17.49 ಲಕ್ಷ ಬಿಪಿಎಲ್ ಕಾರ್ಡ್‌ಗಳ 49.67 ಲಕ್ಷ ಫಲಾನುಭವಿಗಳಿಗೆ 'ಅನ್ನಭಾಗ್ಯ' ಯೋಜನೆಯಡಿ 10 ಕಿಲೋ ಅಕ್ಕಿ ವಿತರಿಸುತ್ತಿದ್ದು ಇದರ ಸಂಪೂರ್ಣ ವೆಚ್ಚವನ್ನು ಭರಿಸುತ್ತಿದೆ.

ಆರ್ಥಿಕ ಇಲಾಖೆ ಷರತ್ತು: ಹೊಸ ಪಡಿತರ ಚೀಟಿ ವಿತರಿಸಲು ಅರ್ಜಿ ಆಹ್ವಾನಿಸಲು ಷರತ್ತು ವಿಧಿಸಿ ಆರ್ಥಿಕ ಇಲಾಖೆ 2023ರ ಸೆ. 16ರಂದು ಆದೇಶ ಹೊರಡಿಸಿತ್ತು. ಅಲ್ಲದೆ, ಅನರ್ಹ ಪಡಿತರ ಚೀಟಿಗಳನ್ನು ಪತ್ತೆ ಹಚ್ಚಿ, ರದ್ದು ಮಾಡಿದ ಕಾರ್ಡ್‌ಗಳ ಸಂಖ್ಯೆಗೆ ಅನುಗುಣವಾಗಿ ಹೊಸದಾಗಿ ಪಡಿತರ ಚೀಟಿ ವಿತರಿಸುವಂತೆ ಸೂಚನೆ ನೀಡಿತ್ತು.

ಅದರಂತೆ, 2024–25ನೇ ಸಾಲಿನಲ್ಲಿ 3.82 ಲಕ್ಷ ಅನರ್ಹ ಬಿಪಿಎಲ್ ಕಾರ್ಡ್‌ಗಳನ್ನು ಪತ್ತೆ ಹಚ್ಚಿ ಎಪಿಎಲ್ ಕಾರ್ಡ್‌ಗಳಾಗಿ ಪರಿವರ್ತಿಸಲಾಗಿತ್ತು. ಹೀಗೆ ವರ್ಗಾವಣೆಯಾದ ಸಂಖ್ಯೆಗೆ ಅನುಗುಣವಾಗಿ ಹೊಸ ಕಾರ್ಡ್‌ಗಳನ್ನು ವಿತರಿಸಲಾಗಿದೆ. ಆದರೆ, ಕಾರ್ಡ್ ರದ್ದತಿಗೆ ಸಾರ್ವಜನಿಕವಾಗಿ ವಿರೋಧ ವ್ಯಕ್ತವಾದ ಕಾರಣ ಆದಾಯ ತೆರಿಗೆ ಪಾವತಿದಾರರಾದ 55,713 ಹಾಗೂ ಸರ್ಕಾರಿ ನೌಕರರು ಹೊಂದಿದ್ದ 2,300 ಬಿಪಿಎಲ್ ಕಾರ್ಡ್‌ಗಳನ್ನು ರದ್ದುಪಡಿಸಲಾಯಿತು. ಉಳಿದಂತೆ ಬಿಪಿಎಲ್‌ನಿಂದ ಎಪಿಎಲ್‌ಗೆ ವರ್ಗಾವಣೆಗೊಂಡಿದ್ದ 3.24 ಲಕ್ಷ ಕಾರ್ಡ್‌ಗಳನ್ನು ಬಿಪಿಎಲ್ ಕಾರ್ಡ್‌ಗಳಾಗಿ ಪರಿವರ್ತಿಸಲಾಗಿತ್ತು.

'ಹೊಸತಾಗಿ ಪಡಿತರ ಚೀಟಿ ವಿತರಣೆಗೆ ಅರ್ಜಿ ಆಹ್ವಾನಿಸಲು ವಿಧಾನಮಂಡಲದ ಕಳೆದ ಎರಡು–ಮೂರು ಅಧಿವೇಶನಗಳಲ್ಲಿ ಸಚಿವರು, ಶಾಸಕರು ಒತ್ತಾಯಿಸಿದ್ದರು. ಸಾರ್ವಜನಿಕರಿಂದಲೂ ಒತ್ತಡ ಹೆಚ್ಚಿದೆ. ಹೀಗಾಗಿ, ಆರ್ಥಿಕ ಇಲಾಖೆಯು ವಿಧಿಸಿರುವ ಷರತ್ತುಗಳನ್ನು ಸಡಿಲಿಸಿ ಬಿಪಿಎಲ್, ಎಪಿಎಲ್ ಪಡಿತರ ಚೀಟಿ ನೀಡಲು ಅರ್ಜಿ ಆಹ್ವಾನಿಸಲು ಸಚಿವ ಸಂಪುಟ ಸಭೆಯ ಅನುಮೋದನೆ ಪಡೆಯಲು ಕ್ರಮ ತೆಗೆದುಕೊಳ್ಳಬೇಕಾಗಿದೆ' ಎಂದು ಕಾರ್ಯದರ್ಶಿಗೆ ಬರೆದ ಟಿಪ್ಪಣಿಯಲ್ಲಿ ಮುನಿಯಪ್ಪ ಉಲ್ಲೇಖಿಸಿದ್ದಾರೆ.

ಹೊಸ ಪಡಿತರ ಚೀಟಿ ಸಚಿವರ ಸಮರ್ಥನೆ

- ಕುಟುಂಬಗಳು ವಿಭಜನೆಯಾದಾಗ ಹೊಸ ಪಡಿತರ ಚೀಟಿ ನೀಡುವುದು ಅತ್ಯವಶ್ಯ. ಈ ರೀತಿ ಹೊಸ ಪಡಿತರ ಚೀಟಿ ನೀಡಿದರೆ ಕಾರ್ಡ್‌ಗಳ ಸಂಖ್ಯೆ ಹೆಚ್ಚಬಹುದು. ಫಲಾನುಭವಿಗಳ ಸಂಖ್ಯೆ ಹೆಚ್ಚಾಗುವುದಿಲ್ಲ. ಇದರಿಂದ ಆರ್ಥಿಕ ಹೊರೆ ಉದ್ಭವಿಸುವುದಿಲ್ಲ
- ಕೇಂದ್ರ ಸರ್ಕಾರ 2011ರ ಜನಗಣತಿ ಪ್ರಕಾರ ರಾಜ್ಯದಲ್ಲಿ ಬಿಪಿಎಲ್ ಪಡಿತರ ಕಾರ್ಡ್ ಫಲಾನುಭವಿಗಳ ಗರಿಷ್ಠ ಮಿತಿಯನ್ನು 4.02 ಕೋಟಿ ಎಂದು ನಿಗದಿಪಡಿಸಿದೆ. ಪ್ರಸ್ತುತ 2025ರ ಜನಸಂಖ್ಯೆಗೆ ಅನುಗುಣವಾಗಿ ಫಲಾನುಭವಿಗಳ ಮಿತಿಯನ್ನು 4.60 ಕೋಟಿಗೆ ಹೆಚ್ಚಿಸಲು ಕೇಂದ್ರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ
- ಲೈಂಗಿಕ ಅಲ್ಪಸಂಖ್ಯಾತರು, ಕೊಳೆಗೇರಿ ನಿವಾಸಿಗಳು, ಸಫಾಯಿ ಕರ್ಮಚಾರಿಗಳು, ತುರ್ತು ವೈದ್ಯಕೀಯ ಹಾಗೂ ಅರ್ಹ ಬಿಪಿಎಲ್ ಕುಟುಂಬಗಳು ಪಡಿತರ ಚೀಟಿ ಇಲ್ಲದೆ ವಿವಿಧ ಸವಲತ್ತುಗಳಿಂದ ವಂಚಿತರಾಗಿದ್ದಾರೆ
- ಎಪಿಎಲ್ ಕಾರ್ಡ್‌ದಾರರಿಗೆ ರಿಯಾಯಿತಿ ದರದಲ್ಲಿ ಪಡಿತರ ವಿತರಿಸುವುದಿಲ್ಲ. ಹೀಗಾಗಿ, ಹೊಸದಾಗಿ ಎಪಿಎಲ್ ಕಾರ್ಡ್ ನೀಡಲು ಅರ್ಜಿ ಆಹ್ವಾನಿಸಬಹುದು

ನೀಟ್ ಪರೀಕ್ಷೆ

ನಗರದ ಪಿಎಂ ಶ್ರೀ ಕೇಂದ್ರೀಯ ವಿದ್ಯಾಲಯ ಎಎಸ್‌ಸಿ ಸೆಂಟರ್‌ನಲ್ಲಿ ವೈದ್ಯಕೀಯ ಶಿಕ್ಷಣ ಕೋರ್ಸ್ ಪ್ರವೇಶಕ್ಕೆ ಭಾನುವಾರ ನಡೆದ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆಯಲ್ಲಿ (ನೀಟ್-ಯುಜಿ) ದಾಖಲಾತಿಗಳನ್ನು ಪರಿಶೀಲಿಸಲಾಯಿತು ಚಿತ್ರ: ಎಸ್.ಕೆ.ದಿನೇಶ್

ಪ್ರಧಾನಿ – ಎ.ಪಿ.ಸಿಂಗ್ ಮಾತುಕತೆ

ನರೇಂದ್ರ ಮೋದಿ

ಎ.ಪಿ. ಸಿಂಗ್

ನವದೆಹಲಿ (ಪಿಟಿಐ): ದೇಶದ ವಾಯುಪಡೆಯ ಮುಖ್ಯಸ್ಥ ಏರ್ ಚೀಫ್ ಮಾರ್ಷಲ್ ಎ.ಪಿ. ಸಿಂಗ್ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಭಾನುವಾರ ಭೇಟಿ ಮಾಡಿ, ಭದ್ರತಾ ಸ್ಥಿತಿಯ ಬಗ್ಗೆ ಚರ್ಚಿಸಿದರು ಎಂದು ಮೂಲಗಳು ಹೇಳಿವೆ.

ಭಾರತ ಮತ್ತು ಪಾಕಿಸ್ತಾನದ ನಡುವಿನ ಉದ್ವಿಗ್ನ ಪರಿಸ್ಥಿತಿಯ ಕಾರಣದಿಂದ ಅವರ ಭೇಟಿ ಮಹತ್ವ ಪಡೆದಿದೆ. ನೌಕಾಪಡೆಯ ಮುಖ್ಯಸ್ಥ ಅಡ್ಮಿರಲ್ ದಿನೇಶ್ ಕೆ. ತ್ರಿಪಾಠಿ ಅವರು ಪ್ರಧಾನಿಯವರನ್ನು ಭೇಟಿ ಮಾಡಿದ 24 ತಾಸಿನ ಒಳಗೆ ಸಿಂಗ್ ಅವರು ಕೂಡ ಪ್ರಧಾನಿಯವರ ಜೊತೆ ಮಾತುಕತೆ ನಡೆಸಿದ್ದಾರೆ.

ಸಿಂಗ್ ಮತ್ತು ಪ್ರಧಾನಿ ಮೋದಿ ನಡುವಿನ ಮಾತುಕತೆಯ ವಿವರಗಳು ಲಭ್ಯವಾಗಿಲ್ಲ. ಪಹಲ್ಗಾಮ್‌ನಲ್ಲಿ ಏಪ್ರಿಲ್ 22ರಂದು ನಡೆದ ಭಯೋತ್ಪಾದಕರ ದಾಳಿಗೆ ಗಡಿಯಾಚೆಗಿನ ನಂಟು ಇದೆ ಎಂದು ಹೇಳಿರುವ ಕೇಂದ್ರ ಸರ್ಕಾರವು, ದಾಳಿಯಲ್ಲಿ ಭಾಗಿಯಾದವರನ್ನು ಕಠಿಣ ಶಿಕ್ಷೆಗೆ ಗುರಿಪಡಿಸುವುದಾಗಿ ಹೇಳಿದೆ.

ಜಮ್ಮು: ಬಗಲಿಹಾರ್ ಅಣೆಕಟ್ಟೆಯಿಂದ ನೀರಿನ ಹರಿವು ತಡೆದ ಭಾರತ

ಜಮ್ಮುವಿನಲ್ಲಿ ಚಿನಾಬ್ ನದಿಗೆ ಅಡ್ಡಲಾಗಿ ಕಟ್ಟಿರುವ ಬಗಲಿಹಾರ್ ಅಣೆಕಟ್ಟೆಯಿಂದ ನೀರಿನ ಹರಿವನ್ನು ಭಾರತ ತಡೆಹಿಡಿದಿದೆ. ಅಲ್ಲದೆ, ಝೇಲಮ್ ನದಿಗೆ ಕಾಶ್ಮೀರದಲ್ಲಿ ಕಟ್ಟಿರುವ ಕಿಶನ್‌ಗಂಗಾ ಅಣೆಕಟ್ಟೆಯಿಂದಲೂ ನೀರಿನ ಹರಿವು ಸ್ಥಗಿತಗೊಳಿಸಲು ಚಿಂತನೆ ನಡೆಸಿದೆ.

ಪಹಲ್ಗಾಮ್‌ನಲ್ಲಿನ ಉಗ್ರರ ದಾಳಿ ಕೃತ್ಯದ ಬಳಿಕ ಸಿಂಧೂ ಜಲ ಒಪ್ಪಂದವನ್ನು ಭಾರತ ಅಮಾನತಿನಲ್ಲಿ ಇಟ್ಟಿತ್ತು. ಅದರ ಹಿಂದೆಯೇ ಈಗ ಅಣೆಕಟ್ಟೆಯಿಂದ ನೀರಿನ ಹೊರ ಹರಿವನ್ನು ತಡೆಹಿಡಿದಿದೆ.

ಈ ಬೆಳವಣಿಗೆ ಕುರಿತಂತೆ ಅರಿವಿರುವ ಮೂಲಗಳ ಪ್ರಕಾರ, ಈ ಎರಡೂ ಅಣೆಕಟ್ಟೆಗಳಿಂದ ನೀರಿನ ಹೊರಹರಿವಿನ ಸಮಯವನ್ನು ನಿರ್ಧರಿಸುವ ಅಧಿಕಾರವನ್ನು ಭಾರತ ಹೊಂದಿದೆ.

'ಕಾಂಗ್ರೆಸ್‌ನ ಎಲ್ಲ ತಪ್ಪುಗಳ ಹೊಣೆ ಹೊರುತ್ತೇನೆ'



ರಾಹುಲ್ ಗಾಂಧಿ

ನವದೆಹಲಿ (ಪಿಟಿಐ): 'ಕಾಂಗ್ರೆಸ್‌ನಿಂದ ಈ ಹಿಂದೆ ಹಲವು ತಪ್ಪುಗಳು ಆದಾಗ ನಾನು ಇರಲಿಲ್ಲ. ಆದರೂ ಕಾಂಗ್ರೆಸ್‌ನ ಇತಿಹಾಸದಲ್ಲಿ ನಡೆದ ಎಲ್ಲ ತಪ್ಪುಗಳ ಹೊಣೆಯನ್ನು ನಾನು ಹೊರುತ್ತೇನೆ' ಎಂದು ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಅವರು ಹೇಳಿದ್ದಾರೆ.

ಏ.21ರಂದು ಅಮೆರಿಕದ ಬ್ರೌನ್ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಗಳೊಂದಿಗೆ ರಾಹುಲ್ ಗಾಂಧಿ ಸಂವಾದ ನಡೆಸಿದ್ದರು. ಈ ವೇಳೆ ಸಿಖ್ ವಿದ್ಯಾರ್ಥಿ ಒಬ್ಬರು 1984ರ ಸಿಖ್ ಗಲಭೆ ಕುರಿತು ಕೇಳಿದ ಪ್ರಶ್ನೆಗೆ ರಾಹುಲ್ ಈ ಮೇಲಿನಂತೆ ಉತ್ತರ ನೀಡಿದ್ದಾರೆ.

ಸಂವಾದದ ವಿಡಿಯೊವನ್ನು ಯೂನಿವರ್ಸಿಟಿಯು ಯೂಟ್ಯೂಬ್‌ಗೆ ಶನಿವಾರ ಅಪ್‌ಲೋಡ್ ಮಾಡಿದೆ.

8ನೇ ಪುಟ ನೋಡಿ

ಒಳಮೀಸಲಾತಿಗಾಗಿ ಪರಿಶಿಷ್ಟ ಜಾತಿಗಳ ಸಮಗ್ರ ಸಮೀಕ್ಷೆ

ಜಾತಿ ತಾರತಮ್ಯದ ದತ್ತಾಂಶ ಸಂಗ್ರಹ

• ಜಯಸಿಂಹ ಆರ್.

ಬೆಂಗಳೂರು: ಒಳ ಮೀಸಲಾತಿ ಕಲ್ಪಿಸುವ ಉದ್ದೇಶದಿಂದ ಪರಿಶಿಷ್ಟ ಜಾತಿಗಳ ದತ್ತಾಂಶ ಸಂಗ್ರಹಕ್ಕೆ ನಡೆಸಲಿರುವ ಸಮೀಕ್ಷೆಯಲ್ಲಿ, ಜಾತಿ ತಾರತಮ್ಯ ಕುರಿತಾದ ಮಾಹಿತಿಗಳನ್ನೂ ಕಲೆ ಹಾಕಲಾಗುತ್ತದೆ.

ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ ದಾಸ್ ನೇತೃತ್ವದ ಏಕ ಸದಸ್ಯ ವಿಚಾರಣಾ ಆಯೋಗವು, ಪರಿಶಿಷ್ಟ ಜಾತಿಗಳ ಸಮಗ್ರ ಸಮೀಕ್ಷೆ–2025ರ ರೂಪುರೇಷೆಗಳನ್ನು ಸಿದ್ಧಪಡಿಸಿದೆ. ಮನೆ–ಮನೆಗೆ ಭೇಟಿ ನೀಡಿ ದತ್ತಾಂಶ ಸಂಗ್ರಹಿಸಲು ಆ್ಯಂಡ್ರಾಯ್ಡ್ ಆ್ಯಪ್ ಅಭಿವೃದ್ಧಿಪಡಿಸಲಾಗಿದೆ. ಪರಿಶಿಷ್ಟ ಜಾತಿಗಳ ಜನರು, ಜಾತಿಯ ಕಾರಣಕ್ಕೆ ಸಾಮಾಜಿಕ ತಾರತಮ್ಯಕ್ಕೆ ಗುರಿಯಾದುದರ ಬಗ್ಗೆ ಮಾಹಿತಿ ಕಲೆಹಾಕಲೂ ಈ ಆ್ಯಪ್‌ನಲ್ಲಿ ಅವಕಾಶ ಕಲ್ಪಿಸಲಾಗಿದೆ. ಇದಕ್ಕಾಗಿ ಆ್ಯಪ್‌ನ 16ನೇ ವಿಂಡೊವನ್ನು ಮೀಸಲಿಡಲಾಗಿದೆ.

ಸಮೀಕ್ಷೆಗೆ ಒಳಪಡುವವರು ಆಧಾರ್/ಪಡಿತರ ಚೀಟಿ ನೀಡಿ ನೋಂದಣಿ ಮಾಡಿಕೊಂಡ ನಂತರ ಅವರ ಮತ್ತು ಕುಟುಂಬದವರ ವೈಯಕ್ತಿಕ ವಿವರ ಸಂಗ್ರಹಿಸಲಾಗುತ್ತದೆ. ಕುಟುಂಬದ ಸದಸ್ಯರ ವಿವರ, ಶೈಕ್ಷಣಿಕ, ಆರ್ಥಿಕ, ಔದ್ಯೋಗಿಕ, ಸರ್ಕಾರಿ ಸವಲತ್ತುಗಳು, ಮೂಲಸೌಕರ್ಯಗಳು ಸೇರಿ ಸಮಗ್ರ ಮಾಹಿತಿಯನ್ನು ಕಲೆ ಹಾಕಲು ಈ ಆ್ಯಪ್‌ನಲ್ಲಿ ಒಟ್ಟು 17 ವಿಂಡೋಗಳನ್ನು ರೂಪಿಸಲಾಗಿದೆ.

16ನೇ ವಿಂಡೋವಿನಲ್ಲಿ 'ಕುಟುಂಬವು ಯಾವುದಾದರೂ ಸಾಮಾಜಿಕ ತಾರತಮ್ಯಕ್ಕೆ ಗುರಿಯಾಗಿದೆಯೇ' ಎಂಬ ಪ್ರಶ್ನೆ ಇದೆ. ಸಮೀಕ್ಷೆ ನಡೆಸುವವರು ಈ ಪ್ರಶ್ನೆ ಕೇಳಿದಾಗ ಕುಟುಂಬದವರು 'ಹೌದು' ಎಂದು ಉತ್ತರಿಸಿದರೆ, ತಾರತಮ್ಯದ ಸ್ವರೂಪವನ್ನು ವಿವರಿಸುವ ಉಪವಿಂಡೋ ತೆರೆದುಕೊಳ್ಳುತ್ತದೆ.

4ನೇ ಪುಟ ನೋಡಿ

'ಹಿಂದುಳಿದಿರುವಿಕೆಯ ವ್ಯಾಖ್ಯಾನಕ್ಕೆ ಅನುಕೂಲ'

ನಾಗಮೋಹನ ದಾಸ್

'ಪರಿಶಿಷ್ಟ ಜಾತಿಗಳ ಮೀಸಲಾತಿಯಲ್ಲಿ ಒಳಮೀಸಲಾತಿ ಕಲ್ಪಿಸಲು ಹಿಂದುಳಿದಿರುವಿಕೆಯನ್ನು ಪರಿಗಣಿಸಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಆದರೆ, ಹಿಂದುಳಿದಿರುವಿಕೆ ಅಂದರೆ ಏನು ಎಂದು ವ್ಯಾಖ್ಯಾನಿಸಿಲ್ಲ. ಆರ್ಥಿಕ, ಶೈಕ್ಷಣಿಕ ಮತ್ತು ರಾಜಕೀಯ ಸ್ಥಿತಿಯಿಂದ ಮಾತ್ರ ಹಿಂದುಳಿದಿರುವಿಕೆಯನ್ನು ನಿರ್ಧರಿಸಲು ಸಾಧ್ಯವಿಲ್ಲ. ಸಾಮಾಜಿಕ ತಾರತಮ್ಯವು ಇದನ್ನು ಅತ್ಯಂತ ಸ್ಪಷ್ಟವಾಗಿ ತೋರಿಸಲಿದೆ. ಹೀಗಾಗಿ ಸಾಮಾಜಿಕ ತಾರತಮ್ಯ ಕುರಿತಾದ ಈ ಭಾಗವು ಸಮೀಕ್ಷೆ ಮತ್ತು ಅದನ್ನು ಆಧರಿಸಿದ ವರದಿಯಲ್ಲಿ ಮಹತ್ವದ ಪಾತ್ರ ವಹಿಸಲಿದೆ' ಎಂದು ನ್ಯಾಯಮೂರ್ತಿ ಎಚ್.ಎನ್.ನಾಗಮೋಹನದಾಸ್ 'ಪ್ರಜಾವಾಣಿ'ಗೆ ತಿಳಿಸಿದರು.

4ನೇ ಪುಟ ನೋಡಿ

ಕಾರಾಗೃಹವಾಸಿಗಳಿಗೆ ಸಾಹಿತ್ಯ ಕಮ್ಮಟ: ಮೈಸೂರಿನಿಂದ ಚಾಲನೆ

ಸಾಹಿತ್ಯ ಅಕಾಡೆಮಿ ನಡೆ ಜೈಲಿನ ಕಡೆ

• ಎಂ. ಮಹೇಶ್

ಮೈಸೂರು: ಕನ್ನಡ ಸಾಹಿತ್ಯದ ಕಂಪನ್ನು ಹರಡಿಸುವ ಉದ್ದೇಶದಿಂದ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕಾರಾಗೃಹಗಳತ್ತ ಹೆಜ್ಜೆ ಇಟ್ಟಿದೆ. ಓದು, ಬರವಣಿಗೆಯ ಅಭಿರುಚಿ ಬೆಳೆಸುವ ಆಶಯದಿಂದ 'ಕಾರಾಗೃಹವಾಸಿಗಳಿಗೆ ಸಾಹಿತ್ಯ ಕಮ್ಮಟ' ಹಮ್ಮಿಕೊಂಡಿದೆ.

ಈ ಯೋಜನೆಗೆ ನಗರದ ಕೇಂದ್ರ ಕಾರಾಗೃಹದಿಂದ ಚಾಲನೆ ನೀಡಲಾಗುತ್ತಿದೆ. ಮೇ 7ರಿಂದ 9ವರೆಗೆ ಕಮ್ಮಟ ಹಮ್ಮಿಕೊಳ್ಳಲಾಗಿದ್ದು, ಸಂಪನ್ಮೂಲ ವ್ಯಕ್ತಿಗಳಿಂದ ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳ ಬಗ್ಗೆ ತಿಳಿಸಿಕೊಡುವ ಕಾರ್ಯಕ್ರಮ ರೂಪಿಸಲಾಗಿದೆ. ಕಾವ್ಯ, ಕಥೆ, ಕಾದಂಬರಿ, ರಂಗಭೂಮಿಯ ಅನುಕೂಲಗಳ ಬಗ್ಗೆ ಬೆಳಕು ಚೆಲ್ಲಲಾಗುವುದು. ಆ ವಾಸಿಗಳಲ್ಲಿನ ಸಾಹಿತ್ಯದ ಪ್ರತಿಭೆಗೆ ವೇದಿಕೆ ಕಲ್ಪಿಸುವ ಕೆಲಸವನ್ನೂ ಅಕಾಡೆಮಿ ಮಾಡಲಿದೆ.

ಇಲ್ಲಿನ ಕಮ್ಮಟದಲ್ಲಿ ಕಾರಾಗೃಹವಾಸಿಗಳಾದ ಆರ್.ರಾಮು, ಟಿ.ಎಂ. ವೆಂಕಟೇಶ್ ಕವನ ವಾಚಿಸುತ್ತಿರುವುದು ವಿಶೇಷ. ರಂಗಚಿಕಿತ್ಸೆ ಬಗ್ಗೆ ಲೇಖಕ ಗಣೇಶ ಅಮೀನಗಡ, ಕಾವ್ಯ ಜಗತ್ತಿನ ಕುರಿತು ಸಾಹಿತಿ ಪ್ರೊ.ಮೊರಬದ ಮಲ್ಲಿಕಾರ್ಜುನ, ಕಥಾ ಜಗತ್ತಿನ ಬಗ್ಗೆ ಕಥೆಗಾರ್ತಿ ದೀಪ್ತಿ ಭದ್ರಾವತಿ, ಕಾದಂಬರಿ ಜಗತ್ತಿನ ಕುರಿತು ಮಂಡ್ಯದ ಸರ್.ಎಂ.ವಿ. ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಪ್ರೊ.ಎಚ್.ಟಿ.ವೆಂಕಟೇಶಮೂರ್ತಿ ಉಪನ್ಯಾಸ ನೀಡಲಿದ್ದಾರೆ. ಸಮಾರೋಪ ಸಮಾರಂಭದಲ್ಲಿ ಸಾಹಿತಿ ರಾಜಪ್ಪ ದಳವಾಯಿ ಹಾಗೂ ಕವಯಿತ್ರಿ ಜಾಹಿದಾ ಪಾಲ್ಗೊಳ್ಳಲಿದ್ದಾರೆ. ಕಾರಾಗೃಹದ ಮುಖ್ಯ ಅಧೀಕ್ಷಕ ಪಿ.ಎಸ್.ರಮೇಶ್ ಸಹಕಾರ ನೀಡಿದ್ದಾರೆ.

ಇತರ ಜೈಲುಗಳಲ್ಲೂ: ಮುಂದೆ, ಬೆಳಗಾವಿಯ ಹಿಂಡಲಗಾ, ಬೆಂಗಳೂರಿನ ಪರಪ್ಪನ ಅಗ್ರಹಾರ, ಬಳ್ಳಾರಿ ಸೇರಿದಂತೆ ಯಾವ್ಯಾವ ಕಾರಾಗೃಹಗಳಲ್ಲಿ ಅವಕಾಶ ಸಿಗುತ್ತದೆಯೋ ಅಲ್ಲೆಲ್ಲಾ ಸಾಹಿತ್ಯ ಕಮ್ಮಟ ನಡೆಸಲು ಅಕಾಡೆಮಿ ಉದ್ದೇಶಿಸಿದೆ.

ಜೈಲುವಾಸಿಗಳ ಓದಿಗೆ ಅನುಕೂಲ ಆಗುವಂತೆ ಪುಸ್ತಕ ಬೇಕೆಂದರೆ ಅಕಾಡೆಮಿಯಿಂದ ಒದಗಿಸಲು, ಪ್ರಕಾಶಕರು ಅಥವಾ ಲೇಖಕರಿಂದಲೂ ಕೊಡಿಸಲೂ ಉದ್ದೇಶಿಸಲಾಗಿದೆ.

'ಕನ್ನಡ ಸಾಹಿತ್ಯದ ಪ್ರಚಾರ ಎಲ್ಲ ಕಡೆಯೂ ಆಗಬೇಕೆಂಬ ಧ್ಯೇಯ ನಮ್ಮದು. ವಿಭಿನ್ನ ಹಿನ್ನೆಲೆ, ನೆಲೆಗಟ್ಟಿನ ಜನರು ಪಾಲ್ಗೊಳ್ಳುವಂತಹ ಸಂತೆಗಳಲ್ಲೂ ಆದಿಕವಿ ಪಂಪನ ಬಗ್ಗೆ ಮಾತನಾಡಬೇಕು ಎಂಬುದು ನನ್ನ ನಿಲುವು' ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಎಲ್.ಎನ್. ಮುಕುಂದರಾಜ್ ತಿಳಿಸಿದರು.

8ನೇ ಪುಟ ನೋಡಿ

ಮುಖ್ಯಾಂಶಗಳು

- ಮೇ 7ರಿಂದ 9ರವರೆಗೆ ಮೈಸೂರಿನಲ್ಲಿ ಆಯೋಜನೆ
- ವಿವಿಧ ವಿಷಯಗಳ ಬಗ್ಗೆ ಉಪನ್ಯಾಸ

ಕನ್ನಡದ ಕವಿಗಳು, ನಮ್ಮ ಕಾಲದ ವಿದ್ವಾಂಸರು ಮಾನವೀಯ ಬದುಕಿಗೆ ಕೊಟ್ಟಿರುವ ಕೊಡುಗೆ ಅಪಾರವಾದುದು. ಅದನ್ನು ತಿಳಿಸಿಕೊಡುವ ಉದ್ದೇಶ ನಮ್ಮದು

ಎಲ್.ಎನ್. ಮುಕುಂದರಾಜ್
ಅಧ್ಯಕ್ಷ, ಕರ್ನಾಟಕ ಸಾಹಿತ್ಯ ಅಕಾಡೆಮಿ

'ಸಂತೆಯಲ್ಲಿ ಪಂಪ'...

'ಮಂಡ್ಯದಲ್ಲಿ ವೈದ್ಯಕೀಯ ಶಿಕ್ಷಣ ಹಾಗೂ ನರ್ಸಿಂಗ್ ವಿದ್ಯಾರ್ಥಿಗಳಿಗೆ ಕನ್ನಡ ಸಾಹಿತ್ಯದ ಕಾರ್ಯಕ್ರಮ ಮಾಡಿದ್ದೆವು. ಮುಂದೆ, 'ಸಂತೆಯಲ್ಲಿ ಪಂಪ' ಕಾರ್ಯಕ್ರಮವನ್ನು ಕುಣಿಗಲ್ ಸಂತೆಯಲ್ಲಿ ಆಯೋಜಿಸುವ ಉದ್ದೇಶವಿದೆ. ರೈತರು, ಪತ್ರಕರ್ತರು, ಕಾರ್ಮಿಕರಿಗೂ ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದ ಚುಟುವಟಿಕೆಗಳನ್ನು ನಡೆಸುವ ಯೋಜನೆ ಇದೆ' ಎಂದು ಮುಕುಂದರಾಜ್ ತಿಳಿಸಿದರು.

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಸೋಮವಾರದ ಉಷ್ಣಾಂಶ 34° ಗರಿಷ್ಠ 22° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು ಅಲ್ಲಲ್ಲಿ ಮಳೆಯಾಗುವ ಸಾಧ್ಯತೆ ಇದೆ.

ತಾಪಮಾನ	ಮಂಗಳವಾರ	ಬುಧವಾರ	ಗುರುವಾರ
	33° 21°	33° 21°	33° 21°

ಅನುದಾನದ ಕೊರತೆಯಿಂದ ಅಭಿವೃದ್ಧಿಗೆ ಹಿನ್ನಡೆ: ಶಾಸಕ

ಕೆ.ಆರ್.ಪುರ: ಕ್ಷೇತ್ರದಲ್ಲಿ ಮೂಲ ಸೌಕರ್ಯ ಕಲ್ಪಿಸಲು ಅನುದಾನದ ಕೊರತೆ ಉಂಟಾಗಿದೆ ಎಂದು ಶಾಸಕ ಬೈರತಿ ಬಸವರಾಜ ತಿಳಿಸಿದರು.

ಕ್ಷೇತ್ರದ ವಿಜ್ಞಾನನಗರ ವಾರ್ಡ್‌ನ ಮಹದೇವಪುರ, ಅಬ್ಬಯ್ಯರೆಡ್ಡಿ ಬಡಾವಣೆ, ಕಾಳಪ್ಪ ಬಡಾವಣೆ, ತಲಕಾವೇರಿ ಬಡಾವಣೆ ಎಚ್.ಎ.ಎಲ್ ವಾರ್ಡಿನ ವೀರಭದ್ರ ನಗರ, ಶಾಸ್ತ್ರಿನಗರ, ಶಿವಾನಂದ ಬಡಾವಣೆಯಲ್ಲಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿದರು.

‘ಕ್ಷೇತ್ರದಲ್ಲಿ ವಿವಿಧ ಮೂಲಸೌಕರ್ಯ ಕಲ್ಪಿಸಲು ಸಾಕಷ್ಟು ಅನುದಾನದ ಅಗತ್ಯವಿದೆ. ಆದರೆ ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ನಿರೀಕ್ಷಿತ ಪ್ರಮಾಣದಲ್ಲಿ ಅನುದಾನ ನೀಡದೆ ತಾರತಮ್ಯ ಮಾಡುತ್ತಿದೆ. ಇದರಿಂದ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ಆಗುತ್ತಿಲ್ಲ. ಹೀಗಾಗಿ, ಕ್ಷೇತ್ರದ ಮತದಾರರಿಗೆ ಅಭಿವೃದ್ಧಿ ವಿಚಾರದಲ್ಲಿ ಉತ್ತರಿಸಲು ಕಷ್ಟ ಸಾಧ್ಯವಾಗಿದೆ’ ಎಂದರು.

‘ಕ್ಷೇತ್ರದಲ್ಲಿ ಮೂಲಸೌಕರ್ಯ ಒದಗಿಸುವುದು ನಮ್ಮ ಕರ್ತವ್ಯ. ಈಗ ಸಿಕ್ಕಿರುವ ಅಲ್ಪ ಪ್ರಮಾಣದ ಅನುದಾನದಲ್ಲಿ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತಿದ್ದೇನೆ. ಕಾಮಗಾರಿಯಲ್ಲಿ ಗುಣಮಟ್ಟ ಕಾಯ್ದುಕೊಳ್ಳದಿದ್ದರೆ ಕ್ರಮ ಕೈಗೊಳ್ಳಬೇಕಾಗುತ್ತದೆ’ ಎಂದು ಗುತ್ತಿಗೆದಾರರು, ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪಕ್ಷದ ಮುಖಂಡರಾದ ಗೀತಾ ವಿವೇಕಾನಂದ, ಮಾರ್ಕೆಟ್ ರಮೇಶ್, ಎಸ್.ಜಿ.ನಾಗರಾಜ್, ಸಿದ್ದಲಿಂಗಯ್ಯ, ಶ್ರೀಕಾಂತ್, ಕೃಷ್ಣಪ್ಪ ಮತ್ತಿತರರು ಇದ್ದರು.

ಭಾರತ ಸರ್ಕಾರ
ಸಸ್ಯ ಪ್ರಭೇದಗಳು ಮತ್ತು ಕೃಷಿಕರ ಹಕ್ಕುಗಳ ಸಂರಕ್ಷಣಾ ಪ್ರಾಧಿಕಾರ
ಕೃಷಿ ಮತ್ತು ಕೃಷಿಕರ ಕ್ಷೇಮಾಭಿವೃದ್ಧಿ ಇಲಾಖೆ PPVFRA
ಕೃಷಿ ಮತ್ತು ಕೃಷಿಕರ ಕ್ಷೇಮಾಭಿವೃದ್ಧಿ ಸಚಿವಾಲಯ
ವೆಬ್‌ಸೈಟ್: www.plantauthority.gov.in

ಸಸ್ಯ ಜಿನೋಮ್ ಸಂರಕ್ಷಕ ಪ್ರಶಸ್ತಿ 2024–25

ಸನ್ 2024–25ನೇ ಸಾಲಿನ ಸಸ್ಯ ಜಿನೋಮ್ ಸಂರಕ್ಷಕ ಪ್ರಶಸ್ತಿ/ಕೃಷಿ ಪುರಸ್ಕಾರ ಹಾಗೂ ಸನ್ಮಾನಕ್ಕಾಗಿ ಕೃಷಿ ಸಮುದಾಯಗಳಿಂದ ಮತ್ತು ವೈಯಕ್ತಿಕ ಕೃಷಿಕರಿಂದ ನಿರ್ದಿಷ್ಟ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ವಿವರವಾದ ಜಾಹೀರಾತು ಮತ್ತು ಅರ್ಜಿ ನಮೂನೆಯು ಪಿಪಿವಿಎಫ್‌ಆರ್ ಪ್ರಾಧಿಕಾರದ https://plantauthority.gov.in ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ.

ಕೊನೆಯ ದಿನಾಂಕ: ಜಾಹೀರಾತು ದಿನಾಂಕದಿಂದ 3 ತಿಂಗಳು.

CBC 01146/12/0001/2526

ಕಾವೇರಿ ಸಂಪರ್ಕ ಅಭಿಯಾನ: ಬೆಂಗಳೂರು ಜಲಮಂಡಳಿ ಮಂಜೂರು

6 ತಿಂಗಳಲ್ಲಿ 13 ಸಾವಿರ ಸಂಪರ್ಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾವೇರಿ ಸಂಪರ್ಕ ಅಭಿಯಾನ ಸೇರಿದಂತೆ ಹಲವು ರೀತಿಯ ಜಾಗೃತಿ ಕಾರ್ಯಕ್ರಮಗಳೊಂದಿಗೆ ಆರು ತಿಂಗಳಲ್ಲಿ 13,887ಕ್ಕೂ ಹೆಚ್ಚು ಕಾವೇರಿ ನೀರಿನ ಹೊಸ ಸಂಪರ್ಕಗಳನ್ನು ಬೆಂಗಳೂರು ಜಲಮಂಡಳಿ ಮಂಜೂರು ಮಾಡಿದೆ.

2024ರ ನವೆಂಬರ್‌ನಿಂದ ಈ ಏಪ್ರಿಲ್‌ವರೆಗೆ 39,866 ಅರ್ಜಿಗಳು ಸಲ್ಲಿಕೆಯಾಗಿವೆ. 31 ಸಾವಿರಕ್ಕೂ ಹೆಚ್ಚು ಮಂದಿಗೆ ಡಿಮ್ಯಾಂಡ್ ನೋಟ್ ವಿತರಿಸಲಾಗಿದೆ. ವಿವಿಧ ಕಾರಣಗಳಿಂದ ನಾಲ್ಕು ಸಾವಿರದಷ್ಟು ಅರ್ಜಿಗಳನ್ನು ಬಾಕಿ ಇರಿಸಲಾಗಿದೆ ಎಂದು ಜಲಮಂಡಳಿ ಅಧಿಕಾರಿಗಳು ತಿಳಿಸಿದ್ದಾರೆ.

ನಗರದ ನಾಲ್ಕು ವಲಯಗಳ ಪೈಕಿ ದಕ್ಷಿಣ ವಲಯದಲ್ಲಿ ಕಾವೇರಿ ನೀರಿನ ಹೊಸ ಸಂಪರ್ಕ ಪಡೆಯಲು 14 ಸಾವಿರಕ್ಕೂ ಹೆಚ್ಚು ನಾಗರಿಕರು ಅರ್ಜಿ ಸಲ್ಲಿಸಿದ್ದಾರೆ. 12 ಸಾವಿರ ಮನೆಗಳಿಗೆ ಡಿಮ್ಯಾಂಡ್ ನೋಟ್ ನೀಡಿದ್ದು, ಶೇ 50ರಷ್ಟು ಮನೆಗಳಿಗೆ ನೀರಿನ ಸಂಪರ್ಕ ನೀಡಲಾಗಿದೆ.

ಪೂರ್ವ ವಲಯದಲ್ಲಿ 12 ಸಾವಿರ ಅರ್ಜಿ ಸಲ್ಲಿಕೆಯಾಗಿವೆ. ಎರಡು ಸಾವಿರ ಮನೆಗಳಿಗೆ ಸಂಪರ್ಕ ನೀಡಲಾಗಿದೆ. ಪಶ್ಚಿಮ ವಲಯದಲ್ಲಿ 10 ಸಾವಿರಕ್ಕೂ ಹೆಚ್ಚು ಅರ್ಜಿಗಳು ಸಲ್ಲಿಕೆಯಾಗಿವೆ. ಮೂರು ಸಾವಿರ ಮನೆಗಳಿಗೆ ನೀರಿನ ಸಂಪರ್ಕ ಕೊಡಲಾಗಿದೆ.

ದಕ್ಷಿಣ ವಲಯ ಮುಂದು: ಅರ್ಜಿ ಸಲ್ಲಿಕೆಯಲ್ಲಷ್ಟೇ ಅಲ್ಲದೇ, ನೀರಿನ ಸಂಪರ್ಕ ನೀಡುವುದರಲ್ಲಿ, ಶುಲ್ಕ ಸಂಗ್ರಹಿಸುವಲ್ಲಿ ದಕ್ಷಿಣ ವಲಯ ಮುಂದಿದೆ. ಆರು ತಿಂಗಳಲ್ಲಿ ನಾಲ್ಕು ವಲಯಗಳಿಂದ ಕಾವೇರಿ ನೀರು ಸಂಪರ್ಕದ ಪ್ರೊರೇಟಾ ಶುಲ್ಕ ₹210 ಕೋಟಿಯಷ್ಟು ಸಂಗ್ರಹವಾಗಿದೆ. ಇದರಲ್ಲಿ ₹119.76 ಕೋಟಿ ದಕ್ಷಿಣ ವಲಯ ಒಂದರಲ್ಲೇ ಸಂಗ್ರಹವಾಗಿದೆ. ಈ ವಲಯದಲ್ಲಿ 6,401 ನೀರಿನ ಸಂಪರ್ಕಗಳನ್ನು ನೀಡಲಾಗಿದೆ ಎಂದು ಜಲಮಂಡಳಿ ಸಿಬ್ಬಂದಿ ತಿಳಿಸಿದರು.

ಕಾವೇರಿ 5ನೇ ಹಂತ ನೀರಿನ ಸಂಪರ್ಕ ವಿವರ

ವಲಯ	ಸ್ವೀಕೃತ ಅರ್ಜಿ	ಡಿಮ್ಯಾಂಡ್ ನೋಟ್ ವಿತರಣೆ	ಸಂಪರ್ಕ	ಅರ್ಜಿ ತಡೆ	ಸಂಗ್ರಹ ಶುಲ್ಕ (₹ ಕೋಟಿಗಳಲ್ಲಿ)
ಪೂರ್ವ	12,160	7,418	2,597	824	55.69
ಪಶ್ಚಿಮ	10,734	8,949	3,714	1,785	26.29
ಉತ್ತರ	2,688	2,191	1,175	253	8.59
ದಕ್ಷಿಣ	14,284	12,749	6,401	1,449	119.76
ಒಟ್ಟು	39,866	31,307	13,887	4,311	210.33

ಸಣ್ಣ ಮನೆಗಳಿಗೆ ‘ಕಂತು’ ಸೌಲಭ್ಯ

ಕಾವೇರಿ ನೀರಿನ ಹೊಸ ಸಂಪರ್ಕದ ‘ಪ್ರೊರೇಟಾ’ ಶುಲ್ಕವನ್ನು ಸಮಾನ ಕಂತುಗಳಲ್ಲಿ (ಇಎಂಐ) ಪಾವತಿಸಲು ಜಲಮಂಡಳಿ ಯೋಜನೆ ರೂಪಿಸಿದ್ದು, ಶೀಘ್ರದಲ್ಲೇ ಅದು ಅನುಷ್ಠಾನಗೊಳ್ಳಲಿದೆ. ಪ್ರಸ್ತುತ, 600 ಚ.ಅಡಿ ವಿಸ್ತೀರ್ಣದಲ್ಲಿ ಮನೆ ನಿರ್ಮಿಸಿಕೊಂಡವರಿಗೆ (ಸಣ್ಣ ನಿವೇಶನದಾರರಿಗೆ) ಮಾತ್ರ ಕಂತುಗಳಲ್ಲಿ ಶುಲ್ಕ ಪಾವತಿಸುವ ಸೌಲಭ್ಯ ನೀಡಲಾಗಿದೆ. ಇಷ್ಟು ಸಣ್ಣ ವಿಸ್ತೀರ್ಣದಲ್ಲಿ ಮನೆ ಕಟ್ಟಿಕೊಂಡಿರುವವರು ಕಾವೇರಿ ಸಂಪರ್ಕ ಪಡೆಯಲು ಒಟ್ಟು ₹2,900 ಠೇವಣಿ ಪಾವತಿಸಬೇಕಾಗುತ್ತದೆ. ಡಿಮ್ಯಾಂಡ್ ನೋಟ್ ಬಂದಾಗ ₹1,000 ಹಣ ಪಾವತಿಸಿದರೆ ನೀರಿನ ಸಂಪರ್ಕ ನೀಡಲಾಗುತ್ತದೆ. ಉಳಿದ ಹಣವನ್ನು 12 ತಿಂಗಳಲ್ಲಿ ಕಂತುಗಳ ಮೂಲಕ ಪಾವತಿಸುವ ಸೌಲಭ್ಯ ನೀಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಸುದ್ದಿ 2 ನಿಮಿಷ

ನಮ್ಮ ಮೆಟ್ರೊ ಆವರಣದಲ್ಲಿ ಉಗುಳಿದ ಪ್ರಯಾಣಿಕ: ದಂಡ

ಬೆಂಗಳೂರು: ‘ನಮ್ಮ ಮೆಟ್ರೊ’ ದೊಡ್ಡಕಲ್ಲಸಂದ್ರ ನಿಲ್ದಾಣದಲ್ಲಿ ಪಾನ್ ಮಸಾಲ ತಿಂದು ಉಗುಳಿದ ಪ್ರಯಾಣಿಕರೊಬ್ಬರಿಗೆ ಬಿಎಂಆರ್‌ಸಿಎಲ್ ₹200 ದಂಡ ವಿಧಿಸಿದೆ.

ಹಸಿರು ಮಾರ್ಗದಲ್ಲಿ ಕನಕಪುರ ರಸ್ತೆಯಲ್ಲಿರುವ ದೊಡ್ಡಕಲ್ಲಸಂದ್ರ ನಿಲ್ದಾಣದ ಪ್ಲ್ಯಾಟ್‌ಫಾರ್ಮ್ 1ರ ಲಿಫ್ಟ್ ಬಳಿ ಪ್ರಯಾಣಿಕರೊಬ್ಬರು ಪಾನ್ ಮಸಾಲ ಉಗುಳಿದ್ದರು. ಮೆಟ್ರೊ ಸಿಬ್ಬಂದಿ ಈ ಪ್ರಯಾಣಿಕನನ್ನು ಪತ್ತೆಹಚ್ಚಿದರು. ಅಧಿಕಾರಿಗಳು ದಂಡ ವಿಧಿಸಿದರು.

ಮೆಟ್ರೊ ಆವರಣ, ಮೆಟ್ರೊ ರೈಲಿನಲ್ಲಿ ಉಗುಳಿದರೆ, ಕಸ ಎಸೆದರೆ ಪರಿಸರ ಹಾಳಾಗುವುದಲ್ಲದೇ ಇತರ ಪ್ರಯಾಣಿಕರ ಆರೋಗ್ಯಕ್ಕೂ ಅಪಾಯ ಉಂಟು ಮಾಡುತ್ತದೆ. ಸ್ವಚ್ಛ, ಆರೋಗ್ಯಕರ ಮತ್ತು ಸುರಕ್ಷಿತ ಸಾರ್ವಜನಿಕ ಸಾರಿಗೆ ವ್ಯವಸ್ಥೆಗಾಗಿ ಬಿಎಂಆರ್‌ಸಿಎಲ್ ಕಟ್ಟುನಿಟ್ಟಾಗಿ ಕ್ರಮ ಕೈಗೊಳ್ಳುತ್ತಿದೆ. ಉಗುಳುವುದು, ಕಸ ಹಾಕುವುದು ಕಂಡರೆ ಕೂಡಲೇ ಮೆಟ್ರೊ ಸಿಬ್ಬಂದಿಗೆ ತಿಳಿಸಬೇಕು ಎಂದು ‘ನಮ್ಮ ಮೆಟ್ರೊ’ ಅಧಿಕಾರಿಗಳು ತಿಳಿಸಿದ್ದಾರೆ.

ಸರ್ಜಾಪುರ ರಸ್ತೆಯಲ್ಲಿ ಸಂಚಾರ ಮಾರ್ಪಾಡು

ಬೆಂಗಳೂರು: ಸರ್ಜಾಪುರ ಮುಖ್ಯರಸ್ತೆಯಲ್ಲಿ ವಾಹನ ದಟ್ಟಣೆ ನಿಯಂತ್ರಿಸುವ ಸಲುವಾಗಿ ಹಾಡೋಸಿದ್ದಾಪುರ ಜಂಕ್ಷನ್ ಬಳಿ ರಸ್ತೆ ವಿಭಜಕವನ್ನು ಪ್ರಿಕಾಸ್ಟ್ ಸೆಂಟರ್ ಮೀಡಿಯನ್‌ನಿಂದ ಮುಚ್ಚಲಾಗಿದೆ ಎಂದು ಸಂಚಾರ ವಿಭಾಗದ ಪೊಲೀಸರು ತಿಳಿಸಿದ್ದಾರೆ.

ಜಂಕ್ಷನ್ ಬಳಿ ಬಲ ತಿರುವು ಪಡೆದು ಹಾಡೋಸಿದ್ದಾಪುರ ಕಡೆಗೆ ಸಾಗುವ ವಾಹನಗಳು ಸರ್ಜಾಪುರ ರಸ್ತೆಯಲ್ಲಿ ಮುಂದುವರಿದು ಕಾರ್ಮೆಲರಾಂ ಜಂಕ್ಷನ್ ಬಳಿ ರೈಲ್ವೆ ಮೇಲ್ಸೇತುವೆ ಕೆಳಭಾಗದಲ್ಲಿ ‘ಯೂ ಟರ್ನ್’ ಪಡೆಯಬೇಕು.

ಹಾಡೋಸಿದ್ದಾಪುರ ಒಳಭಾಗದ ರಸ್ತೆಯಿಂದ ಜಂಕ್ಷನ್ ಬಳಿ ಸರ್ಜಾಪುರ ಕಡೆಗೆ ಬಲ ತಿರುವು ಪಡೆದು ಸಂಚರಿಸುತ್ತಿದ್ದ ವಾಹನಗಳು ಜಂಕ್ಷನ್ ಬಳಿ ಎಡ ತಿರುವು ಪಡೆಯಬೇಕು ಎಂದು ದಕ್ಷಿಣ ವಿಭಾಗದ ಸಂಚಾರ ಪೊಲೀಸರು ಸಲಹೆ ನೀಡಿದ್ದಾರೆ.

ನರಸಾಪುರಕ್ಕೆ ಬಸ್

ಬೆಂಗಳೂರು: ಕೆಂಪೇಗೌಡ ಬಸ್ ನಿಲ್ದಾಣ–ನರಸಾಪುರ ನಿಲ್ದಾಣಗಳ ನಡುವೆ ಹೊಸ ಮಾರ್ಗದಲ್ಲಿ ಹವಾನಿಯಂತ್ರಣ ರಹಿತ ಬಿಎಂಟಿಸಿ ಬಸ್ ಸಂಚಾರ ಮೇ 5ರಂದು ಆರಂಭವಾಗಲಿದೆ. ದಿನಕ್ಕೆ ಎರಡೂ ಕಡೆಯಿಂದ ತಲಾ ಏಳು ಟ್ರಿಪ್ ಇರಲಿದೆ.

ಮಾರ್ಗ ಸಂಖ್ಯೆ 238 ಯುಎನ್ ಆಗಿದ್ದು, ಮಾಗಡಿ ರಸ್ತೆ ಒಂದನೇ ಕ್ರಾಸ್, ವಿಜಯನಗರ, ಮೂಡಲಪಾಳ್ಯ, ನಾಗರಬಾವಿ ಸರ್ಕಲ್, ಐ.ಟಿ.ಐ ಲೇಔಟ್ ಮೂಲಕ ಬಸ್ ಸಂಚರಿಸಲಿದೆ ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

‘ಸರ್ವಕಾಲಕ್ಕೂ ಸಲ್ಲಲಿದೆ ಪಂಚತಂತ್ರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕ್ಲಿಷ್ಟವಾದ ಸಂಗತಿಗಳನ್ನೂ ಸರಳವಾಗಿ ಹೇಳಿರುವ ಪಂಚತಂತ್ರದ ಕತೆಗಳು ಎಲ್ಲ ಕಾಲಕ್ಕೂ ಸಲ್ಲುತ್ತವೆ. ಚೀನಾ, ಜರ್ಮನಿ ಸೇರಿ ವಿವಿಧ ದೇಶಗಳ ಕತೆಗಳಿಗೆ ಹೋಲಿಸಿದರೆ, ಎಲ್ಲ ಕಾಲಕ್ಕೂ ಒಪ್ಪುವಂತಹ ಕತೆಗಳು ಭಾರತದಲ್ಲಿ ಮಾತ್ರ ಇವೆ’ ಎಂದು ರಾಜ್ಯಸಭಾ ಸದಸ್ಯೆ ಸುಧಾ ಮೂರ್ತಿ ಅಭಿಪ್ರಾಯಪಟ್ಟರು.

ಸದಾತನ ಬೆಂಗಳೂರು ಸಂಸ್ಥೆ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಕೊರ್ಗಿ ಶಂಕರ ನಾರಾಯಣ ಉಪಾಧ್ಯಾಯ ಅನುವಾದಿಸಿರುವ ‘ಪಂಚತಂತ್ರ’ ಹಾಗೂ ‘ಹಿತೋಪದೇಶ’ ಪುಸ್ತಕಗಳನ್ನು ಬಿಡುಗಡೆ ಮಾಡಿ, ಮಾತನಾಡಿದರು.

‘ರಾಮಾಯಣ, ಮಹಾಭಾರತ, ಕಥಾಸರಿತ್ಸಾಗರವು ಸಾವಿರಾರು ಕತೆಗಳನ್ನು ಒಳಗೊಂಡಿವೆ. ಓದುವ ಬುದ್ಧಿ, ಹೇಳುವ ಭಾಷೆ, ತಿಳಿದುಕೊಳ್ಳುವ ಮನಸ್ಥಿತಿಗಳ ಅನುಸಂಧಾನ ಆದಲ್ಲಿ ಮಾತ್ರ ಅದರ ಲಾಭ ಪಡೆಯಬಹುದು. ಸರ್ವಕಾಲಕ್ಕೂ ಸಲ್ಲುವ ಕಥೆಗಳನ್ನು ಅನುವಾದಿಸುವ ಕೆಲಸ ಆಗಬೇಕು’ ಎಂದು ಹೇಳಿದರು.

‘ಪಂಚತಂತ್ರ ಬರೆದ ಕಾಲಘಟ್ಟದಲ್ಲಿ ಕೆಲ ಸಂದರ್ಭ ಸ್ತ್ರೀಯರನ್ನು ಹೀನಾಯವಾಗಿ ಕಂಡಿರುವ ಬಗ್ಗೆ ವೈಯಕ್ತಿಕವಾಗಿ ಆಕ್ಷೇಪವಿದೆ. ಸ್ತ್ರೀಯರನ್ನು ನಂಬಬಾರದು, ಮೋಸ ಮಾಡುತ್ತಾರೆ ಎಂಬ ವಿಚಾರ ಒಪ್ಪಲು ಸಾಧ್ಯವಿಲ್ಲ. ಮಕ್ಕಳಿಗೆ ಪಂಚತಂತ್ರ ಕತೆ ಹೇಳುವಾಗ ಅದರಲ್ಲಿನ ಒಳ್ಳೆಯ ಅಂಶಗಳನ್ನು ಮಾತ್ರ ತಿಳಿಸಬೇಕು’ ಎಂದರು.

ಲೇಖಕ ಜಗದೀಶ ಶರ್ಮ ಸಂಪ, ‘ಕಣ್ಣಿಗೆ ಕಾಣದ ಮನಸ್ಸಿನ ಬಾಧೆ ನಿವಾರಿಸಲು ಕತೆಗಳು ನೆರವಾಗಬಲ್ಲವು. ಇದನ್ನು ತುಂಬ ಹಿಂದೆಯೇ ಭಾರತೀಯರು ಕಂಡುಕೊಂಡಿದ್ದರು. ಪ್ರಾಚೀನ ಭಾರತದಲ್ಲಿ ವ್ಯಕ್ತಿತ್ವ ವಿಕಸನಕ್ಕಾಗಿ ಯಾವುದೇ ಪ್ರತ್ಯೇಕ ಪುಸ್ತಕಗಳಿರಲಿಲ್ಲ. ಆದರೆ, ಆ ಕಾಲದ ಎಲ್ಲ ಪುಸ್ತಕಗಳು ವ್ಯಕ್ತಿತ್ವ ವಿಕಸನದ ಅಂಶಗಳನ್ನೇ ಹೊಂದಿವೆ’ ಎಂದರು.

ಕೊರ್ಗಿ ಶಂಕರನಾರಾಯಣ ಉಪಾಧ್ಯಾಯ, ಬಿಎಂಎಸ್ ಎಂಜಿನಿಯರಿಂಗ್ ಕಾಲೇಜು ಪ್ರಾಂಶುಪಾಲ ಭೀಮಶಾ ಆರ್ಯ ಉಪಸ್ಥಿತರಿದ್ದರು.

ಎಸ್‌ಎಸ್‌ಎಲ್‌ಸಿ ಸಾಧಕರು: ಶ್ರೀ ಅನುಪಮ ವಿದ್ಯಾ ಮಂದಿರ, ಪೀಣ್ಯ



ತನುಪ್ರಿಯಾ ಎಸ್‌.ಎಸ್. (ಶೇ 99.84) | ನವ್ಯಶ್ರೀ ಆರ್. (ಶೇ 98.72) | ನಿತ್ಯಶ್ರೀ ಆರ್. (ಶೇ 96.8) | ಪ್ರೀತಮ್ ವಿ. (ಶೇ 96.16) | ತೇಜಸ್ವಿನಿ ಕೆ. (ಶೇ 94.40)

ಪಹಲ್ಗಾಮ್ ದಾಳಿಯಲ್ಲಿ ಮೃತಪಟ್ಟವರಿಗೆ ನಗರದ ಮಿಲ್ಲರ್ಸ್ ರಸ್ತೆಯಲ್ಲಿ ಭಾನುವಾರ ಜನರು ಮೇಣದಬತ್ತಿ ಹಚ್ಚಿ ಸಂತಾಪ ಸೂಚಿಸಿದರು ಪ್ರಜಾವಾಣಿ ಚಿತ್ರ

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ,
ಎಲೆಕ್ಟ್ರೋ–ಆಪ್ಟಿಕ್ಸ್ ಸಿಸ್ಟಮ್‌ಗಳಿಗಾಗಿ ಪ್ರಯೋಗಾಲಯ (ಎಲ್‌ಇಒಎಸ್)
ಪೀಣ್ಯ, ಬೆಂಗಳೂರು–560058, ಎಲ್‌ಇಒಎಸ್ ನಿರ್ಮಾಣ ಮತ್ತು ನಿರ್ವಹಣಾ ಸಮೂಹ (ಎಲ್‌ಸಿಎಂಜಿ)
(ದೂರವಾಣಿ: (080)–22685088, 5193, 5093, 5086, ಫ್ಯಾಕ್ಸ್: (080)–28392310]

ಸಂಕ್ಷಿಪ್ತ ಇ–ಟೆಂಡರ್ (ಎನ್‌ಐಇಟಿ) ಆಹ್ವಾನಿಸುವ ಪ್ರಕಟಣೆ
ಭಾರತದ ರಾಷ್ಟ್ರಪತಿಗಳ ಪರವಾಗಿ, ಈ ಕೆಳಗಿನ ಕೆಲಸಕ್ಕಾಗಿ ಐಟಂ ದರದ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕೆಲಸದ ಹೆಸರು; ಎನ್‌ಐಟಿ ನಂ. & ದಿನಾಂಕ : ಎಲ್‌ಇಒಎಸ್ ಕ್ಯಾಂಪಸ್, ಪೀಣ್ಯ, ಬೆಂಗಳೂರು–58 ರಲ್ಲಿ ಹೆಚ್‌ಎಎಸ್‌ಎಸ್ ಮತ್ತು ಬಿಎಫ್‌ಎಫ್‌ಎಲ್‌ಇ ಪರೀಕ್ಷಾ ಸೌಲಭ್ಯಕ್ಕಾಗಿ 500 ಕೆವಿಎ ಡಿಜಿ 1 ಸಂಖ್ಯೆ ಪೂರೈಕೆ, ಸ್ಥಾಪನೆ, ಪರೀಕ್ಷೆ, ಕಾರ್ಯಾರಂಭಕ್ಕಾಗಿ ಪ್ರಸ್ತಾವಿತ ಡಜಿ ಸ್ಟ್ಯಾಕ್ ಅಡಿಪಾಯ ಮತ್ತು ಹಳೆಯ ಡಿಜಿ ಸೆಟ್‌ಗಳನ್ನು ಬದಲಾಯಿಸಲು 3 ಸಂಖ್ಯೆ ಡಿಜಿ ಸೆಟ್‌ಗಳ ಎಸ್‌ಐಟಿಸಿ; ಎನ್‌ಐಇಟಿ: CMG/LEOS/2025-26/LMN-01; ದಿನಾಂಕ : 28.04.2025; **ಟೆಂಡರ್ ಮತ್ತು ಇಎಂಡಿಗೆ ಇಡಲಾದ ಅಂದಾಜು ವೆಚ್ಚ: ರೂ.15.28 ಲಕ್ಷಗಳು;** ಇಎಂಡಿ ರೂ.30,569/–; **ತಿಂಗಳುಗಳಲ್ಲಿ ಪೂರ್ಣಗೊಳಿಸುವ ಅವದಿ:** 04 ತಿಂಗಳು, ಟೆಂಡರ್ ಡಾಕ್ಯುಮೆಂಟ್ ಅನ್ನು ಡೌನ್‌ಲೋಡ್ ಮಾಡಬಹುದಾದ ಅವಧಿ : **ತೆರೆಯುವ ದಿನಾಂಕ :** 29.04.2025; **ಮುಕ್ತಾಯವಾಗುವ ದಿನಾಂಕ :** 13.05.2025.

ಕೆಲಸದ ಹೆಸರು; ಎನ್‌ಐಟಿ ನಂ. & ದಿನಾಂಕ : ಎಲ್‌ಇಒಎಸ್ ಕ್ಯಾಂಪಸ್ ಪೀಣ್ಯ, ಬೆಂಗಳೂರು–58ನಲ್ಲಿ ಒಂದು ವರ್ಷದ ಅವಧಿಗೆ ಅರ್ಥಿಂಗ್ ಒದಗಿಸಲು ದರ ಒಪ್ಪಂದ; ಎನ್‌ಐಇಟಿ: LEOS/CMG/ EMN-01/2025-26; ದಿನಾಂಕ : 29.04.2025; **ಟೆಂಡರ್ ಮತ್ತು ಇಎಂಡಿಗೆ ಇಡಲಾದ ಅಂದಾಜು ವೆಚ್ಚ :** ರೂ. **8.63** ಲಕ್ಷಗಳು; ಇಎಂಡಿ ರೂ.**17,270/–; ತಿಂಗಳುಗಳಲ್ಲಿ ಪೂರ್ಣಗೊಳಿಸುವ ಅವದಿ:** 12 ತಿಂಗಳು; ಟೆಂಡರ್ ಡಾಕ್ಯುಮೆಂಟ್ ಅನ್ನು ಡೌನ್‌ಲೋಡ್ ಮಾಡಬಹುದಾದ ಅವಧಿ : **ತೆರೆಯುವ ದಿನಾಂಕ :** 02.05.2025; **ಮುಕ್ತಾಯವಾಗುವ ದಿನಾಂಕ :** 20.05.2025.

ಆಸಕ್ತ ಟೆಂಡರುದಾರರು ಇ–ಟೆಂಡರ್ (ಎನ್‌ಐಇಟಿ) ಆಹ್ವಾನದ ಪ್ರಕಟಣೆಯ ಅರ್ಹತಾ ಮಾನದಂಡ ಮತ್ತು ಇತರೆ ವಿವರವನ್ನು **www.isro.gov.in** ವೆಬ್‌ಸೈಟ್‌ನಲ್ಲಿ ಪರಿಶೀಲಿಸಬಹುದು ಮತ್ತು ಟೆಂಡರ್ ದಾಖಲೆಗಳನ್ನು **www.tenderwizard.com/ISRO** ನಿಂದ ಡೌನ್‌ಲೋಡ್ ಮಾಡಬಹುದು.

ಸಹಿ/– ಸಮೂಹ ನಿರ್ದೇಶಕ
(ನಿರ್ಮಾಣ ಮತ್ತು ನಿರ್ವಹಣಾ ಸಮೂಹ) (ಸಿ&ಎಂಜಿ)
ಯುಆರ್‌ಎಸ್‌ಸಿ, ಬೆಂಗಳೂರು.

ಕ್ಲಾಸಿಫೈಡ್ಸ್
ADMISSION CORNER

BBA Aviation Management
B.Sc. Aircraft Maintenance
BBA MBA
B.Com
BCA
Eligibility: 12th Std. or Diploma (DTE approved)
Approved by AICTE and Affiliated with Bengaluru North University

HEA POLYTECHNIC
Diploma Courses:
Affiliated with DTE Board & Approved by AICTE
• Aeronautical Engineering
• Mechanical Engineering
Eligibility: 10th Std. • Computer Science Engineering

HINDUSTAN AVIATION ACADEMY
Approved by DGCA, Govt. of India
AME Aircraft Maintenance Engineering
DGCA CAR 147 Basic • B1.1 Aeroplane Turbine • B1.3 Helicopter Turbine • B2 Avionics
Eligibility: 12th Std. with PCM or Diploma (DTE approved)

ADMISSIONS ARE OPEN FOR 2025-26
LIMITED SEATS ONLY
Placement Assistance provided
8971404357
9740037853
HBS HINDUSTAN BUSINESS SCHOOL
MARATHAHALLI BENGALURU
Ashwathnagar, Chinnappanahalli, Marathahalli, Bengaluru - 560037
Mobile: 63645 44814
E: admissions@hindustanacademy.edu.in
www.hindustanacademy.edu.in

EDUCATION SUCCESS ಕ್ಲಾಸಿಫೈಡ್ಸ್

ಸೆಂಟ್ ಫ್ಲವರ್ಸ್ ಇಂಗ್ಲೀಷ್ ಸ್ಕೂಲ್

ಸೆಂಟ್ ಫ್ಲವರ್ಸ್ ಇಂಗ್ಲೀಷ್ ಸ್ಕೂಲ್ ವಿದ್ಯಾರ್ಥಿಗಳ ಸಾಧನೆ ಚಂದ್ರಾಲೇಔಟ್‌ನಲ್ಲಿರುವ ಸೆಂಟ್ ಫ್ಲವರ್ಸ್ ICSE ಶಾಲೆಗೆ ಶೇ100 ಫಲಿತಾಂಶ ಬೆಂಗಳೂರು ನಗರದ ಚಂದ್ರಾಲೇಔಟ್‌ನಲ್ಲಿರುವ ಸೆಂಟ್ ಫ್ಲವರ್ಸ್ ವಿಭಾಗದ 23 ವಿದ್ಯಾರ್ಥಿಗಳು ವಾರ್ಷಿಕ ಪರೀಕ್ಷೆಯಲ್ಲಿ ಅತ್ಯುತ್ತಮ ಶ್ರೇಣಿಯಲ್ಲಿ ತೇರ್ಗಡೆ ಯಾಗುವುದರ ಮೂಲಕ ಸಾಧನೆ ಮಾಡಿದ್ದಾರೆ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಗೆ ಶಾಲೆಯ ಪ್ರಾಂಶುಪಾಲರು, ಉಪನ್ಯಾಸಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ



ಎಸ್.ವಿ. ವಿದಿತ್ 94.80% | ಎಸ್. ಮೋಹನ್ 93.2%
ಶಶಾಂಕ್ ಕಾಮತ್ 92.6% | ಅನುಷ ಕುಸಗುರ್ 92% | ಮಧನ್ .ಎಸ್ 91.2% | ಖುಷ್ ಸೋಮನಿ 91% | ಪ್ರವಿತ್ ಎಸ್.ಪ್ರಭು 89.6% | ರಕ್ಷ.ಕೆ 88.2% | ಸಿಂಚನ ಎಂ. ಜೋಗಿ 88%
ನಿಹರಿಕ ಡಿ.ಪಿ. 87.8% | ತನ್ಯ ಶ್ರೀ ಎಸ್ 87.6% | ಜೈಕುಮಾರ್ .ಆರ್ 86% | ಸಮರ್ಥ್ ಆರ್. 85.60% | ಧನಿಷ್ ಎನ್. ಗೌಡ 84.8% | ವಿಜಯದೇವ್ ಬಸಪ್ಪ ಬಿರೋಜಿ 84.60% | ಸೋನಿಕ ಹಲುಮಾತ ಜೆ. 84.4%
ಸೃಜನ್ ಬಿ.ಎಸ್. 84.2% | ಹರ್ಷಿಣಿ .ಕೆ 84% | ಚಂದನ್ .ಎನ್ 83.80% | ರೋಹಿತ್ .ಜೆ 83.60% | ವರ್ಷ ಬಿ ಶೇಟ್ 81.4% | ಮೊಹಮದ್ ಐಯಾನ್ 80.60% | ಶಶಾಂಕ್ ಚಕ್ರವರ್ತಿ .ಎಸ್ 80.2%

ನಗರದಲ್ಲಿ ಇಂದು

ವಿಶ್ವ ವ್ಯಂಗ್ಯ ಚಿತ್ರಕಾರರ ದಿನಾಚರಣೆ ಅಂಗವಾಗಿ ಎಂ.ವಿ. ನಾಗೇಂದ್ರ ಬಾಬು ಅವರ ವ್ಯಂಗ್ಯಚಿತ್ರ ಕಲಾ ಪ್ರದರ್ಶನ: ಉದ್ಘಾಟನೆ: ಟಿ.ಎಸ್. ಶ್ರೀವತ್ಸ, ಪ್ರಾಸ್ತಾವಿಕ ನುಡಿ: ಎಂ. ಚಂದ್ರಶೇಖರ್, ‘ಆ್ಯಂಫಿ ಮ್ಯಾನ್’ ಕಾರ್ಟೂನ್ ಸೂಪರ್ ಹೀರೋ’ ಚಿತ್ರದ ಬಿಡುಗಡೆ, ಅಧ್ಯಕ್ಷತೆ: ಎನ್.ಬಿ. ಕಾವೇರಪ್ಪ, ಅತಿಥಿಗಳು: ಸಿ.ಎನ್. ಮಂಚೇಗೌಡ, ಅಂಶಿ ಪ್ರಸನ್ನಕುಮಾರ್, ಕೆ. ರಘುರಾಂ ವಾಜಪೇಯಿ, ಮಹದೇವಶೆಟ್ಟಿ ಕೆ.ಸಿ., ಆಯೋಜನೆ: ಬ್ಯಾಂಟರ್ ಬಾಬು ಪಬ್ಲಿಕೇಶನ್, ಸ್ಥಳ: ಕಲಾನಿಕೇತನ ಆರ್ಟ್ ಗ್ಯಾಲರಿ, ವಿಜಯನಗರ ಎರಡನೇ ಹಂತ, ಬೆಳಿಗ್ಗೆ 10.30

ಸೈಯದ್ ಅಫಜಲ್ ಹುಸೈನ್ ಅವರು ಪರ್ಷಿಯನ್ ಭಾಷೆಗೆ ಅನುವಾದಿಸಿರುವ ಹಂ.ಪ. ನಾಗರಾಜಯ್ಯ ಅವರ ‘ಚಾರು ವಸಂತ’ ಪುಸ್ತಕ ಬಿಡುಗಡೆ: ಸಿದ್ದರಾಮಯ್ಯ, ಅಧ್ಯಕ್ಷತೆ: ಬಿ.ಎಲ್. ಶಂಕರ್, ಅತಿಥಿಗಳು: ಪುರುಷೋತ್ತಮ ಬಿಳಿಮಲೆ, ಎಲ್.ಎನ್. ಮುಕುಂದರಾಜ್, ಮಾಹೇರ್ ಮನ್ಸೂರ್, ಆಯೋಜನೆ: ಕಮಲಾ–ಹಂಪನಾ ಸಾಹಿತ್ಯ ವೇದಿಕೆ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11.30

ಡಾ. ಮಾಯಾರಾವ್ ಸ್ಮರಣಾರ್ಥ ರಾಷ್ಟ್ರೀಯ ನೃತ್ಯೋತ್ಸವ: ಸೃಷ್ಟಿ ರಾಷ್ಟ್ರೀಯ ನೃತ್ಯ ಸಾಧಕಿ ಪ್ರಶಸ್ತಿ ಮತ್ತು ರೋಟರಿ ಸೇವಾ ಪರಿಣಿತಿ ಪ್ರಶಸ್ತಿ ಸ್ವೀಕರಿಸುವವರು: ಶುಭಾ ಧನಂಜಯ, ‘ಮಾಯಾರಾವ್ ಸ್ಮರಣಾರ್ಥ ರಾಷ್ಟ್ರೀಯ ನೃತ್ಯ ಪ್ರಶಸ್ತಿ ಸ್ವೀಕರಿಸುವವರು: ಸಾಯಿ ವೆಂಕಟೇಶ್, ಸುಪರ್ಣ ವೆಂಕಟೇಶ್, ಅತಿಥಿಗಳು: ರಾಧಾ ಶ್ರೀಧರ್, ಜಿ. ಪರಮೇಶ್ವರ, ಶಿವರಾಜ ತಂಗಡಗಿ, ಸತೀಶ್ ಮಾಧವನ್, ಎ.ವಿ. ಸತ್ಯನಾರಾಯಣ, ಆಯೋಜನೆ: ಸೃಷ್ಟಿ ಅಭಿನಯ ಕಲಾವಿದರ ಕೇಂದ್ರ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಮಧ್ಯಾಹ್ನ 3.30ರಿಂದ ‘ನನ್ನ ಸಾಹಿತ್ಯ ಪಯಣ’ ಕುರಿತು ಸಂವಾದ: ಭಾಷಣಕಾರರು: ಜಯಂತ್ ಕಾಯ್ಕಿಣಿ, ಆಯೋಜನೆ: ಪರಸ್ಪರ, ಸ್ಥಳ: ಐಐಎಸ್‌ಸಿ, ಸಂಜೆ 4

ಜಯಂತ್ ಕಾಯ್ಕಿಣಿ

ಕನ್ನಡ ಸಾಹಿತ್ಯ ಪರಿಷತ್ತಿನ 111ನೇ ಸಂಸ್ಥಾಪನಾ ದಿನಾಚರಣೆ, ದತ್ತಿ ಪ್ರಶಸ್ತಿ ಪ್ರದಾನ: ಉದ್ಘಾಟನೆ: ಎಂ. ವೀರಪ್ಪ ಮೊಯಿಲಿ, ಅಧ್ಯಕ್ಷತೆ: ಮಹೇಶ ಜೋಶಿ, ಅತಿಥಿಗಳು: ಶ್ರೀಧರ್, ರವಿಶಂಕರ್ ಕೆ. ಭಟ್, ಉಪನ್ಯಾಸ: ಬೇಲೂರು ರಾಮಮೂರ್ತಿ, ಉಪಸ್ಥಿತಿ: ಎಚ್. ವಿಶ್ವನಾಥ್, ಎಂ. ಪುಷ್ಪ ಅಯ್ಯಂಗಾರ್, ಪ್ರಶಸ್ತಿ ಸ್ವೀಕರಿಸುವವರು: ಸ.ರ. ಸುದರ್ಶನ, ಎಚ್. ಶಕುಂತಲಾ ಭಟ್, ವಿಜಯಾ ಮೋಹನ್, ಗುರುದೇವ ನಾರಾಯಣ ಕುಮಾರ್, ಡಿ.ಬಿ. ರಜಿಯಾ, ಬಸವಾನಂದ ಸ್ವಾಮೀಜಿ, ಆಯೋಜನೆ ಮತ್ತು ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ- nagaradalli_indu@prajavani.co.in

ನಿಧನ ವಾರ್ತೆ

ಬಾಲಚಂದ್ರ ಎಸ್. ಜಯ್ಯ



ಬೆಂಗಳೂರು: ಪತ್ರಿಕಾ ವಿತರಕರಾಗಿ ಕಾರ್ಯನಿರ್ವಹಿಸಿದ್ದ ಬಾಲಚಂದ್ರ ಎಸ್. ಜಯ್ಯ (74) ಅವರು ಹೃದಯಾಘಾತದಿಂದ ಭಾನುವಾರ ಮುಂಜಾನೆ ನಿಧನರಾಗಿದ್ದಾರೆ.

ಮೃತರಿಗೆ ವಿಜಯನಗರದ ಪತ್ರಿಕಾ ವಿತರಕರಾದ ವಿನೋದ್ ಕುಮಾರ್ ಸೇರಿ ಇಬ್ಬರು ಪುತ್ರರು ಹಾಗೂ ಒಬ್ಬ ಪುತ್ರಿ ಇದ್ದಾರೆ. ಅವರ ಅಂತ್ಯಸಂಸ್ಕಾರವನ್ನು ಕನ್ನಹಳ್ಳಿ ರುದ್ರಭೂಮಿಯಲ್ಲಿ ಭಾನುವಾರ ಸಂಜೆ ನೆರವೇರಿಸಲಾಯಿತು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS

Business to Business

Business

FOR BUSINESS Takeovers Solutions, Arranging Funds for Mega Projects in Bangalore. Contact: Dr. Swamy Naidu, MBA (U.S.A) Anika Project Consultants, Bangalore:- 9342247637.

Business Offers

Finance

URGENT LOAN AVAIL @ 3.5% per annum Personal, Business, Housing take over all types loan. Shivganga Finance. Phone: 8826494700.

PERSONAL

Change of Name

CHANGE OF NAME
I, **KIRANA KUMARI P** Residing at Saketh, No. 32-33, 5th Road, Nandidurga Extension, Benson Town Post, Bangalore-560046 have changed my name to **KIRAN C RAO** vide affidavit dated 03.05.2025 before notary G.B. Turamari, Bangalore.

I, DEEPALI_ASHWIN HEMMAD W/o.Ashwin Heemmadi. R/a.Flat#003 Vijaya Springwoods Apts. Manipal County Road Near_Manipal County Resort,Begur Bengaluru- 560114 have`changed my Name to DEEPALHI ASHWIN HEMMADY vide`affidavit dated:28.2.2025 before`Notary Puttaramaiah Bengaluru.

I, ASHWIN_HEMMAD S/o.Late.Arun Kumar VH. R/a Flat#003 Vijaya Springwoods Apts. Manipal County Road, Near_Manipal County Resort,Begur Bengaluru- 560114 have changed my`Name to ASHWIN_HEEMMADI vide`affidavit dated:28.2.2025 before`Notary Puttaramaiah Bengaluru.

REAL ESTATE SELLING

Flat

Kanakapura Road

NEW FLATS Kanakapura Road near Forum Mall, Konanakunte Metro. Swimming Pool, Club house. 2 BHK/ 3 BHK. Good Construction. Anika Maverick Projects:- Sowmya:- 9342247637.

House

J P Nagar

J.P.NAGAR 1ST PHASE 30x40 East Facing Site with Duplex house Sale 2.50crs Negotiable. 9845395885

Commerical

Banashankari

OM SARAVANA bhava Commercial building for sale.15000sqft over 5floors.bsk 6th stage.opp omkar Integrated Township Projects landsize80×60 southfaces80ft rd northfaces30ft rd.contact 9880296163 brokers excuse

TOURS & TRAVEL

Travel

VISIT HIMALAYAN Kingdom Nepal with Expert Guide Manager. All Inclusive Best Arrangements. GANESH SHENOY 8970126393

DH Classifieds More value, more impact ಪ್ರಜಾವಾಣಿ
EDUCATION
Book your Educational Related Ads in DH All Karnataka + Prajavani Bengaluru City
www.dhclassifieds.com
BOOK NOW
*Conditions apply
For more details contact:
9731810277
9886213331
9845114560

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

ನೀಟ್ ಪರೀಕ್ಷೆ

1.ಪ್ರಸಕ್ತ ಸಾಲಿನ ವೈದ್ಯಕೀಯ ಪ್ರವೇಶಕ್ಕೆ ಭಾನುವಾರ ನಡೆದ ನೀಟ್-ಯುಜಿ ಬರೆಯಲು ವಿಕ್ಟೋರಿಯಾ ರಸ್ತೆಯಲ್ಲಿರುವ ಪಿಎಂ ಶ್ರೀ ಕೇಂದ್ರೀಯ ವಿದ್ಯಾಲಯ ಎಎಸ್‌ಸಿ ಸೆಂಟರ್‌ಗೆ ಬಂದಿದ್ದ ವಿದ್ಯಾರ್ಥಿಯ ಕುತ್ತಿಗೆಯಲ್ಲಿದ್ದ ಸರವನ್ನು ಪರೀಕ್ಷಾ ಕೇಂದ್ರಕ್ಕೆ ಪ್ರವೇಶಿಸುವ ಮುನ್ನ ಪಾಲಕರು ತೆಗೆದರು 2. ವಿದ್ಯಾರ್ಥಿನಿಯೊಬ್ಬರು ಗೆಜ್ಜೆಯನ್ನು ತೆಗೆದಿಟ್ಟರು 3. ವಿದ್ಯಾರ್ಥಿನಿಯೊಬ್ಬರು ತಾಯಿಯ ಆಶೀರ್ವಾದ ಪಡೆದರು

ಚಿತ್ರಗಳು:ಎಸ್‌.ಕೆ. ದಿನೇಶ್

ನಾಪತ್ತೆ: 770 ರೌಡಿಗಳ ಪತ್ತೆ

• ಚೇತನ್ ಬಿ.ಸಿ.

ಮುಖ್ಯಾಂಶಗಳು

- ಕಾಣೆಯಾದವರ ಪಟ್ಟಿಯಲ್ಲಿದ್ದ 800 ರೌಡಿಶೀಟರ್‌ಗಳು
- ನಗರದಲ್ಲಿದ್ದಾರೆ 6 ಸಾವಿರ ಸಕ್ರಿಯ ರೌಡಿಗಳು

ಬೆಂಗಳೂರು: ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿ ಪೊಲೀಸರ ಕಣ್ತಪ್ಪಿಸಿ ಓಡಾಡಿಕೊಂಡಿದ್ದ 800 ರೌಡಿ ಶೀಟರ್‌ಗಳ ಪೈಕಿ 770 ಮಂದಿಯನ್ನು ಪತ್ತೆ ಮಾಡಲಾಗಿದೆ.

ನಗರದಲ್ಲಿ ಪ್ರಸ್ತುತ 6 ಸಾವಿರ ಸಕ್ರಿಯ ರೌಡಿಗಳಿದ್ದು, ಈ ಪೈಕಿ 800 ಮಂದಿಯನ್ನು ಪೊಲೀಸರು ಕಣ್ಗಾವಲಿನಿಂದ ಹೊರಗಿರುವವರ (ನಾಪತ್ತೆ) ಪಟ್ಟಿಗೆ ಸೇರಿಸಿದ್ದರು. ಇವರು ಕಳ್ಳತನ ಅಥವಾ ದರೋಡೆಯಂತಹ ಕ್ರಿಮಿನಲ್ ಪ್ರಕರಣಗಳಲ್ಲಿ ಭಾಗಿಯಾಗಿ, ತಲೆಮರೆಸಿಕೊಂಡಿದ್ದಾರೆ.

ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಮಾತನಾಡಿ, 'ಸಮಾಜಘಾತುಕ ಚಟುವಟಿಕೆಗಳಲ್ಲಿ ಭಾಗಿಯಾಗದಂತೆ ತಡೆಯುವ ಉದ್ದೇಶದಿಂದ ರೌಡಿಗಳ ಮೇಲೆ ನಿಗಾ ಇಡಲಾಗುತ್ತದೆ. ಠಾಣೆಯಲ್ಲಿ ರೌಡಿ ಪಟ್ಟಿ ತೆರೆಯಲು ಇದು ಒಂದು ಪ್ರಮುಖ ಕಾರಣ. ಆದರೆ, ಯಾವುದೇ ರೌಡಿಯನ್ನು ನಾಪತ್ತೆ ಪಟ್ಟಿಗೆ ಸೇರಿಸಲು ಅವಕಾಶವಿಲ್ಲ' ಎಂದು ಸ್ಪಷ್ಟಪಡಿಸಿದರು.

'ಸಮಾಜದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ರೌಡಿ ಶೀಟರ್‌ಗಳ ಬಗ್ಗೆ ಮಾಹಿತಿ ಇರಬೇಕು. ಕೆಲವೊಮ್ಮೆ ಗಂಭೀರ ಅಪರಾಧ ಪ್ರಕರಣಗಳು ಸಂಭವಿಸಿದಾಗ, ಆರೋಪಿಗಳ ಪತ್ತೆಗೆ ರೌಡಿ ಶೀಟರ್‌ಗಳನ್ನು ಸಂಪರ್ಕಿಸಲಾಗುತ್ತದೆ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಅಧಿಕಾರಿ ತಿಳಿಸಿದರು.

ದಯಾನಂದ ಅವರು 2023ರಲ್ಲಿ ಆರ್‌.ಆರ್. ನಗರ ಪೊಲೀಸ್ ಠಾಣೆಗೆ ಭೇಟಿ ನೀಡಿದ್ದ ವೇಳೆ ನಾಲ್ಕು ರೌಡಿಗಳನ್ನು ನಾಪತ್ತೆ ಪಟ್ಟಿಗೆ ಸೇರಿಸಿರುವ ವಿಚಾರ ಗೊತ್ತಾಯಿತು. ಬಳಿಕ ಇತರೆ ಪೊಲೀಸ್ ಠಾಣೆಗಳಿಂದ ಮಾಹಿತಿ ಸಂಗ್ರಹಿಸಿದಾಗ, ಬಹುತೇಕ ಠಾಣೆಗಳಲ್ಲಿ ಇದೇ ರೀತಿ ಅನುಸರಿಸುತ್ತಿರುವುದು ಗೊತ್ತಾಯಿತು.

ರೌಡಿಗಳ ಪತ್ತೆಗೆ ಪೊಲೀಸರು ಕಾರ್ಯಾಚರಣೆ ನಡೆಸಿದಾಗ, 240 ರೌಡಿಗಳಿಗೆ ನ್ಯಾಯಾಲಯ ಜಾಮೀನು ರಹಿತ ವಾರಂಟ್ ಹೊರಡಿಸಿರುವುದು ಗೊತ್ತಾಗಿದೆ.

ಪ್ರೀತಿಯ ವಿಚಾರಕ್ಕೆ ಸೇಡಿನಿಂದ ಕೃತ್ಯ • ಎಚ್ಚರಿಕೆ ನೀಡಿದ್ದ ಯುವತಿಯ ಪೋಷಕರು

ಡೆಲಿವರಿ ಬಾಯ್ ಅಪಹರಿಸಿ, ಕೊಲೆ

ಬೆಂಗಳೂರು: ಪ್ರೀತಿಯ ವಿಚಾರಕ್ಕೆ ದುಷ್ಕರ್ಮಿಗಳು ಡೆಲಿವರಿ ಬಾಯ್ ಒಬ್ಬರನ್ನು ಅಪಹರಿಸಿ, ಕೊಲೆ ಮಾಡಿ ಪರಾರಿಯಾಗಿರುವ ಘಟನೆ ದೇವನಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ

ನೀರುಗಂಟೆ ಪಾಳ್ಯ ಗ್ರಾಮದ ನಿವಾಸಿ ಪ್ರೀತಮ್ (19) ಕೊಲೆಯಾದ ಯುವಕ.

ಪ್ರೀತಮ್

ದೇವನಹಳ್ಳಿ ಪಟ್ಟಣದ ಸೂಲಿಬೆಲೆ ರಸ್ತೆಯಲ್ಲಿ ಜೆಪ್ಟೊ ಕಂಪನಿಯಲ್ಲಿ ಡೆಲಿವರಿ ಬಾಯ್ ಆಗಿ ಕೆಲಸ ಮಾಡುತ್ತಿದ್ದ ಪ್ರೀತಮ್, ಎಂಬಿಬಿಎಸ್ ಓದುತ್ತಿದ್ದ ತನಗಿಂತ ಎರಡು ವರ್ಷ ದೊಡ್ಡವಳಾದ ಗಂಟಿಗಾಹನಳ್ಳಿಯ ಯುವತಿಯನ್ನು ಪ್ರೀತಿಸುತ್ತಿದ್ದರು ಎಂದು ಗೊತ್ತಾಗಿದೆ.

ಈ ಇಬ್ಬರ ಪ್ರೀತಿಯ ವಿಚಾರ ತಿಳಿದ ಯುವತಿಯ ಪೋಷಕರು ಹಾಗೂ ಸಂಬಂಧಿಕರು ಆಕೆಯಿಂದ ದೂರವಿರುವಂತೆ ಎಚ್ಚರಿಕೆ ನೀಡಿದ್ದರು. ಆದರೂ ಯುವತಿಯ ಜೊತೆ ಮಾತನಾಡುವುದನ್ನು ಮುಂದುವರಿಸಿದ್ದರು. ಇದರಿಂದ ಕೋಪಗೊಂಡ ಯುವತಿಯ ಸಂಬಂಧಿ ಶ್ರೀಕಾಂತ, ಪ್ರೀತಮ್‌ಗೆ ಹಲವು ಬಾರಿ ಎಚ್ಚರಿಕೆ ನೀಡಿ, ಬೆದರಿಸಿ ಕಳುಹಿಸಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

'ಶ್ರೀಕಾಂತ್ ಮತ್ತು ಆತನ ಸಹಚರರು ಶುಕ್ರವಾರ ಪ್ರೀತಮ್‌ನನ್ನು ಅಪಹರಿಸಿ, ಕಾರಿನಲ್ಲಿ ಕರೆದೊಯ್ದಿದ್ದಾರೆ. ಶನಿವಾರ ಬೆಳಿಗ್ಗೆ ಪ್ರೀತಮ್ ಮೃತದೇಹ ನೀರುಗಂಟೆ ಪಾಳ್ಯದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಹತ್ತಿರ ಪತ್ತೆಯಾಗಿದೆ. ಮೂಗು, ಬಾಯಿಯಲ್ಲಿ ರಕ್ತ ಬರುವಂತೆ ಹಲ್ಲೆ ನಡೆಸಿ, ಕೊಲೆ ಮಾಡಿದ್ದಾರೆ. ಮಗನ ಮೊಬೈಲ್ ಸಹ ನಾಪತ್ತೆಯಾಗಿದೆ. ಅಪಹರಣ ಮಾಡಿ ಕೊಲೆ ಮಾಡಿರುವ ಶ್ರೀಕಾಂತ್ ಮತ್ತು ನಾಲ್ವರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಮೃತ ಯುವಕನ ತಂದೆ ರಾಮಚಂದ್ರ ಪೊಲೀಸರಿಗೆ ದೂರು ನೀಡಿದ್ದಾರೆ.

ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ಆರೋಪಿಗಳ ಪತ್ತೆಗೆ ಶೋಧ ಕಾರ್ಯ ಕೈಗೊಂಡಿದ್ದಾರೆ.

ಯುವತಿಗೆ ಲೈಂಗಿಕ ಕಿರುಕುಳ ಆರೋಪಿಯ ಬಂಧನ

ಅಪರಾಧ ಸುದ್ದಿಗಳು

ಮಾರತ್‌ಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಇಕೊ ವರ್ಲ್ಡ್ ಟೆಕ್‌ಪಾರ್ಕ್ ಗೇಟ್ ಬಳಿ ಯುವತಿಯನ್ನು ಸ್ಪರ್ಶಿಸಿ ಲೈಂಗಿಕ ಕಿರುಕುಳ ನೀಡಿದ್ದ ಖಾಸಗಿ ಕಂಪನಿಯೊಂದರ ಉದ್ಯೋಗಿ ಶ್ರೀಕಾಂತ್ (32) ಅವರನ್ನು ಪೊಲೀಸರು ಬಂಧಿಸಿದ್ದಾರೆ.

ಏಪ್ರಿಲ್ 30ರಂದು ರಾತ್ರಿ 11.30ರ ಸುಮಾರಿಗೆ ನಡೆದು ತೆರಳುತ್ತಿದ್ದ ಯುವತಿಗೆ ಬೈಕ್‌ನಲ್ಲಿ ಬಂದಿದ್ದ ಆರೋಪಿ ಕಿರುಕುಳ ನೀಡಿ ಪರಾರಿಯಾಗಿದ್ದ. ಈ ಕುರಿತು 23 ವರ್ಷ ವಯಸ್ಸಿನ ಸಂತ್ರಸ್ತೆ ನೀಡಿದ್ದ ದೂರಿನನ್ವಯ ಪ್ರಕರಣ ದಾಖಲಿಸಿಕೊಂಡು, ಪೊಲೀಸರು ತನಿಖೆ ಕೈಗೊಂಡಿದ್ದರು.

ಘಟನೆಗೆ ಸಂಬಂಧಿಸಿದಂತೆ ಸಿ.ಸಿ.ಟಿ.ವಿ ಕ್ಯಾಮೆರಾಗಳಲ್ಲಿ ಸೆರೆಯಾಗಿದ್ದ ದೃಶ್ಯಾವಳಿಗಳನ್ನು ಪರಿಶೀಲನೆ ನಡೆಸಿದಾಗ ಆರೋಪಿ ಹಿಂದಿನಿಂದ ಬಂದು ಯುವತಿಯ ಪೃಷ್ಠದ ಭಾಗಕ್ಕೆ ಹೊಡೆದು ಹೋಗಿರುವುದು ಕಂಡುಬಂದಿತ್ತು. ಬಳಿಕ ಸ್ವಲ್ಪ ದೂರ ಹೋಗಿ ವಾಪಸ್ ಬಂದು ಕಿರುಕುಳ ನೀಡಿರುವುದೂ ದೃಶ್ಯದಲ್ಲಿ ಸೆರೆಯಾಗಿದೆ.

ಆರೋಪಿಯ ಪತ್ತೆಗೆ ಮೂರು ತಂಡಗಳನ್ನು ರಚಿಸಲಾಗಿತ್ತು. ಸಿ.ಸಿ.ಟಿ.ವಿ ಕ್ಯಾಮೆರಾಗಳಲ್ಲಿ ಸೆರೆಯಾದ 300ಕ್ಕೂ ಹೆಚ್ಚು ದೃಶ್ಯಾವಳಿಗಳನ್ನು ಪರಿಶೀಲನೆ ನಡೆಸಿ, ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ.

ಶ್ರೀಕಾಂತ್

'ದೇವರಬೀಸನಹಳ್ಳಿ ನಿವಾಸಿ, 32 ವರ್ಷದ ಶ್ರೀಕಾಂತ್ ಎಂಬಿಎ ವ್ಯಾಸಂಗ ಮಾಡಿದ್ದು, ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾನೆ. ಯಾವ ಕಾರಣಕ್ಕೆ ಈ ರೀತಿ ವರ್ತಿಸಿದ್ದಾನೆ ಎಂಬುದರ ಬಗ್ಗೆ ವಿಚಾರಣೆ ನಡೆಸಲಾಗುತ್ತಿದೆ. ಈತನ ವಿರುದ್ಧ ಯಾವುದಾದರೂ ಪ್ರಕರಣಗಳು ಇದೆಯೇ ಎಂಬುದರ ಕುರಿತು ಪರಿಶೀಲನೆ ನಡೆಸಲಾಗುತ್ತಿದೆ' ಎಂದು ವೈಟ್‌ಫೀಲ್ಡ್ ವಿಭಾಗದ ಡಿಸಿಪಿ ಶಿವಕುಮಾರ್ ಗುಣಾರೆ ತಿಳಿಸಿದ್ದಾರೆ.

ಈ ರೀತಿಯ ಘಟನೆಗಳು ಕಂಡುಬಂದಲ್ಲಿ ವೈಟ್‌ಫೀಲ್ಡ್ ವಿಭಾಗದ ಡಿಸಿಪಿ ಮೊ.9480801084, ಮಾರತ್‌ಹಳ್ಳಿ ಉಪ ವಿಭಾಗದ ಎಸಿಪಿ ಮೊ.9480801607, ಮಾರತ್‌ಹಳ್ಳಿ ಠಾಣೆಯ ಪೊಲೀಸ್ ಇನ್‌ಸ್ಪೆಕ್ಟರ್ 9480801615 ಸಂಪರ್ಕಿಸುವಂತೆ ಡಿಸಿಪಿ ತಿಳಿಸಿದ್ದಾರೆ.

5 ಕೆ.ಜಿ ಗಾಂಜಾ ವಶ: ಬಂಧನ

ಗಾಂಜಾ ಮಾರಾಟ ಮಾಡುತ್ತಿದ್ದ ವ್ಯಕ್ತಿಯೊಬ್ಬನನ್ನು ಬಂಧಿಸಿರುವ ಅಮೃತಹಳ್ಳಿ ಠಾಣೆ ಪೊಲೀಸರು, ಆತನಿಂದ ₹ 5 ಲಕ್ಷ ಮೌಲ್ಯದ 5 ಕೆ.ಜಿ. ಗಾಂಜಾ ವಶಪಡಿಸಿಕೊಂಡಿದ್ದಾರೆ.

ಅಮೃತಹಳ್ಳಿಯ ಹಿಮಾಂಶು(30) ಬಂಧಿತ. ಏಪ್ರಿಲ್ 29ರಂದು ಸಂಜೆ ಅಮೃತಹಳ್ಳಿ ಸಮೀಪದ ವರ್ಮಾ ಲೇಔಟ್‌ನ ಖಾಲಿ ಜಾಗದಲ್ಲಿ ಅಪರಿಚಿತ ವ್ಯಕ್ತಿ ಮಾದಕವಸ್ತು ಮಾರಾಟ ಮಾಡುತ್ತಿರುವ ಬಗ್ಗೆ ದೊರೆತ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ.

ಆರೋಪಿ ಒಡಿಶಾದಿಂದ ಕಡಿಮೆ ಬೆಲೆಗೆ ಗಾಂಜಾ ಖರೀದಿಸಿ, ರೈಲು ಮುಖಾಂತರ ನಗರಕ್ಕೆ ಅಕ್ರಮವಾಗಿ ತರುತ್ತಿದ್ದ. ಬಳಿಕ ಪರಿಚಿತ ಗ್ರಾಹಕರಿಗೆ ದುಬಾರಿ ಬೆಲೆಗೆ ಮಾರಾಟ ಮಾಡಿ ಹಣ ಸಂಪಾದಿಸುತ್ತಿದ್ದುದಾಗಿ ವಿಚಾರಣೆ ವೇಳೆ ಹೇಳಿಕೆ ನೀಡಿದ್ದಾನೆ. ಈತನ ವಿರುದ್ಧ ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಹಿಳೆಯ ಚಿನ್ನದ ಸರ ಅಪಹರಣ

ಬೈಕ್‌ನಲ್ಲಿ ಬಂದ ಇಬ್ಬರು ದುಷ್ಕರ್ಮಿಗಳು ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಗೃಹಿಣಿಯ ಕೊರಳಿನಿಂದ 45 ಗ್ರಾಂ. ತೂಕದ ಚಿನ್ನದ ಸರವನ್ನು ಕಿತ್ತುಕೊಂಡು ಪರಾರಿಯಾಗಿರುವ ಘಟನೆ ಬಾಣಸವಾಡಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಶನಿವಾರ ರಾತ್ರಿ ನಡೆದಿದೆ.

ಎಚ್‌ಆರ್‌ಬಿಆರ್ ಲೇಔಟ್‌ನ ಒಂದನೇ ಬ್ಲಾಕ್ ನಿವಾಸಿ ರಶ್ಮಿತಾ ಅವರು ರಾತ್ರಿ 9 ಗಂಟೆ ಸಮಯದಲ್ಲಿ ಅಂಗಡಿಯಿಂದ ವಸ್ತುಗಳನ್ನು ಖರೀದಿಸಿ, ಉಪ ನೋಂದಣಾಧಿಕಾರಿ ಕಚೇರಿ ಮುಂಭಾಗ ನಡೆದು ಹೋಗುತ್ತಿದ್ದರು.

ಎದುರು ದಿಕ್ಕಿನಿಂದ ಹೆಲ್ಮೆಟ್ ಧರಿಸಿಕೊಂಡು ಬೈಕ್‌ನಲ್ಲಿ ಬಂದ ಇಬ್ಬರ ಪೈಕಿ ಹಿಂಬದಿ ಕುಳಿತಿದ್ದ ವ್ಯಕ್ತಿ, ಅವರ ಕೊರಳಿಗೆ ಕೈ ಹಾಕಿ ಸರ ಕಿತ್ತುಕೊಂಡಿದ್ದಾನೆ. ಬಳಿಕ ಇಬ್ಬರು ಪರಾರಿಯಾಗಿದ್ದಾರೆ. ತಕ್ಷಣ ರಶ್ಮಿತಾ ಅವರು ಕೂಗಿಕೊಂಡರೂ ಯಾರೂ ಸಹಾಯಕ್ಕೆ ಬರಲಿಲ್ಲ. ಘಟನೆ ಸಂಬಂಧ ಗೃಹಿಣಿಯ ದೂರು ಆಧರಿಸಿ, ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಆರೋಪಿಗಳ ಬಂಧನಕ್ಕೆ ಶೋಧ ನಡೆಸುತ್ತಿದ್ದಾರೆ.

ರೌಡಿಶೀಟರ್ ಮೇಲೆ ಹಲ್ಲೆ: ಐವರ ಬಂಧನ

ಪ್ರಜಾವಾಣಿ ವಾರ್ತೆ

ಕಿರಣ್

ಯಶವಂತ್

ಪವನ್

ಧನುಷ್

ಸತೀಶ್

ಬೆಂಗಳೂರು: ಬಾರ್‌ನಲ್ಲಿ ಮದ್ಯ ಸೇವಿಸುತ್ತಿದ್ದ ರೌಡಿಶೀಟರ್ ಮೇಲೆ ಹಳೆ ವೈಷಮ್ಯಕ್ಕೆ ತೀವ್ರವಾಗಿ ಹಲ್ಲೆ ನಡೆಸಿ ಪರಾರಿಯಾಗಿದ್ದ ಐವರು ಆರೋಪಿಗಳನ್ನು ಕೋಣನಕುಂಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಏಪ್ರಿಲ್ 27ರಂದು ಸುಕೇಶ್ ಎಂಬಾತನ ಮೇಲೆ ಬಿಯರ್ ಬಾಟಲ್‌ಗಳಿಂದ ಹಲ್ಲೆ ಮಾಡಿದ್ದ ಪವನ್, ಧನುಷ್, ಸತೀಶ್, ಕಿರಣ್ ಹಾಗೂ ಯಶವಂತ್ ಅವರನ್ನು ಬಂಧಿಸಲಾಗಿದೆ.

'ಕುಮಾರಸ್ವಾಮಿ ಲೇಔಟ್ ಠಾಣೆಯ ರೌಡಿಶೀಟರ್‌ಗಳಾದ ಸುಕೇಶ್ ಹಾಗೂ ಆತನ ಸಹೋದರನಿಗೆ, 2017ರಿಂದಲೂ ಪವನ್ ಹಾಗೂ ಆತನ ಗುಂಪಿನೊಂದಿಗೆ ವೈಮನಸ್ಸಿತ್ತು. ಸುಕೇಶ್ ಹಾಗೂ ಆತನ ಸಹೋದರ ಸೇರಿ ಪವನ್‌ನನ್ನು ಮನೆ ಬಿಟ್ಟು ಓಡಿಸಿದ್ದರು. ಅಲ್ಲದೇ ಮತ್ತೊಬ್ಬ ಆರೋಪಿ ಧನುಶ್‌ಗೂ ಸುಕೇಶ್ ಕಿರುಕುಳ ನೀಡಿದ್ದ' ಎಂದು ಪೊಲೀಸರು ತಿಳಿಸಿದ್ದಾರೆ.

'ಏಪ್ರಿಲ್ 27ರಂದು ಬೇರೊಬ್ಬ ವ್ಯಕ್ತಿಯನ್ನು ಭೇಟಿಯಾಗಲು ಪವನ್, ಧನುಶ್ ಮತ್ತು ಇತರೆ ಆರೋಪಿಗಳು ಕೋಣನಕುಂಟೆ ಆರ್. ಆರ್. ಬಾರ್‌ಗೆ ಬಂದಿದ್ದರು. ಇದೇ ಸಂದರ್ಭದಲ್ಲಿ ಬಾರ್‌ನಲ್ಲಿ ಕುಳಿತು ಮದ್ಯ ಸೇವಿಸುತ್ತಿದ್ದ ಸುಕೇಶ್‌ನನ್ನು ಗಮನಿಸಿ, ಆತನ ಮೇಲೆ ಬಿಯರ್ ಬಾಟಲ್‌ಗಳಿಂದ ಹಲ್ಲೆಗೈದು ಪರಾರಿಯಾಗಿದ್ದರು' ಎಂದು ಹೇಳಿದ್ದಾರೆ.

'ಸುಕೇಶ್ ಕೊಲೆ ಯತ್ನದ ಆರೋಪದಡಿ ಪವನ್ ಮತ್ತು ಆತನ ಸಹಚರರನ್ನು ಬಂಧಿಸಿ, ವಿಚಾರಣೆಗೆ ಒಳಪಡಿಸಲಾಗಿದೆ' ಎಂದು ದಕ್ಷಿಣ ವಿಭಾಗದ ಡಿಸಿಪಿ ಲೋಕೇಶ್ ಬಿ.ಜಗಲಾಸರ್ ತಿಳಿಸಿದ್ದಾರೆ.

ಸಾಲ ಕಂತು ಪಾವತಿಸಲಾಗದೆ ಕ್ಯಾಬ್ ಚಾಲಕ ಆತ್ಮಹತ್ಯೆ

ಬೆಂಗಳೂರು: ಕಾರು ಖರೀದಿಸಿ ಸಾಲದ ಕಂತು ಪಾವತಿಸಲಾಗದೆ ಮನನೊಂದು ಕ್ಯಾಬ್ ಚಾಲಕ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಸೋಲದೇವನಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಕಲಬುರಗಿ ಜಿಲ್ಲೆಯ ದೇವರಾಜ್ (21) ಆತ್ಮಹತ್ಯೆ ಮಾಡಿಕೊಂಡ ಚಾಲಕ.

ದೇವರಾಜ್ ಚಿಕ್ಕಬಾಣಾವಾರದ ಗಣಪತಿ ನಗರದ ಬಾಡಿಗೆ ಮನೆಯಲ್ಲಿ ನೆಲಸಿದ್ದರು. ವರ್ಷದ ಹಿಂದೆ ಬ್ಯಾಂಕ್‌ನಿಂದ ಸಾಲ ಪಡೆದು ಕಾರು ಖರೀದಿಸಿ ಬಾಡಿಗೆಗೆ ಓಡಿಸಿಕೊಂಡು ಜೀವನ ನಡೆಸುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಆದರೆ, ಇತ್ತೀಚೆಗೆ ಸರಿಯಾಗಿ ಬಾಡಿಗೆ ಸಿಗದೆ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದರು. ಹಾಗಾಗಿ ಎರಡು ತಿಂಗಳಿನಿಂದ ಸಾಲದ ಕಂತು ಪಾವತಿಸಿರಲಿಲ್ಲ. ಬ್ಯಾಂಕ್ ಸಿಬ್ಬಂದಿ ಸಾಲದ ಬಾಕಿ ಕಂತು ಪಾವತಿಸುವಂತೆ ನೋಟಿಸ್ ಜಾರಿಗೊಳಿಸಿದ್ದರು ಎನ್ನಲಾಗಿದೆ. ಸಾಲ ತೀರಿಸಲಾಗದೆ ಮನನೊಂದು ಏ.29ರಂದು ಬಾಡಿಗೆ ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಪೊಲೀಸರು ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ.

ಜಿಂಕೆ ಬೇಟೆಯಾಡಿದ ಹುಲಿ

ಗುಂಡ್ಲುಪೇಟೆ: ಬಂಡೀಪುರ ರಾಷ್ಟ್ರೀಯ ಹುಲಿ ಸಂರಕ್ಷಿತ ಪ್ರದೇಶದ ಸಫಾರಿ ವಲಯದಲ್ಲಿ ಹುಲಿಯೊಂದು ಜಿಂಕೆಯನ್ನು ಬೇಟೆಯಾಡಿ ಎಳೆದೊಯ್ದಿರುವುದು ಭಾನುವಾರ ಪ್ರವಾಸಿಗರಿಗೆ ಕಂಡಿದೆ.

ತಾವರೆಕಟ್ಟೆ ಕೆರೆ ಬಳಿ ಪ್ರವಾಸಿಗರ ಮುಂದೆಯೇ ಮೇಯುತ್ತಿದ್ದ ಜಿಂಕೆ ಮೇಲೆ ಹುಲಿ ದಾಳಿ ನಡೆಸಿದೆ. ಈ ದೃಶ್ಯವನ್ನು, ಸಫಾರಿಗೆ ತೆರಳಿದವರು ಸೆರೆ ಹಿಡಿದಿದ್ದಾರೆ. ವಿಡಿಯೊ ಜಾಲತಾಣದಲ್ಲಿ ಹರಿದಾಡಿದೆ.

ಹುಲಿಯು ಜಿಂಕೆಯನ್ನು ಎಳೆದೊಯ್ದಿತು

ಮಳೆ: ಏಪ್ರಿಲ್‌ನಲ್ಲಿ ಬೆಸ್ಕಾಂಗೆ ₹2.99 ಕೋಟಿ ನಷ್ಟ

• ಗಾಣಧಾಳು ಶ್ರೀಕಂಠ

ಬೆಂಗಳೂರು: ಈ ಬಾರಿ ಪೂರ್ವ ಮುಂಗಾರು ತುಸು ಬಿರುಸಾಗಿದ್ದು, ಮಳೆ–ಗಾಳಿಯ ಅಬ್ಬರಕ್ಕೆ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಗೆ(ಬೆಸ್ಕಾಂ) ಏಪ್ರಿಲ್ ಒಂದೇ ತಿಂಗಳಲ್ಲಿ ₹2.99 ಕೋಟಿ ನಷ್ಟವಾಗಿದೆ.

ಈ ಬಾರಿ ಮಾರ್ಚ್ ತಿಂಗಳಿಂದ ಪೂರ್ವ ಮುಂಗಾರು ಆರಂಭವಾಯಿತು. ಮಧ್ಯೆ ಮಧ್ಯೆ ವಾಯುಭಾರ ಕುಸಿತವೂ ಸೇರಿಕೊಂಡು, ಮಳೆಗಿಂತ ಹೆಚ್ಚಾಗಿ ಬಿರುಸಾದ ಗಾಳಿ ಬೀಸಿದೆ. ಬಿರುಗಾಳಿಯಿಂದಲೇ ನೂರಾರು ಕಂಬಗಳು ಧರೆಗುರುಳಿವೆ. ವಿದ್ಯುತ್ ಪರಿವರ್ತಕಗಳಿಗೆ ಹಾನಿಯಾಗಿದೆ. 4.41 ಕಿ.ಮೀ ಉದ್ದದಷ್ಟು ವಿದ್ಯುತ್ ತಂತಿಗಳಿಗೆ ಹಾನಿಯಾಗಿದೆ. ಇದರಿಂದ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಿದ್ದು, ಕೆಲವು ಕಡೆ ವಿದ್ಯುತ್ ಅವಘಡಗಳು ಸಂಭವಿಸಿವೆ.

ಮಳೆ ಗಾಳಿಯಿಂದಾಗಿ ಬೆಸ್ಕಾಂ ವ್ಯಾಪ್ತಿಯ ಎಂಟು ಜಿಲ್ಲೆಗಳಲ್ಲಿ 1,880 ವಿದ್ಯುತ್ ಕಂಬಗಳು ಧರೆಗುರುಳಿವೆ. ತುಮಕೂರು ಜಿಲ್ಲೆಯಲ್ಲಿ 650 ಕಂಬಗಳಿಗೆ ಹಾನಿಯಾಗಿದ್ದು, ಇದು ಎಂಟು ಜಿಲ್ಲೆಗಳ ಪೈಕಿ ಅತಿ ಹೆಚ್ಚು ಹಾನಿ ಸಂಭವಿಸಿದ ಜಿಲ್ಲೆಯಾಗಿದೆ. ಜಿಲ್ಲೆಯ ತುಮಕೂರು, ಗುಬ್ಬಿ ಮತ್ತು ತುರುವೇಕರೆ ತಾಲ್ಲೂಕುಗಳಲ್ಲಿ ಹೆಚ್ಚು ಹಾನಿಯಾಗಿದೆ ಎಂದು ಮೂಲಗಳು ತಿಳಿಸಿವೆ.

ದಾವಣಗೆರೆ ಜಿಲ್ಲೆಯಲ್ಲಿ ಮಳೆಗಿಂತ ಹೆಚ್ಚು ಗಾಳಿ ಬೀಸಿದೆ. ಇದರಿಂದ 542 ಕಂಬಗಳಿಗೆ ಹಾನಿಯಾಗಿದೆ. ರಾಮನಗರದಲ್ಲಿ ಗಾಳಿ ಮತ್ತು ಮಳೆ ಎರಡೂ ಸೇರಿಕೊಂಡು, 256 ಕಂಬಗಳಿಗೆ ಹಾನಿ ಮಾಡಿವೆ. ಬೆಂಗಳೂರು ನಗರ ಜಿಲ್ಲೆ, ದಾವಣಗೆರೆ ಮತ್ತು ರಾಮನಗರ ಜಿಲ್ಲೆಗಳಲ್ಲಿ ₹50 ಲಕ್ಷಕ್ಕೂ ಹೆಚ್ಚು ಹಾನಿಯಾಗಿದೆ. ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳಲ್ಲಿ ಹಾನಿ ಪ್ರಮಾಣ ಕಡಿಮೆ ಎಂದು ಬೆಸ್ಕಾಂ ನೀಡಿರುವ ದಾಖಲೆಗಳಲ್ಲಿ ಉಲ್ಲೇಖವಾಗಿದೆ.

ಬೆಂಗಳೂರು ನಗರ ಜಿಲ್ಲೆಯೊಂದರಲ್ಲೇ 51 ವಿದ್ಯುತ್ ಪರಿವರ್ತಕಗಳು ಸುಟ್ಟು ಹೋಗಿವೆ. ಇದರೊಂದಿಗೆ ಎಂಟು ಜಿಲ್ಲೆಗಳಲ್ಲಿ ₹1.50 ಕೋಟಿ ವೆಚ್ಚದ 150ಕ್ಕೂ ಹೆಚ್ಚು ವಿದ್ಯುತ್ ಪರಿವರ್ತಕಗಳು ಹಾನಿಗೊಳಗಾಗಿವೆ. 84 ಡಿಪಿ ಸ್ಟ್ರಕ್ಚರ್‌ಗಳು ಹಾಳಾಗಿವೆ. ಪರಿಕರಗಳ ಬದಲಾವಣೆಗಾಗಿ ₹2.54 ಕೋಟಿ ಹಾಗೂ ದುರಸ್ತಿಗಾಗಿ (ಕಾರ್ಮಿಕರ ವೆಚ್ಚ) ₹44 ಲಕ್ಷದಷ್ಟು ವೆಚ್ಚ ಮಾಡಲಾಗಿದೆ ಎಂದು ಬೆಸ್ಕಾಂ ಅಧಿಕಾರಿಗಳು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

'ಬೆಸ್ಕಾಂ ವ್ಯಾಪ್ತಿಯಲ್ಲಿ ಹಾನಿಗೊಳಗಾದ ವಿದ್ಯುತ್ ಕಂಬಗಳು ಹಾಗೂ ವಿದ್ಯುತ್ ಪರಿವರ್ತಕಗಳನ್ನು ಆಗಾಗ್ಗೆ ಬದಲಿಸಲಾಗಿದೆ. ದುರಸ್ತಿ ಕಾರ್ಯ ಬಹುತೇಕ ಪೂರ್ಣಗೊಂಡಿದೆ' ಎಂದು ಬೆಸ್ಕಾಂ ಮೂಲಗಳು ತಿಳಿಸಿವೆ.

ಬೆಸ್ಕಾಂ ಜಿಲ್ಲೆಗಳಲ್ಲಿ ಹಾನಿ ಪ್ರಮಾಣ

ಜಿಲ್ಲೆ	ವಿದ್ಯುತ್ ಕಂಬಗಳು	ಪರಿವರ್ತಕಗಳು	ಒಟ್ಟು ವೆಚ್ಚ (₹ಲಕ್ಷಗಳಲ್ಲಿ)
ಬೆಂಗಳೂರು ನಗರ	66	51	59.27
ಬೆಂ.ಗ್ರಾಮಾಂತರ	11	3	4.69
ರಾಮನಗರ	256	30	76.00
ಕೋಲಾರ	26	00	2.97
ಚಿಕ್ಕಬಳ್ಳಾಪುರ	87	5	10.80
ತುಮಕೂರು	650	6	48.61
ದಾವಣಗೆರೆ	542	40	69.90
ಚಿತ್ರದುರ್ಗ	242	16	27.42
ಒಟ್ಟು	1,880	151	₹2.99 ಕೋಟಿ

ಮರಕ್ಕೆ ಕಾರು ಡಿಕ್ಕಿ ಮೂವರ ಸಾವು

ಚನ್ನಪಟ್ಟಣ: ತಾಲ್ಲೂಕಿನ ಅಮ್ಮಳ್ಳಿದೊಡ್ಡಿ ಬಳಿ ಭಾನುವಾರ ಕಾರು ಮರಕ್ಕೆ ಡಿಕ್ಕಿ ಹೊಡೆದಿದ್ದರಿಂದ ಬೆಂಗಳೂರು ಮೂಲದ ಮೂವರು ಯುವಕರು ಮೃತಪಟ್ಟಿದ್ದು, ಮತ್ತೊಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಮೃತರನ್ನು ಬೆಂಗಳೂರಿನ ಕಾಮಾಕ್ಷಿಪಾಳ್ಯದ ಅಭಿ (21), ಮಧು (32) ಹಾಗೂ ದೀಪು (22) ಎಂದು ಗುರುತಿಸಲಾಗಿದೆ. ಗಂಭೀರವಾಗಿ ಗಾಯಗೊಂಡಿರುವ ಚಿರು ಅವರಿಗೆ ಚಾಮುಂಡೇಶ್ವರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ನಿಮ್ಹಾನ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ಸ್ನೇಹಿತರಾದ ನಾಲ್ವರೂ ಕನಕಪುರ ತಾಲ್ಲೂಕಿನ ಕಬ್ಬಾಳಿಗೆ ಕಾರ್ಯಕ್ರಮವೊಂದರ ಸಲುವಾಗಿ ಬಂದಿದ್ದರು. ಕಾರ್ಯಕ್ರಮ ಮುಗಿಸಿಕೊಂಡು ಸಂಜೆ 6.45ರ ಸುಮಾರಿಗೆ ಸ್ವಿಫ್ಟ್ ಕಾರಿನಲ್ಲಿ ಬೆಂಗಳೂರಿಗೆ ಹೊರಟಿದ್ದರು. ಅಮ್ಮಳ್ಳಿದೊಡ್ಡಿ ಬಳಿ ವೇಗವಾಗಿ ಬರುವಾಗ ಚಾಲನೆ ಮಾಡುತ್ತಿದ್ದವರು, ನಿಯಂತ್ರಣ ತಪ್ಪಿ ಮರಕ್ಕೆ ಡಿಕ್ಕಿ ಹೊಡೆದಿದ್ದಾರೆ ಎಂದು ಪೊಲೀಸರು ತಿಳಿಸಿದರು.

ಡಿಕ್ಕಿಯ ರಭಸಕ್ಕೆ ಕಾರು ಸಂಪೂರ್ಣ ನಜ್ಜುಗುಜ್ಜಾಗಿ, ನಾಲ್ವರೂ ಗಂಭೀರವಾಗಿ ಗಾಯಗೊಂಡರು. ಕೂಡಲೇ ಸ್ಥಳೀಯರು ಎಲ್ಲರನ್ನೂ ಕಾರಿನಿಂದ ಹೊರಗೆಳೆದು ಚಾಮುಂಡೇಶ್ವರಿ ಆಸ್ಪತ್ರೆಗೆ ಕರೆದೊಯ್ಯುವಾಗ ಮಾರ್ಗ ಮಧ್ಯೆ ಮೂವರು ಕೊನೆಯುಸಿರೆಳೆದರು. ತಲೆಗೆ ಗಂಭೀರವಾಗಿ ಪೆಟ್ಟಾಗಿದ್ದ ಚಿರು ಅವರಿಗೆ ಚಿಕಿತ್ಸೆ ನೀಡಿ, ಆಂಬುಲೆನ್ಸ್‌ನಲ್ಲಿ ಬೆಂಗಳೂರಿಗೆ ಕಳಿಸಲಾಯಿತು ಎಂದರು.

ಕುಂದು ಕೊರತೆ | ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ ಮಾಡಿ 9606038256

ಮ್ಯಾನ್‌ಹೋಲ್ ಕಾಮಗಾರಿ ಪೂರ್ಣಗೊಂಡಿರುವುದು

ವರದಿಗೆ ಸ್ಪಂದನೆ

ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಎಂ.ಸಿ. ಲೇಔಟ್ ವಿಜಯನಗರ ಬಡಾವಣೆಯ ಒಂದನೇ ಮುಖ್ಯ ರಸ್ತೆಯಲ್ಲಿ ಸ್ಥಗಿತಗೊಂಡಿದ್ದ ಮ್ಯಾನ್‌ಹೋಲ್ ಕಾಮಗಾರಿ ಈಗ ಪೂರ್ಣಗೊಂಡಿದೆ.

'ಪ್ರಜಾವಾಣಿ'ಯ ಕುಂದು ಕೊರತೆ ವಿಭಾಗದಲ್ಲಿ ಏಪ್ರಿಲ್ 28ರಂದು 'ಮ್ಯಾನ್‌ಹೋಲ್ ಕಾಮಗಾರಿ ಪೂರ್ಣಗೊಳಿಸಿ' ಎಂಬ ಶೀರ್ಷಿಕೆ ಅಡಿಯಲ್ಲಿ ವರದಿ ಪ್ರಕಟವಾಗಿತ್ತು. ಇದರಿಂದ ಎಚ್ಚೆತ್ತ ಬಿಬಿಎಂಪಿ ಸಿಬ್ಬಂದಿ ಕಾಮಗಾರಿ ಪೂರ್ಣಗೊಳಿಸಿದ್ದಾರೆ.

'ಪಾದಚಾರಿ ಮಾರ್ಗದಲ್ಲಿ ಕಸದ ರಾಶಿ'

ಗೋವಿಂದರಾಜ ನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಮಾಗಡಿ ರಸ್ತೆ ಮೆಟ್ರೊ ನಿಲ್ದಾಣದ ಮುಂಭಾಗದ ಪಾದಚಾರಿ ಮಾರ್ಗದಲ್ಲಿ ಕಸದ ರಾಶಿ ಬಿದ್ದಿದ್ದು, ನಗರದ ಸೌಂದರ್ಯಕ್ಕೆ ಧಕ್ಕೆ ತರುತ್ತಿದೆ. ಇಲ್ಲಿ ನಿತ್ಯ ಇದೇ ರೀತಿ ಕಸದ ರಾಶಿ ಬಿದ್ದಿರುತ್ತದೆ. ಇಲ್ಲಿನ ಕಸದ ರಾಶಿ ತೆರವುಗೊಳಿಸುವಂತೆ ಬಿಬಿಎಂಪಿ ಅಧಿಕಾರಿಗಳಿಗೆ ದೂರು ನೀಡಿದರೂ ಪ್ರಯೋಜನವಾಗಿಲ್ಲ.

ಎಂ. ಉಮಾಶಂಕರಬಾಬು, ಕೆಂಪಾಪುರ ಅಗ್ರಹಾರ

'ರಸ್ತೆಯಲ್ಲಿನ ಕಸ ತೆರವುಗೊಳಿಸಿ'

ಸುವರ್ಣನಗರ ಗೃಹಲಕ್ಷ್ಮಿ ಬಡಾವಣೆ ಉದ್ಯಾನದ ಬಳಿಯ ರಸ್ತೆ ಹಾಗೂ ರಾಜಕಾಲುವೆಯಲ್ಲಿ ಕಸದ ಚೀಲಗಳನ್ನು ಎಸೆಯಲಾಗುತ್ತಿದೆ. ಇದರಿಂದ ಇಡೀ ಪ್ರದೇಶ ಗಬ್ಬೆದ್ದು ನಾರುತ್ತಿದ್ದು, ಸೊಳ್ಳೆಗಳ ಉತ್ಪತ್ತಿ ತಾಣವಾಗಿ ಮಾರ್ಪಟ್ಟಿದೆ. ಕಸದ ರಾಶಿಯಲ್ಲಿ ಹಾವು, ಚೇಳು ಹಾಗೂ ಹೆಗ್ಗಣಗಳ ಕಾಟ ಹೆಚ್ಚಾಗಿದೆ. ಏನಾದರೂ ಅಪಾಯ ಸಂಭವಿಸುವ ಮುನ್ನ ಬಿಬಿಎಂಪಿ ಸಿಬ್ಬಂದಿ ಇಲ್ಲಿನ ಕಸದ ರಾಶಿಯನ್ನು ತೆರವುಗೊಳಿಸಬೇಕು. ಇಲ್ಲಿ ಕಸ ಹಾಕದಂತೆ ಫಲಕ ಅಳವಡಿಸಬೇಕು.

ಮಂಜುನಾಥ್, ಸುವರ್ಣನಗರ

'ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಿ'

ಕುಮಾರಸ್ವಾಮಿ ಬಡಾವಣೆಯಲ್ಲಿ ನೂತನವಾಗಿ ನಿರ್ಮಿಸಿರುವ ಅಂಚೆ ಕಚೇರಿಯ ಕಾಂಪೌಂಡ್ ಎದುರುಗಡೆ ವಾಹನಗಳನ್ನು ನಿಲ್ಲಿಸದಂತೆ ಬ್ಯಾರಿಕೇಡ್ ಇಟ್ಟು, ಅದಕ್ಕೆ ಹಗ್ಗ ಕಟ್ಟಲಾಗಿದೆ. ಇದರಿಂದ ವಾಹನ ನಿಲುಗಡೆ ಮಾಡಲು ಆಗುತ್ತಿಲ್ಲ. ಬ್ಯಾರಿಕೇಡ್‌ಗೆ ಹಗ್ಗ ಕಟ್ಟಿರುವುದರಿಂದ ರಸ್ತೆಯ ಅಗಲವೂ ಕಿರಿದಾಗಿದೆ. ಇದರಿಂದ ಅಂಚೆ ಕಚೇರಿ ಹಾಗೂ ಸಾಗರ್ ಆಸ್ಪತ್ರೆಗೆ ಬರುವವರಿಗೆ ಸಮಸ್ಯೆ ಆಗಿದೆ. ಇಲ್ಲಿ ವಾಹನಗಳನ್ನು ನಿಲುಗಡೆ ಮಾಡಲು ಅವಕಾಶ ಕಲ್ಪಿಸಬೇಕು.

ಪತ್ತಂಗಿ ಎಸ್. ಮುರಳಿ, ಕುಮಾರಸ್ವಾಮಿ ಬಡಾವಣೆ

'ರಸ್ತೆ ಗುಂಡಿ ಮುಚ್ಚಿ'

ಮಾಗಡಿ ಮುಖ್ಯ ರಸ್ತೆಯಿಂದ ಮೈಸೂರು ಮುಖ್ಯ ರಸ್ತೆಗೆ ಸಂಪರ್ಕ ಕಲ್ಪಿಸುವ ದೊಡ್ಡ ಆಲದ ಮರ ರಸ್ತೆಯಲ್ಲಿ ಗುಂಡಿಗಳು ಬಿದ್ದಿದ್ದು, ರಸ್ತೆ ಹಾಳಾಗಿದೆ. ಇದೇ ರಸ್ತೆಯಲ್ಲಿ ಬರುವ ಮಾದಪಟ್ಟಣ ಹಾಗೂ ಉಣ್ಣಿಗೆರೆಯ ನಡುವಿನ ರಸ್ತೆಯಲ್ಲಿ ಬೃಹತ್ ಗುಂಡಿಗಳು ಬಿದ್ದಿದ್ದು, ವಾಹನ ಸಂಚಾರ ದುಸ್ತರವಾಗಿದೆ. ಈ ರಸ್ತೆಯಲ್ಲಿ ನಿತ್ಯ ನೂರಾರು ವಾಹನಗಳು ಸಂಚರಿಸುತ್ತಿದ್ದು, ರಸ್ತೆಯಲ್ಲಿ ಗುಂಡಿ ಬಿದ್ದ ಪರಿಣಾಮ ಸಂಚಾರ ದಟ್ಟಣೆ ಆಗುತ್ತಿದೆ. ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿಯ ಅಧಿಕಾರಿಗಳು ಕೂಡಲೇ ಈ ರಸ್ತೆ ದುರಸ್ತಿಗೆ ಕ್ರಮ ಕೈಗೊಳ್ಳಬೇಕು.

ಕೃಷ್ಣಮೂರ್ತಿ ಆರ್., ಅರಳಿಮರದ ಪಾಳ್ಯ

ಮೂಲಸೌಕರ್ಯ ಒದಗಿಸುವಂತೆ ಆಗ್ರಹಿಸಿ ಜೆಡಿಎಸ್ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ವಾರ್ಡ್‌ಗಳಿಗೆ ಮೂಲಸೌಕರ್ಯ ಒದಗಿಸುವಂತೆ ಜೆಡಿಎಸ್ ಪಕ್ಷದ ಕಾರ್ಯಕರ್ತರು ಮಹದೇವಪುರ ಬಿಬಿಎಂಪಿ ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು

ಕೆ.ಆರ್.ಪುರ: ಮಹದೇವಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಎಂಟು ವಾರ್ಡ್‌ಗಳಲ್ಲಿ ಮೂಲಸೌಕರ್ಯಗಳನ್ನು ಒದಗಿಸುವಂತೆ ಆಗ್ರಹಿಸಿ ಕ್ಷೇತ್ರ ವ್ಯಾಪ್ತಿಯ ಜೆಡಿಎಸ್ ಪಕ್ಷದ ಕಾರ್ಯಕರ್ತರು ಮಹದೇವಪುರ ವಲಯ ಬಿಬಿಎಂಪಿ ಕಚೇರಿ ಮುಂಭಾಗದಲ್ಲಿ ಪ್ರತಿಭಟನೆ ನಡೆಸಿದರು.

ಕ್ಷೇತ್ರದ ಯಾವ ವಾರ್ಡ್‌ಗಳಲ್ಲೂ ಸಮರ್ಪಕವಾದ ರಸ್ತೆ ಇಲ್ಲ. ಕುಡಿಯುವ ನೀರು ಪೂರೈಕೆಯೂ ಸಮರ್ಪಕವಾಗಿಲ್ಲ. ಕೆಲವು ಕಡೆಗೆ ವಿದ್ಯುತ್ ಸಂಪರ್ಕ ಇಲ್ಲದಂತಾಗಿದೆ. ಯಾವ ರಸ್ತೆ ನೋಡಿದರೂ ಗುಂಡಿಮಯವಾಗಿದೆ. ಪ್ರತಿ ವಾರ್ಡ್‌ಗಳಲ್ಲಿ ನಾನಾ ರೀತಿಯ ಸಮಸ್ಯೆಗಳು ತಾಂಡವಾಡುತ್ತಿವೆ ಎಂದು ಪ್ರತಿಭಟನಕಾರರು ಆರೋಪಿಸಿದರು.

ಮಹದೇವಪುರ ಕ್ಷೇತ್ರದಿಂದ ಸರ್ಕಾರಕ್ಕೆ ರಾಜ್ಯದಲ್ಲಿ ಅತಿಹೆಚ್ಚು ತೆರಿಗೆ ಪಾವತಿಸುತ್ತಿದ್ದರೂ ಕ್ಷೇತ್ರದಲ್ಲಿ ಮೂಲಸೌಕರ್ಯಗಳ ಕೊರತೆಯಿದೆ. ಸರ್ಕಾರದ ಅನುದಾನವಿಲ್ಲದೆ ಅಭಿವೃದ್ಧಿ ಕಾಮಗಾರಿಗಳು ನನೆಗುದಿಗೆ ಬಿದ್ದಿವೆ. ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಅವರು ಕ್ಷೇತ್ರದ ಅಭಿವೃದ್ಧಿ ಬಗ್ಗೆ ಗಮನಹರಿಸಬೇಕು ಎಂದು ಮಹದೇವಪುರ ಜೆಡಿಎಸ್ ಅಧ್ಯಕ್ಷ ಓ.ಪಿ.ಓಬಳೇಶ್ ಒತ್ತಾಯಿಸಿದರು.

ಮುಂದಿನ ದಿನಗಳಲ್ಲಿ ಕ್ಷೇತ್ರದ ಅಭಿವೃದ್ಧಿ ಬಗ್ಗೆ ಮೌನವಹಿಸಿದರೆ ಪಕ್ಷದ ವತಿಯಿಂದ ಕ್ಷೇತ್ರ ವ್ಯಾಪ್ತಿಯಲ್ಲಿ ಬೃಹತ್ ಪ್ರತಿಭಟನೆಯನ್ನು ಕೈಗೊಳ್ಳಲಾಗುತ್ತದೆ ಎಂದು ಎಚ್ಚರಿಸಿದರು.

ಜೋಶಿ ವಿರುದ್ಧ ಹೋರಾಟಕ್ಕೆ ಸಿದ್ಧತೆ

ಪ್ರಜಾವಾಣಿ ವಾರ್ತೆ

ಮಂಡ್ಯ: ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ್ ಜೋಶಿ ವಿರುದ್ಧ ಸಮರ ಸಾರಿರುವ ಜಿಲ್ಲೆಯ ಪ್ರಗತಿಪರ ಸಂಘಟನೆಗಳ ಮುಖಂಡರು, ನಗರದ ಕರ್ನಾಟಕ ಸಂಘದ ಕೆವಿಎಸ್ ಭವನದಲ್ಲಿ ಭಾನುವಾರ ಪೂರ್ವಭಾವಿ ಸಭೆ ನಡೆಸಿದರು.

ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಜಯಪ್ರಕಾಶಗೌಡ ನೇತೃತ್ವದಲ್ಲಿ ವಿವಿಧ ಸಂಘಟನೆಗಳ ಮುಖಂಡರು ಹಾಗೂ ಕೆಲವು ಜನಪ್ರತಿನಿಧಿಗಳು ಪರಿಷತ್ ಉಳಿವಿನ ಬಗ್ಗೆ ಚರ್ಚಿಸಿದರು.

ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ಅವರನ್ನು ಹೋರಾಟದ ಸಮಿತಿಯ ಅಧ್ಯಕ್ಷರನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ನಂತರ ಕ್ರಿಯಾ ಸಮಿತಿ ಹಾಗೂ ಕೋರ್ ಕಮಿಟಿ ಮಾಡುವ ಮೂಲಕ ಮಹೇಶ್ ಜೋಶಿ ಅವರ ವಿರುದ್ಧ ಹೋರಾಟದ ರೂಪುರೇಷೆ ಬಗ್ಗೆ ಹಲವು ಮುಖಂಡರು ಮಾರ್ಗದರ್ಶನ ಹಾಗೂ ಸಲಹೆ ನೀಡಿದರು.

ಕಸಾಪ ಜಿಲ್ಲಾ ಘಟಕದ ಮಾಜಿ ಅಧ್ಯಕ್ಷೆ ಮೀರಾ ಶಿವಲಿಂಗಯ್ಯ, 'ಜೋಶಿ ಅವರ ದಬ್ಬಾಳಿಕೆಯನ್ನು ಎಲ್ಲರಿಗೂ ತಿಳಿಸುವ ಜವಾಬ್ದಾರಿ ತೆಗೆದುಕೊಳ್ಳಬೇಕು. ಈ ವ್ಯಕ್ತಿ ಬಹಳ ಚಾಣಕ್ಯನಾಗಿ ಕೆಲಸ ಮಾಡುತ್ತಿದ್ದು, ಕಾನೂನು ಹೋರಾಟ, ಜನ ಚಳವಳಿ ನಡೆಸುವುದು ಹಾಗೂ ಸರ್ಕಾರದ ಮೇಲೆ ಒತ್ತಡ ತರಲು ಹೋರಾಟ ರೂಪಿಸೋಣ' ಎಂದು ಸಲಹೆ ನೀಡಿದರು.

ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಜಯಪ್ರಕಾಶಗೌಡ ಮಾತನಾಡಿ, 'ರಂಗಮಂದಿರ ನಿರ್ಮಾಣಕ್ಕೆ ಹಣ ಕೇಳಿದರೂ ನಾನು ಕೊಡಲಿಲ್ಲ. ಹಾಗಾಗಿ ನನ್ನ ವಿರುದ್ಧ ಜಯಪ್ರಕಾಶಗೌಡರು ಆರೋಪ ಮಾಡುತ್ತಿದ್ದಾರೆ ಎಂದು ಜೋಶಿ ಅವರು ಬಹಿರಂಗವಾಗಿ ನನ್ನ ವಿರುದ್ಧ ಹೇಳಿಕೆ ನೀಡಿದ್ದಾರೆ. ಆದರೆ, ನಾನು ಯಾವ ಕಾರಣಕ್ಕೆ ಹಣ ಕೇಳಿದೆ ಎಂಬುದನ್ನು ಪತ್ರದ ಮೂಲಕವೇ ಎಲ್ಲವನ್ನು ಸಾರ್ವಜನಿಕವಾಗಿ ನೀಡಿದ್ದೇನೆ. ಆ ಸಾಕ್ಷಿ ಇದೆ' ಎಂದು ಸಭೆಗೆ ಮಾಹಿತಿ ನೀಡಿದರು.

ಮಹದಾಯಿ ಯೋಜನೆಗೆ ಪರಿಸರ ಸಚಿವಾಲಯದಿಂದ ಅನುಮತಿ ಕೊಡಿಸಲು ಹಿಂದೇಟು– ಟೀಕೆ

ಗೋವಾಕ್ಕೆ ಹೆದರುವ ಪ್ರಧಾನಿ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ/ಹಾವೇರಿ: 'ಗೋವಾದ ರಾಜಕೀಯಕ್ಕೆ ಹೆದರಿ ಪ್ರಧಾನಿ ನರೇಂದ್ರ ಮೋದಿ ಅವರು ಮಹದಾಯಿ ಯೋಜನೆಗೆ ಪರಿಸರ ಸಚಿವಾಲಯದಿಂದ ಅನುಮತಿ ಕೊಡಿಸಲು ಹಿಂದೇಟು ಹಾಕುತ್ತಿದ್ದಾರೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದರು.

ನಗರದ ವಿಮಾನ ನಿಲ್ದಾಣದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ರಾಜ್ಯ ಸರ್ಕಾರವು ಮಹದಾಯಿ ಯೋಜನೆ ಆರಂಭಿಸಬೇಕೆಂದರೆ, ಕೇಂದ್ರ ಪರಿಸರ ಸಚಿವಾಲಯದಿಂದ ಅನುಮತಿ ದೊರೆಯಬೇಕು. ಆದರೆ, ಕೇಂದ್ರ ಸರ್ಕಾರ ಈ ವಿಷಯದಲ್ಲಿ ನಿಷ್ಕಾಳಜಿ ತೋರಿಸುತ್ತಿದೆ. ಅದೊಂದು ಅನುಮತಿ ದೊರೆತರೆ ತಕ್ಷಣ ಕಾಮಗಾರಿ ಆರಂಭಿಸುತ್ತೇವೆ' ಎಂದರು.

'ಪರಿಸರ ಸಚಿವಾಲಯ ಅನುಮತಿ ನೀಡುವಂತೆ ಪ್ರಧಾನಿ ನರೇಂದ್ರ ಮೋದಿ ಹಾಗೂ ಇತರ ಸಚಿವರನ್ನು ಸಾಕಷ್ಟು ಬಾರಿ ಭೇಟಿಯಾಗಿ ವಿನಂತಿಸಿದ್ದೇವೆ. ಪ್ರಲ್ಹಾದ ಜೋಶಿ ಅವರು ಸಹ ಕೇಂದ್ರದ ಪ್ರಮುಖ ಸಚಿವರಾಗಿದ್ದು, ರಾಜ್ಯದ ಒಳಿತಿಗೆ ಅನುಮತಿ ಕೊಡಿಸುವ ಕೆಲಸ ಮಾಡಬಹುದಿತ್ತು. ಆದರೆ, ಅದು ಬಿಟ್ಟು ರಾಜ್ಯ ಸರ್ಕಾರದ ಮೇಲೆ ಆರೋಪ ಮಾಡುತ್ತ ದಿನ ಕಳೆಯುತ್ತಿದ್ದಾರೆ. ಮಹದಾಯಿ ಕುರಿತು ಯಾವ ಮಾತು ಆಡುತ್ತಿಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಮೇ 20ಕ್ಕೆ ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ಎರಡು ವರ್ಷ ಪೂರೈಸಲಿದ್ದು, ವಿಜಯನಗರದಲ್ಲಿ ಸಮಾವೇಶ ಹಮ್ಮಿಕೊಂಡಿದ್ದೇವೆ. ಅಲ್ಲಿ ಸರ್ಕಾರದ ಎರಡು ವರ್ಷದ ಸಾಧನೆಯನ್ನು ವಿವರಿಸುತ್ತೇವೆ' ಎಂದು ಹೇಳಿದರು.

ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕಿನ ಅಕ್ಕಿಆಲೂರಿನಲ್ಲಿ ಕಾಮಗಾರಿಗಳ ಉದ್ಘಾಟನಾ ಸಮಾರಂಭದಲ್ಲಿ ಭಾನುವಾರ ಪಾಲ್ಗೊಳ್ಳುವ ಮುನ್ನ ಸುದ್ದಿಗಾರರ ಜೊತೆ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, 'ರಾಜ್ಯದ ಕಾನೂನು ಸುವ್ಯವಸ್ಥೆಗೆ ಧಕ್ಕೆ ತರುತ್ತಿರುವ ಹಾಗೂ ಶಾಂತಿ ಕದಡುತ್ತಿರುವ ಸಮಾಜಘಾತಕ ಶಕ್ತಿಗಳನ್ನು ಪತ್ತೆ ಮಾಡಿ ಮಟ್ಟಹಾಕಲು ವಿಶೇಷ ಪಡೆಯ ಅಗತ್ಯವಿದೆ. ಕರಾವಳಿಯಲ್ಲಿ ಕೋಮು ಹಿಂಸೆ ನಿಗ್ರಹ ಕಾರ್ಯಪಡೆ ರಚಿಸುವ ಬಗ್ಗೆ ಗೃಹ ಸಚಿವರೊಂದಿಗೆ ಮಾತನಾಡಿ ಕ್ರಮ ಕೈಗೊಳ್ಳಲಾಗುವುದು' ಎಂದರು.

'ಜಾತಿಗಣತಿ ಮಾಡಿಸುವ ಮೂಲಕ ಸಿದ್ದರಾಮಯ್ಯ ಜಾತಿ-ಜಾತಿಗಳ ನಡುವೆ ಸಂಘರ್ಷ ಉಂಟು ಮಾಡುತ್ತಿದ್ದಾರೆ' ಎಂದು ಕೆಲವರು ಆರೋಪಿಸುತ್ತಿರುವುದಕ್ಕೆ ಪ್ರತಿಕ್ರಿಯಿಸಿದ ಅವರು, 'ಆರೋಪ ಮಾಡುತ್ತಿರುವವರು, ಕೇಂದ್ರ ಸರ್ಕಾರ ಜಾತಿಗಣತಿ ಮಾಡಿಸುವುದನ್ನು ಮುಕ್ತ ಮನಸ್ಸಿನಿಂದ ಸ್ವಾಗತ ಮಾಡುತ್ತಿದ್ದಾರೆ. ಶಂಖದಿಂದ ಬಂದರೆ ಮಾತ್ರ ತೀರ್ಥ ಎಂಬಂತಾಗಿದೆ. ಮೊದಲು ರಾಜಕೀಯವಾಗಿ ಹೇಳುತ್ತಿದ್ದರು, ವಾಸ್ತವಿಕತೆಯ ಆಧಾರದ ಮೇಲೆ ಹೇಳುತ್ತಿರಲಿಲ್ಲ' ಎಂದರು.

'ಪಾಕಿಸ್ತಾನದ ವಿಚಾರದಲ್ಲಿ ಕಾಂಗ್ರೆಸ್ ಇಬ್ಬಗೆಯ ನೀತಿಯನ್ನು ಅನುಸರಿಸುತ್ತಿದೆ' ಎಂಬ ಮಾಜಿ ಪ್ರಧಾನಿ ದೇವೇಗೌಡರ ಹೇಳಿಕೆಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, 'ದೇವೇಗೌಡರು ಬಿಜೆಪಿ ಸೇರುವ ಮುನ್ನ ನರೇಂದ್ರ ಮೋದಿಯವರ ಬಗ್ಗೆ ಏನು ಮಾತನಾಡುತ್ತಿದ್ದರು, ಈಗ ಏನು ಮಾತನಾಡುತ್ತಿದ್ದಾರೆ? ಇಬ್ಬಗೆಯ ನೀತಿ ದೇವೇಗೌಡರಿಗೆ ಇದೆ' ಎಂದು ತಿರುಗೇಟು ನೀಡಿದರು.

ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕಿನ ಅಕ್ಕಿಆಲೂರಿನಲ್ಲಿ ಭಾನುವಾರ ಹಮ್ಮಿಕೊಂಡಿದ್ದ ವಿವಿಧ ಕಾಮಗಾರಿಗಳ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಜನರ ಅಹವಾಲುಗಳನ್ನು ಆಲಿಸಿದರು

ಅಪರಾಧ ತಡೆಗೆ ಕಠಿಣ ಕ್ರಮ: ಪರಮೇಶ್ವರ

ಹುಬ್ಬಳ್ಳಿ: 'ರಾಜ್ಯದಲ್ಲಿ ಕಠಿಣವಾದ ಕಾನೂನು ಇದ್ದರೂ ಕೆಲವು ಕಡೆ ಕೊಲೆ, ಗುಂಪು ಘರ್ಷಣೆ ಪ್ರಕರಣಗಳು ನಡೆಯುತ್ತಿವೆ. ಅದನ್ನು ತಡೆಗಟ್ಟಲು ಸರ್ಕಾರ ಕಠಿಣ ಕ್ರಮ ಕೈಗೊಳ್ಳಲಿದೆ. ಕೋಮುಹಿಂಸೆ ನಿಗ್ರಹ ಪಡೆ ರಚಿಸಲು ಯೋಜಿಸಲಾಗಿದ್ದು, ಅದರ ರೂಪುರೇಷೆಗಳನ್ನು ಸಿದ್ಧಪಡಿಸಲಾಗುತ್ತಿದೆ' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಭಾನುವಾರ ನಗರದ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

'ಅಪರಾಧ ಪ್ರಕರಣಗಳಿಗೆ ಸಂಬಂಧಿಸಿ ಪೊಲೀಸ್ ಇಲಾಖೆ ಸರಿಯಾದ ಕ್ರಮ ಕೈಗೊಳ್ಳುತ್ತಿದೆ. 'ರಾಜ್ಯ ಸರ್ಕಾರ ಪೊಲೀಸರಿಗೆ ಫ್ರೀ ಹ್ಯಾಂಡ್ ನೀಡುತ್ತಿಲ್ಲ' ಎನ್ನುವ ಕೇಂದ್ರ ಸಚಿವ ವಿ. ಸೋಮಣ್ಣ ಅವರ ಹೇಳಿಕೆಯಲ್ಲಿ ಹುರುಳಿಲ್ಲ. ಸಂದರ್ಭ ಬಂದಾಗ ಅವರಿಗೆ ಅಂಕಿ-ಸಂಖ್ಯೆ ಸಮೇತ ಉತ್ತರ ನೀಡುತ್ತೇನೆ' ಎಂದರು.

ಸುದ್ದಿ 2 ನಿಮಿಷ

ರಾಜ್ಯ ನಿಷ್ಕ್ರಿಯವಾದರೆ ಕೇಂದ್ರ ಎನ್ಐಎ ಮಧ್ಯ ಪ್ರವೇಶ

ತುರುವೇಕೆರೆ (ತುಮಕೂರು): 'ಕಾನೂನು ಸುವ್ಯವಸ್ಥೆ ಕಾಪಾಡಲು ರಾಜ್ಯ ಸರ್ಕಾರ ನಿಷ್ಕ್ರಿಯವಾದರೆ ಎನ್ಐಎ, ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸಬೇಕಾಗುತ್ತದೆ. ನಿಮ್ಮ ಕೈಯಲ್ಲಿ ಆಗದಿದ್ದರೆ ಕೇಂದ್ರಕ್ಕೆ ಪತ್ರ ಬರೆಯಿರಿ. ಆಗ ಹತ್ತು ನಿಮಿಷದಲ್ಲಿ ಎಲ್ಲವೂ ನಿಯಂತ್ರಣಕ್ಕೆ ಬರುತ್ತದೆ' ಎಂದು ಕೇಂದ್ರ ಜಲ ಶಕ್ತಿ, ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಹೇಳಿದ್ದಾರೆ.

ತಾಲ್ಲೂಕಿನ ಕುಂದೂರು ಬಳಿ ಭಾನುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಮುಖ್ಯಮಂತ್ರಿ ಸಿದ್ದರಾಮಯ್ಯ ತಾವು ಅಸಹಾಯಕರು ಎನ್ನುವುದನ್ನು ಮರೆತು ಪೊಲೀಸರಿಗೆ ಮುಕ್ತವಾಗಿ ಕೆಲಸ ಮಾಡಲು ಬಿಡಬೇಕು' ಎಂದರು.

ದುಷ್ಕರ್ಮಿಗಳ ಹೆಡೆಮುರಿ ಕಟ್ಟಬೇಕು ಎಂದು ಅವರಿಗೆ ರಕ್ಷಣೆ ಕೊಡುತ್ತಾ, ಒಳ ಒಪ್ಪಂದ ಮಾಡಿಕೊಳ್ಳುವುದು ಬಿಡಬೇಕು. ಸಮಾಜಘಾತುಕರು, ಅಯೋಗ್ಯರು, ಕೊಲೆ ಬೆದರಿಕೆ ಹಾಕುವವರ ಹೆಡೆಮುರಿ ಕಟ್ಟಲು ಪೊಲೀಸರಿಗೆ ಮುಕ್ತ ಅವಕಾಶ ನೀಡಬೇಕು ಎಂದು ಸಲಹೆ ಮಾಡಿದರು.

'ದೇಶಕ್ಕೆ ಮಾರಕವಾದ ವ್ಯಕ್ತಿಗಳ ಬಗ್ಗೆ ಮೃದು ಧೋರಣೆ ತೋರಬಾರದು' ಎಂದು ಸೋಮಣ್ಣ ನುಡಿದರು.

ಪಿಡಿಒಗೆ ಚಪ್ಪಲಿಯಿಂದ ಹೊಡೆದ ಗ್ರಾಮ ಪಂಚಾಯಿತಿ ಸದಸ್ಯೆ

ಶಹಾಪುರ (ಯಾದಗಿರಿ ಜಿಲ್ಲೆ): ಗ್ರಾಮಸಭೆಗೆ ತೆರಳುತ್ತಿದ್ದ ಪಿಡಿಒ ಮೇಲೆ ಗ್ರಾಮ ಪಂಚಾಯಿತಿ ಸದಸ್ಯೆ ಹಾಗೂ ಇನ್ನೊಬ್ಬರು ಸೇರಿಕೊಂಡು ಕಣ್ಣಿಗೆ ಖಾರದ ಪುಡಿ ಎರಚಿ, ಚಪ್ಪಲಿಯಿಂದ ಹೊಡೆದಿದ್ದಾರೆ ಎಂದು ಶನಿವಾರ ತಾಲ್ಲೂಕಿನ ದೋರನಹಳ್ಳಿಯಲ್ಲಿ ಆರೋಪಿಸಲಾಗಿದೆ.

ದೋರನಹಳ್ಳಿ ಗ್ರಾಮ ಪಂಚಾಯಿತಿ ಪಿಡಿಒ ದೇವರಾಜ ರಂಗಪ್ಪ ಚಲವಾದಿ ಹಲ್ಲೆಗೆ ಒಳಗಾದವರು. ಸದಸ್ಯೆ ತಾಯಮ್ಮ ಶ್ರೀಕಾಂತ ತೆಗನೂರ ಹಾಗೂ ಆಕೆಯ ತಮ್ಮ ಮಂಜುನಾಥ ಬಸಪ್ಪ ಅನ್ವರ ಹಲ್ಲೆ ಮಾಡಿದವರು.

ಮನೆ ಹಂಚಿಕೆ ಬಗ್ಗೆ ಗ್ರಾಮಸಭೆ ಇರುವ ಕಾರಣ ಶನಿವಾರ ಪಿಡಿಒ ಹಾಗೂ ಪಂಪ್ ಅಪರೇಟರ್ ಭೀಮರಾಯ ಕಂಬಾರ ಅವರೊಂದಿಗೆ ಸ್ಕೂಟಿಯಲ್ಲಿ ತೆರಳುತ್ತಿದ್ದರು. ಅದೇ ಸಮಯಕ್ಕೆ ಸದಸ್ಯೆ ತಾಯಮ್ಮ ಹಾಗೂ ಮಂಜುನಾಥ ಬಂದಿದ್ದಾರೆ. ತಾಯಮ್ಮ ಕಣ್ಣಿಗೆ ಖಾರದ ಪುಡಿ ಎರಚಿ, ಚಪ್ಪಲಿ ತೆಗೆದುಕೊಂಡು ಮುಖಕ್ಕೆ ಬೆನ್ನಿಗೆ ಹೊಡೆದು ಗಾಯಗೊಳಿಸಿ, ಕರ್ತವ್ಯಕ್ಕೆ ಅಡ್ಡಿಪಡಿಸಿದ್ದಾರೆ ಎಂದು ಪಿಡಿಒ ದೂರಿನಲ್ಲಿ ತಿಳಿಸಿದ್ದಾರೆ. ಶಹಾಪುರ ಠಾಣೆಯಲ್ಲಿ ಶನಿವಾರ ದೂರು ದಾಖಲಾಗಿದೆ.

ಪಿಡಿಒ ದೇವರಾಜ ಹಾಗೂ ಇತರ ಏಳು ಜನ ಸೇರಿಕೊಂಡು ತಮಗೆ ಜಾತಿನಿಂದನೆ ಹಾಗೂ ಅಪಮಾನ ಮಾಡಿದ್ದಾರೆ ಎಂದು ಗ್ರಾಮ ಪಂಚಾಯಿತಿ ಸದಸ್ಯೆ ತಾಯಮ್ಮ ತೆಗನೂರ ಶಹಾಪುರ ಠಾಣೆಯಲ್ಲಿ ಪ್ರತಿದೂರು ನೀಡಿದ್ದಾರೆ. ಅಧ್ಯಕ್ಷೆ ಚಂದ್ರಾವತಿ ದೊರೆ, ಉಪಾಧ್ಯಕ್ಷ ಈರಣ್ಣ ಕಸನ್, ಆರಿಫ್ ಮಠ, ಮಹಾಂತಗೌಡ ನಂದಿಕೋಲ, ವಿಜಯಕುಮಾರ ಮಲಗೊಂಡ, ಸಿದ್ದಣ್ಣ ದೇಸಾಯಿ ವಿರುದ್ಧವೂ ದೂರು ದಾಖಲಿಸಿದ್ದಾರೆ.

ಅಂಕಸಮುದ್ರ ಪಕ್ಷಿಧಾಮಕ್ಕೆ ತಂಡ

ಹಗರಿಬೊಮ್ಮನಹಳ್ಳಿ (ವಿಜಯನಗರ ಜಿಲ್ಲೆ): ರಾಮ್‌ಸಾರ್ ತಾಣ ಖ್ಯಾತಿಯ ತಾಲ್ಲೂಕಿನ ಅಂಕಸಮುದ್ರ ಪಕ್ಷಿಧಾಮ ಮತ್ತು ತುಂಗಭದ್ರಾ ಹಿನ್ನೀರು ಪ್ರದೇಶಕ್ಕೆ ಬಾಂಬೆ ನ್ಯಾಚುರಲ್ ಹಿಸ್ಟರಿ ಸೊಸೈಟಿ (ಬಿಎನ್‌ಎಚ್‌ಎಸ್)ಯ ಸಂಶೋಧಕರ ತಂಡ ಭಾನುವಾರ ಭೇಟಿ ನೀಡಿ, ಪಟ್ಟಣದ ಗ್ರೀನ್ ಎಚ್‌ಬಿಎಚ್ ತಂಡ ಮತ್ತು ಅರಣ್ಯ ಇಲಾಖೆಯ ಸಹಯೋಗದಲ್ಲಿ ಪಕ್ಷಿಗಳು ಮತ್ತು ಅದರ ಜೀವವೈವಿಧ್ಯತೆಯನ್ನು ವೈಜ್ಞಾನಿಕವಾಗಿ ದಾಖಲಿಸುವ ಸಮೀಕ್ಷೆಗೆ ಮುಂದಾಗಿದೆ.

ಸೊಸೈಟಿಯ ಉಪ ನಿರ್ದೇಶಕ ಸುಜಿತ್ ಎಸ್.ನರ್ವಾಡೆ ಮಾತನಾಡಿ, 'ಪಕ್ಷಿಧಾಮದದಲ್ಲಿರುವ ಸ್ಥಳೀಯ ಮತ್ತು ದೇಶ ವಿದೇಶಗಳಿಂದ ವಲಸೆ ಬರುವ ನೂರಾರು ಪ್ರಭೇದಗಳ ಪಕ್ಷಿಗಳ ಆವಾಸ ಸ್ಥಾನ, ಸಂತಾನೋತ್ಪತ್ತಿ, ಪಕ್ಷಿಗಳ ಜೀವ ರಕ್ಷಣೆಗೆ ತೆಗೆದುಕೊಳ್ಳಬೇಕಾದ ಮುಂಜಾಗ್ರತೆ ಕುರಿತಂತೆ ನಿಖರ ಮಾಹಿತಿಯನ್ನು ದಾಖಲಿಸಲಾಗುವುದು. ಅಪರೂಪದ ಪಕ್ಷಿಗಳಿಗೆ ರಿಂಗ್ ಹಾಕಿ, ಉಪಗ್ರಹ ಆಧಾರಿತ ಅಧ್ಯಯನ ನಡೆಸಲಾಗುವುದು, ಸೈಬೀರಿಯಾದಿಂದ ವಲಸೆ ಬರುವ ಪಕ್ಷಿಗಳಿಗೆ ಇರುವ ಅಪಾಯಗಳ ಕುರಿತಂತೆ ಅಧ್ಯಯನ ನಡೆಸಲಾಗುವುದು. ಎರಡು ವರ್ಷಗಳಲ್ಲಿ ಸಮಗ್ರವಾಗಿ ವೈಜ್ಞಾನಿಕವಾಗಿ ನಿಖರವಾಗಿ ಅಧ್ಯಯನ ನಡೆಸಿ ವರದಿ ನೀಡಲಾಗುವುದು' ಎಂದು ತಿಳಿಸಿದರು.

'ಅಪರೂಪದ ಪಕ್ಷಿಗಳು ಇಲ್ಲಿ ಸಂತಾನೋತ್ಪತ್ತಿಗೆ ಮುಂದಾಗಿರುವುದು ವಿಶೇಷ, ಬಣ್ಣದ ಕೊಕ್ಕರೆ(ಪೇಂಟೆಂಡ್ ಸ್ಟಾರ್ಕ್), ಹೆಜ್ಜಾರ್ಲೆ(ಪೆಲಿಕಾನ್) ಸಂಖ್ಯೆಯನ್ನು ಹೆಚ್ಚಿಸಿಕೊಂಡಿರುವುದು ಗಮನಾರ್ಹವಾಗಿದೆ' ಎಂದರು.

ತಾಲ್ಲೂಕಿನ ನಾರಾಯಣ ದೇವರ ಕೆರೆ, ನಕರಾಳ್ ತಾಂಡಾದ ಬಳಿಯ ಹಿನ್ನೀರು ಪ್ರದೇಶಕ್ಕೆ ಭೇಟಿ ನೀಡಿದ ತಂಡದ ಸದಸ್ಯರು ಬ್ಲೂಟೇಲ್ಡ್ ಬೀ ಈಟರ್, ಓರಿಯಂಟಲ್ ಪ್ರಾಟಿನ್ಕೋಲ್, ಸ್ಮಾಲ್ ಪ್ರಾಟಿನ್ಕೋಲ್ ಪಕ್ಷಿಗಳ ಗೂಡು ಕಟ್ಟುವಿಕೆ ಮತ್ತು ಸಂತಾನೋತ್ಪತ್ತಿಯ ತಾಣಗಳನ್ನು ಗುರುತಿಸಿದರು. ಜಿಪಿಎಸ್ ನಕ್ಷೆ ದಾಖಲಿಸಿ ಬಾನಾಡಿಗಳ ರಕ್ಷಣೆಗೆ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ಗ್ರೀನ್ ಎಚ್‌ಬಿಎಚ್ ತಂಡದ ಸದಸ್ಯರಿಗೆ ವಿವರಿಸಿದರು.

ಹರೀಶ್ ಪೂಂಜ ವಿರುದ್ಧ ಎಫ್‌ಐಆರ್

ತೆಕ್ಕಾರು ಗೋಪಾಲಕೃಷ್ಣ ದೇವಸ್ಥಾನದಲ್ಲಿ ದ್ವೇಷ ಭಾಷಣ ಮಾಡಿದ್ದ ಶಾಸಕ

ಪ್ರಜಾವಾಣಿ ವಾರ್ತೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ತೆಕ್ಕಾರು ಗೋಪಾಲಕೃಷ್ಣ ದೇವಸ್ಥಾನದ ಬ್ರಹ್ಮಕಲಶೋತ್ಸವ ಪ್ರಯುಕ್ತ ಶನಿವಾರ ರಾತ್ರಿ ಏರ್ಪಡಿಸಿದ್ದ ಧಾರ್ಮಿಕ ಸಭೆಯಲ್ಲಿ 'ಬ್ಯಾರಿ' ಸಮುದಾಯದ ವಿರುದ್ಧ ಅವಹೇಳನಕಾರಿ ಪದ ಬಳಸಿದ ಹಾಗೂ ಧರ್ಮಗಳ ನಡುವೆ ದ್ವೇಷ ಹುಟ್ಟಿಸಲು ಯತ್ನಿಸಿದ ಬಗ್ಗೆ ಶಾಸಕ ಹರೀಶ್ ಪೂಂಜ ವಿರುದ್ಧ ಉಪ್ಪಿನಂಗಡಿ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಹರೀಶ್ ಪೂಂಜ

ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ವರ್ತಕ ಇಬ್ರಾಹಿಂ ಎಸ್.ಬಿ ಅವರು ದೂರು ನೀಡಿದ್ದು ಭಾರತೀಯ ನ್ಯಾಯ ಸಂಹಿತೆಯ (ಬಿಎನ್‌ಎಸ್) ಸೆಕ್ಷನ್ 196 (ಧರ್ಮಗಳ ನಡುವೆ ದ್ವೇಷ ಹುಟ್ಟಿಸುವುದು) ಹಾಗೂ ಸೆಕ್ಷನ್ 353 (2)ರ (ಶಾಂತಿಭಂಗವನ್ನು ಉಂಟುಮಾಡಲು ಉದ್ದೇಶಪೂರ್ವಕವಾಗಿ ಅವಹೇಳನ ಮಾಡುವುದು) ಅಡಿಯಲ್ಲಿ ಎಫ್‌ಐಆರ್ ದಾಖಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ನಾನು ತೆಕ್ಕಾರು ಗೋಪಾಲಕೃಷ್ಣ ದೇವಸ್ಥಾನ ಬ್ರಹ್ಮಕಲಶೋತ್ಸವದ ಸಭೆಯಲ್ಲಿ ಶನಿವಾರ ಭಾಗವಹಿಸಿದ್ದೆ. ಆ ಸಭೆಯಲ್ಲಿ ಮಾತನಾಡಿದ್ದ ಶಾಸಕ ಹರೀಶ್ ಪೂಂಜ ಅವರು, 'ಇಲ್ಲಿರುವ ಕಂತ್ರಿ ಬ್ಯಾರಿಗಳು ನಾಲ್ಕು ಟ್ಯೂಬ್‌ಲೈಟ್ ಒಡೆದರೂ ನಾವು ಯಾರೂ ಎದೆಗುಂದಿಲ್ಲ. ದಿನ ಬೆಳಗಾಗುವಾಗ ಕಂತ್ರಿ ಬ್ಯಾರಿಗಳು ಟ್ಯೂಬ್‌ಲೈಟ್ ಒಡೆಯುತ್ತಿದ್ದಾರೆ, ಡೀಸೆಲ್ ಕದಿಯುತ್ತಿದ್ದಾರೆ ಎಂದು ಊರಿನ ಯುವಕರು ಬಂದು ಹೇಳಿದರು. ಯಾರೂ ತಲೆ ಬಿಸಿ ಮಾಡಬೇಡಿ. ಬ್ರಹ್ಮಕಲಶ ಮುಗಿದು ದೃಢಕಲಶ ಆಗುವ ಮುನ್ನ ಇದನ್ನು ಮಾಡಿದ್ದು ಯಾರೆಂದು ಗೊತ್ತಾಗುತ್ತದೆ. ಗೋಪಾಲಕೃಷ್ಣ ದೇವರು ತೋರಿಸಿಕೊಡುತ್ತಾನೆ' ಎಂದು ಹೇಳಿದ್ದರು' ಎಂದು ಇಬ್ರಾಹಿಂ ಅವರು ದೂರಿನಲ್ಲಿ ಆರೋಪಿಸಿದ್ದಾರೆ.

'ಎಲ್ಲರನ್ನು ಸೌಹಾರ್ದಯುತವಾಗಿ ಕೊಂಡೊಯ್ಯಲು ಯತ್ನಿಸುವುದು ನಾವು ಮಾಡುವ ದೊಡ್ಡ ತಪ್ಪು. ಮಸೀದಿಗೆ ಹೋಗಿ ಆಹ್ವಾನ ಪತ್ರ ನೀಡುತ್ತೇವೆ. ಆಹ್ವಾನ ನೀಡಿದ್ದರಿಂದಲೇ ಅವರು ಟ್ಯೂಬ್‌ಲೈಟ್ ಒಡೆದದ್ದು. ನಮಗೂ ಅವರಿಗೂ ಸಂಬಂಧವೇ ಇಲ್ಲ. ನಾವು ಯಾವುದನ್ನೂ ಸಮತೋಲನ ಮಾಡಲು ಹೋಗಬಾರದು. ಹಿಂದೂಗಳು ಹಿಂದೂಗಳೇ. ಅದರಲ್ಲಿ ಎರಡು ಮಾತಿಲ್ಲ. ಅಂತಹ ಕಂತ್ರಿ ಬ್ಯಾರಿಗಳಿಗೂ ಗೋಪಾಲಕೃಷ್ಣ ದೇವರು ಟ್ಯೂಬ್ ಲೈಟ್ ಒಡೆದದ್ದು ಯಾರು ಎಂಬುದನ್ನು ಗೊತ್ತು ಮಾಡುವಂತೆ ಮಾಡಲಿ' ಎಂಬುದಾಗಿ ಪೂಂಜ ಹೇಳಿದ್ದರು' ಎಂದು ಇಬ್ರಾಹಿಂ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

'ನಾವು ಇತಿಹಾಸವನ್ನು ಮರೆಯಬಾರದು. ಈ ಊರಿನಲ್ಲಿ ಇರುವುದು ಹಿಂದೂಗಳ 150 ಮನೆ. ಇಲ್ಲಿ 1200 ಜನ ಬ್ಯಾರಿಗಳಿದ್ದಾರೆ. ಇನ್ನು ಕೆಲವರ್ಷಗಳಲ್ಲಿ ಮುಸ್ಲಿಮರ ಸಂಖ್ಯೆ 600 ಆಗುವುದಿಲ್ಲ. ಹತ್ತು ವರ್ಷ ಕಳೆದ ಬಳಿಕ ಅವರ ಸಂಖ್ಯೆ 5 ಸಾವಿರ ಆಗುತ್ತದೆ. ಅವರ ಸಂಖ್ಯೆ 5 ಸಾವಿರವಲ್ಲ; 10 ಸಾವಿರವಾದರೂ ಇಲ್ಲಿರುವ ಹಿಂದೂ ಸಮಾಜ ಸನಾತನವಾಗಿ ಸಾವಿರ ವರ್ಷ ಗೋಪಾಲಕೃಷ್ಣ ದೇವರನ್ನು ಆರಾಧನೆ ಮಾಡುತ್ತದೆ ಎಂದು ಸಂಕಲ್ಪ ಮಾಡಬೇಕಾದ ದಿನ ಇಂದು' ಎಂದು ಪೂಂಜ ಹೇಳಿದ್ದರು' ಎಂದು ಇಬ್ರಾಹಿಂ ಅವರು ದೂರಿನಲ್ಲಿ ಆರೋಪಿಸಿದ್ದಾರೆ.

ತಂದೆ ಅಂತ್ಯ ಸಂಸ್ಕಾರದಲ್ಲಿ ಬನ್ನಂಜೆ ರಾಜ ಭಾಗಿ

ಪ್ರಜಾವಾಣಿ ವಾರ್ತೆ

ಉಡುಪಿ: ತಂದೆಯ ಅಂತ್ಯ ಸಂಸ್ಕಾರದಲ್ಲಿ ಪಾಲ್ಗೊಳ್ಳಲು ಹೈಕೋರ್ಟ್ ಅನುಮತಿ ನೀಡಿರುವ ಕಾರಣ ಪಾತಕಿ ಬನ್ನಂಜೆ ರಾಜನನ್ನು ಉಡುಪಿಗೆ ಭಾನುವಾರ ಕರೆತರಲಾಯಿತು.

ಬೆಳಗಾವಿಯ ಜೈಲಿನಲ್ಲಿದ್ದ ಬನ್ನಂಜೆ ರಾಜನನ್ನು ಪೊಲೀಸರು ಬಿಗಿ ಭದ್ರತೆಯಲ್ಲಿ ಮಲ್ಪೆಯ ಕಲ್ಮಾಡಿ ಸಸಿತೋಟ ಎಂಬಲ್ಲಿರುವ ಆತನ ಮನೆಗೆ ಕರೆತಂದಿದ್ದಾರೆ. ಅಲ್ಲಿ ಆತ ತಂದೆಯ ಅಂತಿಮ ವಿಧಿ ವಿಧಾನಗಳನ್ನು ನೆರವೇರಿಸಿದ್ದಾನೆ. ಬಳಿಕ ಮಲ್ಪೆ ಹಿಂದೂ ರುದ್ರಭೂಮಿಯಲ್ಲಿ ಅಂತ್ಯ ಸಂಸ್ಕಾರ ನಡೆಯಿತು.

ಏ.27ರಂದು ನಿಧನರಾದ ತಂದೆ ಎಂ. ಸುಂದರ್ (88) ಅವರ ಅಂತ್ಯಸಂಸ್ಕಾರ ಹಾಗೂ ಧಾರ್ಮಿಕ ವಿಧಿ ವಿಧಾನಗಳಲ್ಲಿ ಪಾಲ್ಗೊಳ್ಳಲು ಅವಕಾಶ ಕಲ್ಪಿಸಲು ತುರ್ತಾಗಿ ಪೆರೋಲ್ ನೀಡುವಂತೆ ಬನ್ನಂಜೆ ರಾಜ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದ. ಹೈಕೋರ್ಟ್ ಆತನಿಗೆ ಕೆಲ ಷರತ್ತುಗಳನ್ನು ವಿಧಿಸಿ ಮೇ 3ರಿಂದ ಮೇ 14ರವರೆಗೆ ಪೆರೋಲ್ ನೀಡಿತ್ತು.

ಪಾತಕಿ ಬನ್ನಂಜೆ ರಾಜನನ್ನು ಉಡುಪಿಗೆ ಭಾನುವಾರ ಕರೆತರಲಾಯಿತು

ಉಡುಪಿ ಐರೋಡಿ ಜ್ಯುವೆಲ್ಲರ್ಸ್ ಶೂಟೌಟ್, ಕಾರವಾರದಲ್ಲಿ ನಡೆದ ಕೊಲೆ ಸೇರಿದಂತೆ ಹಲವು ಪ್ರಕರಣಗಳಲ್ಲಿ ಈತ ಆರೋಪಿಯಾಗಿದ್ದಾನೆ.

ಭೂಗತನಾಗಿದ್ದ ಬನ್ನಂಜೆ ರಾಜನನ್ನು 2015ರ ಫೆಬ್ರುವರಿ ತಿಂಗಳಲ್ಲಿ ಉತ್ತರ ಆಫ್ರಿಕಾದ ಮೊರಕ್ಕೊದಲ್ಲಿ ಪೊಲೀಸರು ಬಂಧಿಸಿ, ಬೆಂಗಳೂರಿಗೆ ಕರೆತಂದಿದ್ದರು.

'ಬನ್ನಂಜೆ ರಾಜ ಪೆರೋಲ್‌ನಲ್ಲಿರುವ ಸಂದರ್ಭದಲ್ಲಿ ಮೊಬೈಲ್, ಇಂಟರ್‌ನೆಟ್ ಬಳಸುವಂತಿಲ್ಲ. ಸಹಚರರರೊಂದಿಗೆ ಸೇರಿ ಯಾವುದೇ ಕೃತ್ಯದಲ್ಲಿ ಭಾಗಿಯಾಗುವಂತಿಲ್ಲ. ತಂದೆಯ ಅಂತ್ಯ ಸಂಸ್ಕಾರದಲ್ಲಿ ಪಾಲ್ಗೊಂಡ ಬಳಿಕ ಮನೆಯಿಂದ ಹೊರಗೆ ಬರಬಾರದು ಎಂಬುದೂ ಸೇರಿದಂತೆ ಹಲವು ಷರತ್ತುಗಳನ್ನು ವಿಧಿಸಲಾಗಿದೆ. ಇದೇ 14ರಂದು ಆತನನ್ನು ಮತ್ತೆ ಬೆಳಗಾವಿಯ ಜೈಲಿಗೆ ಕರೆದೊಯ್ಯಲಾಗುವುದು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಅರುಣ್ ಕೆ. ತಿಳಿಸಿದ್ದಾರೆ.

'ಅದಿರು ಉತ್ಪಾದನೆ 20 ದಶಲಕ್ಷ ಟನ್ ಇರಲಿ'

ಮಿತಿ ಹೆಚ್ಚಿಸುವ ಕೇಂದ್ರದ ಉನ್ನತಾಧಿಕಾರ ಸಮಿತಿ ವರದಿಗೆ ಮೇಲುಸ್ತುವಾರಿ ಪ್ರಾಧಿಕಾರ ಆಕ್ಷೇಪ

ಹರಿಶಂಕರ್ ಆರ್.

ಬಳ್ಳಾರಿ: ರಾಜ್ಯದ ಎಲ್ಲಾ ಕಬ್ಬಿಣದ ಅದಿರು ಗಣಿ ಗುತ್ತಿಗೆಗಳಿಗೆ 57 ದಶಲಕ್ಷ ಟನ್(ಎಂಟಿ)ನ ಏಕೀಕೃತ ವಾರ್ಷಿಕ ಉತ್ಪಾದನಾ ಮಿತಿಯನ್ನು ನಿಗದಿಪಡಿಸುವ ಕೇಂದ್ರದ ಉನ್ನತಾಧಿಕಾರ ಸಮಿತಿ (ಸಿಇಸಿ)ಯ ಶಿಫಾರಸಿಗೆ ಮೇಲುಸ್ತುವಾರಿ ಪ್ರಾಧಿಕಾರ ಆಕ್ಷೇಪ ವ್ಯಕ್ತಪಡಿಸಿದೆ. ಮಿತಿಯನ್ನು 20 ಎಂಟಿಗೆ ಇಳಿಸಬೇಕು ಎಂದು ಪ್ರತಿಪಾದಿಸಿದೆ.

ರಾಜ್ಯದಲ್ಲಿ ಕಬ್ಬಿಣದ ಅದಿರಿನ 'ಒಪ್ಪಿತ ವಾರ್ಷಿಕ ಗರಿಷ್ಠ ಉತ್ಪಾದನೆ (ಎಂಪಿಎಪಿ)' ಮಿತಿ ಆರಂಭದಲ್ಲಿ 30 ಎಂಟಿ ಇತ್ತು. ಅದು 50 ಎಂಟಿಗೆ ಏರಿದೆ. ಸದ್ಯ 57 ಎಂಟಿಗೆ ಹೆಚ್ಚಿಸಲು ಸಿಇಸಿ ಸುಪ್ರೀಂ ಕೋರ್ಟ್‌ಗೆ ವರದಿ ಸಲ್ಲಿಸಿದೆ. ಇದನ್ನು ಆಕ್ಷೇಪಿಸಿರುವ ಮೇಲುಸ್ತುವಾರಿ ಪ್ರಾಧಿಕಾರ ಹಲವು ಪ್ರಮುಖ ಅಂಶಗಳನ್ನು ಕಾರಣವಾಗಿ ನೀಡಿದೆ.

ಗಣಿ ಅಕ್ರಮ ಉತ್ತುಂಗದಲ್ಲಿದ್ದ 2007-08ರಲ್ಲಿ ಉತ್ಪಾದನೆಯಾದ ಅದಿರಿನ ಪ್ರಮಾಣವೇ 49 ದಶಲಕ್ಷ ಟನ್ ಆಗಿತ್ತು. ಈಗಿನ ಅತ್ಯಧಿಕ ಉತ್ಪಾದನೆ 43 ಎಂಟಿ (2023-24) ಆಗಿದೆ. ಇದಕ್ಕೂ ಮೇಲೆ ಹೋದರೆ ಪರಿಸ್ಥಿತಿ ಬಿಗಡಾಯಿಸಲಿದೆ.

'ಅಕ್ರಮ ಗಣಿಗಾರಿಕೆ ಕಾಲದಲ್ಲಿ ರಸ್ತೆ ಜಾಲಕ್ಕೆ ಆಗಿದ್ದ ಹಾನಿ ಇದುವರೆಗೆ ಸರಿಹೋಗಿಲ್ಲ. ಈಗಂತೂ ಪರಿಸ್ಥಿತಿ ಇನ್ನೂ ಹದಗೆಟ್ಟಿದೆ. ಗಣಿಗಳಿರುವ ಪ್ರದೇಶಗಳಲ್ಲಿ ನಿತ್ಯ 5,500 ಲಾರಿಗಳು ಓಡಾಡುತ್ತಿವೆ. ಉತ್ಪಾದನೆ ಏರಿದರೆ ಲಾರಿಗಳ ಸಂಚಾರ ಇನ್ನೂ ಹೆಚ್ಚಗಲಿದೆ' ಎಂದು ಆತಂಕ ವ್ಯಕ್ತಪಡಿಸಿದೆ.

'ದೊಡ್ಡ ಗಣಿಗಳು ಕನ್ವೇಯರ್ ಬೆಲ್ಟ್ ಅಳವಡಿಸಿಕೊಳ್ಳಬೇಕೆಂಬ ಸುಪ್ರೀಂ ಕೋರ್ಟ್‌ನ ಆದೇಶ ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ. ರೈಲ್ವೆ ಸೈಡಿಂಗ್‌ಗಳನ್ನು ನಿರ್ಮಿಸುವ ಕೆಎಂಇಆರ್‌ಸಿ ಕಾರ್ಯ ಇನ್ನೂ ಪೂರ್ಣಗೊಂಡಿಲ್ಲ. ಗಣಿ ಬಾಧಿತ ಪ್ರದೇಶಗಳಲ್ಲಿ ಆರೋಗ್ಯ, ಶಿಕ್ಷಣ, ಮೂಲಸೌಕರ್ಯ ಒದಗಿಸುವ ಕ್ರಮಗಳು ಇನ್ನೂ ಆರಂಭಿಕ ಹಂತದಲ್ಲಿವೆ. ಹೀಗಿರುವಾಗಲೇ ಮಿತಿ ಏರಿಸುವುದು ತರವಲ್ಲ' ಎಂದು ಹೇಳಿದೆ.

'ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿಯ ವರದಿಯಂತೆ ಗಣಿಗಾರಿಕೆ ಪ್ರದೇಶಗಳಲ್ಲಿ ಮಾಲಿನ್ಯ ಹೆಚ್ಚಾಗಿದೆ' ಎಂದು ಆತಂಕ ವ್ಯಕ್ತಪಡಿಸಿದೆ.

ಮುಂದಿನ ಪೀಳಿಗೆಗೆ ಸಂಪನ್ಮೂಲ ಉಳಿಯಲಿ: 'ರಾಜ್ಯದಲ್ಲಿ ಸದ್ಯ ಈಗ ಲಭ್ಯವಿರುವುದು 1,023 ದಶಲಕ್ಷ ಟನ್ ಅದಿರು ದಾಸ್ತಾನು ಮಾತ್ರ' ಎಂದು ಮೇಲುಸ್ತುವಾರಿ ಪ್ರಾಧಿಕಾರ ಹೇಳಿದೆ. ಅದನ್ನು ವಾರ್ಷಿಕ 50 ಎಂಟಿಯಂತೆ ಹೊರ ತೆಗೆದರೆ ಕೇವಲ 20 ವರ್ಷಗಳಲ್ಲಿ ಬರಿದಾಗಲಿದೆ. ಸದ್ಯ ಈಗಿನ ಕಾನೂನುಗಳ ಪ್ರಕಾರ ಗಣಿಗಳ ಗುತ್ತಿಗೆ ಅವಧಿಯೇ 50 ವರ್ಷ. ಲಭ್ಯವಿರುವ ಅದಿರು ದಾಸ್ತಾನನ್ನು 50 ವರ್ಷಗಳಿಗೆ ವಿಭಾಗಿಸಬೇಕು. ಅದರಂತೆ ನೋಡಿದರೆ ವಾರ್ಷಿಕ ಅದಿರು ಉತ್ಪಾದನೆಯ ಒಟ್ಟಾರೆ ಪ್ರಮಾಣ 20.46 ಎಂಎಂಟಿ ಆಗಲಿದೆ. ಆದ್ದರಿಂದ ಎಂಪಿಎಪಿಯನ್ನು ಈಗಿನ 50 ಎಂಟಿಗೆ ಬದಲಾಗಿದೆ 20ಎಂಟಿಗೆ ಸೀಮಿತಗೊಳಿಸಬೇಕು ಎಂದು ಪ್ರತಿಪಾದಿಸಿದೆ. ಹೀಗೆ ಮಾಡಿದರೆ ಮಾತ್ರ ಮುಂದಿನ ಪೀಳಿಗೆಗೆ ಅದಿರು ಉಳಿಸಲು ಸಾಧ್ಯ' ಎಂದು ಒತ್ತಾಯಿಸಿದೆ.

ದುಡ್ಡು ಮಾಡುವ ಆಸೆ: ಒಂದು ಟನ್ ಅದಿರಿನ ಮೇಲೆ ಗಣಿ ಮಾಲೀಕರಿಗೆ ₹3 ಸಾವಿರ ಲಾಭ ಸಿಗುತ್ತಿದೆ. ತಮ್ಮ ಗಣಿಗಳಲ್ಲಿರುವ ಅದಿರಿನ ದಾಸ್ತಾನನ್ನು ಆದಷ್ಟು ಬೇಗ ಹೊರ ತೆಗೆದು, ಲಾಭ ಮಾಡಿಕೊಳ್ಳಬೇಕು. ಅದಕ್ಕೆ 50 ವರ್ಷ ಕಾಯಬಾರದು ಎಂಬುದು ಮಾಲೀಕರ ನಿರೀಕ್ಷೆಯಾಗಿದೆ. ಆದ್ದರಿಂದಲೇ ಸದ್ಯದ ಎಂಪಿಎಪಿಯನ್ನು ಹೆಚ್ಚಿಸಬೇಕು ಎಂದು ಗಣಿ ಮಾಲೀಕರು ಆಗ್ರಹಿಸುತ್ತಿದ್ದಾರೆ ಎಂದು ಮೇಲುಸ್ತುವಾರಿ ಪ್ರಾಧಿಕಾರ ಹೇಳಿದೆ.

ಮೇಲುಸ್ತುವಾರಿ ಪ್ರಾಧಿಕಾರ ಎಂದರೇನು?

ಅಕ್ರಮ ಗಣಿಗಾರಿಕೆಯಿಂದ ನಾಶವಾದ ಪರಿಸರದ ಪುನಶ್ಚೇತನಕ್ಕೆ 'ಗಣಿಗಾರಿಕೆ ಪರಿಣಾಮ ವಲಯಕ್ಕಾಗಿ ಸಮಗ್ರ ಪರಿಸರ ಯೋಜನೆ (ಸಿಇಪಿಎಂಐಝಡ್)' ಅನುಷ್ಠಾನಕ್ಕೆ ತರಲು ಕರ್ನಾಟಕ ಗಣಿ ಪರಿಸರ ಪುನಶ್ಚೇತನ ನಿಗಮ (ಕೆಎಂಇಆರ್‌ಸಿ)ವನ್ನು ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್ ಸೂಚನೆ ಮೇರೆಗೆ ಸ್ಥಾಪಿಸಿದೆ. ಇದಕ್ಕಾಗಿ ಮೇಲುಸ್ತುವಾರಿ ಪ್ರಾಧಿಕಾರವನ್ನು ಕೋರ್ಟ್ ರಚಿಸಿದೆ. ಅದರ ಜವಾಬ್ದಾರಿಯನ್ನು ನ್ಯಾಯಮೂರ್ತಿ ಸುದರ್ಶನ್ ರೆಡ್ಡಿ ವಹಿಸಿಕೊಂಡಿದ್ದಾರೆ. ಹೀಗಾಗಿ ಅದಿರು ಉತ್ಪಾದನಾ ಮಿತಿ ಹೆಚ್ಚಳದ ವಿಷಯದಲ್ಲಿ ಪ್ರಾಧಿಕಾರದ ಅಭಿಪ್ರಾಯ ಅತ್ಯಂತ ನಿರ್ಣಾಯಕವಾಗಲಿದೆ.

ਪੰਜਾਬ ਨੈਸ਼ਨਲ ਬੈਂਕ ...भरोसे का प्रतीक! punjab national bank ...the name you can BANK upon!
(A Government of India Undertaking)
ಸಾಮಾನ್ಯ ಆಡಳಿತ ವಿಭಾಗ – ಜೆಡ್‌ಒ: ಹೈದರಾಬಾದ್, 6–1–73, ಎರಡನೇ ಮಹಡಿ, ಸಯೀದ್ ಪ್ಲಾಜಾ, ಲಕಡಿ–ಕಾ–ಪೂಲ್–500004, ಇಮೇಲ್–zohydgad@pnb.co.in ಫೋನ್: (040)–040–24475113/18

ಎಂಪಾನೆಲ್‌ಮೆಂಟ್ ನೋಟಿಸ್

ಪಂಜಾಬ್ ನ್ಯಾಷನಲ್ ಬ್ಯಾಂಕ್, ವಲಯ ಕಚೇರಿ, ಹೈದರಾಬಾದ್ ಇವರು "ವಿವಿಧ ಪ್ರವರ್ಗಗಳ ಕಾಮಗಾರಿಗಳಿಗಾಗಿ ಆರ್ಕಿಟೆಕ್ಟ್ಸ್/ಆರ್ಕಿಟೆಕ್ಚರಲ್ ಸಂಸ್ಥೆಗಳನ್ನು ನಿಯೋಜಿಸಿಕೊಳ್ಳಲು ಅರ್ಜಿಗಳನ್ನು ಆಹ್ವಾನಿಸಿದ್ದಾರೆ."
ಅರ್ಹತಾ ಮಾನದಂಡ ವಿವರಗಳು, ಷರತ್ತು ಮತ್ತು ನಿಬಂಧನೆಗಳು ಹಾಗೂ ಅರ್ಜಿ ನಮೂನೆಗಳು ಬ್ಯಾಂಕ್‌ನ https://www.pnbindia.in/Tender.aspx ವೆಬ್‌ಸೈಟ್‌ನಲ್ಲಿ ಲಭ್ಯವಿದ್ದು, 05.05.2025 ರಂದು 10:00 ಗಂಟೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.
ನಿರ್ದಿಷ್ಟ ನಮೂನೆಯ ದಸ್ತಾವೇಜುಗಳನ್ನು ಸಂಪೂರ್ಣ ಭರ್ತಿ ಮಾಡಿ, ಅವುಗಳೊಂದಿಗೆ ಎಲ್ಲಾ ಪೂರಕ ದಾಖಲಾತಿಗಳನ್ನು ಲಗತ್ತಿಸಿ, 04.06.2025 ರಂದು ಸಂಜೆ 5.00 ಗಂಟೆಯೊಳಗೆ "ಮುಖ್ಯ ಪ್ರಬಂಧಕರು, ಜಿಎಡಿ, ಪಂಜಾಬ್ ನ್ಯಾಷನಲ್ ಬ್ಯಾಂಕ್, ವಲಯ ಕಚೇರಿ: ಹೈದರಾಬಾದ್, 6–1–73, ಎರಡನೇ ಮಹಡಿ, ಸಯೀದ್ ಪ್ಲಾಜಾ, ಲಕಡಿ–ಕಾ–ಪೂಲ್–500004" ವಿಳಾಸಕ್ಕೆ ತಲುಪುವಂತೆ ರವಾನಿಸುವುದು.
ಈಗಾಗಲೇ ಬ್ಯಾಂಕ್‌ನ ಪಟ್ಟಿಯಲ್ಲಿರುವ ಎಲ್ಲಾ ಆರ್ಕಿಟೆಕ್ಟ್ಸ್/ಆರ್ಕಿಟೆಕ್ಚರಲ್ ಸಂಸ್ಥೆಗಳು, ತಮ್ಮ ನಿಯೋಜನಾ ಪರಿಗಣನೆಯನ್ನು ಮುಂದುವರಿಸಲು ಮತ್ತೊಮ್ಮೆ ಹೊಸದಾಗಿ ಅರ್ಜಿ ಸಲ್ಲಿಸಬೇಕು. ನೂತನ ಪಟ್ಟಿಯು ಅನುಮೋದನೆಗೊಂಡ ಬಳಿಕ, ಪ್ರಸ್ತುತ ಚಾಲ್ತಿಯಲ್ಲಿರುವ ಪಟ್ಟಿಯು ಸ್ಥಗಿತಗೊಳ್ಳುತ್ತದೆ.
ಈ ಮೇಲ್ಕಂಡ ಕಾಮಗಾರಿಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿ/ಸ್ಪಷ್ಟೀಕರಣ ಎದುರಾದಲ್ಲಿ, ಅಂತಹವುಗಳನ್ನು ಬ್ಯಾಂಕ್‌ನ ಮೇಲ್ಕಂಡ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ, ಹಾಗಾಗಿ ಆಗಾಗ್ಗೆ ಬ್ಯಾಂಕ್‌ನ ವೆಬ್‌ಸೈಟ್‌ಗೆ ಭೇಟಿ ನೀಡುತ್ತಿರಬೇಕು.
ಮುಖ್ಯ ಪ್ರಬಂಧಕರು

ತಾಂತ್ರಿಕ ಸಿಬ್ಬಂದಿ ನೇಮಕಾತಿಗೆ ಆಗ್ರಹ

ಬೆಂಗಳೂರು: ಸಾರಿಗೆ ನಿಗಮಗಳಲ್ಲಿ ತಾಂತ್ರಿಕ ಸಿಬ್ಬಂದಿಯ ಕೊರತೆ ಇದ್ದು, ಶೀಘ್ರ ನೇಮಕಾತಿ ಮಾಡಲು ಸಚಿವ ಸಂಪುಟದ ಅನುಮೋದನೆ ಪಡೆಯಬೇಕು ಎಂದು ಕೆಎಸ್‌ಆರ್‌ಟಿಸಿ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಆಗ್ರಹಿಸಿದೆ.

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರಿಗೆ ಈ ಕುರಿತು ಪತ್ರ ಬರೆದಿದೆ.

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ : ಕೇಂದ್ರ ಕಚೇರಿ, ಕಲಬುರಗಿ
(ಉಗ್ರಾಣ ಮತ್ತು ಖರೀದಿ ಇಲಾಖೆ)
ಸಂ.ಕಕರಸಾ/ಕೇಕ/ಉ&ಮಖಿನಿ/ 01 /2024–25 ದಿನಾಂಕ: 03.05.2025
ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ– ಪ್ರೊಕ್ಯುರ್‌ಮೆಂಟ್ ಮೋಡ್‌ನಲ್ಲಿ ಮಾತ್ರ)
ಈ ಕೆಳಗಿನ ಟೆಂಡರನ್ನು ಪೂರೈಸಲು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ (ಪ್ರಿ ಕ್ವಾಲಿಫಿಕೇಶನ್ ಮತ್ತು ಕಮರ್ಷಿಯಲ್) ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಟೆಂಡರ್ ಸಂ. ಮತ್ತು ದಿನಾಂಕ	ಟೆಂಡರ್ ಹೆಸರು	ಟೆಂಡರ್‌ನ ಅಂದಾಜು ಮೌಲ್ಯ	ಟೆಂಡರ್‌ನಲ್ಲಿ ಪಾಲ್ಗೊಳ್ಳಲು ಕೊನೆಯ ದಿನಾಂಕ
KKRTC/2025-26/IND0134	Procurement of Public Seating 12 / 10 Seater Bench Made of Stainless Steel	Rs. 02.25 Crores	19.05.2025 at 15:00 hrs.
G-02/25-26 Date: 03.05.25	Procurement of Thermal Paper Roll for ETMs	Rs. 02.95 Crores	19.05.2025 at 15:00 hrs.
G-03/25-26 Date: 03.05.25	Procurement of GHT Bolt & GHT U Bolt with Nyloc Nuts	Rs. 26.34 Lakhs	19.05.2025 at 15:00 hrs.

ಟೆಂಡರ್, ನೊಂದಣಿ, ಟೆಂಡರ್ ಫಾರ್ಮ ದಾಖಲಾತಿಗಳ ಎಲ್ಲಾ ವಿವರಗಳು https://kppp.karnataka.gov.in/#/portal/portal-home ನಲ್ಲಿ ಲಭ್ಯವಿದೆ. ಅಗತ್ಯವಿದ್ದರೆ ಹೆಚ್ಚಿನ ಮಾಹಿತಿಗಾಗಿ cospnekrtc@gmail.com ಅಥವಾ support@eprochelpdesk.com ಗೆ ಇ–ಮೇಲ್ ಮುಖಾಂತರ ಸಂಪರ್ಕಿಸಬಹುದಾಗಿದೆ. ಪರಿಭಾಷೆಯಲ್ಲಿನ ಬದಲಾವಣೆಗಳಿಗೆ ಸಂಬಂಧಿಸಿದಂತೆ ಯಾವುದೇ ಅಡೆಂಡಮ್ /ಕೊರಿಜೆಂಡಮ್ ಮತ್ತು ಟೆಂಡರ್ ಷರತ್ತು ಮತ್ತು ನಿಭಂಧನೆಗಳು, ಸ್ಪೆಸಿಫಿಕೇಶನ್ ಮತ್ತು ಘಟನೆಗಳ ಕ್ಯಾಲೆಂಡರ್ ಇತ್ಯಾದಿಗಳನ್ನು ಇ–ಪ್ರೊಕ್ಯುರ್ಮೆಂಟ್ ಪೋರ್ಟಲ್ ಮೂಲಕ ಮಾತ್ರ ಅಪ್ಲೋಡ್ ಮಾಡಲಾಗುತ್ತದೆ.
ಸಹಿ/– ಉಗ್ರಾಣ ಮತ್ತು ಖರೀದಿ ನಿಯಂತ್ರಕರು.
(ಟೆಂಡರ್ ಆಹ್ವಾನಿಸುವ ಪ್ರಾಧಿಕಾರಸ್ಥರು)
ವಾ.ಸಾ.ಸಂ.ಇ/ಕಲಬುರಗಿ/79/ಕೆ.ಎಸ್.ಎಂ.ಸಿ.&ಎ/2025–26

'ಅಂಬೇಡ್ಕರ್ ಸೋಲಿಗೆ ಸಾವರ್ಕರ್ ಕಾರಣ ಎಂದು ಸಾಬೀತುಪಡಿಸಲಿ'

ಬೆಂಗಳೂರು: 'ತಮ್ಮನ್ನು ಚುನಾವಣೆಯಲ್ಲಿ ಸೋಲಿಸಿದ್ದು ಆರ್‌ಎಸ್‌ಎಸ್ ಮತ್ತು ಸಾವರ್ಕರ್ ಎಂದು ಬಾಬಾಸಾಹೇಬ್ ಅಂಬೇಡ್ಕರ್ ಹೇಳಿದ್ದಾರೆ ಎಂಬುದನ್ನು ಕಾಂಗ್ರೆಸ್ ನಾಯಕರು ಸಾಬೀತು ಮಾಡಲಿ. ಇಲ್ಲವೇ ರಾಜಕೀಯ ನಿವೃತ್ತಿ ಪಡೆಯಲಿ' ಎಂದು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಸವಾಲು ಹಾಕಿದರು.

ಸುದ್ದಿಗಾರರ ಜತೆ ಭಾನುವಾರ ಮಾತನಾಡಿದ ಅವರು, 'ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಜಯರಾಂ ರಮೇಶ್, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಸಚಿವ ಪ್ರಿಯಾಂಕ್ ಖರ್ಗೆ ಪದೇ ಪದೇ ಈ ವಿಷಯ ಪ್ರಸ್ತಾಪಿಸಿದ್ದಾರೆ. ಅಂಬೇಡ್ಕರ್ ಅವರೇ ಈ ಬಗ್ಗೆ ಪತ್ರ ಬರೆದಿದ್ದಾರೆ ಎಂದು ಹೇಳುತ್ತಾರೆ. ಈ ನಾಲ್ವರೂ ಚರ್ಚೆಗೆ ಬರಲಿ' ಎಂದರು.

'ಈ ನಾಲ್ವರೂ, ಅಂಬೇಡ್ಕರ್ ಅವರು ಹಾಗೆ ಹೇಳಿದ್ದಾರೆ ಎಂದು ಸಾಬೀತು ಮಾಡಿದರೆ ನಾನು ರಾಜಕೀಯದಿಂದ ನಿವೃತ್ತಿಯಾಗಲು ಸಿದ್ಧ. ಮಲ್ಲಿಕಾರ್ಜುನ ಖರ್ಗೆ ಮತ್ತು ಅವರ ಮಗ ಪ್ರಿಯಾಂಕ್ ಖರ್ಗೆ ಡಬಲ್ ಎಂಜಿನ್ ಸುಳ್ಳುಗಾರರು. ಅವರಿಂದ ದಲಿತರಿಗೆ ಅನ್ಯಾಯವೇ ಆಗಿದೆ' ಎಂದರು.

'ಮೀಸಲಾತಿಯನ್ನು ಆರ್‌ಎಸ್‌ಎಸ್ ಮತ್ತು ಬಿಜೆಪಿ ವಿರೋಧಿಸಿತ್ತು ಎಂದು ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ. ಮೀಸಲಾತಿ ಪರ ಎನ್ನುವ ಕಾಂಗ್ರೆಸ್ ಸರ್ಕಾರಕ್ಕೆ, ರಾಜ್ಯದಲ್ಲಿ ಇನ್ನೂ ಒಳಮೀಸಲಾತಿ ಜಾರಿಗೆ ತರಲು ಸಾಧ್ಯವಾಗಿಲ್ಲ' ಎಂದರು.

'ಸುಹಾಸ್ ಹತ್ಯೆಗೆ ಪೊಲೀಸರಿಂದಲೇ ಮಾಹಿತಿ'

'ಮಂಗಳೂರಿನ ಹಿಂದೂ ಕಾರ್ಯಕರ್ತನ ಹತ್ಯೆಗೆ ಪೊಲೀಸರೇ ಮಾಹಿತಿ ನೀಡಿದಂತಿದೆ. ಹತ್ಯೆಯ ಹಿಂದಿನ ದಿನ ಸುಹಾಸ್‌ಗೆ ಬೆದರಿಕೆ ಬಂದಿತ್ತು. ಆ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಿದಾಗ, ರಕ್ಷಣೆಗಾಗಿ ಸುಹಾಸ್ ಇರಿಸಿಕೊಂಡಿದ್ದ ವಸ್ತುಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದರು. ಅವರಿಗೆ ರಕ್ಷಣೆ ನೀಡುವ ಬದಲು, ಹಂತಕರಿಗೆ ನೆರವು ನೀಡಿದಂತಿದೆ' ಎಂದು ಛಲವಾದಿ ನಾರಾಯಣಸ್ವಾಮಿ ಆರೋಪಿಸಿದರು.

'ಹತ್ಯೆಗೆ ಸಂಬಂಧಿಸಿದಂತೆ ತಕ್ಷಣದಲ್ಲೇ ಎಫ್‌ಐಆರ್ ದಾಖಲಿಸಿಲ್ಲ. ಇಬ್ಬರು ಹಿಂದೂಗಳನ್ನು ಬಂಧಿಸಿ, ಅನಂತರ ದಾಖಲಿಸಲಾಗಿದೆ. ಹಿಂದೂಗಳಿಬ್ಬರ ಹೆಸರನ್ನು ಸೇರಿಸುವ ಉದ್ದೇಶದಿಂದಲೇ ಎಫ್‌ಐಆರ್ ದಾಖಲು ಮಾಡುವಲ್ಲಿ ಪೊಲೀಸರು ವಿಳಂಬ ಮಾಡಿದ್ದಾರೆ ಎಂದು ಜನ ಮಾತನಾಡಿಕೊಳ್ಳುತ್ತಿದ್ದಾರೆ' ಎಂದರು.

'ಫಾಝಿಲ್ ಹತ್ಯೆಗೆ ಸಂಬಂಧಿಸಿದಂತೆ ಅವರ ಕುಟುಂಬಕ್ಕೆ ನೀಡಲಾಗಿದ್ದ ಪರಿಹಾರದ ಹಣದಲ್ಲಿಯೇ ಸುಪಾರಿ ನೀಡಿದ್ದಾರೆ. ಈ ಬಗ್ಗೆ ತನಿಖೆ ಆಗಬೇಕು' ಎಂದು ಆಗ್ರಹಿಸಿದ್ದಾರೆ.

ಜಾತಿ ತಾರತಮ್ಯದ ದತ್ತಾಂಶ ಸಂಗ್ರಹ

ಒಂದನೇ ಪುಟದಿಂದ...

ಇದರಲ್ಲಿ 15 ಸ್ವರೂಪದ ತಾರತಮ್ಯಗಳನ್ನು ಆಯ್ಕೆ ಮಾಡಲು ಅವಕಾಶವಿದೆ.

ಸಮೀಕ್ಷೆಗೆ ಒಳಪಡುವವರು ತಾವು ಎದುರಿಸಿದ ತಾರತಮ್ಯದ ಸ್ವರೂಪವನ್ನು ಆಯ್ಕೆ ಮಾಡಬಹುದು. ಅದರ ಉಲ್ಲೇಖ ಉಪವಿಂಡೋವಿನ ಪಟ್ಟಿಯಲ್ಲಿ ಇಲ್ಲದಿದ್ದರೆ, 'ಹೇಗೆ ತಾರತಮ್ಯಕ್ಕೆ ಗುರಿ ಮಾಡಲಾಯಿತು' ಎಂಬುದನ್ನು ವಿವರಿಸಲೂ ಅವಕಾಶವಿದೆ.

ಸಮೀಕ್ಷೆ ನಡೆಸುವ ಶಿಕ್ಷಕರು ಮತ್ತು ಸ್ಥಳೀಯ ಸಂಸ್ಥೆಗಳ ಇತರ ಸಿಬ್ಬಂದಿಗೆ ಈಗಾಗಲೇ ತರಬೇತಿ ಹಾಗೂ ಆ್ಯಪ್ ಬಳಕೆ ಪ್ರಾತ್ಯಕ್ಷಿಕೆ ನೀಡಲಾಗಿದೆ.

'ಪರಿಶಿಷ್ಟ ಜಾತಿಯ ಜನರ ಮೇಲೆ ನಡೆಯುವ ತಾರತಮ್ಯದ ಸ್ವರೂಪ, ಅದರ ತೀವ್ರತೆಯನ್ನು ಅರ್ಥಮಾಡಿಕೊಳ್ಳಲು ಇದು ನೆರವಾಗಲಿದೆ. ಹೀಗಾಗಿ ತಾರತಮ್ಯ ಕುರಿತಾದ ಪ್ರಶ್ನೆಗಳನ್ನು ಸರಿಯಾಗಿ ವಿವರಿಸಬೇಕು. ಸರಿಯಾದ ಮಾಹಿತಿಯನ್ನು ಕಲೆಹಾಕಬೇಕು. ಸಮೀಕ್ಷೆಗೆ ಒಳಪಡುವವರು ಈ ಮಾಹಿತಿ ಹಂಚಿಕೊಳ್ಳಲು ಹಿಂದೇಟು ಹಾಕಬಹುದು. ಅದರ ಮಹತ್ವವನ್ನು ಅರ್ಥಮಾಡಿಸಿ, ಮಾಹಿತಿಯನ್ನು ಕಲೆಹಾಕಬೇಕು ಎಂದು ತರಬೇತಿಯ ವೇಳೆ ಒತ್ತಿ ಹೇಳಿದ್ದಾರೆ' ಎಂದು ಮೂಲಗಳು ತಿಳಿಸಿವೆ.

'ಹಿಂದುಳಿದಿರುವಿಕೆಯ ವ್ಯಾಖ್ಯಾನಕ್ಕೆ ಅನುಕೂಲ'

ಒಂದನೇ ಪುಟದಿಂದ...

'ಪರಿಶಿಷ್ಟ ಜಾತಿಗಳಲ್ಲೇ ಸ್ಪೃಶ್ಯ ಮತ್ತು ಅಸ್ಪೃಶ್ಯರು ಇದ್ದಾರೆ. ಈ ಸಮುದಾಯಗಳು ಒಂದೇ ಕೇರಿ ಅಥವಾ ಕಾಲೊನಿಯಲ್ಲಿ ವಾಸಿಸುವ, ಪರಸ್ಪರ ಸಾಮಾಜಿಕ ಮತ್ತು ವೈವಾಹಿಕ ಸಂಬಂಧ ಇರಿಸಿಕೊಳ್ಳುವ ಉದಾಹರಣೆ ಇಲ್ಲವೇ ಇಲ್ಲ. ತಾರತಮ್ಯದ ಸ್ವರೂಪ ಕುರಿತು ದತ್ತಾಂಶ ಕಲೆಹಾಕಿದರೆ, ಪರಿಶಿಷ್ಟ ಜಾತಿಗಳಲ್ಲೇ ಅತ್ಯಂತ ಹಿಂದುಳಿದಿರುವವರು ಯಾರು ಎಂಬುದು ಗೊತ್ತಾಗಲಿದೆ. ಜತೆಗೆ ಪ್ರಬಲ ಜಾತಿಗಳೆಂದು ಗುರುತಿಸಲಾಗುವ ಸಮುದಾಯಗಳಿಂದ ಎದುರಿಸುವ ತಾರತಮ್ಯದ ಸ್ವರೂಪವೂ ಗೊತ್ತಾಗಲಿದೆ' ಎಂದು ವಿವರಿಸಿದರು.

'ನಮ್ಮಲ್ಲಿ ಜಾತಿ ತಾರತಮ್ಯ ಇಲ್ಲ ಎಂದು ವಾದಿಸುವವರು ಇದ್ದಾರೆ. ಉತ್ತರ ಭಾರತದ ರಾಜ್ಯಗಳಿಗೆ ಹೋಲಿಸಿದರೆ, ನಮ್ಮಲ್ಲಿ ತಾರತಮ್ಯ ಕಡಿಮೆ ಇದೆ. ಆದರೆ ಜೀವಂತವಾಗಿದೆ. ಗ್ರಾಮೀಣ ಪ್ರದೇಶದಲ್ಲಿ ತಾರತಮ್ಯದ ಸ್ವರೂಪ ಒಂದಾದರೆ, ನಗರಗಳಲ್ಲಿ ಮತ್ತೊಂದು. ನಗರದಲ್ಲಿ ನೀವು ಬಾಡಿಗೆಗೆ ಮನೆ ಹುಡುಕುತ್ತಾ ಹೋದರೆ ನಿಮ್ಮ ಆಹಾರ ಪದ್ಧತಿ, ತಂದೆಯ ಹೆಸರು ಕೇಳಿ ಜಾತಿಯನ್ನು ಪತ್ತೆ ಮಾಡುತ್ತಾರೆ. ಮನೆ ನೀಡಬೇಕೇ ಅಥವಾ ಬೇಡವೇ ಎಂಬುದನ್ನು ಜಾತಿ ಆಧಾರದಲ್ಲಿ ನಿರ್ಧರಿಸುತ್ತಾರೆ. ಈ ಎಲ್ಲ ರೀತಿಯ ತಾರತಮ್ಯವನ್ನು ಅರ್ಥಮಾಡಿಕೊಳ್ಳಲು ಸಮೀಕ್ಷೆಯ ಈ ಭಾಗ ನೆರವಾಗಲಿದೆ. ಒಳಮೀಸಲಾತಿ ಮತ್ತು ಇತರ ಕೆಲ ಸುಧಾರಣೆಗಳ ಕುರಿತಾದ ಶಿಫಾರಸುಗಳನ್ನು ಈ ಅಂಶ ಪ್ರಭಾವಿಸಲಿದೆ' ಎಂದು ಮಾಹಿತಿ ನೀಡಿದರು.

ಸಮೀಕ್ಷೆಯಲ್ಲಿ ಕೇಳಲಾಗುವ ಆಯ್ಕೆಗಳು

- ಇತರ ಜಾತಿ ಸಮುದಾಯಗಳ ಸದಸ್ಯರೊಂದಿಗೆ ಆಹಾರ ಸೇವಿಸುವುದಕ್ಕೆ ನಿಷೇಧ
- ಹಳ್ಳಿಗಳ ಟೀ ಸ್ಟಾಲ್‌ಗಳಲ್ಲಿ ಪ್ರತ್ಯೇಕ ಲೋಟ/ಕಪ್ ನೀಡುವುದು
- ರೆಸ್ಟೋರೆಂಟ್‌ಗಳಲ್ಲಿ ಪ್ರತ್ಯೇಕ ಆಸನ ನೀಡಿ, ಪ್ರತ್ಯೇಕತೆ ಮಾಡುವುದು
- ಹಳ್ಳಿಗಳಲ್ಲಿ ಹಬ್ಬ, ಕಾರ್ಯಕ್ರಮಗಳಲ್ಲಿ ಆಸನ ಮತ್ತು ಆಹಾರ ವ್ಯವಸ್ಥೆಯಲ್ಲಿ ಪ್ರತ್ಯೇಕತೆ
- ಸಾರ್ವಜನಿಕ ಪೂಜಾ ಸ್ಥಳಗಳ ಪ್ರವೇಶಕ್ಕೆ ನಿಷೇಧ
- ಉಚ್ಚ ಜಾತಿಯ ಸದಸ್ಯರ ಎದುರಿಗೆ ಚಪ್ಪಲಿ ಧರಿಸುವುದು ಅಥವಾ ಛತ್ರಿ ಉಪಯೋಗಿಸುವುದಕ್ಕೆ ಪ್ರತಿಬಂಧ
- ಬೇರೆ ಜಾತಿಯವರ ಮನೆ ಪ್ರವೇಶಕ್ಕೆ ಪ್ರತಿಬಂಧ
- ಸಾರ್ವಜನಿಕ ರಸ್ತೆಗಳ ಬಳಕೆಯ ಮೇಲೆ ಪ್ರತಿಬಂಧಗಳು
- ಸಮಾಧಿ/ಸ್ಮಶಾನ ಸ್ಥಳಗಳಲ್ಲಿ ಪ್ರತ್ಯೇಕತೆ
- ಸಾರ್ವಜನಿಕ ಸವಲತ್ತು/ಸಂಪನ್ಮೂಲಗಳ (ಬಾವಿ, ಕೊಳ, ದೇವಾಲಯ, ಇತ್ಯಾದಿ) ಬಳಕೆಗೆ ಪ್ರತಿಬಂಧಗಳು
- ಶಾಲೆಗಳಲ್ಲಿ ಆಸನಗಳ ವ್ಯವಸ್ಥೆಯಲ್ಲಿ ಭೇದಭಾವ ಹಾಗೂ ಪ್ರತ್ಯೇಕತೆ
- ಜೀತ ಹಾಗೂ ಋಣಬಂಧಿತ ಕಾರ್ಮಿಕ ಪದ್ಧತಿ
- ಬಲವಂತದ ಕರ್ತವ್ಯ ನಿರ್ವಹಿಸಲು ನಿರಾಕರಿಸಿದ್ದಕ್ಕೆ ಉಚ್ಚ ಸಮುದಾಯಗಳಿಂದ ಸಾಮಾಜಿಕ ಬಹಿಷ್ಕಾರ
- ನೀವು ಯಾವುದಾದರೂ ವಿಮುಕ್ತ ಬುಡಕಟ್ಟು (ಅಪರಾಧಿಕ ಬುಡಕಟ್ಟು) ಸಮುದಾಯಕ್ಕೆ ಸೇರಿದವರೇ?
- ಮೇಲಿನ ಯಾವುವೂ ಅಲ್ಲದಿದ್ದರೆ, ತಾರತಮ್ಯದ ಇತರೆ ಸ್ವರೂಪ

ನಿರೀಕ್ಷೆಗಳಲ್ಲಿ ಬದುಕುವ ಪೋಷಕರು ನಿಮ್ಮ ಮಗುವಿನಲ್ಲಿ ನಂಬಿಕೆ ಇಡುವುದನ್ನು ಎಂದಿಗೂ ಮರೆಯಬೇಡಿ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ಸಮಾಜ ವಿಜ್ಞಾನ

ಅಧ್ಯಾಯ:1 ಭಾರತಕ್ಕೆ ಯುರೋಪಿಯನ್ನರ ಆಗಮನ

12) ಭೂಮಿಯ ಮೇಲಿನ ಅಧಿಪತ್ಯಕ್ಕೆ ಬದಲು ಸಮುದ್ರದ ಮೇಲಿನ ಏಕಸ್ವಾಮ್ಯಕ್ಕಾಗಿ ನೌಕಾಶಕ್ತಿಯನ್ನು ಬಲಪಡಿಸುವ 'ನೀಲಿ ನೀರಿನ ನೀತಿ' (Blue Water Policy)ಯನ್ನು ಜಾರಿಗೆ ತಂದವನು ಯಾರು?

ಉತ್ತರ:– ಫ್ರಾನ್ಸಿಸ್ಕೊ ಡಿ ಆಲ್ಮೇಡ

13) ಭಾರತದಲ್ಲಿ ಪೋರ್ಚುಗೀಸ್ ಸಾಮ್ರಾಜ್ಯದ ನಿಜವಾದ ಸ್ಥಾಪಕನೆಂದು ಪ್ರಸಿದ್ಧನಾಗಿದ್ದನಾವ ಯಾರು?

ಉತ್ತರ:– ಆಲ್ಫೋನ್ಸೊ–ಡಿ–ಅಲ್ಬುಕರ್ಕ್

14) 1510ರಲ್ಲಿ ಬಿಜಾಪುರದ ಸುಲ್ತಾನನಿಂದ ಗೋವಾವನ್ನು ಗೆದ್ದುಕೊಂಡು ಪೋರ್ಚುಗೀಸರ ಆಡಳಿತ ಕೇಂದ್ರವಾಗಿ ಪರಿವರ್ತಿಸಿದವನು ಯಾರು?

ಉತ್ತರ:– ಆಲ್ಫೋನ್ಸೊ–ಡಿ–ಅಲ್ಬುಕರ್ಕ್

15) ಭಾರತದಲ್ಲಿ ಪೋರ್ಚುಗೀಸರ ಏಕಸ್ವಾಮ್ಯತೆಯು ಯಾವಾಗ ಶಿಥಿಲಗೊಂಡಿತು?

ಉತ್ತರ:– 17ನೇ ಶತಮಾನದವರೆಗೂ ಪೋರ್ಚುಗೀಸರು ವ್ಯಾಪಾರಿ ಏಕಸ್ವಾಮ್ಯತೆಯನ್ನು ಹೊಂದಿದ್ದರು. ಭಾರತದೊಳಗೆ ಡಚ್ ಮತ್ತು ಇಂಗ್ಲಿಷರ ಪ್ರವೇಶದೊಂದಿಗೆ ಪೋರ್ಚುಗೀಸರ ಏಕಸ್ವಾಮ್ಯತೆಯು ಶಿಥಿಲಗೊಂಡಿತು.

16) ಡಚ್ ಈಸ್ಟ್ ಇಂಡಿಯಾ ಕಂಪನಿ ಯಾವಾಗ ವ್ಯಾಪಾರಕ್ಕಾಗಿ ಭಾರತಕ್ಕೆ ಬಂತು?

ಉತ್ತರ:– 1602ರಲ್ಲಿ ಡಚ್ ಈಸ್ಟ್ ಇಂಡಿಯಾ ಕಂಪೆನಿಯು ಭಾರತಕ್ಕೆ ವ್ಯಾಪಾರಕ್ಕಾಗಿ ಬಂತು.

17) ಡಚ್ಚರ ವ್ಯಾಪಾರಿ ಕೇಂದ್ರಗಳು ಯಾವುವು?

ಉತ್ತರ:– ಸೂರತ್, ಬ್ರೋಚ್, ಕಾಂಬೆ, ಕೊಚ್ಚಿನ್, ನಾಗಪಟ್ಟಣ, ಮಚಲೀಪಟ್ಟಣ ಹಾಗೂ ಚಿನ್ಸೂರ

18) ಕರಿಮೆಣಸಿನ ಆಸೆಯಿಂದ ವಿದೇಶಿಯರು ನಡೆಸಿದ್ದ ನಿರಂತರ ಆಕ್ರಮಣವನ್ನು ಮತ್ತು ಸಾಮ್ರಾಜ್ಯದಾಹವನ್ನು ಮೆಟ್ಟಿನಿಂತ ವೈನಾಡ್ ಅರಸ ಯಾರು?

ಉತ್ತರ:– ಮಾರ್ತಾಂಡ ವರ್ಮ

20) 'ಡಚ್ಚರ ವಿರುದ್ಧ ರಣತಂತ್ರ ರೂಪಿಸಿದ ಮಹಾರಾಜ, ಡಚ್ಚರ ಏಕಸ್ವಾಮ್ಯ ಮುರಿದು ಅವರ ಏಕಸ್ವಾಮ್ಯಕ್ಕೆ ಕೊಳ್ಳಿ ಇಟ್ಟ ಮಾರ್ತಾಂಡ ವರ್ಮ' ಈ ಹೇಳಿಕೆಯನ್ನು ಹೇಗೆ ಸಮರ್ಥಿಸುವಿರಿ?

ಉತ್ತರ:– ರಾಮವರ್ಮನ ನಂತರ ತನ್ನ 24ನೇ ವಯಸ್ಸಿನಲ್ಲಿ ಮಾರ್ತಾಂಡ ವರ್ಮ ಪಟ್ಟಕ್ಕೆ ಬಂದನು. ವೈನಾಡ್ ಸಂಸ್ಥಾನದ ಗಡಿಯನ್ನು ವಿಸ್ತರಿಸಲು 50 ಸಾವಿರ ಸೈನಿಕರ ಸೈನ್ಯವನ್ನು ಕಟ್ಟಿದನು. ಮೆಣಸು ಬೆಳೆಯುವ ಪ್ರದೇಶಗಳನ್ನು ತನ್ನ ಕೈವಶ ಮಾಡಿಕೊಂಡನು. ಅದಾಗಲೇ ಕರಿಮೆಣಸಿನ ವ್ಯಾಪಾರದಲ್ಲಿ ಹಿಡಿತ ಸಾಧಿಸುತ್ತಿದ್ದ ಡಚ್ಚರನ್ನು ಸದೆಬಡಿಯಲು ಅನೇಕ ರಣತಂತ್ರಗಳನ್ನು ಮಾರ್ತಾಂಡ ವರ್ಮನು ಹೆಣೆದನು. ಸುತ್ತಮುತ್ತಲಿನ ಪಾಳೆಗಾರರು ಮತ್ತು ಸಂಸ್ಥಾನಿಕರನ್ನು ತನ್ನ ಹಿಡಿತದಲ್ಲಿಟ್ಟುಕೊಂಡು ಅವರನ್ನು ಡಚ್ಚರ ವಿರುದ್ಧ ನಿಲ್ಲಿಸಿದನು. ಕಾಯಂಕುಳಂ, ಕೊಚ್ಚಿ, ಪುರಕ್ಕಾಡ್ ಮತ್ತು ವಡಕ್ಕುಂಕೂರ್ ಸಂಸ್ಥಾನಗಳ ಜೊತೆಗೂಡಿ ಡಚ್ ಸೇನೆಯು ತಿರುವಾಂಕೂರಿನ ಮೇಲೆ ಆಕ್ರಮಣ ಮಾಡಿದಾಗ ಮಾರ್ತಾಂಡ ವರ್ಮನ ಪಡೆ ಡಚ್ ಕೂಟವನ್ನು ಸೋಲಿಸಿ ನೆಡುಮಂಗಡ ಮತ್ತು ಕೊಟ್ಟಾರಕರ ಎಂಬ ವ್ಯಾಪಾರಿ ಕೇಂದ್ರವನ್ನು ವಶಪಡಿಸಿಕೊಂಡಿತು. ಅಲ್ಲದೆ ಮಾರ್ತಾಂಡ ವರ್ಮನು "ನಾವೆಂದೂ ಮೆಣಸಿನ ವ್ಯಾಪಾರದ ಹಕ್ಕನ್ನು ಪರಕೀಯರಿಗೆ ಬಿಟ್ಟು ಕೊಡೆವು" ಎಂದು ಡಚ್ಚರಿಗೆ ಖಾರವಾಗಿ ಪತ್ರ ಬರೆದನು. 1741ರಲ್ಲಿ ಡಚ್ ಈಸ್ಟ್ ಇಂಡಿಯಾ ಕಂಪನಿ ಕೊಟ್ಟಾರಕರ ಸಂಸ್ಥಾನವನ್ನು ಮುಂದಿಟ್ಟುಕೊಂಡು ತಿರುವಾಂಕೂರಿನ ಮೇಲೆ ಯುದ್ಧವನ್ನು ಸಾರಿತು. ಡಚ್ಚರ ಜೊತೆಗೆ ಸ್ಥಳೀಯ ಸಂಸ್ಥಾನಗಳೂ ಸೇರಿಕೊಂಡಿದ್ದರು. ಆದರೆ ಮಾರ್ತಾಂಡ ವರ್ಮನ ಸೈನ್ಯ ಆ ದಾಳಿಯನ್ನು ಸಮರ್ಥವಾಗಿ ಹಿಮ್ಮೆಟ್ಟಿಸಿತು. ಡಚ್ ಪಡೆಗಳು ಕೊಚ್ಚಿನ್‌ಗೆ ಹಿಂತಿರುಗಿದವು. ಆದರೆ ಡಚ್ಚರು ಸಿಲೋನಿನಿಂದ ಮತ್ತಷ್ಟು ಪಡೆಗಳನ್ನು ಕರೆಸಿಕೊಂಡು ಮಾರ್ತಾಂಡ ವರ್ಮನ ಮೇಲೆ ದಂಡೆತ್ತಿ ಬಂದರು.

1741ರಲ್ಲಿ ಕೊಳಚ್ಚಲ್ ಎಂಬಲ್ಲಿ ಮಾರ್ತಾಂಡ ವರ್ಮ ಮತ್ತು ಡಚ್ಚರ ನಡುವೆ ನಾಲ್ಕು ದಿನಗಳ ಕಾಲ ಭೀಕರ ಕದನ ನಡೆಯಿತು. ಅಂತಿಮವಾಗಿ ತಿರುವಾಂಕೂರು ಸೈನ್ಯ ಯುದ್ಧದಲ್ಲಿ ಮೇಲುಗೈ ಸಾಧಿಸಿತು. ಡಚ್ಚರು ಅಪಾರ ಪ್ರಮಾಣದಲ್ಲಿ ನಷ್ಟವನ್ನು ಅನುಭವಿಸಿದರು. ಅಂತಿಮವಾಗಿ 1753ರ ಆಗಸ್ಟ್ 15ರಂದು ನಡೆದ ಒಪ್ಪಂದದಲ್ಲಿ ಡಚ್ ಪಡೆಗಳು ತಮ್ಮ ಸಂಪೂರ್ಣ ಅಧಿಕಾರವನ್ನು ತಿರುವಾಂಕೂರಿಗೆ ಒಪ್ಪಿಸಿ ಶರಣಾದವು. ಈ ರೀತಿ ಡಚ್ಚರ ವಿರುದ್ಧ ರಣತಂತ್ರ ರೂಪಿಸಿದ ಮಹಾರಾಜ, ಡಚ್ಚರ ಏಕಸ್ವಾಮ್ಯ ಮುರಿದು ಅವರ ಏಕಸ್ವಾಮ್ಯಕ್ಕೆ ಕೊಳ್ಳಿ ಇಟ್ಟ ಮಾರ್ತಾಂಡ ವರ್ಮ ಎಂದು ಪ್ರಸಿದ್ಧನಾದ

21) ಯಾವ ವರ್ಷ ಬ್ರಿಟನ್ ರಾಣಿ ಈಸ್ಟ್ ಇಂಡಿಯಾ ಕಂಪನಿಗೆ ವ್ಯಾಪಾರ ನಡೆಸಲು ಪರವಾನಿಗೆ ನೀಡಿದಳು? ಈ ಪರವಾನಿಗೆ ಎಷ್ಟು ವರ್ಷಗಳಿಗಾಗಿ ನೀಡಲಾಗಿತ್ತು?

ಉತ್ತರ:– ಇಂಗ್ಲೆಂಡಿನ ಎಲಿಜಬೆತ್ ರಾಣಿಯು ಸಾ. ಶ. 1600 ಡಿಸೆಂಬರ್ 31ರಂದು ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಗೆ ಪೂರ್ವ ದೇಶಗಳೊಂದಿಗೆ ವ್ಯಾಪಾರ ನಡೆಸಲು 15 ವರ್ಷಗಳ ಪರವಾನಗಿ ನೀಡಿದಳು.

22) ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಗೆ ಭಾರತದಲ್ಲಿ ವ್ಯಾಪಾರಿ ದಾಸ್ತಾನು ಮಳಿಗೆ ಆರಂಭಿಸಲು ಅನುಮತಿ ಕೊಟ್ಟವರು ಯಾರು?

ಉತ್ತರ:– ಮೊಘಲ್ ಸಾಮ್ರಾಟ ಜಹಾಂಗೀರ

23) ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಯು ಭಾರತದಲ್ಲಿ ಮೊದಲ ವ್ಯಾಪಾರಿ ದಾಸ್ತಾನು ಮಳಿಗೆ ಎಲ್ಲಿ ಆರಂಭಿಸಿತು?

ಉತ್ತರ:– ಸೂರತ್

24) 1617ರಲ್ಲಿ ಇಂಗ್ಲೆಂಡಿನ ರಾಜ ಒಂದನೆಯ ಜೇಮ್ಸ್‌ನ ರಾಯಭಾರಿಯಾಗಿ ಜಹಾಂಗೀರನ ಆಸ್ಥಾನಕ್ಕೆ ಯಾರು ಬಂದನು?

ಉತ್ತರ:– ಸರ್. ಥಾಮಸ್ ರೋ

25) ಇಂಗ್ಲಿಷರು ಎಲ್ಲಿ ಸೆಂಟ್ ಜಾರ್ಜ್ ಫೋರ್ಟ್ ಎಂಬ ಬಲಿಷ್ಠ ಕೋಟೆಯನ್ನು ಕಟ್ಟಿದರು.?

ಉತ್ತರ:– ಮದ್ರಾಸ್

26) ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಗೆ ಮುಂಬೈಯನ್ನು ಕೊಟ್ಟವರು ಯಾರು? ಅದಕ್ಕೆ ಎಷ್ಟು ಬಾಡಿಗೆ ಕಟ್ಟುತ್ತಿದ್ದರು?

ಉತ್ತರ:– ಇಂಗ್ಲೆಂಡಿನ ರಾಜಕುಮಾರ ಎರಡನೇ ಚಾರ್ಲ್ಸ್‌ನು ಬಾಂಬೆಯನ್ನು 1668ರಲ್ಲಿ ಕಂಪನಿಗೆ ವಾರ್ಷಿಕ 10 ಪೌಂಡುಗಳ ಬಾಡಿಗೆಗೆ ವಹಿಸಿಕೊಟ್ಟನು.

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

ದಿಕ್ಸೂಚಿ ನಿಮಗೆ ಇಷ್ಟ ಆಗಿದೆಯೇ? ನಿಮ್ಮ ಅನಿಸಿಕೆಯನ್ನು ಇಲ್ಲಿ ದಾಖಲಿಸಿ

PUC: PHYSICS

Chapter – 1

ELECTRIC CHARGES AND FIELDS

21) Define Coulomb.

Ans: The SI unit of charge is called coulomb denoted (C).

Coulomb can be defined as that charge which is repelled by a force of 9×10^9 Newtons when placed in free space at a distance of one metre from an identical charge.

22) Define the dielectric constant or relative permittivity of a medium.

Ans:- The dielectric constant of a medium is the ratio of the force between two point charges, separated by a distance in air to the force between the same two point charges separated by the same distance in the given medium. It is denoted by the letter K and is given by

$$K = \varepsilon_r = \frac{\varepsilon}{\varepsilon_o}$$

Where ε_r is called the relative permittivity or the dielectric constant of the medium

23) How many electrons are there in one coulomb of charge?

Ans:- Let there be n electrons in one coulomb of charge.

We know that from quantisation of charge,

$$q = ne$$

$$\therefore n = \frac{q}{e} = \frac{1}{1.6 \times 10^{-19}}$$

$$= 6.25 \times 10^{18}$$

24) The dimensions of an atom are of the order of an Angstrom. Thus there must be large electric fields between the protons and electrons. Why, then is the electrostatic field inside a conductor zero?

Ans:- The electric fields bind the atoms to neutral entity. Fields are caused by excess charges. There can be no excess charge on the inner surface of an isolated conductor.

25) Two identical metallic spheres of exactly equal masses are taken. One is given a positive charge of Q coulomb and the other is given equal negative charge by friction. Are their masses after charging equal?

Ans:- When two bodies are rubbed together, the electrons get removed from one body and transferred to the other body. The body from which the electrons get removed becomes positively charged and the body to which the electrons get transferred becomes negatively charged. Since an electron is a material particle, the mass of the positively charged body decreases and that of the negatively charged body increases.

Hence, when one of the two identical metallic spheres is charged positive and the other negative, their masses after charging will not be equal.

26) A bird perches on a bare high power line and nothing happens to the bird. A man standing on the ground touches the same line and gets a fatal shock. Why?

Ans:- When a bird perches on a bare high power line, the circuit does not get completed between the bird and the earth and therefore nothing happens to the bird, but when a man standing on the ground touches the same line, the circuit between the man and the earth gets completed. As a result, he gets a fatal shock.

27) What is the importance of the Coulomb's law in vector form?

Ans:- The importance of the Coulomb's law in vector form, is that it directly follows that the forces exerted by the two charges on each other are equal and opposite. Further, the force, which one charge exerts on the other, acts along the line joining the two charges that is., electrostatic force is a central force.

MULTIPLE CHOICE QUESTIONS:-

1. A point positive charge is brought near an isolated conducting sphere as in the figures given below. The electric field is best given by



(i)



(ii)



(iii)



(iv)

a) Fig (i) b) Fig (ii)
c) Fig (iii) d) Fig (iv)

Ans:- (a),

2. The electric flux through the surface



(i) (ii) (iii) (iv)

a) in fig. (iv) is the largest.
b) in fig. (iii) is the least.
c) in fig. (ii) is same as fig. (iii) but is smaller than fig. (iv)
d) is the same for all the figures.

Ans:- (d),

ಚುರುಕಾಗಿದ್ದ ಮಗಳು ಮಂಕಾಗಿದ್ದು ಏಕೆ?

ಸಮಾಧಾನ

ಡಾ.ಡಿ.ಎಂ. ಹೆಗಡೆ
ಸಮಾಲೋಚಕರು

● **ನನ್ನ ತಂದೆ– ತಾಯಿ ಇಬ್ಬರೂ ವೈದ್ಯರು. ನಾನು, ನನ್ನ ಹೆಂಡ್ತಿ ಮತ್ತು ತಂಗಿ ಎಲ್ಲರೂ ವೈದ್ಯರು. ನಮ್ಮದು ವೈದ್ಯಕೀಯ ವೃತ್ತಿಗೆ ಸೇರಿದ ಕುಟುಂಬ. ನನ್ನ ದೊಡ್ಡ ಮಗನೂ ವೈದ್ಯಕೀಯ ಕಲಿಯುತ್ತಿದ್ದಾನೆ. ಮಗಳು ಮಾತ್ರ ದ್ವಿತೀಯ ಪಿಯುಸಿ ಪಾಸಾಗುತ್ತಿಲ್ಲ. ಎಸ್ಸೆಸ್ಸೆಲ್ಸಿಯಲ್ಲಿ ಶೇ 98, ಮೊದಲ ವರ್ಷದಲ್ಲಿ ಶೇ 96ರಷ್ಟು ಅಂಕಗಳನ್ನು ಪಡೆದಿದ್ದಾಳೆ. ಈಗ ಏನಾಗಿದೆ ಎಂದು ಅರಿಯುವುದು ಹೇಗೆ? ಅವಳು ಮತ್ತೆ ಓದಿನಲ್ಲಿ ಮುಂದೆ ಬರಲು ಏನು ಮಾಡಬೇಕು?**

ನಿಮ್ಮದು ಸುಶಿಕ್ಷಿತ ಕುಟುಂಬ. ಜೀವನದಲ್ಲಿ ಎಲ್ಲರೂ ಯಶಸ್ವಿಯಾಗಿದ್ದೀರಿ. ಉಳಿದವರಿಗೆ ಉದಾಹರಣೆಯಾಗಿದ್ದೀರಿ. ಕೆಲವರಿಗೆ ಪ್ರೇರಣೆಯಾಗಿದ್ದೀರಿ. ವೈದ್ಯಕೀಯ ವೃತ್ತಿಯು ಜನರ ಜೀವವನ್ನು ಉಳಿಸುವ ಪವಿತ್ರವಾದ ಕೆಲಸ. ಮೊದಲಿಗೆ ನಿಮ್ಮೆಲ್ಲರಿಗೂ ನನ್ನ ಹೃತ್ಪೂರ್ವಕ ಅಭಿನಂದನೆಗಳು.

ಇನ್ನು ಮಗಳ ವಿಷಯದ ಬಗ್ಗೆ ಚಿಂತಿತರಾಗಿದ್ದೀರಿ. ಪಾಲಕರಾಗಿ ಅದು ಸಹಜ. ಮಗಳು ನಿಜಕ್ಕೂ ಜಾಣೆ. ಅವಳು ನಿಮ್ಮೆಲ್ಲರ ಹಾಗೆಯೇ ವೈದ್ಯಳಾಗಲಿ ಎನ್ನುವುದು ನಿಮ್ಮೆಲ್ಲರ ಆಸೆ. ಅದೂ ಸಹಜವೇ.

ನೀವು ತಿಳಿಸಿದಂತೆ, ನಿಮ್ಮ ಮಗಳು ಚೆನ್ನಾಗಿ ಓದಿದ್ದಾಳೆ. ಸಾಕಷ್ಟು ಅಂಕ ಪಡೆದಿದ್ದಾಳೆ. ವೈದ್ಯಕೀಯ ಕೋರ್ಸ್‌ಗೆ ಸೇರುವಷ್ಟು ಅಂಕಗಳನ್ನು ಪಡೆಯಬಲ್ಲ ಸಮರ್ಥೆ. ಹೀಗಿದ್ದೂ ಪಿಯು ಎರಡನೆಯ ವರ್ಷದಲ್ಲಿ ಕಷ್ಟಪಡುತ್ತಿದ್ದಾಳೆ.

ಆಕೆ ವೈದ್ಯಕೀಯವನ್ನೇ ಓದಬೇಕು ಎನ್ನುವ ವಿಷಯದಲ್ಲಿ ಒಂದಿಷ್ಟು ತೊಂದರೆ ಇರುವ ಹಾಗಿದೆ. ಆ ಬಗ್ಗೆ ಆಲೋಚನೆ ಮಾಡಿದ್ದೀರಾ?. ಆಕೆಗೆ ಬೇರೆ ಯಾವುದಾದರೂ ವಿಷಯದ ಬಗ್ಗೆ ಆಸಕ್ತಿ ಇದೆಯಾ? ಬೇರೆ ವಿಷಯವನ್ನು ಓದುತ್ತೇನೆ ಎಂದು ಕೇಳಿದ್ದು ನೆನಪಿದೆಯೇ?. ಆಕೆಗೆ ವೈದ್ಯಕೀಯದ ಬಗ್ಗೆ ನಿಜಕ್ಕೂ ಆಸಕ್ತಿ, ಗೌರವ ಇದೆಯಾ? ಅಥವಾ ನಿಮ್ಮೆಲ್ಲರ ಆಸೆಯಂತೆ ಆಕೆಗೆ ವೈದ್ಯಕೀಯವನ್ನು ಕಲಿಯಲು ಒತ್ತಾಯಿಸಲಾಗಿದೆಯಾ?.

ಮನೆಯಲ್ಲಿ ಎಲ್ಲರೂ ವೈದ್ಯರು. ತಾನು ವೈದ್ಯಳಾದರೆ ಮಾತ್ರ ಗೌರವ. ಮನೆಯವರ ಪ್ರೀತಿ ಸಿಗುತ್ತದೆ. ಇಲ್ಲವಾದರೆ ಇಲ್ಲ ಅಂತೇನಾದರೂ ಆಕೆಗೆ ಅನ್ನಿಸಿರಬಹುದು. ಇಂಥ ಒತ್ತಡಗಳಿದ್ದಾಗಲೂ ಆಕೆಯ ವರ್ತನೆಯಲ್ಲಿ ಬದಲಾವಣೆಯಾಗುತ್ತದೆ. ತಾತ್ಕಾಲಿಕ ದಡ್ಡತನ ಬರುವ ಸಾಧ್ಯತೆಯೂ ಇರುತ್ತದೆ. ಇದರಿಂದ ಪರೀಕ್ಷೆಯಲ್ಲಿ ಸರಿಯಾದ ಉತ್ತರಗಳನ್ನು ಬರೆಯಲು ಸಾಧ್ಯವಾಗುವುದಿಲ್ಲ. ಇವೆಲ್ಲವೂ ಆಕೆಯ ಸುಪ್ತ ಮನಸ್ಸಿನ ಪ್ರಭಾವವಾಗಿರಬಹುದು. ಅಥವಾ ವೈದ್ಯಕೀಯವನ್ನು ಕಲಿಯುವ ಬಗ್ಗೆ ಅವಳಿಗಿರುವ ನಿರಾಸಕ್ತಿಯನ್ನು ವ್ಯಕ್ತಪಡಿಸುವ ರೀತಿಯಾಗಿರಬಹುದು. ಒಟ್ಟಿನಲ್ಲಿ ಇದು ಆಕೆಯ ಮೌನಪ್ರತಿಭಟನೆಯೂ ಇರಬಹುದು. ಅವಳಿಗೆ ಡಾಕ್ಟರಾಗುವುದಕ್ಕಿಂತಲೂ ಬೇರೆ ಯಾವುದಾದರೂ ವೃತ್ತಿಯ ಬಗ್ಗೆ ಆಸಕ್ತಿ ಇರಲೂಬಹುದು. ಅದನ್ನು ಆಕೆ ತನ್ನ ಗೆಳೆಯರಲ್ಲಾಗಲೀ, ಪಾಲಕರಲ್ಲಾಗಲೀ ಆಗಾಗ ಹೇಳಿಕೊಂಡಿರಬಹುದು. ಅವನ್ನೆಲ್ಲ ಸೂಕ್ಷ್ಮವಾಗಿ ಗಮನಿಸಿರಿ. ಸ್ವಲ್ಪ ಪತ್ತೇದಾರಿಕೆ ಮಾಡಿ.

ಇನ್ನು ಪಠ್ಯೇತರ ಚಟುವಟಿಕೆಗಳಲ್ಲಿ ಅವಳ ಆಸಕ್ತಿ ಹೇಗಿದೆ? ಇವುಗಳ ಬಗ್ಗೆ ಪಾಲಕರಾಗಿ ತಾವು ಅವಳೊಟ್ಟಿಗೆ ಮಾತನಾಡಿದ್ದೀರಾ? ಪಾಲಕರ ಒತ್ತಾಯಕ್ಕೆ ಕಟ್ಟುಬಿದ್ದು ಯಾವುದೇ ವಿಷಯವನ್ನು ಓದಿದವರು ಮುಂದೆ ಜೀವನದಲ್ಲಿ ಯಶಸ್ವಿಯಾಗಿದ್ದಾಗಲೀ, ಸಂತೋಷದಿಂದ ಬದುಕಿದ್ದಾಗಲೀ ಕಡಿಮೆ.

ಇವತ್ತಿನ ಜಗತ್ತಿನಲ್ಲಿ ವ್ಯಕ್ತಿಯು ಸುಖವಾಗಿ, ಸಮೃದ್ಧವಾಗಿ ಬದುಕನ್ನು ಕಟ್ಟಿಕೊಳ್ಳುವ ಅವಕಾಶಗಳು ಹೇರಳವಾಗಿವೆ. ವೈದ್ಯರು, ವಕೀಲರು ಸಿನಿಮಾ ಕ್ಷೇತ್ರದಲ್ಲಿ ಗೆದ್ದವರಿದ್ದಾರೆ. ಉದ್ಯಮ ಮಾಡಿದ್ದಾರೆ. ಓದಿದ್ದು ಯಾವುದೋ ಆಗಿದ್ದು, ಬೇರೆ ಯಾವುದೋ ಕ್ಷೇತ್ರದಲ್ಲಿ ಯಶಸ್ಸು ಗಳಿಸಿದವರು ಅನೇಕರಿದ್ದಾರೆ. ಹಾಗಾಗಿ ನೀವು ಆಕೆಯ ಬಗ್ಗೆ ನಕಾರಾತ್ಮಕವಾಗಿ ಆಲೋಚನೆಯನ್ನು ಮಾಡಬೇಕಾಗಿಲ್ಲ. ಆಕೆಯ ಮನೋಬಲವು ಕುಗ್ಗುವಂತೆ ನಡೆದುಕೊಳ್ಳಬೇಕಾಗಿಲ್ಲ.

ನನಗನ್ನಿಸುವ ಪ್ರಕಾರ ಆಕೆಗೆ ಬೇರೆ ಯಾವುದೋ ವಿಷಯದಲ್ಲಿ ತೀವ್ರವಾದ ಆಸಕ್ತಿ ಇದೆ. ನೀವು ಅದನ್ನು ಪತ್ತೆ ಮಾಡಬೇಕು. ಆ ದಿಸೆಯಲ್ಲಿ ಆಕೆ ಮುಂದುವರಿಯುವಂತೆ ಮನಸ್ಪೂರ್ವಕವಾಗಿ ಪ್ರೋತ್ಸಾಹಿಸಬೇಕು. ಆಗ ಆಕೆ ಸಂತೋಷದಿಂದ ಜೀವನದಲ್ಲಿ ಗೆಲುವಿನ ಮಾರ್ಗದಲ್ಲಿ ಮುಂದುವರಿಯುತ್ತಾಳೆ. ಯಾವುದೇ ಕ್ಷೇತ್ರದಲ್ಲಿ ಇದ್ದರೂ ಯಶಸ್ವಿಯಾಗುತ್ತಾಳೆ. ❖

ವಿದ್ಯಾರ್ಥಿ ವೇತನ ಕೈಪಿಡಿ

ಸೇಜ್ ಐಟಿ ಬರವಣಿಗೆ ಸ್ಪರ್ಧೆ

ಸೇಜ್ ಐಟಿ ಸ್ಕಾಲರ್‌ಷಿಪ್ ಇಂಡಿಯಾ ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡುತ್ತದೆ. 17ರಿಂದ 30 ವರ್ಷ ವಯಸ್ಸಿನ ವಿದ್ಯಾರ್ಥಿಗಳು ಲೇಖನ ಬರೆಯುವ ಸ್ಪರ್ಧೆಯಲ್ಲಿ ಭಾಗವಹಿಸಿ ₹50,000 ಒಂದು ಬಾರಿಯ ಬಹುಮಾನವನ್ನು ಗೆಲ್ಲಬಹುದು.

- **ಅರ್ಹತೆ:** ಇದು 17ರಿಂದ 30 ವರ್ಷ ವಯಸ್ಸಿನ ಭಾರತದ ನಾಗರಿಕರಿಗೆ ಮುಕ್ತವಾಗಿದೆ. ಭಾಗವಹಿಸುವವರು ಭಾರತದ ಮಾನ್ಯತೆ ಪಡೆದ ಸಂಸ್ಥೆಯಲ್ಲಿ ನಿಯಮಿತ/ಅರೆಕಾಲಿಕ ಕಾಲೇಜು ವಿದ್ಯಾರ್ಥಿಗಳಾಗಿರಬೇಕು.
- **ಆರ್ಥಿಕ ಸಹಾಯ:** ₹50,000 (ಒಂದು ಬಾರಿ).
- **ಅರ್ಜಿ ಸಲ್ಲಿಸಲು ಕೊನೆ ದಿನ:** 25-05-2025
- **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.
- **ಹೆಚ್ಚಿನ ಮಾಹಿತಿಗೆ:** Short Url: www.b4s.in/praja/SGIT2

ಐಇಟಿ ಇಂಡಿಯಾ ಸ್ಕಾಲರ್‌ಷಿಪ್

ದಿ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರಿಂಗ್ ಆ್ಯಂಡ್ ಟೆಕ್ನಾಲಜಿ (ಐಇಟಿ) ಸೃಜನಶೀಲತೆ, ನಾವೀನ್ಯ ಮತ್ತು ನಾಯಕತ್ವವನ್ನು ಪ್ರದರ್ಶಿಸಲು ಎಂಜಿನಿಯರಿಂಗ್ ವಿದ್ಯಾರ್ಥಿಗಳನ್ನು ಆಹ್ವಾನಿಸುತ್ತಿದೆ.

- **ಅರ್ಹತೆ:** ಎಲ್ಲಾ ಶಾಖೆಗಳ ಎಐಸಿಟಿಇ/ಯುಜಿಸಿ- ಅನುಮೋದಿತ ಸಂಸ್ಥೆಗಳ ಪೂರ್ಣಾವಧಿಯ 1ನೇ, 2ನೇ, 3ನೇ ಮತ್ತು 4ನೇ ವರ್ಷದ ಯುಜಿ ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಲಭ್ಯವಿರುತ್ತದೆ. ಅಭ್ಯರ್ಥಿಗಳು ಎಲ್ಲಾ ಕ್ರೆಡಿಟ್ ಕೋರ್ಸ್‌ಗಳನ್ನು ಒಟ್ಟು ಕನಿಷ್ಠ ಶೇ 60 ಅಂಕಗಳೊಂದಿಗೆ (ಅಥವಾ 10-ಪಾಯಿಂಟ್ ಸ್ಕೇಲ್‌ನಲ್ಲಿ 6.0 ಸಿಜಿಪಿಎ) ಒಂದೇ ಪ್ರಯತ್ನದಲ್ಲಿ ಪೂರ್ಣಗೊಳಿಸಿರಬೇಕು. ಯಾವುದೇ ವಯಸ್ಸಿನ ಮಿತಿ ಇಲ್ಲ.
- **ಆರ್ಥಿಕ ಸಹಾಯ:** ₹ 10,00,000
- **ಅರ್ಜಿ ಸಲ್ಲಿಸಲು ಕೊನೆ ದಿನ:** 31-05-2025
- **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.
- **ಹೆಚ್ಚಿನ ಮಾಹಿತಿಗೆ:** www.b4s.in/praja/IET5

ಆಕ್ಸ್‌ಫರ್ಡ್ ವಿದ್ಯಾರ್ಥಿವೇತನ

ಆಕ್ಸ್‌ಫರ್ಡ್ ಆ್ಯಂಡ್ ಕೇಂಬ್ರಿಡ್ಜ್ ಸೊಸೈಟಿ ಆಫ್ ಇಂಡಿಯಾ ಸ್ಕಾಲರ್‌ಷಿಪ್ (ಒಸಿಎಸ್‌ಐ) ಆಕ್ಸ್‌ಫರ್ಡ್ ಮತ್ತು ಕೇಂಬ್ರಿಡ್ಜ್ ವಿಶ್ವವಿದ್ಯಾಲಯಗಳಲ್ಲಿ ಪದವಿ, ಸ್ನಾತಕೋತ್ತರ ಪದವಿ ಮತ್ತು ಸಂಶೋಧನೆ ಮಾಡುವ ಭಾರತೀಯ ವಿದ್ಯಾರ್ಥಿಗಳಿಗಾಗಿ ನೀಡುವ ಅವಕಾಶವಾಗಿದೆ.

- **ಅರ್ಹತೆ:** 2025ರ ಸೆಪ್ಟೆಂಬರ್ 1ಕ್ಕೆ 30 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿರುವ ಭಾರತೀಯ ವಿದ್ಯಾರ್ಥಿಗಳಿಗೆ ಲಭ್ಯವಿರುತ್ತದೆ. ಅಭ್ಯರ್ಥಿಗಳು ಕೇಂಬ್ರಿಡ್ಜ್ ಅಥವಾ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ನಿರ್ದಿಷ್ಟ ಪೂರ್ಣಾವಧಿಯ ಕೋರ್ಸ್‌ಗಳಲ್ಲಿ ಒಂದಕ್ಕೆ ದಾಖಲಾಗಿರಬೇಕು. ಅವರು ಸಾಮಾನ್ಯ ಪ್ರಕ್ರಿಯೆಗಳ ಮೂಲಕವೇ ವಿಶ್ವವಿದ್ಯಾಲಯದಲ್ಲಿ ದಾಖಲಾತಿಯನ್ನು ಪಡೆದುಕೊಂಡಿರಬೇಕು.
- **ಆರ್ಥಿಕ ಸಹಾಯ:** ₹4,00,000ವರೆಗೆ (ಒಂದು ಬಾರಿ).
- **ಅರ್ಜಿ ಸಲ್ಲಿಸಲು ಕೊನೆ ದಿನ:** 31-05-2025
- **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.
- **ಹೆಚ್ಚಿನ ಮಾಹಿತಿಗೆ:** Short Url: www.b4s.in/praja/OCSO1 ❖

CMR UNIVERSITY
Private University Estd. in Karnataka State by Act No. 45 of 2013
BENGALURU | RECOGNISED BY UGC



APPLY NOW!
CREATE THE FUTURE
ADMISSIONS OPEN FOR AY 2025-26

SCHOOL OF ARCHITECTURE
B.Arch.

SCHOOL OF ENGINEERING & TECHNOLOGY
B.Tech.
• CSE • CSE (AI & ML) • CSE (Data Science)
• Computer Engg.* • CST* (With specialisation in AI & ML, Internet of Things) • IT • ECE
M.Tech. (For Regular and Professionals)
• CSE • AI
Ph.D. CSE (AI & ML, Networking & Cloud Computing, Analytics, Cyber Security, Data Science & Internet of Things) • ECE • Mechanical Engineering

SCHOOL OF DESIGN
B.Des.
• Communication Design • Product Design
• Fashion Design • Interior Design
B.Sc.
• Sound Engineering
• Visual Effects & Animation

SCHOOL OF LIBERAL STUDIES
B.A. (Major + Minor)
B.Sc. | Psychology
M.Sc. | Psychology
• Clinical • Counselling • Human Resource Development & Management
Ph.D.
• Psychology

SCHOOL OF ECONOMICS & COMMERCE
B.Com.
• International Accounting & Finance (ACCA, UK)
• Professional - CA Integrated • Data Science
• Certified Management Accountant (US CMA)
Ph.D.
• Economics • Commerce

SCHOOL OF LEGAL STUDIES
B.A., LL.B. (Hons)
B.B.A., LL.B. (Hons)
LL.B.
LL.M. | Constitutional Law • Commercial Law • Criminal Law

SCHOOL OF SCIENCE & COMPUTER STUDIES
BCA
• Cloud Computing • Data Science
• Game Development • AI & ML NEW
B.Sc. • IT
M.Sc. • IT in Data Science
MCA
Ph.D. | Computer Application

SCHOOL OF MANAGEMENT
BBA
• Digital Marketing • Business Analytics
• Fintech NEW • Data Science NEW
• Logistics & Supply Chain Management NEW
• Tourism & Hospitality Management NEW
MBA with Dual Specialisation in
• Marketing • HR • Finance• Business Analytics
• Digital Marketing • Supply Chain Management
MBA with Specialisation in Business Analytics & Business Intelligence
MBA | Technology Management NEW
Executive MBA | Product Leadership
Ph.D. | Management

• Scholarships available for eligible candidates*
• Semester-wise payment option
• Interest-free education loan (EMI option*)
• Hostel facility for boys & girls
• Transport facility *
*T&C apply

PROVIDING OPPORTUNITIES TO GET SCHOLARSHIPS WORTH ₹12 CRORES*
LIMITED SEATS AT CONCESSIONAL FEE

We honour JEE, COMEDK, CUET, KCET and other state / national-level tests.
Direct admission for CUET students

93429 00666
admissions@cmr.edu.in
www.cmr.edu.in

Lakeside Campus: Off Hennur-Bagalur Main Road, Chagalahatti, Bengaluru - 562 149
City Campus: #2, 3rd Cross, 6th A Main, HRBR Layout, Bengaluru - 560 043
OMBR Campus: No.5, Bhuvanagiri, OMBR Layout, Bengaluru - 560 043

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಟೀಕೆಗಳು ಸಾಯುತ್ತವೆ. ಕೆಲಸಗಳು ಉಳಿಯುತ್ತವೆ.
-ಕುವೆಂಪು

ಮತೀಯ ದ್ವೇಷ ಕೊನೆಗೊಳಿಸಲು ಸರ್ಕಾರ ತೋರಬೇಕಿದೆ ಇಚ್ಛಾಶಕ್ತಿ

ರಾಜ್ಯದ ಕರಾವಳಿಯ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆಯು ಉದ್ಯಮಶೀಲತೆ, ಸಾಂಸ್ಕೃತಿಕ ಪರಂಪರೆ, ಶೈಕ್ಷಣಿಕ ಸಾಧನೆಯಂತಹ ಹಲವು ವಿಷಯಗಳಲ್ಲಿ ದೇಶಕ್ಕೆ ಮಾದರಿ. ಕೆನರಾ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್, ಕಾರ್ಪೊರೇಷನ್ ಬ್ಯಾಂಕ್, ವಿಜಯಾ ಬ್ಯಾಂಕ್ ಸೇರಿದಂತೆ ಹಲವು ಬೃಹತ್ ಬ್ಯಾಂಕ್‌ಗಳು ಕೂಡ ಈ ನೆಲದಲ್ಲೇ ಹುಟ್ಟಿದವು. ಪ್ರಾಥಮಿಕ, ಪ್ರೌಢಶಿಕ್ಷಣ ಮಾತ್ರವಲ್ಲ, ಎಂಜಿನಿಯರಿಂಗ್, ವೈದ್ಯಕೀಯ ಶಿಕ್ಷಣ ಕ್ಷೇತ್ರದಲ್ಲೂ ಈ ಜಿಲ್ಲೆಗಳು ಮುಂಚೂಣಿಯಲ್ಲಿವೆ. ಹೋಟೆಲ್ ಉದ್ಯಮದಲ್ಲಿ ಇಲ್ಲಿನ ಜನ ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಗಳಿಸಿದ್ದಾರೆ. ಸೌಹಾರ್ದಕ್ಕೆ ಹೆಸರಾಗಿದ್ದ ಈ ಜಿಲ್ಲೆಗಳು ಹಲವು ವರ್ಷಗಳಿಂದ ಕೋಮು ಧ್ರುವೀಕರಣದ ಪ್ರಯೋಗಶಾಲೆಯಾಗಿ ಪರಿವರ್ತನೆ ಹೊಂದಿವೆ. ಕೋಮು ಹಿಂಸೆಯ ದಳ್ಳುರಿಗೆ ಎರಡೂ ಜಿಲ್ಲೆಗಳು ನಲುಗಿವೆ. ಅಭಿವೃದ್ಧಿಪಥದಲ್ಲಿ ದೇಶಕ್ಕೆ ಮಾದರಿಯಾದ ರಾಜ್ಯದ ಕರಾವಳಿಯಲ್ಲಿ ಈಗ ಮತೀಯವಾದ ಆರ್ಭಟಿಸುತ್ತಿದೆ. ಹಿಂದೂಗಳು ಮತ್ತು ಮುಸ್ಲಿಮರ ನಡುವೆ ಅನುಮಾನದ ಕಂದಕ ಸೃಷ್ಟಿಯಾಗಿದೆ.

ದುಷ್ಕೃತ್ಯಗಳನ್ನು ಯಾವುದೇ ಮುಲಾಜಿಗೆ ಒಳಗಾಗದೇ ಹತ್ತಿಕ್ಕುವ ಕೆಲಸವನ್ನು ಪೊಲೀಸ್ ಇಲಾಖೆ ಮಾಡಬೇಕು

ಏಪ್ರಿಲ್ 27ರಂದು ಮಂಗಳೂರು ಹೊರವಲಯದ ಕುಡುಪು ಎಂಬಲ್ಲಿ ಕ್ರಿಕೆಟ್ ಪಂದ್ಯಾವಳಿ ನಡೆಯುತ್ತಿದ್ದ ಸ್ಥಳದಲ್ಲಿ ಕೇರಳದ ವಯನಾಡು ಜಿಲ್ಲೆಯ ಅಶ್ರಫ್ ಎಂಬ ವ್ಯಕ್ತಿಯನ್ನು ಗುಂಪು ಹಲ್ಲೆ ನಡೆಸಿ, ಹತ್ಯೆ ಮಾಡಲಾಗಿತ್ತು. ಘಟನೆಯ ಪ್ರತ್ಯಕ್ಷದರ್ಶಿಗಳು ಕರೆ ಮಾಡಿ ಮಾಹಿತಿ ನೀಡಿದ್ದರೂ ಅದಕ್ಕೆ ಸ್ಪಂದಿಸದೇ ಪೊಲೀಸ್ ಸಹಾಯವಾಣಿಗೆ ಕರೆ ಮಾಡುವಂತೆ ಸೂಚಿಸಿ, ಕರ್ತವ್ಯಲೋಪ ಎಸಗಿದ್ದ ಆರೋಪದ ಮೇಲೆ ಒಬ್ಬ ಪೊಲೀಸ್ ಇನ್‌ಸ್ಪೆಕ್ಟರ್ ಮತ್ತು ಇಬ್ಬರು ಕಾನ್‌ಸ್ಟೆಬಲ್‌ಗಳನ್ನು ಅಮಾನತು ಮಾಡಲಾಗಿದೆ. ಇನ್ನೊಂದು ಪ್ರಕರಣದಲ್ಲಿ ಬಜಪೆಯ ಕಿನ್ನಿಪದವು ಎಂಬಲ್ಲಿ ಹಿಂದುತ್ವ ಪರ ಸಂಘಟನೆಗಳಲ್ಲಿ ಗುರುತಿಸಿಕೊಂಡಿದ್ದ ರೌಡಿಶೀಟರ್ ಸುಹಾಸ್ ಶೆಟ್ಟಿ ಎಂಬಾತನನ್ನು ಎದುರಾಳಿ ಗುಂಪೊಂದು ಹತ್ಯೆ ಮಾಡಿದೆ. ರೌಡಿಗಳಿಬ್ಬರ ಮಧ್ಯದ ಸಂಘರ್ಷದಲ್ಲಿ ಕೊಲೆ ನಡೆದಿದೆ ಎಂದು ಪೊಲೀಸರು ಹೇಳಿದ್ದಾರೆ. ಆದರೂ ಪ್ರಕರಣಕ್ಕೆ ಮತೀಯ ಬಣ್ಣ ಲೇಪಿಸಿ, ಸಾಮರಸ್ಯ ಕದಡುವ ಪ್ರಯತ್ನ ಕರಾವಳಿಯಲ್ಲಿ ನಡೆದಿದೆ. ವೈಯಕ್ತಿಕ ದ್ವೇಷದಿಂದ ಕೊಲೆಯಾದವರಿಗೂ ಹುತಾತ್ಮರ ಪಟ್ಟ ಕಟ್ಟುವ ಪ್ರಯತ್ನಗಳು ಇಲ್ಲಿ ಪದೇ ಪದೇ ಘಟಿಸಿವೆ. ಧರ್ಮಾಧಾರಿತ ಸಂಘಟನೆಗಳ ಮುಖಂಡರ ಜೊತೆ ರಾಜಕೀಯ ನಾಯಕರೂ ಇದರಲ್ಲಿ ಶಾಮೀಲಾಗಿದ್ದಾರೆ. ದ್ವೇಷ ಕೆರಳಿಸುವ ಮಾತುಗಳ ಪರಿಣಾಮವಾಗಿ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆಯಲ್ಲಿ ಮೇ 1ರ ಬಳಿಕ ಸರಣಿಯೋಪಾದಿಯಲ್ಲಿ ಮತೀಯ ದ್ವೇಷದ ಹಿಂಸಾಕೃತ್ಯಗಳು ನಡೆದಿವೆ. ಹತ್ಯೆಗೆ- ಹತ್ಯೆ ಎಂಬ ಪ್ರತೀಕಾರದ ನಡೆಗೆ ನಾಗರಿಕ ಸಮಾಜದಲ್ಲಿ ಅವಕಾಶವಿಲ್ಲ. ಈ ಬಗೆಯ ದುಷ್ಕೃತ್ಯಗಳನ್ನು ಯಾವುದೇ ಮುಲಾಜಿಗೆ ಒಳಗಾಗದೇ ಹತ್ತಿಕ್ಕುವ ಕೆಲಸವನ್ನು ಪೊಲೀಸ್ ಇಲಾಖೆ ಮಾಡಬೇಕು.

ಮತೀಯ ಧ್ರುವೀಕರಣದ ಮೂಲಕ ರಾಜಕೀಯ ಲಾಭ ಪಡೆಯಲು ಕಾದು ಕುಳಿತ ರಾಜಕೀಯ ನಾಯಕರು, ದ್ವೇಷೋನ್ಮಾದವನ್ನು ಪ್ರಚೋದಿಸುವ ಕೆಲವು ಸಂಘಟನೆಗಳ ಮುಖಂಡರು ಹೊತ್ತಿಕೊಂಡ ಬೆಂಕಿಗೆ ತುಪ್ಪ ಸುರಿಯುವ ಕೆಲಸ ಮಾಡುತ್ತಾರೆ. ದ್ವೇಷ ಕೆರಳಿಸಿ, ರಕ್ತ ಹರಿಸಿ ಲಾಭ ಪಡೆಯಲು ಹವಣಿಸುವವರು ಎಲ್ಲ ಧರ್ಮಗಳಲ್ಲೂ ಇದ್ದಾರೆ. ಸಾಮಾಜಿಕ ಮಾಧ್ಯಮಗಳ ಪ್ರಭಾವ ಬಲವಾಗಿರುವ ಈ ಕಾಲಘಟ್ಟದಲ್ಲಿ ಇಂತಹ ಪ್ರಚೋದನೆ ಬಹುಬೇಗ ಜನರನ್ನು ಆವರಿಸುತ್ತದೆ. ಕರಾವಳಿ ಜಿಲ್ಲೆಗಳಲ್ಲಿ ಮತೀಯ ದ್ವೇಷದ ಹಿಂಸೆ ತಡೆಗೆ 'ಕೋಮುಹಿಂಸೆ ನಿಗ್ರಹ ಕಾರ್ಯಪಡೆ' ರಚಿಸುವುದಾಗಿ ಗೃಹ ಸಚಿವ ಜಿ. ಪರಮೇಶ್ವರ ಘೋಷಿಸಿದ್ದಾರೆ. ಇದು ಉತ್ತಮ ನಿರ್ಧಾರ. ಆದರೆ, ಕೋಮು ಹಿಂಸೆಗೆ ಸಂಬಂಧಿಸಿದ ಪ್ರಕರಣಗಳ ತನಿಖೆ ಮತ್ತು ದುಷ್ಕೃತ್ಯಗಳ ನಿಗ್ರಹದ ವಿಷಯದಲ್ಲಿ ಪೊಲೀಸರು ಕಠಿಣ ನಿಲುವು ತೆಗೆದುಕೊಂಡರೆ ಮಾತ್ರ ಪರಿಸ್ಥಿತಿ ಹತೋಟಿಗೆ ಬರಲು ಸಾಧ್ಯ. ಮತೀಯ ದ್ವೇಷವನ್ನು ಪ್ರಚೋದಿಸುವ ರಾಜಕೀಯ ನಾಯಕರು, ಸಂಘಟನೆಗಳ ಮುಖಂಡರ ವಿರುದ್ಧವೂ ಕಾನೂನಿನ ಅಸ್ತ್ರ ಪ್ರಯೋಗಿಸುವ ಮೂಲಕ ಇಂತಹ ಚಟುವಟಿಕೆಗಳನ್ನು ಸಹಿಸುವುದಿಲ್ಲ ಎಂಬ ಬಲವಾದ ಸಂದೇಶವನ್ನು ಸರ್ಕಾರ ರವಾನಿಸಬೇಕು. ಕರಾವಳಿಯ ಜನರು ಸೌಹಾರ್ದದ ಪರವಾಗಿ ದಿಟ್ಟತನದಿಂದ ನಿಂತರಷ್ಟೇ ಈ ಸಮಸ್ಯೆಗೆ ಶಾಶ್ವತ ಪರಿಹಾರ ಸಾಧ್ಯ. ಇಂತಹ ಕೃತ್ಯಗಳಿಂದ ರಾಜಕೀಯ ಮತ್ತು ಇತರ ಲಾಭ ಪಡೆಯಲು ಪ್ರಯತ್ನಿಸುವ ವ್ಯಕ್ತಿ, ಸಂಘಟನೆ, ರಾಜಕೀಯ ಪಕ್ಷಗಳನ್ನು ಈ ಜಿಲ್ಲೆಯ ಜನರು ದೂರ ಇಡಬೇಕು. ಮತೀಯ ದ್ವೇಷವನ್ನು ಬದಿಗೊತ್ತಿ ಅಭಿವೃದ್ಧಿಪಥವನ್ನು ಆಯ್ಕೆ ಮಾಡಿಕೊಳ್ಳುವ ವಿಚಾರದಲ್ಲಿ ಜನರು ತೋರುವ ಧೈರ್ಯವೇ ಈ ಜಿಲ್ಲೆಗಳ ಭವಿಷ್ಯವನ್ನು ನಿರ್ಧರಿಸುತ್ತದೆ. ಈ ದಿಸೆಯಲ್ಲಿ ಕಠಿಣವಾದ ನಿಲುವು ತಾಳುವ ಮೂಲಕ ಕರಾವಳಿಯ ಜಿಲ್ಲೆಗಳಿಗೆ ಪಾರಂಪರಿಕವಾಗಿ ಇದ್ದ ಘನತೆ ಮತ್ತು ವೈಭವವನ್ನು ಮರಳಿ ತಂದುಕೊಡುವ ಪ್ರಯತ್ನ ಜನರಿಂದಲೇ ಆರಂಭವಾಗಲಿ.

ದಿನದ ಟ್ವೀಟ್

ತಪ್ಪು ಸಂದೇಶ...

ಹಿಂದೂ ಒಂದು ಧರ್ಮ, ಅದು ಒಂದು ಸಂಘಟನೆ ಅಥವಾ ಸಂಸ್ಥೆ ಅಲ್ಲ. ನಾನು ಹಿಂದೂ, ಸುಹಾಸ್ ಕೂಡ ಹಿಂದೂ. ನಾವಿಬ್ಬರೂ ಹಿಂದೂ ಧರ್ಮದ ಸಿದ್ಧಾಂತವನ್ನು ನಂಬಿರುವ ಅನುಯಾಯಿಗಳೇ ಹೊರತು ಕಾರ್ಯಕರ್ತರಾಗಲು ಸಾಧ್ಯವಿಲ್ಲ. ಹಿಂದೂಪರ ಸಂಘಟನೆಯ ಕಾರ್ಯಕರ್ತನನ್ನು ಮಾಧ್ಯಮಗಳು ಹಿಂದೂ ಕಾರ್ಯಕರ್ತ ಎನ್ನುವುದು ಸಮಂಜಸವಲ್ಲ. ಇದರಿಂದ ಸಮಾಜಕ್ಕೆ ತಪ್ಪು ಸಂದೇಶ ರವಾನೆ ಆಗುತ್ತದೆ...

ದಿನೇಶ್ ಗುಂಡೂರಾವ್, ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ

ಕಿಡಿನುಡಿ

ಜಗತ್ತಿನ ಕಡೆ ಕಣ್ಣು ಹಾಯಿಸಿ ನಾವು ಪಾಲುದಾರರನ್ನು ಅರಸುತ್ತೇವೆ; ಬೋಧನೆ ಮಾಡುವವರನ್ನು ಅಲ್ಲ. ಅದರಲ್ಲೂ, ಬೋಧನೆಗಳನ್ನು ಪಾಲಿಸದೆ ಬೇರೆ ದೇಶಗಳಿಗೆ ಪಾಠ ಹೇಳುವವರು ನಮಗೆ ಬೇಡ. ಯುರೋಪಿನ ಕೆಲವು ದೇಶಗಳು ಈ ಸಮಸ್ಯೆಯಲ್ಲಿ ಸಿಲುಕಿವೆ.

ಎಸ್. ಜೈಶಂಕರ್, ವಿದೇಶಾಂಗ ವ್ಯವಹಾರಗಳ ಸಚಿವ

25 ವರ್ಷಗಳ ಹಿಂದೆ

ಶುಕ್ರವಾರ, 5-5-2000

● **ಇಸ್ರೇಲ್ ಮೈತ್ರಿಗೆ ಕೈಚಾಚಿದ ಲಂಕಾ**

ಕೊಲಂಬೊ, ಮೇ 4 (ಯುಎನ್‌ಐ, ಎಪಿ)- ತಮಿಳು ಈಳಂ ವಿಮೋಚನಾ ವ್ಯಾಘ್ರ ಪಡೆ (ಎಲ್‌ಟಿಟಿಇ) ಸುತ್ತುವರಿದಿರುವ ಸೈನಿಕರ ವಿಮುಕ್ತಿಗಾಗಿ ಸೇನಾ ನೆರವು ನೀಡುವ ಸಾಧ್ಯತೆಯನ್ನು ಭಾರತ ಸ್ಪಷ್ಟವಾಗಿ ತಳ್ಳಿ ಹಾಕಿರುವ ಹಿನ್ನೆಲೆಯಲ್ಲಿ, ಶ್ರೀಲಂಕಾ ಸರ್ಕಾರ ಪ್ರತ್ಯೇಕತಾವಾದಿ ಉಗ್ರರ ಕೈಮೇಲಾಗುವುದನ್ನು ತಪ್ಪಿಸಲು 'ಸಮರೋಪಾದಿ' ಯತ್ನಗಳನ್ನು ಆರಂಭಿಸಿದೆ.

ಇಂದಿನ ಇನ್ನೊಂದು ಕ್ಷಿಪ್ರ ಬೆಳವಣಿಗೆಯಲ್ಲಿ ಶ್ರೀಲಂಕಾ ಸರ್ಕಾರ 20 ವರ್ಷಗಳ ಹಿಂದೆ ಕಡಿದು ಹೋಗಿದ್ದ ಇಸ್ರೇಲ್ ಜತೆಗಿನ ರಾಜತಾಂತ್ರಿಕ ಸಂಬಂಧವನ್ನು ಪುನರ್ ಸ್ಥಾಪಿಸಿದೆ.

ಇಸ್ರೇಲ್ ಜತೆಗಿನ ರಾಜತಾಂತ್ರಿಕ ಸಂಬಂಧ ತಕ್ಷಣದಿಂದಲೇ ಜಾರಿಗೆ ಬರುತ್ತದೆ ಎಂದು ವಿದೇಶಾಂಗ ಸಚಿವಾಲಯ ಪ್ರಕಟಿಸಿದೆ.

● **ಜಿಲ್ಲಾ ಪಂಚಾಯಿತಿ ಚುನಾವಣೆ ವೇಳಾಪಟ್ಟಿಗೆ ತಡೆ**

ಬೆಂಗಳೂರು, ಮೇ 4- ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳ ಚುನಾವಣೆ ನಡೆಸುವ ಸಂಬಂಧದಲ್ಲಿ ಮುಂದೆ ತಿಳಿಸುವವರೆಗೆ ವೇಳಾಪಟ್ಟಿ ಹೊರಡಿಸಬಾರದೆಂದು ಹೈಕೋರ್ಟ್‌ನ ರಜಾ ಕಾಲದ ವಿಭಾಗೀಯ ನ್ಯಾಯಪೀಠ ಇಂದು ರಾಜ್ಯ ಚುನಾವಣಾ ಆಯೋಗಕ್ಕೆ ಆದೇಶಿಸಿತು.

ಮುಂದಿನ ವಿಚಾರಣೆಯನ್ನು ಮೇ 9ಕ್ಕೆ ನಿಗದಿ ಮಾಡಿ, ಅಷ್ಟರ ವೇಳೆಗೆ ಹೇಳಿಕೆ ಸಲ್ಲಿಸಬೇಕೆಂದು ಸರ್ಕಾರಕ್ಕೆ ಆದೇಶಿಸಿತು.

ಈ ನಡುವೆ ಅವಧಿ ಮುಗಿದ ಜಿಲ್ಲಾ ಪಂಚಾಯಿತಿಗಳು ಹಾಗೂ ತಾಲ್ಲೂಕು ಪಂಚಾಯಿತಿಗಳಿಗೆ ಆಡಳಿತಾಧಿಕಾರಿಗಳನ್ನು ನೇಮಿಸಿ ಸರ್ಕಾರ ಆದೇಶ ಹೊರಡಿಸಿದೆ.

50 ವರ್ಷಗಳ ಹಿಂದೆ

ಸೋಮವಾರ, 5-5-1975

● **ರಾಷ್ಟ್ರದಲ್ಲಿ ನಾಲ್ಕು ಸೂಪರ್ ಥರ್ಮಲ್ ಕೇಂದ್ರ ಸ್ಥಾಪನೆ**

ನವದೆಹಲಿ, ಮೇ 4- ರಾಷ್ಟ್ರದಲ್ಲಿ ವಿದ್ಯುತ್ ಕೊರತೆ ನಿವಾರಿಸಲು ಕೇಂದ್ರವು ನಾಲ್ಕು ವಲಯಗಳಲ್ಲೂ ಪ್ರತಿದಿನ 1,050 ಮೆಗಾ ವಾಟ್‌ಗಳಷ್ಟು ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಇರುವ ಒಂದೊಂದು ಸೂಪರ್ ಥರ್ಮಲ್ ವಿದ್ಯುತ್ ಕೇಂದ್ರಗಳನ್ನು ಸ್ಥಾಪಿಸಲು ನಿರ್ಧರಿಸಿದೆ.

ಭೂಪಾಲ್‌ನಲ್ಲಿರುವ ಭಾರತ್ ಹೆವಿ ಎಲೆಕ್ಟ್ರಿಕಲ್ಸ್ ಘಟಕವು ಜನರೇಟರುಗಳನ್ನು ಸರಬರಾಜು ಮಾಡುವ ಸಾಮರ್ಥ್ಯ ಗಳಿಸಿಕೊಂಡ ಕೂಡಲೇ ಈ ಸೂಪರ್ ಥರ್ಮಲ್ ಕೇಂದ್ರಗಳಲ್ಲಿ ಉತ್ಪಾದನೆ ಕಾರ್ಯ ಆರಂಭವಾಗುವುದು ಎಂದು ಆಂಧ್ರ ಪ್ರದೇಶದ ವಿದ್ಯುತ್ ಸಚಿವ ಜಿ.ರಾಜಾರಾಂ ತಿಳಿಸಿದರು.

● **ರಾಷ್ಟ್ರೀಯ ಜಲಮಂಡಳಿಗೆ ರಾಜ್ಯಗಳ ಒಲವಿಲ್ಲ**

ನವದೆಹಲಿ, ಮೇ 4- ರಾಷ್ಟ್ರೀಯ ಜಲ ನೀತಿ ರೂಪಿಸಲು ಉನ್ನತಾಧಿಕಾರದ ರಾಷ್ಟ್ರೀಯ ಜಲ ಮಂಡಳಿ ನೇಮಿಸಬೇಕೆಂಬ ಕೇಂದ್ರ ಸರ್ಕಾರದ ಸೂಚನೆಗೆ ರಾಜ್ಯಗಳು ಇದುವರೆಗೆ ಬೆಂಬಲ ನೀಡಿಲ್ಲ.

ಅಂತರರಾಜ್ಯ ನದಿ ಜಲ ವಿವಾದಗಳು ಬೇಗ ಬಗೆಹರಿಯಬೇಕೆಂದು ರಾಜ್ಯಗಳು ಒಪ್ಪುತ್ತವಾದರೂ ನೀರಿನ ಬಳಕೆ ಮತ್ತು ಹತೋಟಿಗೆ ಈಗಿರುವ ಅಧಿಕಾರಗಳನ್ನು ಬಿಟ್ಟುಕೊಡಲು ಅವು ಸಿದ್ಧವಾಗಿಲ್ಲ.

ರಾಜಕೀಯವಾಗಿ ಹಾಗೂ ವ್ಯೂಹಾತ್ಮಕವಾಗಿ ದೇಶಗಳ ನಿಲುವು ಸ್ಪಷ್ಟವಾಗುವ ಕಾಲ

ಬಿಕ್ಕಟ್ಟಿನಲ್ಲಿ ಬಯಲಾಗುವ ಮಿತ್ರ, ಶತ್ರು



ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

ಏಪ್ರಿಲ್ 22ರಂದು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಮೇಲೆ ನಡೆದ ಭಯೋತ್ಪಾದನಾ ದಾಳಿಯು ಭಾರತ ಮತ್ತು ಪಾಕಿಸ್ತಾನದ ನಡುವೆ ಉದ್ವಿಗ್ನ ಪರಿಸ್ಥಿತಿಯನ್ನು ಸೃಷ್ಟಿಸಿದೆ. ಸಹಜವಾಗಿಯೇ ಜಗತ್ತಿನ ಹಲವು ರಾಷ್ಟ್ರಗಳು ಘಟನೆಯ ಕುರಿತು ಪ್ರತಿಕ್ರಿಯಿಸಿವೆ. ಇಂತಹ ಬಿಕ್ಕಟ್ಟು ಸೃಷ್ಟಿಯಾದಾಗಲೇ ವಾಣಿಜ್ಯಿಕ ಸಂಬಂಧಗಳ ಆಚೆಗೆ, ರಾಜಕೀಯವಾಗಿ ಹಾಗೂ ವ್ಯೂಹಾತ್ಮಕವಾಗಿ ಯಾವ ದೇಶ ಯಾರ ಪರ ನಿಲ್ಲುತ್ತದೆ ಎನ್ನುವುದು ಸ್ಪಷ್ಟವಾಗುತ್ತದೆ. ಅರ್ಥಾತ್ ಮಿತ್ರ ರಾಷ್ಟ್ರ ಯಾವುದು, ಶತ್ರುವಿನ ಪರ ನಿಂತದ್ದು ಯಾರು, ಅಡ್ಡಗೋಡೆಯ ಮೇಲೆ ದೀಪ ಇಟ್ಟಂತೆ ವರ್ತಿಸುವ ದೇಶ ಯಾವುದು ಎನ್ನುವುದು ತಿಳಿಯುತ್ತದೆ.

ಭಯೋತ್ಪಾದನೆಯಿಂದ ಹೆಚ್ಚು ಬಾಧಿತವಾದ ಇಸ್ರೇಲ್ ಮರುಯೋಚನೆಗೆ ಅವಕಾಶ ನೀಡದೇ ಭಾರತವನ್ನು ಬೆಂಬಲಿಸಿ ಮಾತನಾಡಿತು. ಅಮೆರಿಕ, ಇರಾನ್, ರಷ್ಯಾ ಮತ್ತಿತರ ದೇಶಗಳು ಘಟನೆಯನ್ನು ಖಂಡಿಸಿ, ತಾಳ್ಮೆ ಕಳೆದುಕೊಳ್ಳಬೇಡಿ ಎಂಬ ಸಲಹೆ ಇತ್ತವು. ಯುದ್ಧದ ಕಾರ್ಮೋಡ ಕವಿಯುತ್ತಲೇ ಟರ್ಕಿಯ ವಿಮಾನಗಳು ಪಾಕಿಸ್ತಾನಕ್ಕೆ ಬಂದಿಳಿದಿದ್ದು ವರದಿಯಾಯಿತು. ಟರ್ಕಿಯ ಸಿ-130 ಹರ್ಕ್ಯುಲಸ್ ವಿಮಾನ ಇಂಧನ ತುಂಬಿಸಿಕೊಳ್ಳಲು ಪಾಕಿಸ್ತಾನದಲ್ಲಿ ಇಳಿಯಿತೇ ಹೊರತು ಶಸ್ತ್ರಾಸ್ತ್ರಗಳನ್ನು ಹೊತ್ತುತಂದಿದ್ದಲ್ಲ ಎಂದು ಟರ್ಕಿ ಹೇಳಿತು. ಅಜೆರ್‌ಬೈಜಾನ್ ಬಹಿರಂಗವಾಗಿ ಪಾಕ್ ಪರ ಮಾತನಾಡಿದರೆ, ಚೀನಾ ಸುತ್ತಿಬಳಸಿ ಪರಿಸ್ಥಿತಿ ತಿಳಿಗೊಳಿಸಿ ಎಂದಿತು. ಅಲ್ಲಿಗೆ ಒಂದು ಸ್ಪಷ್ಟ ಚಿತ್ರಣ ಗೋಚರಿಸಿತು.

ಅಷ್ಟಕ್ಕೂ ಟರ್ಕಿ ಕಾಶ್ಮೀರದ ಕುರಿತು ಮಾತನಾಡಿದ್ದು, ಪಾಕಿಸ್ತಾನದ ಬೆಂಬಲಕ್ಕೆ ನಿಂತದ್ದು ಇದೇ ಮೊದಲೇನಲ್ಲ. ವಿಶ್ವಸಂಸ್ಥೆಯ ಮಹಾ ಅಧಿವೇಶನಗಳಲ್ಲಿ ಟರ್ಕಿಯ ಅಧ್ಯಕ್ಷ ಎರ್ಡೋಗನ್ ಮಾತಿಗೆ ನಿಂತಾಗಲೆಲ್ಲಾ ಕಾಶ್ಮೀರದ ಬಿಕ್ಕಟ್ಟಿನ ಕುರಿತು, ವಿಶ್ವಸಂಸ್ಥೆ ಆ ವಿಷಯವನ್ನು ಗಂಭೀರವಾಗಿ ತೆಗೆದುಕೊಳ್ಳದ ಕುರಿತು ಮಾತನಾಡಿದ್ದಾರೆ. ಕಾಶ್ಮೀರದಲ್ಲಿ ಮಾನವ ಹಕ್ಕು ಉಲ್ಲಂಘನೆಯಾಗುತ್ತಿದೆ ಎಂದು ದೂರಿದ್ದಾರೆ.

ಸಂವಿಧಾನದ 370ನೇ ವಿಧಿಯಡಿ ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನವನ್ನು 2019ರಲ್ಲಿ ರದ್ದುಮಾಡಿದಾಗ, ಸೌದಿ ಅರೇಬಿಯಾ ಸೇರಿದಂತೆ ಅನೇಕ ಮುಸ್ಲಿಂ ರಾಷ್ಟ್ರಗಳು, ಇದು ಭಾರತದ ಆಂತರಿಕ ವಿಚಾರ ಎಂದು ಪ್ರತಿಕ್ರಿಯಿಸಿದರೂ, ಟರ್ಕಿ ಮಾತ್ರ ಭಾರತದ ನಿಲುವನ್ನು ಖಂಡಿಸಿ ಪಾಕಿಸ್ತಾನದ ಪರ ಮಾತನಾಡಿತ್ತು. ಅದಕ್ಕೆ ಪ್ರತಿಯಾಗಿ ಪ್ರಧಾನಿ ನರೇಂದ್ರ ಮೋದಿ ಅವರು ನಿಗದಿಯಾಗಿದ್ದ ತಮ್ಮ ಟರ್ಕಿ ಭೇಟಿಯನ್ನು ರದ್ದು ಮಾಡಿದರು. ಟರ್ಕಿ ಜೊತೆಗಿನ ಹಡಗು ನಿರ್ಮಾಣ ಯೋಜನೆಯನ್ನು ಕೈಬಿಡಲಾಯಿತು.

ಇದೇ ವರ್ಷ ಫೆಬ್ರುವರಿ 12-13ರಂದು ಟರ್ಕಿಯ ಅಧ್ಯಕ್ಷ ಎರ್ಡೋಗನ್ ಪಾಕಿಸ್ತಾನಕ್ಕೆ ಭೇಟಿಯಿತ್ತಿದ್ದರು. ಆ ಸಮಯದಲ್ಲಿ 'ಕಾಶ್ಮೀರದ ಸಮಸ್ಯೆಯನ್ನು ವಿಶ್ವಸಂಸ್ಥೆಯ ಮೂಲಕ ಮತ್ತು ಕಾಶ್ಮೀರದ ಜನರ ಇಚ್ಛೆಯನ್ನು ಪರಿಗಣಿಸಿ ಬಗೆಹರಿಸಬೇಕು. ಕಾಶ್ಮೀರದ ಸಹೋದರರ ಪರವಾಗಿ ಟರ್ಕಿ ಎಂದಿಗೂ ನಿಲ್ಲುತ್ತದೆ' ಎಂಬ ಹೇಳಿಕೆ ನೀಡಿದ್ದರು. ಇದಕ್ಕೆ ಭಾರತ 'ಜಮ್ಮು ಮತ್ತು ಕಾಶ್ಮೀರ ಭಾರತದ ಅವಿಭಾಜ್ಯ ಅಂಗ. ಬೇರೆ ಯಾವುದೇ ದೇಶಕ್ಕೆ ಇದರ ಬಗ್ಗೆ ಹೇಳಿಕೆ ನೀಡಲು ಯಾವುದೇ ಅರ್ಹತೆ ಇಲ್ಲ' ಎಂದು ತೀಕ್ಷ್ಣವಾಗಿ ಪ್ರತಿಕ್ರಿಯಿಸಿತ್ತು.

ಅಷ್ಟಕ್ಕೂ, ಪಾಕಿಸ್ತಾನವನ್ನು ಟರ್ಕಿ ಬೆಂಬಲಿಸಲು ಕಾರಣಗಳಿವೆಯೇ? ಟರ್ಕಿಯ ಇಸ್ತಾಂಬುಲ್ ನಗರವೊಂದರ ಜಿಡಿಪಿ, ಪಾಕಿಸ್ತಾನದ ಜಿಡಿಪಿಗಿಂತ ಹೆಚ್ಚಿದೆ. ಹಾಗಾಗಿ ಟರ್ಕಿಗೆ ಪಾಕಿಸ್ತಾನದಿಂದ ಆಗಬೇಕಾದ್ದು ಏನೂ ಇಲ್ಲ. ಆದರೆ ಅವೆರಡರ ನಡುವಿನ ಸಾಮಾನ್ಯ ತಂತುವೆಂದರೆ ಎರಡೂ ಇಸ್ಲಾಮಿಕ್ ರಾಷ್ಟ್ರ ಎನ್ನುವುದು. 2020ರ ಫೆಬ್ರುವರಿ 14ರಂದು ಪಾಕಿಸ್ತಾನದ ಸಂಸತ್ತಿನ ಜಂಟಿ ಅಧಿವೇಶನದಲ್ಲಿ, ಟರ್ಕಿ ಅಧ್ಯಕ್ಷರು ಮಾತನಾಡುತ್ತಾ 'ನಮ್ಮ ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲಿ ಪಾಕಿಸ್ತಾನದ ಜನರು ತಮ್ಮ ಆಹಾರವನ್ನು ನಮ್ಮೊಂದಿಗೆ ಹಂಚಿಕೊಂಡಿದ್ದರು ಎನ್ನುವುದನ್ನು ಮರೆಯುವುದಿಲ್ಲ' ಎಂದಿದ್ದರು.

ಟರ್ಕಿಯ ಅಧ್ಯಕ್ಷರು ಖಿಲಾಫತ್ ಚಳವಳಿಯ ಕುರಿತು ಪ್ರಾಸ್ತಾಪಿಸಿದ್ದರು. ಆ ಸಂದರ್ಭದಲ್ಲಿ ಭಾರತದ ಖಿಲಾಫತ್ ನಾಯಕರು ಇಲ್ಲಿಂದ ದೇಣಿಗೆ ಸಂಗ್ರಹಿಸಿ ಟರ್ಕಿಗೆ ಕಳುಹಿಸಿದ್ದರು. ವಿದೇಶಿ ಬಟ್ಟೆಗಳನ್ನು ಸುಡಲು ಗಾಂಧೀಜಿ ಕರೆ ಕೊಟ್ಟಾಗ, 'ನಾವು ನಮ್ಮ ಬಟ್ಟೆಗಳನ್ನು ಟರ್ಕಿಗೆ ಕಳುಹಿಸುತ್ತೇವೆ' ಎಂದಿದ್ದರು! ಅಸಲಿಗೆ ಖಿಲಾಫತ್ ಚಳವಳಿಗೆ ಮತ್ತು ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧವೇ ಇರಲಿಲ್ಲ. ಆದರೂ ಚಳವಳಿಯ ನೇತೃತ್ವವನ್ನು ಗಾಂಧೀಜಿ ವಹಿಸಿಕೊಂಡರು. ಮೋಪ್ಲಾ ನರಮೇಧಕ್ಕೆ ಕಾರಣವಾದ ಖಿಲಾಫತ್ ಆಂದೋಲನವು ಪ್ರತ್ಯೇಕತೆಯ ಭಾವನೆಯನ್ನು ಪೋಷಿಸಿತು, ಬಳಿಕ ಅದೇ ಹೆಮ್ಮರವಾಗಿ ಪಾಕಿಸ್ತಾನದ ರಚನೆಯಾಯಿತು. ಹಾಗಾಗಿ ಟರ್ಕಿಗೆ ಈಗಲೂ ಪಾಕಿಸ್ತಾನದ ಮೇಲೆ ಪ್ರೀತಿ!

ಅಷ್ಟೇ ಅಲ್ಲ, ಒಂದು ಕಾಲದಲ್ಲಿ ಒಟ್ಟೊಮನ್ ಸಾಮ್ರಾಜ್ಯ ಮುಸ್ಲಿಂ ಜಗತ್ತಿನ ನಾಯಕನ ಸ್ಥಾನದಲ್ಲಿ ಇತ್ತು. ಅದರ ವಿಸ್ತೀರ್ಣವೂ ದೊಡ್ಡದಿತ್ತು. ಆದರೆ ಮೊದಲನೇ ಮಹಾಯುದ್ಧದ ಬಳಿಕ ವಿಘಟನೆಗೊಂಡು ಟರ್ಕಿಯಷ್ಟೇ ಉಳಿಯಿತು. ಆದ್ದರಿಂದ ಟರ್ಕಿಗೆ ತಾನು ಮುಸ್ಲಿಂ ಜಗತ್ತಿನ ನಾಯಕನಾಗಬೇಕೆಂಬ ಹಂಬಲ ಈಗಲೂ ಇದೆ. ಆ ಕಾರಣದಿಂದಲೇ ಅದು ಪಾಕಿಸ್ತಾನ, ಬಾಂಗ್ಲಾದೇಶ, ಕತಾರ್, ಮಲೇಷ್ಯಾ ಪರ ಆಗಾಗ ಮಾತನಾಡುತ್ತದೆ. ಪ್ಯಾಲೆಸ್ಟೀನ್ ವಿಷಯದಲ್ಲಿ ಇಸ್ರೇಲನ್ನು ದೂಷಿಸುತ್ತದೆ. ಇಸ್ಲಾಮಿಕ್ ರಾಷ್ಟ್ರಗಳ ನಡುವೆ ಭ್ರಾತೃತ್ವ ಇರಬೇಕು ಎಂದು ಆಶಿಸುತ್ತದೆ.



ಪಾಕಿಸ್ತಾನದ ಜೊತೆಗಿನ ಟರ್ಕಿ ಬಾಂಧವ್ಯ ಕೇವಲ ಕಾಶ್ಮೀರದ ವಿಷಯಕ್ಕೆ ಸೀಮಿತವಾಗಿಲ್ಲ. ಕರಾಚಿಯಲ್ಲಿ ನಿರ್ಮಿಸಲಾದ ಪಾಕಿಸ್ತಾನದ ನೌಕೆ ಪಿಎನ್‌ಎಸ್ ಮೊವಿನ್ ಅನ್ನು ವಿನ್ಯಾಸಪಡಿಸುವಲ್ಲಿ ಪಾಕಿಸ್ತಾನದೊಂದಿಗೆ ಟರ್ಕಿ ಕೆಲಸ ಮಾಡಿತ್ತು. ಜೊತೆಗೆ ಭಾರತ ಮತ್ತು ಅಮೆರಿಕದ ಮೇಲೆ ಸೈಬರ್ ದಾಳಿ ನಡೆಸುವ ಹಾಗೂ ಪಾಕಿಸ್ತಾನಿ ನಾಯಕರನ್ನು ಅಂತರರಾಷ್ಟ್ರೀಯ ಟೀಕೆಗಳಿಂದ ರಕ್ಷಿಸಲು ನರೇಟಿವ್ ಕಟ್ಟುವ ಹೊಣೆಹೊತ್ತ ಸೈಬರ್ ಸೇನೆಯ ರಚನೆಗೆ ಪಾಕಿಸ್ತಾನಕ್ಕೆ ಟರ್ಕಿ ಸಹಾಯ ಮಾಡಿತ್ತು. ಟರ್ಕಿ ತಾನು ಉತ್ಪಾದಿಸುವ ರಕ್ಷಣಾ ಸಾಮಗ್ರಿಗಳ ಶೇಕಡ 10ರಷ್ಟನ್ನು ಪಾಕಿಸ್ತಾನಕ್ಕೆ ರಫ್ತು ಮಾಡುತ್ತಿದೆ.

ಹಾಗಂತ ಈ ಬೆಳವಣಿಗೆಗಳನ್ನು ಗಮನಿಸಿ ಭಾರತ ಸುಮ್ಮನೆ ಕೂರಲಿಲ್ಲ. ಸೈಪ್ರಸ್ ಮತ್ತು ಗ್ರೀಸ್ ದೇಶಗಳು ಟರ್ಕಿಯ ದೀರ್ಘಕಾಲದ ಶತ್ರುಗಳು. 1974ರಲ್ಲಿ ಸಾರ್ವಭೌಮ ರಾಷ್ಟ್ರವಾದ ಸೈಪ್ರಸ್‌ನ ಒಂದು ಭಾಗವನ್ನು ಟರ್ಕಿ ಆಕ್ರಮಿಸಿಕೊಂಡಿತು. ಟರ್ಕಿ ಮತ್ತು ಗ್ರೀಸ್ ನಡುವಿನ ಏಜಿಯನ್ ಸಮುದ್ರ ಕುರಿತಾದ ವೈಮನಸ್ಯಕ್ಕೆ ಇತಿಹಾಸವಿದೆ. ಹಾಗಾಗಿ 2023ರಲ್ಲಿ ಪ್ರಧಾನಿ ಮೋದಿ, ಗ್ರೀಸ್‌ಗೆ ಭೇಟಿ ಕೊಟ್ಟರು. 40 ವರ್ಷಗಳ ನಂತರ ಗ್ರೀಸ್‌ಗೆ ಭೇಟಿ ನೀಡಿದ ಮೊದಲ ಭಾರತೀಯ ಪ್ರಧಾನಿ ಎನಿಸಿಕೊಂಡರು. ಭಾರತ-ಗ್ರೀಸ್ ನಡುವೆ ಒಪ್ಪಂದಗಳು ಏರ್ಪಟ್ಟವು. ಸೈಪ್ರಸ್ ವಿಷಯದಲ್ಲಿ ಭಾರತ ಬಹಳ ಹಿಂದಿನಿಂದಲೂ ಗ್ರೀಸ್ ಅನ್ನು ಬೆಂಬಲಿಸುತ್ತಿದೆ ಮತ್ತು ಕಾಶ್ಮೀರದ ವಿಷಯದಲ್ಲಿ ಗ್ರೀಸ್ ಭಾರತವನ್ನು ಬೆಂಬಲಿಸುತ್ತಿದೆ. ಸೈಪ್ರಸ್‌ನೊಂದಿಗೆ ರಕ್ಷಣಾ ಮತ್ತು ಮಿಲಿಟರಿ ಸಹಕಾರ ಒಪ್ಪಂದಗಳಿಗೂ ಭಾರತ ಸಹಿ ಹಾಕಿತು.

ಟರ್ಕಿಗೆ ತಗಲಿಕೊಂಡೇ ಇರುವ ಅರ್ಮೇನಿಯಾ, ಟರ್ಕಿಯ ಸಾಂಪ್ರದಾಯಿಕ ಪ್ರತಿಸ್ಪರ್ಧಿ ರಾಷ್ಟ್ರ. ಟರ್ಕಿಯಿಂದ ರಕ್ಷಣಾ ಸಾಮಗ್ರಿಗಳ ಆಮದು ಕಡಿಮೆ ಮಾಡಿಕೊಂಡ ಭಾರತ, ಅರ್ಮೇನಿಯಾದೊಂದಿಗೆ ರಕ್ಷಣಾ ಒಪ್ಪಂದವನ್ನು ಮಾಡಿಕೊಂಡಿತು. ಕಳೆದ ಜಿ-20 ಶೃಂಗಸಭೆಯ ವೇಳೆ ಭಾರತ-ಮಧ್ಯಪ್ರಾಚ್ಯ-ಯುರೋಪ್ ಆರ್ಥಿಕ ಕಾರಿಡಾರ್ ಯೋಜನೆ ಘೋಷಣೆಯಾಯಿತು. ಈ ಕಾರಿಡಾರ್‌ನಿಂದ ಟರ್ಕಿಯನ್ನು ಹೊರಗಿಡಲಾಯಿತು.

ವಿಪರ್ಯಾಸ ಏನು ಗೊತ್ತೆ, ಒಟ್ಟೊಮನ್ ಸಾಮ್ರಾಜ್ಯದ ಪತನದ ಬಳಿಕ, ಟರ್ಕಿಯ ರಾಷ್ಟ್ರಪಿತ ಅಟಾಟರ್ಕ್ ಕೆಮಲ್ ಪಾಶ, ಟರ್ಕಿಯನ್ನು ಕರ್ಮಠ ಮನಃಸ್ಥಿತಿಯಿಂದ ಹೊರತರುವ ಪ್ರಯತ್ನ ಮಾಡಿದರು. ಷರಿಯಾ ಕಾನೂನು, ಮತೀಯ ಶಾಲೆಗಳನ್ನು ಬದಿಗೆ ಸರಿಸಿ, ಭಾಷೆ, ಕಾನೂನು, ವಸ್ತ್ರ ಸಂಹಿತೆ, ಮಹಿಳೆಯರ ಸ್ಥಿತಿಗತಿಗಳಲ್ಲಿ ಸುಧಾರಣೆ ತಂದರು. ಯುರೋಪಿನ 'ರೋಗಗ್ರಸ್ತ ಮನುಷ್ಯ' ಎನ್ನಿಸಿಕೊಂಡಿದ್ದ ನಾಡನ್ನು ಆಧುನಿಕತೆಯೆಡೆಗೆ ಮುನ್ನಡೆಸಿದರು.

ಯಾವ ಸಂಗತಿಗಳನ್ನು ಕೆಮಲ್ ಪಾಶ ತಿರಸ್ಕರಿಸಿದ್ದರೋ, ಆ ಸಂಗತಿಗಳನ್ನೇ ಮೈಮನ ತುಂಬಿಕೊಂಡಿರುವ ಪಾಕಿಸ್ತಾನದ ಜೊತೆ ಇಂದಿನ ಟರ್ಕಿ ಆಪ್ತವಾಗಿ ಬೆಸೆದುಕೊಂಡಿದೆ. ಅಟಾಟರ್ಕ್-ಜಿನ್ನಾ ಹೆಸರಿನಲ್ಲಿ ಪಾಕಿಸ್ತಾನ ಮತ್ತು ಟರ್ಕಿಯ ಸೇನೆ ಜಂಟಿಯಾಗಿ ಪ್ರತಿವರ್ಷ ತಾಲೀಮು ನಡೆಸುತ್ತವೆ!

ಚುರುಮುರಿ

ಕಪ್ ನಮ್ದೇ! ಆದರೆ...

● ಸುಮಂಗಲಾ

'ಆಹಾ... ಎಸ್ಸೆಸ್ಸೆಲ್ಸಿವಳಗೆ ಈ ಸಲನೂ ಹುಡುಗೀರೇ ಭಾಳ ಮಂದಿ ಪಾಸಾಗ್ಯಾರೆ. ಪರೀಕ್ಷೆ ಬರೆದ ಹುಡುಗೀರಲ್ಲಿ ಶೇಕಡ 74ರಷ್ಟು ಪಾಸಾಗ್ಯಾರೆ. ಹುಡುಗರು ಬರೀ ಶೇಕಡ 58ರಷ್ಟು ಪಾಸಾಗ್ಯಾರೆ. ಓದೂದು ಬಿಟ್ಟು ಅತ್ತಾಗೆ ಇತ್ತಾಗೆ ಅಂಡಲೆದುಕೊಂಡು, ಮೊಬೈಲ್ ನೋಡತಾ ಕೂರತಾವೆ ಹುಡುಗರು' ಎಂದು ಬೆಕ್ಕಣ್ಣ ಹುಡುಗರಿಗೆ ಬೈಯುತ್ತಿತ್ತು.

'ಅದೇ ನಮ್ ಹುಡುಗೀರು... ಪಾಪ ಮನೆಗೆಲಸನೂ ಮಾಡಿ, ಸಾಲಿಗೂ ಹೋಗಿ ಚೆಂದಾಗಿ ಪಾಸಾಗತಾರೆ' ಎಂದೆ.

'ಯಾವುದೇ ಐಟಿ ಕಂಪನಿ, ಸರ್ಕಾರ, ರಾಜಕೀಯ, ಹಿಂಗೆ ಎಲ್ಲಾ ಕಡೆ ಮ್ಯಾಗಿನ ಹುದ್ದೆವಳಗೆ ಹೆಣ್‌ಮಕ್ಕಳ ಸಂಖ್ಯೆ ಭಾಳ ಕಡಿಮಿ. ಎಸ್ಸೆಸ್ಸೆಲ್ಸಿ, ಪಿಯುಸಿವಳಗೆ ಇಷ್ಟೆಲ್ಲ ಛಲೋ ಅಂಕ ತಗೊಳೋ ಹೆಣ್‌ಮಕ್ಕಳು ಆಮ್ಯಾಗೆ ಎಲ್ಲಿ ಮಾಯವಾಗತಾರೆ ಅಂತ?' ಬೆಕ್ಕಣ್ಣ ಅಚ್ಚರಿಯಿಂದ ಕೇಳಿತು.

'ಮದುವಿ, ಮಕ್ಕಳು, ಸಂಸಾರ ಇದ್ರೊಳಗೆ ಕಳೆದು ಹೋಗತಾರೆ ಅಷ್ಟೇ' ಎಂದೆ ನಾನು.

'ಯುನಿಸೆಫ್ ಕೂಡ ಅದೇ ಹೇಳೈತಿ. ನಮ್ಮಂಥ ದೇಶಗಳಲ್ಲಿ ಲಿಂಗ ಸಮಾನತೆ ಹಳಿ ತಪ್ಪಿದರೆ ಭಾರೀ ಪ್ರಮಾಣದ ಮಾನವ ಬಂಡವಾಳ ಹೊಳೆವಳಗೆ ಹುಣಿಸೇಹಣ್ಣು ತೊಳೆದಂಗೆ ಅಂತ'.

'ಎಲ್ಲಾ ಕಡಿಗಿ ಹೆಣ್ಣುಮಕ್ಕಳು ಮ್ಯಾಲೇರದಂತೆ ತುಳಿದರೆ ಮತ್ತೇನಾಗುತ್ತಲೇ...'

'ಆದರೂ ನೀವೇನು ಕಡಿಮೆ ಬಿಡು! ಅದೇನೋ ಬೂಕರ್ ಶಾರ್ಟ್ ಲಿಸ್ಟಿನಾಗೆ ನಮ್ ಭಾನು ಮುಷ್ತಾಕಕ್ಕನ ಹೆಸರು ಐತಂತಲ್ಲ... ಅಂತೂ ಫರ್ಸ್ಟ್ ಟೈಮ್ ಕನ್ನಡ ಲೇಖಕಿಯ ಕೃತಿ ಶಾರ್ಟ್ ಲಿಸ್ಟ್ ಆಗೈತಿ!'

'ಹೌದೌದು... ಈ ಸಲ ಅಲ್ಲೂ ಕಪ್ ನಮ್ದೇ!' ಎಂದೆ ಬಲು ಹೆಮ್ಮೆಯಿಂದ.

'ಕಪ್ ನಿಮ್ಮದೇ... ಚಾ ಮಾಡೋರೂ ನೀವೇ... ಕುಡಿಯೋರು ಮಾತ್ರ ಗಂಡುಮಕ್ಕಳು! ಕನ್ನಡ ಸಾಹಿತ್ಯ ಸಮೀಕ್ಷೆ ಮಾಡೋವ್ರು ಎಲ್ಲಾ ಪ್ರಮುಖ ಪುರುಷ ಸಾಹಿತಿಗಳ ಹೆಸರು, ಕೊಡುಗೆ ಹೇಳಿದಮ್ಯಾಗೆ ಮಹಿಳಾ ಸಾಹಿತಿಗಳು ಅನ್ನೂ ಹಣೆಪಟ್ಟಿವಳಗೆ ನಾಕಾರು ಹೆಸರು ಹೇಳೂ ಚಾಳಿ ಏನೂ ಬದಲಾಗಂಗಿಲ್ಲ!' ಬೆಕ್ಕಣ್ಣ ನಕ್ಕಿತು.

ಚರ್ಚೆ

ಪ್ರಥಮ ಭಾಷೆ ಮತ್ತು ನ್ಯಾಯದ ಗಂಟೆ

ಕನ್ನಡ ಉಪಾಧ್ಯಾಯರು ಪಾಯಿಂಟ್ಸ್ ಸಾಲದು ಅಂತಲೊ, ಕಾಗುಣಿತ ದೋಷ ಇದೆ ಅಂತಲೊ ಪೂರ್ಣಾಂಕ ಕೊಡುವುದೇ ಇಲ್ಲ. ಈ ವಿಷಯದಲ್ಲಿ ಸಂಸ್ಕೃತದ ಮೇಷ್ಟ್ರುಗಳು ಉದಾರಿಗಳು

● ಪು.ಸೂ.ಲಕ್ಷ್ಮೀನಾರಾಯಣ ರಾವ್

'ಪ್ರಥಮ ಭಾಷೆ: ಕನ್ನಡ ಬೇಡವೇಕೆ?' ಎಂಬ ಜನಾರ್ದನ ಚ.ಶ್ರೀ. ಅವರ ಲೇಖನ (ಸಂಗತ, ಮೇ 1) ನಮ್ಮ ನಾಡಿನ ಶಾಲಾ ಕಾಲೇಜುಗಳಲ್ಲಿನ ಕನ್ನಡ ಭಾಷಾ ವಿಷಯದ ಪ್ರಸ್ತುತ ಸ್ಥಾನಮಾನದ ಬಗೆಗಿನ ವಾಸ್ತವವನ್ನು ತೆರೆದಿಟ್ಟಿದೆ. ಆದರೆ ಪ್ರಶ್ನೆ ಇರುವುದು 'ಬೆಕ್ಕಿಗೆ ಗಂಟೆ ಕಟ್ಟುವವರು ಯಾರು?' ಎಂಬುದು.

ಈ ಸಮಸ್ಯೆ ಬಹುಶಃ ಸಂಸ್ಕೃತವನ್ನು ಪ್ರಥಮ ಭಾಷಾ ವಿಷಯವಾಗಿ ಅಳವಡಿಸಿಕೊಂಡಾಗಿನಿಂದಲೂ- ಸುಮಾರು 50 ವರ್ಷಗಳಿಂದ- ಇದೆ. ಗೋಕಾಕ್ ಚಳವಳಿಯ ಪರಿಣಾಮದಿಂದ ಕನ್ನಡ ವಿಷಯವು ಕಡ್ಡಾಯವಾಯಿತಾದರೂ ಕಡ್ಡಾಯ ಪ್ರಥಮ ಭಾಷೆ ಎಂದಾಗಲಿಲ್ಲ. ಸಂಸ್ಕೃತವನ್ನು ಪ್ರಥಮ ಭಾಷೆಯನ್ನಾಗಿ ಜಾರಿಗೆ ತಂದಾಗ ಪಠ್ಯಪುಸ್ತಕ ರಚನೆ, ಪ್ರಶ್ನೆಪತ್ರಿಕೆ ಹಾಗೂ ಮೌಲ್ಯಮಾಪನ ವಿಧಾನಗಳನ್ನು ರೂಪಿಸುವಲ್ಲಿ ಸಂಸ್ಕೃತದ ಪರವಾದ ಜಾಣತನದ ಹುನ್ನಾರವನ್ನೇ ಎಸಗಿದ್ದಾರೆ ಎಂದರೆ ತಪ್ಪಾಗಲಾರದು.

ಕನ್ನಡ ಎಲ್ಲರಿಗೂ ಗೊತ್ತಿರುವ ಭಾಷೆ, ಸಂಸ್ಕೃತ ಯಾರಿಗೂ ಗೊತ್ತಿಲ್ಲ ಎಂದೊ ಅಥವಾ ಅದು ಯಾರ ಮಾತೃಭಾಷೆಯೂ ಅಲ್ಲ ಎಂಬ ನೆಪದಲ್ಲಿ ತುಂಬಾ ಸರಳ ಹಾಗೂ ಸುಲಭಗೊಳಿಸಿಬಿಟ್ಟಿದ್ದಾರೆ. 8, 9 ಮತ್ತು 10ನೇ ತರಗತಿಗಳಲ್ಲಿ ಬೋಧಿಸುವ ಪ್ರಥಮ ಭಾಷೆ ಸಂಸ್ಕೃತವನ್ನು 'ಆಟಕ್ಕುಂಟು ಲೆಕ್ಕಕ್ಕಿಲ್ಲ' ಎನ್ನುವ ರೀತಿಯಲ್ಲಿ ರೂಪಿಸಲಾಗಿದೆ. ಮೂರು ವರ್ಷ ಪ್ರಥಮ ಭಾಷೆಯಾಗಿ ಸಂಸ್ಕೃತವನ್ನು ಅಧ್ಯಯನ ಮಾಡಿ ಗರಿಷ್ಠ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಕೂಡ ಸಂಸ್ಕೃತದಲ್ಲಿ ಸ್ವಂತವಾಗಿ ಒಂದೆರಡು ಮಾತುಗಳನ್ನು ಆಡಲಾಗಲಿ, ಬರೆಯಲಾಗಲಿ ಬರುವುದಿಲ್ಲ ಎಂದರೆ ಬಹುಶಃ ಉತ್ಪ್ರೇಕ್ಷೆ ಆಗಲಾರದು. ಸಂಸ್ಕೃತವನ್ನಾಗಲಿ, ಹಿಂದಿಯನ್ನಾಗಲಿ ಬೋಧನೆ ಮಾಡುವುದೆಂದರೆ ಬರೀ ಅನುವಾದ ಮಾಡುವುದು, ಅಷ್ಟೆ. ಪಠ್ಯಪುಸ್ತಕದಲ್ಲಿರುವ ಅತ್ಯಂತ ಸರಳವಾದ ಸಂಸ್ಕೃತ ವಾಕ್ಯಗಳನ್ನು ಓದಿ ನಂತರ ಅದನ್ನು ಕನ್ನಡದಲ್ಲಿ ಅನುವಾದಿಸಿ ಹೇಳುವುದು. ಪ್ರಶ್ನೆಗೆ ಉತ್ತರಗಳನ್ನು ಬರೆಸುವುದು, ಕಂಠಪಾಠ ಮಾಡಿಸುವುದು. ಪರೀಕ್ಷೆಯಲ್ಲಿ ಉತ್ತರವನ್ನು ಕನ್ನಡದಲ್ಲಾಗಲಿ, ಇಂಗ್ಲಿಷಿನಲ್ಲಾಗಲಿ ಬರೆಯಬಹುದು. ಸಂಸ್ಕೃತದಲ್ಲೇ ಉತ್ತರ ಬರೆಯಬೇಕಾದ ಸಂದರ್ಭದಲ್ಲಿ ಉರು ಹೊಡೆಸುವುದು. ಉದಾಹರಣೆಗೆ, ಎಂಟು ಅಂಕಗಳ ಪ್ರಬಂಧ ರಚನೆಯ ಪ್ರಶ್ನೆಯನ್ನು ತೆಗೆದುಕೊಳ್ಳಬಹುದು. ಸಂಸ್ಕೃತದಲ್ಲಿ ಕಾಡಿನ ಬಗ್ಗೆ ವಿಷಯವನ್ನು ಕೊಟ್ಟಿದ್ದರೆ, ಈಗಾಗಲೇ ಕಂಠಪಾಠ ಮಾಡಿರುವ ಐದಾರು ವಾಕ್ಯಗಳನ್ನು ಬರೆದರೆ ಸಾಕು ಪೂರ್ಣಾಂಕ ನೀಡಲಾಗುವುದು. ಇದೇ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕೊಡುವುದೆಂಬುದು ಪೂರ್ವನಿರ್ಧರಿತವಾಗಿರುತ್ತದೆ.

ಆದರೆ ಕನ್ನಡದ ವಿಷಯದಲ್ಲಾದರೆ ಪ್ರತಿವರ್ಷ ಬೇರೆ ಬೇರೆ ವಿಷಯಗಳನ್ನು ವಿಭಿನ್ನವಾಗಿ ಕೊಡಲಾಗುತ್ತದೆ. ಮಕ್ಕಳು ಒಂದು ಪೂರ್ಣ ಹಾಳೆಯಷ್ಟು ಉತ್ತರಿಸಬೇಕು. ಪೀಠಿಕೆ, ಬೇರೆ ಬೇರೆ ಪ್ಯಾರಾಗಳಲ್ಲಿ ವಿಷಯದ ಬಗೆಗಿನ ವಿವರಣೆ ಮತ್ತು ಕೊನೆಯಲ್ಲಿ ಪರಿಸಮಾಪ್ತಿಯ ಮಾತುಗಳಿರಬೇಕು. ಇಷ್ಟೆಲ್ಲ ಬರೆದಿದ್ದರೂ ಕನ್ನಡ ಉಪಾಧ್ಯಾಯರು ಪಾಯಿಂಟ್ಸ್ ಸಾಲದು ಅಂತಲೊ, ಕಾಗುಣಿತ ದೋಷ ಇದೆ ಅಂತಲೊ ಪೂರ್ಣಾಂಕ ಕೊಡುವುದೇ ಇಲ್ಲ. ಈ ವಿಷಯದಲ್ಲಿ ಸಂಸ್ಕೃತದ ಮೇಷ್ಟ್ರುಗಳು ತುಂಬಾ ಉದಾರಿಗಳಾಗಿರುತ್ತಾರೆ.

ವರ್ಷಪೂರ್ತಿ ಬೋಧನೆ ಮಾಡಿದರೂ ಮುಗಿಯದ ಗದ್ಯ, ಪದ್ಯ, ಹಳಗನ್ನಡ, ವ್ಯಾಕರಣ, ಛಂದಸ್ಸು, ಅಲಂಕಾರ, ಒಗಟು, ಗಾದೆ, ಪಡೆನುಡಿ-ನುಡಿಗಟ್ಟು, ಜೋಡಿಪದ, ದ್ವಿರುಕ್ತಿ, ಪ್ರಬಂಧ ಹಾಗೂ ಪತ್ರಲೇಖನದಂತಹ ಭರಪೂರ ಪಠ್ಯದಿಂದ ಹೈರಾಣಾಗುವ ಕನ್ನಡ ಶಿಕ್ಷಕ ಮತ್ತು ವಿದ್ಯಾರ್ಥಿಗಳು ಒಂದು ಕಡೆ. ಆರಾಮಾಗಿ ಪಠ್ಯವನ್ನು ಮುಗಿಸಿಕೊಳ್ಳುವ, ಅಷ್ಟೇ ಸುಲಭವಾಗಿ ಅಂಕಗಳನ್ನು ಬುಟ್ಟಿಗೆ ತುಂಬಿಸಿಕೊಳ್ಳುವ ಸಂಸ್ಕೃತದವರು ಮತ್ತೊಂದು ಕಡೆ. ಇದು ಯಾವ ನ್ಯಾಯ? ಕನ್ನಡಕ್ಕೆ ಮತ್ತು ಕನ್ನಡದ ಕಂದಮ್ಮಗಳಿಗೆ ಆಗುತ್ತಿರುವ ಈ ಅನ್ಯಾಯವನ್ನು ಯಾವ ನ್ಯಾಯದ ಗಂಟೆ ಬಾರಿಸಿ ದೂರಲಾದೀತು ಎಂಬುದೇ ಕಗ್ಗಂಟಾಗಿದೆ.



ಶಿಕ್ಷಣ ಇಲಾಖೆಗೆ ಕಡತಗಳ ವಿಲೇವಾರಿಯೇ ಪ್ರಮುಖವಾಗಿಬಿಟ್ಟಿದೆ. ಪೋಷಕರಿಗೆ ಗರಿಷ್ಠ ಅಂಕ ಗಳಿಕೆಯೇ ಶಿಕ್ಷಣ ಎಂಬ ಭ್ರಮೆ ಆವರಿಸಿಕೊಂಡಿದೆ. ಮಕ್ಕಳಿಗಂತೂ ಅನರ್ಥಕಾರಿಯಾದ ಮೃಗೀಯ ಸ್ಪರ್ಧಾ ಪ್ರಪಂಚದಲ್ಲಿ ದಿಕ್ಕುಗಾಣದೆ ತಿಣುಕಾಡುವುದೇ ಬದುಕಾಗಿದೆ. ಸರ್ಕಾರಿ ಇಲಾಖೆಗೆ, ಆಡಳಿತ ಮಂಡಳಿಗೆ ಹೆದರಿಕೊಂಡು ಹೊಟ್ಟೆಹೊರೆಯನ್ನು ಹೊತ್ತು ಕಾಲಯಾಪನೆ ಮಾಡುತ್ತಿರುವ ಅಸಹಾಯಕ ಶಿಕ್ಷಕರು ಸಂಘಟಿತರಾಗಿ ಈ ಅವ್ಯವಸ್ಥೆಯ ವಿರುದ್ಧ ಆಂದೋಲನ ಕೈಗೊಳ್ಳುವುದು ಹಗಲುಗನಸಾದೀತು! ಈ ಘೋರಾರಣ್ಯದಲ್ಲಿ ಹಾದಿ ತಪ್ಪಿರುವ ಶಿಕ್ಷಣವೆಂಬ ಕೂಸನ್ನು ಕಾಪಾಡುವವರು ಯಾರು?

ಈ ನಡುವೆ ಗಣಿತ, ವಿಜ್ಞಾನವೇ ಮುಖ್ಯ ಮತ್ತು ಬುದ್ಧಿವಂತರಿಗೆ ಮೀಸಲು ಎಂಬ ಹಾಗೂ ಭಾಷೆ, ಸಮಾಜವಿಜ್ಞಾನ ಗೌಣ ಮತ್ತು ಜಾಣರಲ್ಲದವರ ಕ್ಷೇತ್ರಗಳು ಎಂಬ ಐತಿಹಾಸಿಕ ಅಜ್ಞಾನವನ್ನು ಹೊಡೆದುರುಳಿಸುವುದು ಕೂಡ ದೊಡ್ಡ ಸವಾಲಿನ ಪ್ರಶ್ನೆಯಾಗಿದೆ.

ಈ ಸಂದರ್ಭದಲ್ಲಿ 'ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯ, ಜ್ಯೋತಿಯ ಬಲದಿಂದ ತಮಂಧದ ಕೇಡು ನೋಡಯ್ಯ, ಸತ್ಯದ ಬಲದಿಂದ ಅಸತ್ಯದ ಕೇಡು ನೋಡಯ್ಯ...' ಎಂಬ ಬಸವಣ್ಣನವರ ವಚನ ನಮ್ಮ ಕಣ್ಣು ತೆರೆಸಬೇಕಾಗಿದೆ.

ವಾಚಕರ ವಾಣಿ

ಶೈಕ್ಷಣಿಕ ಗುಣಮಟ್ಟ ಎತ್ತರಿಸಿ

ಉತ್ತರ ಕರ್ನಾಟಕದ ಹಲವು ಜಿಲ್ಲೆಗಳ ಶೈಕ್ಷಣಿಕ ಗುಣಮಟ್ಟವನ್ನು ಎತ್ತರಿಸುವ ಅಗತ್ಯವಿದೆ. ಈ ಸಲದ ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಮೊದಲ ಹತ್ತು ಸ್ಥಾನಗಳನ್ನು ದಕ್ಷಿಣ ಕರ್ನಾಟಕದ ಜಿಲ್ಲೆಗಳು ಪಡೆದರೆ, ಕೊನೆಯ ಏಳು ಸ್ಥಾನಗಳಲ್ಲಿ ಉತ್ತರ ಕರ್ನಾಟಕದ ಜಿಲ್ಲೆಗಳಿವೆ. ಕಳೆದ ವರ್ಷವೂ ಹೆಚ್ಚು-ಕಡಿಮೆ ಇದೇ ಪರಿಸ್ಥಿತಿ. ಇದು, ವಿದ್ಯಾರ್ಥಿಗಳ ವೃತ್ತಿಜೀವನದ ಮೇಲೆ ನಕಾರಾತ್ಮಕ ಪರಿಣಾಮ ಬೀರುವ ಸಾಧ್ಯತೆಯೇ ಹೆಚ್ಚು.

ಶೈಕ್ಷಣಿಕವಾಗಿ ಹಿಂದುಳಿದ ಜಿಲ್ಲೆಗಳಿಗೆ ಮೂಲ ಸೌಕರ್ಯ ಕಲ್ಪಿಸಲು ಸರ್ಕಾರ ಆಸ್ಥೆ ವಹಿಸಬೇಕು. ಬೋಧನಾ ಗುಣಮಟ್ಟವನ್ನು ಉತ್ತಮಪಡಿಸಲು ಬೇಕಾದ ಕ್ರಮಗಳನ್ನು ಕೈಗೊಳ್ಳಬೇಕು. ಕಲಿಕೆಯನ್ನು ಖಾತರಿಪಡಿಸಿಕೊಳ್ಳಲು ನಿರಂತರ ನಿಗಾ ವ್ಯವಸ್ಥೆ ರೂಪಿಸಬೇಕು. ಇಲ್ಲಿ ಶಿಕ್ಷಕರ ಪಾತ್ರ ಬಹುಮುಖ್ಯ. ಅವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು, ಅಗತ್ಯವಿದ್ದಲ್ಲಿ ಅವರಿಗೆ ವಿಶೇಷ ತರಬೇತಿ ನೀಡಬೇಕು.

ಮಹೇಂದ್ರ ಟಿ.ಎಂ., ಶಂಕರಘಟ್ಟ, ಶಿವಮೊಗ್ಗ

ಶೂನ್ಯ ಫಲಿತಾಂಶ: ಪರಾಮರ್ಶೆ ಅಗತ್ಯ

ಎಸ್‌ಎಸ್‌ಎಲ್‌ಸಿಯಲ್ಲಿ ಈ ಬಾರಿ 144 ಶಾಲೆಗಳು ಶೂನ್ಯ ಫಲಿತಾಂಶ ದಾಖಲಿಸಿವೆ. ಶಿಕ್ಷಣ ಇಲಾಖೆಯ ಉನ್ನತ ಅಧಿಕಾರಿಗಳು ಮತ್ತು ತಜ್ಞರು ಈ ಕುರಿತು ಚಿಂತಿಸುವ ಅಗತ್ಯವಿದೆ. ಶಿಕ್ಷಣ ವ್ಯವಸ್ಥೆಯಲ್ಲಿ ಬದಲಾವಣೆ ತರಬೇಕಾದ ಅಗತ್ಯವನ್ನು ಈ ಅಂಶ ಒತ್ತಿಹೇಳುತ್ತಿದೆ. ಎಳೆಯ ಗಿಡಕ್ಕೆ ಫಲವತ್ತಾದ ಗೊಬ್ಬರ ನೀಡಿ ಬಲಿಷ್ಠ ಮರವನ್ನಾಗಿ ಬೆಳೆಸುವಂತೆ, ಮಕ್ಕಳಿಗೆ ಪ್ರಾಥಮಿಕ ಹಂತದಿಂದಲೇ ಗುಣಮಟ್ಟದ ಶಿಕ್ಷಣ ನೀಡಿ ಅವರನ್ನು ಪೋಷಿಸಬೇಕು.

ಕಲಿಕೆ ಮತ್ತು ಗ್ರಹಿಕೆಯಲ್ಲಿ ನಿರೀಕ್ಷಿತ ಮಟ್ಟಕ್ಕೆ ಏರದ ಮಕ್ಕಳನ್ನು ಮತ್ತೊಂದು ಶೈಕ್ಷಣಿಕ ವರ್ಷಕ್ಕೆ ಅದೇ ತರಗತಿಯಲ್ಲಿ ಉಳಿಸುವ ನಮ್ಮ ಹಿಂದಿನ ವ್ಯವಸ್ಥೆ ಪುನಃ ಜಾರಿಯಾಗಬೇಕು. ಒಂದರಿಂದ ಎಂಟನೇ ತರಗತಿಯವರೆಗೆ ಕನಿಷ್ಠ ಅಂಕ ಪಡೆಯದ ವಿದ್ಯಾರ್ಥಿಗಳನ್ನೂ ಮುಂದಿನ ತರಗತಿಗೆ ಉತ್ತೀರ್ಣವಾಗಿಸುವ ಪದ್ಧತಿ ಬದಲಾಗಲಿ. ಶಿಕ್ಷಕರು ತಮ್ಮ ವೃತ್ತಿಯನ್ನು ಜೀವನೋಪಾಯದ ಹುದ್ದೆ ಅಂತ ಅಂದುಕೊಳ್ಳದೆ, ಮುಂದಿನ ಬಲಿಷ್ಠ ಪ್ರಜೆಗಳ ಗುರುಗಳು ಎಂದು ಹೆಮ್ಮೆಯಿಂದ ಪಾಠ ಕಲಿಸಬೇಕು.

ಚಂದ್ರಶೇಖರ ಪುಟ್ಟಪ್ಪ, ಬೆಂಗಳೂರು

ಸ್ವಚ್ಛತೆ, ಸುಸ್ಥಿರ ಅಭಿವೃದ್ಧಿಗೆ ಗಮನ ಕೊಡಿ

'ನಮ್ಮ ಕಾವೇರಿ ನಮ್ಮ ಹೆಮ್ಮೆ' ಶೀರ್ಷಿಕೆಯಡಿ ಅ.ನ. ಯಲ್ಲಪ್ಪರೆಡ್ಡಿ ಬರೆದಿರುವ ಲೇಖನ (ಪ್ರ.ವಾ., ಏ.3) ಕಣ್ಣು ತೆರೆಸುವಂತಿದೆ. ಕಾವೇರಿ ಆರತಿಗೆ ಒದಗಿಸಿರುವ ₹ 92 ಕೋಟಿ ಅನುದಾನವನ್ನು ಬೇರೆ ರೀತಿಯಲ್ಲಿ ಸದ್ಬಳಕೆ ಮಾಡಿಕೊಳ್ಳುವುದರ ಕುರಿತು ಸರ್ಕಾರ ಚಿಂತನೆ ನಡೆಸಲಿ. ಈ ಅನುದಾನದಿಂದ 10 ಸಾವಿರ ಹೆಕ್ಟೇರ್ ಜೌಗು ಪ್ರದೇಶವನ್ನು ಅಭಿವೃದ್ಧಿ ಮಾಡಬಹುದು ಎಂದು ಲೇಖಕರು ಹೇಳಿದ್ದಾರೆ. ಈ ಕುರಿತು ಸರ್ಕಾರ ಗಂಭೀರವಾಗಿ ಯೋಚಿಸಬೇಕು.

ಆರತಿ ಎಂಬ ವ್ಯರ್ಥ ತೋರಿಕೆಯ ಅವಶ್ಯಕತೆ ಈಗೇಕೆ? ಮಣ್ಣು, ಗಾಳಿ ಮತ್ತು ನೀರು ಈ ನಾಡಿನ ಭವ್ಯ ಸಂಪತ್ತು. ಅವುಗಳು ಕೆಡದಂತೆ ನೋಡಿಕೊಳ್ಳುವುದು ನಮ್ಮ ಜವಾಬ್ದಾರಿ. ಕ್ಷಣಾರ್ಧದ ಇಂತಹ ಖುಷಿಗಿಂತ ಜಲಮೂಲಗಳ ಒಡಲನ್ನು ಸ್ವಚ್ಛಗೊಳಿಸುವುದು ಇಂದಿನ ಅಗತ್ಯ. ಜನರ ತೆರಿಗೆ ಹಣ ಸದುಪಯೋಗ ಆಗಬೇಕು. ಸ್ವಚ್ಛತೆ, ಸುಸ್ಥಿರ ಅಭಿವೃದ್ಧಿ ನಮ್ಮ ಗುರಿಯಾಗಬೇಕು.

ಶುಭಾ ಕೆ.ಆರ್., ದಾವಣಗೆರೆ

ಶಾಸಕರು ಸಂಸ್ಕಾರ ರೂಢಿಸಿಕೊಳ್ಳಲಿ

ವಿಜಯಪುರ ಜಿಲ್ಲೆ ಹಾಗೂ ಬಾಗಲಕೋಟೆ ಜಿಲ್ಲೆಯನ್ನು ಪ್ರತಿನಿಧಿಸುವ ಕಾಂಗ್ರೆಸ್ ಹಾಗೂ ಬಿಜೆಪಿ ಶಾಸಕರ ನಡುವೆ ನಡೆದಿರುವ ವಾಕ್‌ಸಮರ ಹೇಸಿಗೆ ತರುವಂತಿದೆ. ವ್ಯಕ್ತಿ ನೆಲೆಯ ಆರೋಪ- ಪ್ರತ್ಯಾರೋಪಗಳು ಜನರಲ್ಲಿ ರೇಜಿಗೆ ಮೂಡಿಸಿವೆ. ಸಮಾಜಮುಖಿ ಸಂವಾದ, ಚರ್ಚೆಗಳು ಎಂದೋ ಮೂಲೆ ಸೇರಿವೆ.

ಈ ಪ್ರದೇಶ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದೆ. ಅವುಗಳನ್ನು ಪರಿಹರಿಸುವ ದಿಸೆಯಲ್ಲಿ ಪ್ರಯತ್ನ ಮಾಡುವುದು ಬಿಟ್ಟು, ಶಾಸಕರು ಬೈಗುಳಗಳಲ್ಲೇ ಕಾಲಹರಣ ಮಾಡುತ್ತಿರುವಂತಿದೆ. ಇವರನ್ನು ಆಯ್ಕೆ ಮಾಡಿದ ಮತದಾರರು ಪಶ್ಚಾತ್ತಾಪಪಡುವಂತಾಗಿದೆ. ಪ್ರಜಾಪ್ರತಿನಿಧಿಗಳಿಗೆ ಸಂಸ್ಕಾರ ಮುಖ್ಯ. ಭಾಷೆಯ ಕೀಳುಮಟ್ಟದ ಪ್ರಯೋಗವನ್ನು ಗಮನಿಸಿದರೆ ಇವರಲ್ಲಿ ಆ ಕೊರತೆ ದೊಡ್ಡ ಮಟ್ಟದಲ್ಲಿ ಇರುವಂತೆ ಕಾಣುತ್ತಿದೆ. ಇನ್ನಾದರೂ ಸರಿಪಡಿಸಿಕೊಳ್ಳಲಿ.

ವಿ.ಜಿ.ಇನಾಮದಾರ, ಸಾರವಾಡ, ವಿಜಯಪುರ

ಕೋಚಿಂಗ್ ಕೇಂದ್ರಗಳಿಗೆ ಲಗಾಮು ಹಾಕಿ

ಕೋಚಿಂಗ್ ಕೇಂದ್ರಗಳ ಹಾವಳಿ ಕುರಿತು ಗುರುರಾಜ್ ಎಸ್. ದಾವಣಗೆರೆ ಅವರ ವಿಶ್ಲೇಷಣೆ (ಪ್ರ.ವಾ., ಮೇ 2) ವಸ್ತುಸ್ಥಿತಿಗೆ ಕನ್ನಡಿ ಹಿಡಿದಿದೆ. ಇವುಗಳ ಪ್ರಖರ ಬೆಳಕಲ್ಲಿ ಶಾಲೆ-ಕಾಲೇಜುಗಳು ಕಾಣದಾಗಿವೆ. ಒಂದು ಕಾಲ ಇತ್ತು. ಪ್ರವೇಶ ಪಡೆಯಲು ಕೆಲವು ಪ್ರತಿಷ್ಠಿತ ಕಾಲೇಜುಗಳ ಮುಂದೆ ವಿದ್ಯಾರ್ಥಿಗಳು ಮತ್ತು ಪೋಷಕರು ಸಾಲುಗಟ್ಟಿ ನಿಂತಿರುತ್ತಿದ್ದರು. ಈಗ ಪರೀಕ್ಷೆ ಫಲಿತಾಂಶ ಹೊರಬೀಳುವ ಮೊದಲೇ ಕೋಚಿಂಗ್ ಕೇಂದ್ರಗಳಿಗೆ ಎಡತಾಕುವ ಸ್ಥಿತಿ ಉಂಟಾಗಿದೆ.

ಇದರ ನಡುವೆ ಮಕ್ಕಳು ಒತ್ತಡಕ್ಕೆ ಸಿಲುಕಿ ಒದ್ದಾಡುವುದನ್ನು ನೋಡಿದರೆ ಅಯ್ಯೋ ಅನ್ನಿಸುತ್ತದೆ. ಈಗ ಕೋಚಿಂಗ್ ಸೆಂಟರ್‌ಗಳೇ ಕಾಲೇಜುಗಳಿಗಿಂತ ಶಕ್ತಿಶಾಲಿಯಾಗಿವೆ. ಕೆಲವು ಕಾಲೇಜುಗಳ ಜೊತೆ ಒಪ್ಪಂದ ಮಾಡಿಕೊಂಡು ಪೋಷಕರಿಂದ ಲಕ್ಷಾಂತರ ಹಣ ಪೀಕುತ್ತಿವೆ. ಈ ಹಾವಳಿ ಬಗ್ಗೆ ಶಿಕ್ಷಣ ಇಲಾಖೆಗೆ ಗೊತ್ತಿಲ್ಲದಿರುವುದು ಏನೂ ಇಲ್ಲ. ಇಲಾಖೆ ಕಂಡೂ ಕಾಣದಂತೆ ಜಾಣಕುರುಡು ಮತ್ತು ಜಾಣಕಿವುಡನ್ನು ಪ್ರದರ್ಶಿಸುತ್ತಿದೆ.

ಕೆಲವೇ ವಿಷಯಗಳನ್ನು ಬೋಧಿಸುವ ಈ ಕೇಂದ್ರಗಳು ಮಕ್ಕಳನ್ನು ಮೌಲ್ಯಾಧಾರಿತ ಶಿಕ್ಷಣದಿಂದ ವಂಚಿತರನ್ನಾಗಿ ಮಾಡುತ್ತಿವೆ. ಕ್ರೀಡೆ, ಸಂಸ್ಕೃತಿಕ ವಾತಾವರಣದಿಂದ ದೂರಮಾಡುತ್ತಿವೆ. ನಿಯಂತ್ರಣಕ್ಕೆ ಈಗಲಾದರೂ ಸರ್ಕಾರ ಮುಂದಾಗಲಿ.

ಎಚ್.ಎಸ್.ಸನತ್ ಕುಮಾರ್, ಚಂದಾಪುರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.



ಮಹಿಳೆ ಮೇಲೆ ದೌರ್ಜನ್ಯ ಕುಟುಂಬದಿಂದಲೇ ಹೆಚ್ಚು

ಭಾರತದಲ್ಲಿ ಈಗಲೂ ಮಹಿಳೆಯರ ವಿರುದ್ಧದ ವಿವಿಧ ರೀತಿಯ ದೌರ್ಜನ್ಯ ಪ್ರಕರಣಗಳು ಅತ್ಯಂತ ಸಾಮಾನ್ಯ ಎಂಬಂತೆ ನಡೆಯುತ್ತಿದ್ದು, ಗಮನಾರ್ಹ ಪ್ರಮಾಣದಲ್ಲಿ ವರದಿಯಾಗುತ್ತಲೇ ಇವೆ. ಅವುಗಳಲ್ಲಿ ಕೌಟುಂಬಿಕ ದೌರ್ಜನ್ಯದ ಪ್ರಕರಣಗಳು ಅಗ್ರಸ್ಥಾನ ಪಡೆದಿವೆ. ಈ ದಿಸೆಯಲ್ಲಿ ರಾಷ್ಟ್ರೀಯ ಮಹಿಳಾ ಆಯೋಗದ ಅಂಕಿಅಂಶಗಳು ವಾಸ್ತವಕ್ಕೆ ಕನ್ನಡಿ ಹಿಡಿಯುತ್ತವೆ. ಮಹಿಳೆಯರು ಅನೇಕ ರಂಗಗಳಲ್ಲಿ ದಾಪುಗಾಲಿಡುತ್ತಾ ನಾಗುತ್ತಿರುವಾಗ, ಮನೆಯಲ್ಲೇ ಆಕೆಯ ಮೇಲೆ ಹಿಂಸೆ, ದೌರ್ಜನ್ಯ, ಹಲ್ಲೆಗಳು ಅತಿ ಸಾಮಾನ್ಯ ಎಂಬಂತೆ ನಡೆಯುತ್ತಿರುವುದು ಕಳವಳಕಾರಿಯಾದ ವಿಚಾರವಾಗಿದೆ

ಪ್ರಜಾವಾಣಿ ವಾರ್ತೆ

ಭಾರತದಲ್ಲಿ ಮಹಿಳೆಯರ ಮೇಲೆ ನಡೆಯುವ ಶೋಷಣೆಗೆ ಸಂಬಂಧಿಸಿದಂತೆ ರಾಷ್ಟ್ರೀಯ ಮಹಿಳಾ ಆಯೋಗದಲ್ಲಿ ದಾಖಲಾದ ದೂರುಗಳ ಪೈಕಿ ಕೌಟುಂಬಿಕ ಹಿಂಸೆ, ಹಲ್ಲೆ, ಕ್ರಿಮಿನಲ್ ಬೆದರಿಕೆ ಅಗ್ರ ಸ್ಥಾನ ಪಡೆದಿವೆ. ಈ ವರ್ಷದ ಮೊದಲ ನಾಲ್ಕು ತಿಂಗಳಲ್ಲಿ (ಮೇ 2ರವರೆಗೆ) ಆಯೋಗದಲ್ಲಿ 7,698 ಪ್ರಕರಣಗಳು ದಾಖಲಾಗಿವೆ. ಈ ಪೈಕಿ 1,594 ದೂರುಗಳು ಕೌಟುಂಬಿಕ ದೌರ್ಜನ್ಯಕ್ಕೆ ಸಂಬಂಧಿಸಿವೆ.

ಮಹಿಳೆಯರ ವಿರುದ್ಧ ಅತಿ ಸಾಮಾನ್ಯ ಎನ್ನುವಂತೆ ದೌರ್ಜನ್ಯ, ಹಲ್ಲೆಗಳು ನಡೆಯುತ್ತಿವೆ. ಈ ವರ್ಷದ ಮೊದಲ ನಾಲ್ಕು ತಿಂಗಳಲ್ಲಿ ಆಯೋಗದಲ್ಲಿ ದಾಖಲಾಗಿರುವ ದೂರುಗಳಲ್ಲಿ ಕೌಟುಂಬಿಕ ಹಿಂಸೆಯ ಪ್ರಮಾಣ ಶೇ 20ರಷ್ಟು ಇದೆ. ಎರಡನೆಯ ಸ್ಥಾನದಲ್ಲಿ ಕ್ರಿಮಿನಲ್ ಬೆದರಿಕೆ, ಮೂರನೇ ಸ್ಥಾನದಲ್ಲಿ ಹಲ್ಲೆ ಪ್ರಕರಣಗಳು ಇವೆ.

ವರದಕ್ಷಿಣೆ ಕಿರುಕುಳ, ಅತ್ಯಾಚಾರ, ಅತ್ಯಾಚಾರ ಯತ್ನ, ಸೈಬರ್ ಅಪರಾಧಗಳು ನಂತರದ ಸ್ಥಾನಗಳಲ್ಲಿವೆ. ಇವುಗಳಲ್ಲದೇ, ದ್ವಿಪತ್ನಿತ್ವ, ಕೆಲಸದ ಸ್ಥಳದಲ್ಲಿ ಲೈಂಗಿಕ ದೌರ್ಜನ್ಯ, ಪೀಡನಯ ದೂರುಗಳೂ ದಾಖಲಾಗಿವೆ.

ಮಹಿಳಾ ಪೀಡನೆ ಎಂಬ ಸಾಂಕ್ರಾಮಿಕ

ಮಹಿಳೆಯರ ಮೇಲಿನ ಹಿಂಸೆಯು ಜಗತ್ತಿನಾದ್ಯಂತ ಸಾಂಕ್ರಾಮಿಕದಂತೆ ಹರಡಿದ್ದು, ಪ್ರಮುಖ ಸಮಸ್ಯೆಯಾಗಿಯೇ ಉಳಿದಿದೆ. ಮೂರರಲ್ಲಿ ಒಬ್ಬ ಮಹಿಳೆ ತನ್ನ ಜೀವಿತಾವಧಿಯಲ್ಲಿ ದೈಹಿಕ ಅಥವಾ ಲೈಂಗಿಕ ಹಿಂಸೆ ಅನುಭವಿಸುತ್ತಾಳೆ. ಪ್ರತಿ ನಾಲ್ವರು ಬಾಲಕಿಯರಲ್ಲಿ ಒಬ್ಬಳು ತನ್ನ ಪರಿಚಿತರಿಂದಲೇ ನಿಂದನೆ ಅನುಭವಿಸುತ್ತಾಳೆ ಎಂದು ವಿಶ್ವಸಂಸ್ಥೆ ತಿಳಿಸಿದೆ.

ಮಹಿಳೆಯರು ಎಲ್ಲಿಯವರೆಗೆ ಹಿಂಸೆಯ ಭಯದಿಂದ ಹೊರಬರುವುದಿಲ್ಲವೋ ಅಲ್ಲಿಯವರೆಗೆ ಲಿಂಗ ಸಮಾನತೆ (ಸುಸ್ಥಿರ ಅಭಿವೃದ್ಧಿ ಗುರಿ 5) ಸಾಧಿಸುವುದು ಸಾಧ್ಯವಿಲ್ಲ ಎಂದು ಅದು ಪ್ರತಿಪಾದಿಸಿದೆ.

ಉತ್ತರ ಪ್ರದೇಶದಲ್ಲಿ ಅತಿ ಹೆಚ್ಚು: ಮಹಿಳೆಯರ ಶೋಷಣೆ, ದೌರ್ಜನ್ಯಕ್ಕೆ ಸಂಬಂಧಿಸಿದ ದೂರುಗಳಲ್ಲಿ ಉತ್ತರ ಪ್ರದೇಶ (3,921) ಮೊದಲ ಸ್ಥಾನದಲ್ಲಿದೆ. ಒಟ್ಟು ದೂರುಗಳ ಪೈಕಿ ಶೇ 50ರಷ್ಟು ಪ್ರಕರಣಗಳು ಉತ್ತರ ಪ್ರದೇಶದಲ್ಲಿಯೇ ದಾಖಲಾಗಿವೆ. ದೆಹಲಿ ಎರಡನೇ ಸ್ಥಾನದಲ್ಲಿದ್ದರೆ, ಮಹಾರಾಷ್ಟ್ರ ಮೂರನೇ ಸ್ಥಾನ ಪಡೆದಿದೆ. ಮಧ್ಯಪ್ರದೇಶ, ಬಿಹಾರ, ಹರಿಯಾಣದಲ್ಲಿಯೂ ಹೆಚ್ಚಿನ ಸಂಖ್ಯೆಯ ದೂರುಗಳು ಸಲ್ಲಿಕೆಯಾಗಿವೆ.

ರಾಷ್ಟ್ರೀಯ ಮಹಿಳಾ ಆಯೋಗದಲ್ಲಿ ಕಳೆದ ವರ್ಷ (2024) 25,743 ದೂರುಗಳು ದಾಖಲಾಗಿದ್ದವು. ಇವುಗಳ ಪೈಕಿ ಘನತೆಯಿಂದ ಜೀವಿಸುವ ಹಕ್ಕು (ಶೇ 28) ಮತ್ತು ಕೌಟುಂಬಿಕ ಹಿಂಸೆಗೆ (ಶೇ 24) ಸಂಬಂಧಿಸಿದ ದೂರುಗಳೇ ಅಧಿಕವಾಗಿದ್ದವು. ವರದಕ್ಷಿಣೆಗೆ ಸಂಬಂಧಿಸಿದ ದೂರುಗಳ ಪ್ರಮಾಣ 4,383 (ಶೇ 17ರಷ್ಟು). ವರದಕ್ಷಿಣೆ ಸಾವಿನ ಸಂಬಂಧ 292 ದೂರುಗಳು ಸಲ್ಲಿಕೆಯಾಗಿದ್ದವು. ಕಳೆದ ವರ್ಷವೂ ಉತ್ತರ ಪ್ರದೇಶ, ದೆಹಲಿ, ಮಹಾರಾಷ್ಟ್ರದಿಂದ ಹೆಚ್ಚು ದೂರುಗಳು ದಾಖಲಾಗಿವೆ.

2023ಕ್ಕೆ ಹೋಲಿಸಿದರೆ, 2024ರಲ್ಲಿ ದೂರುಗಳ ಸಂಖ್ಯೆ ಕಡಿಮೆ ಆಗಿದೆ. ಆದರೆ, ಕೋವಿಡ್‌ಗೂ ಹಿಂದಿನ ವರ್ಷಗಳಿಗೆ ಹೋಲಿಸಿದರೆ, ದೂರುಗಳ ಸಂಖ್ಯೆ ಹೆಚ್ಚಿದೆ. ಕೋವಿಡ್ ನಂತರದ ವರ್ಷಗಳಲ್ಲಿ ದೂರುಗಳ ಪ್ರಮಾಣದಲ್ಲಿ ವಿಪರೀತ ಏರಿಕೆಯಾಗಿತ್ತು. 2019ರಲ್ಲಿ 19,730 ದೂರುಗಳು ದಾಖಲಾಗಿದ್ದರೆ, 2020ರಲ್ಲಿ 23,722, 2021ರಲ್ಲಿ 30,865, 2022ರಲ್ಲಿ 30,957 ದೂರುಗಳು ಸಲ್ಲಿಕೆಯಾಗಿದ್ದವು. ಭಾರತದಲ್ಲಿ ಅಷ್ಟೇ ಅಲ್ಲ, ಜಾಗತಿಕ ಮಟ್ಟದಲ್ಲಿಯೂ ಕೋವಿಡ್ ವೇಳೆ ಮಹಿಳೆಯರ ವಿರುದ್ಧದ ದೌರ್ಜನ್ಯ ಪ್ರಕರಣಗಳು ಹೆಚ್ಚಾಗಿದ್ದವು.

ಆಧಾರ: ಪಿಟಿಐ, ವಿಶ್ವಸಂಸ್ಥೆ ವೆಬ್‌ಸೈಟ್, ಮಹಿಳಾ ಆಯೋಗದ ವಾರ್ಷಿಕ ವರದಿಗಳು





ದೂರು ನೀಡುವುದು ಹೇಗೆ?

- ಆಯೋಗದ ಅಧಿಕೃತ ವೆಬ್‌ಸೈಟ್ ncwapps.nic.in ಮೂಲಕ ದೂರು ನೀಡಬಹುದು. ವೆಬ್‌ಸೈಟ್‌ನಲ್ಲಿ ಆನ್‌ಲೈನ್ ದೂರು ಸಲ್ಲಿಕೆಗೆ ಪ್ರತ್ಯೇಕ ವಿಭಾಗವೇ ಇದೆ
- ಲಿಖಿತ ದೂರುಗಳನ್ನು (ಪೂರಕ ದಾಖಲೆಗಳು ಇದ್ದರೆ ಅವುಗಳನ್ನೂ ಸೇರಿಸಿ) ಅಂಚೆ ಮೂಲಕ / ನೇರವಾಗಿ ಕಚೇರಿಗೆ ಹೋಗಿ ನೀಡಬಹುದು
- ದೂರು ನೀಡುವ ಮಹಿಳೆಯರು ಆ ದೂರಿನಲ್ಲಿ ಘಟನೆಯ ಸಂಪೂರ್ಣ ವಿವರಗಳನ್ನು ನೀಡಬೇಕು. ವಿಳಾಸ, ದೂರವಾಣಿ ಸಂಖ್ಯೆ ಸೇರಿದಂತೆ ವೈಯಕ್ತಿಕ ವಿವರಗಳನ್ನೂ ನೀಡಬೇಕು
- ವರದಕ್ಷಿಣೆ ಕಿರುಕುಳ, ಕೌಟುಂಬಿಕ ದೌರ್ಜನ್ಯ, ಅತ್ಯಾಚಾರ, ಲೈಂಗಿಕ ಕಿರುಕುಳ, ಘನತೆಯ ಬದುಕಿನ ಹಕ್ಕಿಗೆ ಧಕ್ಕೆ ತರುವುದೂ ಸೇರಿದಂತೆ 19 ರೀತಿಯ ಪ್ರಕರಣಗಳಲ್ಲಿ ಮಹಿಳೆಯರು ಆಯೋಗಕ್ಕೆ ದೂರು ನೀಡಬಹುದು
- ದೂರಿಗೆ ಸಂಬಂಧಿಸಿದ ವಿಚಾರಣೆಗಳಿಗಾಗಿ 011-26944880 / 26944883 ಸಂಖ್ಯೆಗೆ ಕರೆಯನ್ನೂ ಮಾಡಬಹುದು

ನೆರವಿಗೆ ಸಹಾಯವಾಣಿ

ಸಂಕಷ್ಟದಲ್ಲಿರುವ ಮಹಿಳೆಯರಿಗೆ ಆನ್‌ಲೈನ್‌ನಲ್ಲಿ ನೆರವಾಗುವುದಕ್ಕಾಗಿ ಮಹಿಳಾ ಆಯೋಗವು 2021ರ ಜುಲೈ 27ರಂದು ವಾರದ ಏಳೂ ದಿನಗಳಲ್ಲಿ ದಿನದ 24 ಗಂಟೆಯೂ ಕಾರ್ಯನಿರ್ವಹಿಸುವ ಸಹಾಯವಾಣಿಯನ್ನು (7827170170) ಆರಂಭಿಸಿತ್ತು. ನೆರವಿಗಾಗಿ ಕರೆ ಮಾಡುವ ಮಹಿಳೆಯರಿಗೆ ಅಪ್ತಸಮಾಲೋಚನೆ ಒದಗಿಸಲಾಗುತ್ತದೆ. ಸಂಬಂಧಿಸಿದ ಪೊಲೀಸ್ ಅಧಿಕಾರಿಗಳು, ಆಸ್ಪತ್ರೆಗಳು ಮತ್ತು ಕಾನೂನು ಸೇವೆ ಪಡೆಯಲು ನೆರವಾಗುತ್ತದೆ. 2023–24ರಲ್ಲಿ ಈ ಸಹಾಯವಾಣಿಗೆ 2,37,322 ಕರೆಗಳು ಬಂದಿವೆ.

ರಾಜ್ಯದಿಂದ ಕಡಿಮೆ ದೂರುಗಳು

2023–24ನೇ ಸಾಲಿನಲ್ಲಿ ಮಹಿಳಾ ಆಯೋಗದಲ್ಲಿ ಹೆಚ್ಚು ದೂರು ದಾಖಲಾದ 10 ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕ 10ನೇ ಸ್ಥಾನ ಪಡೆದಿದೆ. ಉತ್ತರ ಪ್ರದೇಶ (15,762), ದೆಹಲಿ (2,387), ಮಹಾರಾಷ್ಟ್ರ (1,445), ಬಿಹಾರ (1,271), ಮಧ್ಯಪ್ರದೇಶ (1,148), ಹರಿಯಾಣ (1,142) ರಾಜ್ಯಗಳಿಗೆ ಹೋಲಿಸಿದರೆ ರಾಜ್ಯದಿಂದ ದಾಖಲಾದ ದೂರುಗಳ ಸಂಖ್ಯೆ ಕಡಿಮೆ ಇದೆ. 552 ದೂರುಗಳಷ್ಟೆ ದಾಖಲಾಗಿವೆ.



ದುಡಿಯುವವರ ಮೇಲೆ ಹೆಚ್ಚು ಹಿಂಸೆ

ದುಡಿಯುವ ಮಹಿಳೆಯರ ಮೇಲೆ ಕೌಟುಂಬಿಕ ದೌರ್ಜನ್ಯ, ಹಲ್ಲೆಗಳು ಹೆಚ್ಚು ನಡೆಯುತ್ತಿವೆ ಎಂದು ಅಧ್ಯಯನಗಳು ಹೇಳುತ್ತವೆ. ದುಡಿಯುವ ಮಹಿಳೆಯು ಆರ್ಥಿಕವಾಗಿ ಸ್ವಾವಲಂಬಿ ಆಗಿರುತ್ತಾಳೆ. ತನ್ನ ಹಕ್ಕುಗಳ ಬಗ್ಗೆ ಆಕೆಗೆ ಒಂದು ಮಟ್ಟದ ತಿಳಿವಳಿಕೆ ಇರುತ್ತದೆ. ಇಂಥವೇ ಕಾರಣಗಳಿಂದ ಆಕೆಯು ತನ್ನ ಗಂಡ ಸೇರಿದಂತೆ ಆತನ ಮನೆಯ ಸದಸ್ಯರಿಂದ ಅನೇಕ ರೀತಿಯ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಉದ್ಯೋಗಸ್ಥ ಮಹಿಳೆಯರ ಮೇಲೆ ಸಂಗಾತಿಯಿಂದ ನಡೆಯುವ ಹಿಂಸೆ ಪ್ರಕರಣಗಳು ಹೆಚ್ಚು ಎಂದು ಅಧ್ಯಯನಗಳು ತಿಳಿಸಿವೆ.

ಸ್ವಯಂಪ್ರೇರಿತ ಪ್ರಕರಣ

ಕೆಲವು ಗಂಭೀರ ಪ್ರಕರಣಗಳಲ್ಲಿ ರಾಷ್ಟ್ರೀಯ ಮಹಿಳಾ ಆಯೋಗವು ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಳ್ಳುತ್ತದೆ. ಸಂಬಂಧಿಸಿದ ಇಲಾಖೆಗಳಿಂದ ಕ್ರಮ ಕೈಗೊಂಡ ವರದಿಯನ್ನೂ ಪಡೆಯುತ್ತದೆ. ಅಪರೂಪದ ಪ್ರಕರಣಗಳಲ್ಲಿ ಸತ್ಯ ಶೋಧನಾ ಸಮಿತಿಯನ್ನು ರಚಿಸುತ್ತದೆ. 2023–24ರಲ್ಲಿ 273 ಪ್ರಕರಣಗಳನ್ನು ಆಯೋಗ ಸ್ವಯಂಪ್ರೇರಿತವಾಗಿ ಕೈಗೆತ್ತಿಕೊಂಡಿತ್ತು. 132 ಪ್ರಕರಣಗಳನ್ನು ಮುಕ್ತಾಯಗೊಳಿಸಿದ್ದರೆ, 19 ಸತ್ಯಶೋಧನಾ ಸಮಿತಿ ರಚಿಸಿತ್ತು.

ರಾಷ್ಟ್ರೀಯ

ಭಾರತಕ್ಕೆ ಪಾಲುದಾರರು ಬೇಕೇ ವಿನಾ ಬೋಧಕರಲ್ಲ: ಜೈಶಂಕರ್



ಎಸ್‌.ಜೈಶಂಕರ್

ನವದೆಹಲಿ (ಪಿಟಿಐ): ಭಾರತವು ಪಾಲುದಾರರನ್ನು ಎದುರು ನೋಡುತ್ತಿದೆಯೇ ವಿನಾ ಉಪದೇಶ ಮಾಡುವವರನ್ನಲ್ಲ. ಭಾರತದೊಂದಿಗೆ ದ್ವಿಪಕ್ಷೀಯ ಸಂಬಂಧ ವೃದ್ಧಿ ವಿಷಯದಲ್ಲಿ ಯುರೋಪ್ ಸಂವೇದನಾಶೀಲತೆ ಮತ್ತು ಸಮಾನ ಹಿತಾಸಕ್ತಿಯನ್ನು ವ್ಯಕ್ತಪಡಿಸಬೇಕೆಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಶನಿವಾರ ಹೇಳಿದರು.

ಆರ್ಕಟಿಕ್ ಸರ್ಕಲ್ ಇಂಡಿಯಾ ಫೋರಂನಲ್ಲಿ ನಡೆದ ಸಂವಾದದಲ್ಲಿ ಮಾತನಾಡಿದ ಅವರು, 'ರಷ್ಯಾ-ವಾಸ್ತವಿಕವಾದ'ವನ್ನು ಪ್ರತಿಪಾದಿಸಿದರು. ಭಾರತ ಮತ್ತು ರಷ್ಯಾ ಮಧ್ಯೆ ಸಂಪನ್ಮೂಲ ಪೂರೈಕೆದಾರ ಮತ್ತು ಗ್ರಾಹಕ ರಾಷ್ಟ್ರಗಳಾಗಿ 'ಮಹತ್ವವಾದ ಮತ್ತು ಪರಸ್ಪರ ಪೂರಕ ಬಂಧ' ಇದೆ ಎಂದು ಪ್ರತಿಪಾದಿಸಿದರು.

ರಷ್ಯಾವನ್ನು ಹೊರಗಿಟ್ಟು ರಷ್ಯಾ–ಉಕ್ರೇನ್ ಯುದ್ಧಕ್ಕೆ ಪರಿಹಾರ ಹುಡುಕಲು ಯತ್ನಿಸಿದ ಪಶ್ಚಿಮದ ದೇಶಗಳ ಯತ್ನವನ್ನು ಅವರು ಟೀಕಿಸಿದರು.

'ರಷ್ಯಾದ ವಾಸ್ತವಿಕವಾದವನ್ನು ಪ್ರತಿಪಾದಿಸಿದಂತೆ, ಅಮೆರಿಕ ವಾಸ್ತವಿಕವಾದವನ್ನೂ ಪ್ರತಿಪಾದಿಸುವೆ' ಎಂದರು.

ಯುರೋಪ್‌ನಿಂದ ನಿರೀಕ್ಷೆಗಳು ಏನು ಎಂದು ಕೇಳಿದಾಗ, 'ನಾವು ಪಾಲುದಾರರ ಹುಡುಕಾಟದಲ್ಲಿದ್ದೇವೆ; ಉಪದೇಶ ಮಾಡುವವರನ್ನಲ್ಲ. ಪಾಲುದಾರ ರಾಷ್ಟ್ರಗಳ ನಡುವೆ ಸಂವೇದನಾಶೀಲತೆ, ಸಮಾನ ಹಿತಾಸಕ್ತಿ ಇರಬೇಕು. ಜಗತ್ತು ಹೇಗೆ ಕಾರ್ಯನಿರ್ವಹಿಸುತ್ತದೆ ಎಂಬುದರ ಬಗ್ಗೆ ಜ್ಞಾನ ಇರಬೇಕು' ಎಂದು ಹೇಳಿದರು.

'ಗಣತಿ; ಕಾಲಮಿತಿಗೆ ಬದ್ಧರಾಗಿರಿ'

ನವದೆಹಲಿ (ಪಿಟಿಐ): 'ಪ್ರಧಾನಿ ನರೇಂದ್ರ ಮೋದಿ ಅವರು ಜಾತಿ ಜನಗಣತಿ ವಿಷಯದಲ್ಲಿ 'ಹಠಾತ್ತಾಗಿ ಯು-ಟರ್ನ್' ಹೊಡೆದಿದ್ದು, ಆ ವಿಚಾರದಲ್ಲಿ ಸರ್ಕಾರದ ನೀತಿಯು ಅಧಿಕೃತವಾಗಿ ಬದಲಾಗಿರುವುದು ಹೌದು ಎಂಬುದನ್ನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳಬೇಕು' ಎಂದು ಕಾಂಗ್ರೆಸ್ ಆಗ್ರಹಿಸಿದೆ. ಸಮೀಕ್ಷೆ ನಡೆಸುವ ವಿಚಾರದಲ್ಲಿ ಕಾಲಮಿತಿ ನಿಗದಿಪಡಿಸುವ ಬದ್ಧತೆಯನ್ನು ಕೂಡ ತೋರಬೇಕು ಎಂದು ಒತ್ತಾಯಿಸಿದೆ.

'ಜಾತಿ ಜನಗಣತಿ ವಿಚಾರದಲ್ಲಿ ಏಕಾಏಕಿ ಹಠಾತ್ತಾಗಿ ಪ್ರಧಾನಿ ಯು-ಟರ್ನ್ ಹೊಡೆದಿದ್ದಾರೆ' ಎಂದು ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಹೇಳಿದ್ದಾರೆ.

'2024ರ ಏಪ್ರಿಲ್ 28ರಂದು ಸುದ್ದಿವಾಹಿನಿಯೊಂದಕ್ಕೆ ನೀಡಿದ್ದ ಸಂದರ್ಶನದಲ್ಲಿ, 'ಜಾತಿ ಜನಗಣತಿ ಕುರಿತು ಬೇಡಿಕೆ ಇಡುತ್ತಿರುವವರೆಲ್ಲರೂ 'ಅರ್ಬನ್ ನಕ್ಸಲರು' ಎಂದು ಪ್ರಧಾನಿ ಮೋದಿ ಟೀಕಿಸಿದ್ದರು. 2021ರ ಜುಲೈ 20ರಂದು ಸಂಸತ್ತಿನಲ್ಲಿ ಲಿಖಿತವಾಗಿ ಉತ್ತರ ನೀಡಿದ್ದ ಕೇಂದ್ರ ಗೃಹ ಸಚಿವಾಲಯ, 'ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಹೊರತಾಗಿ ಎಲ್ಲ ಸಮುದಾಯಗಳ ಜಾತಿ ಜನಗಣತಿ ಸರ್ಕಾರದ ನೀತಿಯ ಭಾಗವಾಗಿಲ್ಲ ಎಂದು ಸ್ಪಷ್ಟಪಡಿಸಿತ್ತು' ಎಂದಿದ್ದಾರೆ.

'ಕಳೆದ 11 ವರ್ಷಗಳಲ್ಲಿ ಸತತವಾಗಿ ವಿರೋಧಿಸಿ, ಕಾಂಗ್ರೆಸ್ ಪಕ್ಷದ ಬೇಡಿಕೆಯನ್ನು ತಿರಸ್ಕರಿಸಿದ್ದ ಕೇಂದ್ರದ ಬಿಜೆಪಿ ಸರ್ಕಾರ, ಕೊನೆಗೂ ಬೇಡಿಕೆ ಈಡೇರಿಸಲು ಸಮ್ಮತಿ ನೀಡಿದೆ. ಮುಂದಿನ ಜನಗಣತಿ ವೇಳೆ ಜಾತಿ ಜನಗಣತಿಯನ್ನು ನಡೆಸುವುದಾಗಿ ಸರ್ಕಾರ ತಿಳಿಸಿದೆ. ಈ ವಿಷಯದಲ್ಲಿ ಸರ್ಕಾರದ ಉದ್ದೇಶ ಏನು ಎಂಬುದರ ಮಾಹಿತಿ ನೀಡಿಲ್ಲ. ಅಲ್ಲದೇ, ಹಣಕಾಸು ಹಂಚಿಕೆಯನ್ನು ಮಾಡಿಲ್ಲ' ಎಂದು ರಮೇಶ್ ಟೀಕಿಸಿದ್ದಾರೆ.

ಮೀಸಲಾತಿಯಲ್ಲಿ ಈಗಿರುವ ಶೇ 50ರ ಮಿತಿಯನ್ನು ತೆಗೆದು ಹಾಕಬೇಕು ಎಂದು ಕಾಂಗ್ರೆಸ್ ಒತ್ತಾಯಿಸಿದೆ. ಸಂವಿಧಾನದ ವಿಧಿ 15 (5) ಅನ್ನು ತುರ್ತಾಗಿ ಜಾರಿ ಮಾಡುವ ಮೂಲಕ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿಯೂ ಒಬಿಸಿ, ದಲಿತ, ಆದಿವಾಸಿ ಸಮುದಾಯಗಳಿಗೂ ಮೀಸಲಾತಿ ಜಾರಿಗೆ ತರಬೇಕು ಎಂದು ಆಗ್ರಹಿಸಿದೆ.

'ನಾಸಾದಿಂದ ಸಂಸ್ಕೃತ ಅಧ್ಯಯನ'

ನವದೆಹಲಿ (ಪಿಟಿಐ): 'ಸಂಸ್ಕೃತವು ವೈಜ್ಞಾನಿಕ ಭಾಷೆಯಾಗಿದೆ. ಈ ಬಗ್ಗೆ ಅಮೆರಿಕದ ಬಾಹ್ಯಾಕಾಶ ಸಂಸ್ಥೆ ನಾಸಾ ಅಧ್ಯಯನ ವರದಿಯನ್ನೂ ಪ್ರಕಟಿಸಿತ್ತು' ಎಂದು ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ ಅವರು ಭಾನುವಾರ ಹೇಳಿದ್ದಾರೆ.

ಸಂಸ್ಕೃತ ಭಾರತಿ ಎನ್‌ಜಿಒ ಸಹಯೋಗದಲ್ಲಿ ದೆಹಲಿ ಸರ್ಕಾರವು 10 ದಿನಗಳಿಂದ ನಡೆಸಿದ ಸಂಸ್ಕೃತ ಕಲಿಕಾ ಕಾರ್ಯಾಗಾರ ಭಾನುವಾರ ಕೊನೆಗೊಂಡಿತು. ಅದರ ಸಮಾರೋಪ ಸಮಾರಂಭದಲ್ಲಿ ರೇಖಾ ಪಾಲ್ಗೊಂಡಿದ್ದರು.

ಈ ವೇಳೆ ಮಾತನಾಡಿದ ಅವರು, 'ಸಂಸ್ಕೃತ ಒಂದು ವೈಜ್ಞಾನಿಕ ಭಾಷೆಯಾಗಿದ್ದು, ಆ ಭಾಷೆಯಲ್ಲಿ ಕೋಡಿಂಗ್ ಕೂಡ ಮಾಡಬಹುದು. ಸಂಸ್ಕೃತ ಕಂಪ್ಯೂಟರ್‌ಸ್ನೇಹಿ ಭಾಷೆ ಎಂಬುದನ್ನು ಖುದ್ದು ನಾಸಾದ ವಿಜ್ಞಾನಿಗಳು ದೃಢಪಡಿಸಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಅಧ್ಯಯನ ವರದಿಯನ್ನೂ ರಚಿಸಿದ್ದಾರೆ' ಎಂದಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಪಹಲ್ಗಾಮ್ ಭಯೋತ್ಪಾದನಾ ದಾಳಿಯ ನಂತರ ಪಾಕಿಸ್ತಾನವು ಜಮ್ಮು ಮತ್ತು ಕಾಶ್ಮೀರದ ಗಡಿಯಲ್ಲಿ ಕದನವಿರಾಮ ಉಲ್ಲಂಘಿಸುತ್ತಿರುವುದರ ನಡುವೆಯೇ ಪೂಂಛ್ ವಲಯದ ಎಲ್‌ಒಸಿಯಲ್ಲಿ ಭಾರತದ ರಫೇಲ್ ಯುದ್ಧವಿಮಾನವನ್ನು ಪಾಕಿಸ್ತಾನ ಹೊಡೆದುರುಳಿಸಿದೆ ಎಂದು ಪ್ರತಿಪಾದಿಸುತ್ತಾ ನೆಲಕ್ಕೆ ಬಿದ್ದ ಯುದ್ಧವಿಮಾನವೊಂದು ಹೊತ್ತಿ ಉರಿಯುತ್ತಿರುವ ವಿಡಿಯೊವೊಂದನ್ನು ಎಕ್ಸ್‌ನಲ್ಲಿ ಹಂಚಿಕೊಳ್ಳಲಾಗಿದೆ. ಆದರೆ, ಇದು ಸುಳ್ಳು.

ವಿಡಿಯೊದ ಕೀ ಫ್ರೇಮ್‌ಗಳ ಪೈಕಿ ಒಂದನ್ನು ಗೂಗಲ್ ಲೆನ್ಸ್‌ನಲ್ಲಿ ಹಾಕಿದಾಗ 2024ರ ಜೂನ್ 4ರಂದು ಇಟಿವಿ ಸುದ್ದಿ ವಾಹಿನಿ ಇದೇ ವಿಡಿಯೊವನ್ನು 'ಇನ್‌ಸ್ಟಾಗ್ರಾಂ'ನಲ್ಲಿ ಅಪ್‌ಲೋಡ್ ಮಾಡಿರುವುದು ಸಿಕ್ಕಿತು. ಈ ವಿಡಿಯೊ ಇತ್ತೀಚಿನದ್ದಲ್ಲ ಎಂಬುದು ಇದರಿಂದ ದೃಢಪಟ್ಟಿತು. ಮಹಾರಾಷ್ಟ್ರದ ನಾಸಿಕ್‌ನಲ್ಲಿ ಭಾರತೀಯ ವಾಯು ಪಡೆಯ ಸುಖೋಯ್ ಯುದ್ಧವಿಮಾನ ಪತನವಾಗಿದ್ದ ದೃಶ್ಯ ಅದಾಗಿತ್ತು. ಈ ಬಗ್ಗೆ ಹುಡುಕಾಟ ನಡೆಸಿದಾಗ ಹಲವು ಮಾಧ್ಯಮಗಳು ವಿಮಾನ ಪತನದ ಸುದ್ದಿಯನ್ನು ವರದಿ ಮಾಡಿದ್ದವು. ಈ ವಿಡಿಯೊಗೂ ರಫೇಲ್ ಯುದ್ಧವಿಮಾನಕ್ಕೂ ಯಾವುದೇ ಸಂಬಂಧ ಇಲ್ಲ ಎಂದು ಪಿಟಿಐ ಫ್ಯಾಕ್ಟ್‌ಚೆಕ್ ವರದಿ ಹೇಳಿದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಸೋಮವಾರ ಮೇ 5, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಶುಕ್ಲ ಅಷ್ಟಮಿ ಗಂ.7-36 ನಕ್ಷತ್ರ: ಆಶ್ಲೇಷ ಗಂ. 14-01 ಯೋಗ: ವೃದ್ಧಿ ಗಂ. 24-20 ಕರಣ: ಬವ ಗಂ. 7-36 ನಂತರ ಬಾಲವ ಗಂ.20-02, ಮೇಷ ಮಾಸದ 22 ನೇ ದಿನ.
ರಾಹುಕಾಲ : ಬೆಳಿಗ್ಗೆ 07-30 - 09-00
ಸೂರ್ಯೋದಯ : 06-11 ಸೂರ್ಯಾಸ್ತ : 06-43
ಮುಖ್ಯದಿನಾಂಕ : 06 ಜುಲೈ ವಾರ
ಅದೃಷ್ಟ ಸಂಖ್ಯೆ : 9, 10

ಮೇಷ: ವಸ್ತ್ರವಿನ್ಯಾಸ ಸಲಹೆಗಾರರಿಗೆ ಪ್ರತಿಷ್ಠಿತ ಗಾರ್ಮೆಂಟ್ ಸಂಸ್ಥೆಯೊಂದರಲ್ಲಿ ಉದ್ಯೋಗ ಸಿಗುವುದು. ವಿದೇಶಿ ಸಂಸ್ಥೆಯೊಂದಿಗೆ ವ್ಯವಹಾರಿಕ ಒಪ್ಪಂದ ಮಾಡಿಕೊಳ್ಳಲು ಸೂಕ್ತ. ನೃತ್ಯ, ನಟನೆ ಕಲಿಯಲು ಆಸಕ್ತಿ ಉಂಟಾಗುವುದು.

ವೃಷಭ: ಸಾಲ ಕೊಟ್ಟವರ ಎದುರು ಅಗೌರವವಾಗುವ ಸನ್ನಿವೇಶ ಎದುರಾಗಲಿದೆ. ಅವಿವಾಹಿತರಿಗೆ ನಿರೀಕ್ಷೆಗೆ ಪೂರಕವಾದ ಪ್ರಸ್ತಾವನೆ ಲಭಿಸಲಿದೆ. ಕುಶಲಕರ್ಮಿಗಳಿಗೆ ಬೇಡಿಕೆಗಳು ಹೆಚ್ಚಲಿವೆ.

ಮಿಥುನ: ಶತ್ರುಗಳ ಬಣ್ಣ ಬಯಲಾಗುವುದು ಸಂತೋಷಕ್ಕೆ ಕಾರಣವಾಗುತ್ತದೆ. ಕಾರ್ಖಾನೆಯ ಒಂದಷ್ಟು ಯೋಜನೆಯನ್ನು ಗುತ್ತಿಗೆ ಆಧಾರದಲ್ಲಿ ಪಡೆದುಕೊಳ್ಳುವ ಅವಕಾಶಗಳು ಲಭಿಸಲಿವೆ.

ಕರ್ಕಾಟಕ: ವಿನಾಕಾರಣ ಪರಿಶ್ರಮದಿಂದ ಫಲ ಸಿಗಲಿಲ್ಲವೆಂದು ಬೇಸರಪಟ್ಟುಕೊಳ್ಳುವ ಅಗತ್ಯವಿಲ್ಲ. ಪರಿಶ್ರಮವು ಮುಂದಿನ ದಿನಕ್ಕೆ ಅಭಿವಾಯವಾಗಲಿದೆ. ಬೆನ್ನು ಮತ್ತು ಕಾಲಿನ ನೋವು ನಿವಾರಣೆಗೆ ವ್ಯಾಯಾಮ ಮಾಡಿ.

ಸಿಂಹ: ತತ್ವ ಆದರ್ಶಗಳ ಪಾಠದ ಜತೆಗೆ ಹಿರಿಯರ ಅನುಭವದ ಸಲಹೆಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಿರಿ. ವಿಲಾಸಿ ಜೀವನಕ್ಕೆ ಯಾವುದೇ ಅಭ್ಯಾಸ ಮಾಡಿಸುವುದರಿಂದ ಮನೋವ್ಯಾಧಿಗಳು ದೂರಾಗಲಿವೆ.

ಕನ್ಯಾ: ಆಲೋಚನೆಯನ್ನು ಇನ್ನೊಬ್ಬರಲ್ಲಿ ಹಂಚಿಕೊಳ್ಳುವುದರಿಂದ ಅಭಿವೃದ್ಧಿ ಕುಂಠಿತವಾಗಬಹುದು. ಅಂಜಿಕೆ ಬೇಡ. ನಿಮ್ಮ ಆಲೋಚನೆಯನ್ನು ಪ್ರದರ್ಶಿಸಿ ಮೆಚ್ಚುಗೆ ಪಡೆಯುವಿರಿ.

ತುಲಾ: ಮಾರುಕಟ್ಟೆಯಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಗಮನಿಸಿ. ಷೇರು ಕೊಳ್ಳುವ ಯೋಜನೆ ಮುಂದಾಗಿ. ನಿರ್ಧಾರ ಮಾಡಿಕೊಳ್ಳಲು ನಿರ್ಧರಿಸಿದ ಪ್ರೇಮಿಗಳಿಗೆ ತಮ್ಮ ಸಹೋದರರಿಂದ ಸ್ಪಂದನೆ ಸಿಗಲಿದೆ.

ವೃಶ್ಚಿಕ: ಕೆಟ್ಟ ವಿಚಾರಗಳ ಬಗ್ಗೆ ಮಾತನಾಡುವುದು ಸಹೋದರರಲ್ಲಿ ಭಿನ್ನಾಭಿಪ್ರಾಯ ಬೆಳೆಯಲು ಕಾರಣವಾಗುತ್ತದೆ. ಕಬ್ಬಿಣ ಮತ್ತು ತಾಮ್ರದ ವ್ಯಾಪಾರಿಗಳಿಗೆ ಲಾಭ ಸಿಗಲಿದೆ. ಹಣದ ಚಿಂತೆ ದೂರವಾಗುವುದು.

ಧನು: ಹಳೆಯ ಕಾರಿನ ಅಥವಾ ಯಂತ್ರೋಪಕರಣದ ಮಾರಾಟ ವಿಷಯವನ್ನು ಕೈಬಿಡುವುದು ಉತ್ತಮ. ಸರಕು ಸಾಗಣೆದಾರರಿಗೆ ಆದಾಯದಲ್ಲಿ ಹೆಚ್ಚಳ ಕಂಡುಬಂದರೂ ಕಾರ್ಯದ ಒತ್ತಡದಿಂದ ವೈಯಕ್ತಿಯಲ್ಲಿ ನಿರಾಶೆಯಾಗುವುದು.

ಮಕರ: ವಿದ್ಯೆಯಲ್ಲಿ ಯಶಸ್ಸು ಹೊಂದುವ ಎಲ್ಲಾ ಲಕ್ಷಣಗಳೂ ಕಂಡರೂ ವಿದ್ಯಾಭ್ಯಾಸಕ್ಕೆ ತೊಂದರೆಯಾಗುವ ಪರಿಸ್ಥಿತಿ ಎದುರಾಗಬಹುದು. ಪರಿಸ್ಥಿತಿ ಅನುಕೂಲಕ್ಕೆ ತಕ್ಕಂತೆ ರೂಪಿಸಿಕೊಳ್ಳುವ ಯತ್ನದಲ್ಲಿ ಸಫಲರಾಗುವಿರಿ.

ಕುಂಭ: ಮಾಡುತ್ತಿರುವ ಪರೋಪಕಾರದ ಕೆಲಸಗಳಿಗೆ ಸಕಾರಾತ್ಮಕ ಪ್ರತಿಫಲ ಕಟ್ಟುಬುತ್ತಿ. ಲಾಭದಾಯಕವೆನಿಸುವ ಕೆಲಸ ಅಥವಾ ವ್ಯಕ್ತಿಗಳೊಂದಿಗೆ ಮಾತ್ರ ವ್ಯವಹರಿಸುವಿರಿ. ಹಣ್ಣಿನ ವ್ಯಾಪಾರಿಗಳಿಗೆ ಇಂದು ಲಾಭದ ದಿನ.

ಮೀನ: ಕೆಲಸ ಕಾರ್ಯಗಳಲ್ಲಿ ಕಷ್ಟಗಳು ಎದುರಾಗಬಹುದು. ಕರ್ತವ್ಯ ನಿರ್ಲಕ್ಷಿಸದೇ ಸಹೋದ್ಯೋಗಿಗಳ ಸಹಕಾರ ನೀಡುವಂತೆ ಅಪೇಕ್ಷಿಸುವುದು ವ್ಯರ್ಥ. ಸತ್ಕಾರ್ಯಗಳಿಂದಾಗಿ ಮನಸ್ಸಿಗೆ ಸಡಗರ ದೊರೆಯುವುದು.

ಈ ಜಗತ್ತಿನಲ್ಲಿ ಯಾರೂ ಬಡವರಿಲ್ಲ

ನುಡಿ ಬೆಳಗು

ಗವಿಸಿದ್ದೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

187

ಸಂತ ತುಕಾರಾಂ ಅವರು ಸುಮ್ಮನೆ ಅಭಂಗ ಹಾಡುತ್ತಾ ಹೋಗುತ್ತಿದ್ದರು. ಹಣ ಗಳಿಸಿರಲಿಲ್ಲ, ಹಾಡುತ್ತಿದ್ದರು ಅಷ್ಟೇ. ಯಾವ ಮಾತು ಹೇಳಿದರೆ ಭಗವಂತ ಒಲಿಯಬಲ್ಲನೋ ಅದು ಅಭಂಗ. ಅವರನ್ನು ನೋಡಿ ಮಹಾರಾಷ್ಟ್ರದ ರಾಜನಿಗೆ ಇವರಿಗೆ ಏನಾದರೂ ಸಹಾಯ ಮಾಡಬೇಕು ಅನ್ನಿಸಿತು. ಗುಡಿಸಲಲ್ಲಿ ಇರುತ್ತಾರೆ. ತುಂಬಾ ಬಡವರು ಅಂದುಕೊಂಡು ಸೇವಕರನ್ನು ಕರೆದು ಒಂದು ಹರಿವಾಣದಲ್ಲಿ ಸಂಪತ್ತನ್ನು ಕಳಿಸಿದರು. ಸೇವಕರು ಸಂಪತ್ತನ್ನು ತಂದು ತುಕಾರಾಂ ಅವರಿಗೆ ಕೊಟ್ಟರು. ಅದನ್ನು ನೋಡಿ ತುಕಾರಾಂ 'ಏನಿದು' ಎಂದು ಕೇಳಿದರು. ಅದಕ್ಕೆ ಸೇವಕರು, 'ನಮ್ಮ ಮಹಾರಾಜರು ಸಂಪತ್ತು ಕಳಿಸಿದ್ದಾರೆ' ಎಂದರು. 'ಯಾಕಾಗಿ ಕಳಿಸಿದ್ದಾರೆ' ಎಂದು ಕೇಳಿದರು ತುಕಾರಾಂ. 'ನೀವು ಸುಮ್ಮನೆ ಕಡೆದಿತ್ತಾ ಹೋಗುತ್ತೀರಿ. ನಿಮಗೆ ಬಡತನ ಇದೆ ಎಂದು ಮಹಾರಾಜರು ಕಳಿಸಿಕೊಟ್ಟಿದ್ದಾರೆ' ಎಂದರು ಸೇವಕರು. 'ನಿಮ್ಮ ಮಹಾರಾಜರಿಗೆ ನಾನು ಬಡವ ಎಂದು ಹೇಳಿದವರು ಯಾರು? ಈಗ ನೀವು ತಂದಿದ್ದೀರಲ್ಲ, ಅದನ್ನು ವಾಪಸು ಅವರಿಗೇ ಕೊಟ್ಟು ನಿಮ್ಮ ಮಹಾರಾಜರಿಗೆ ಹೇಳಿ. ನಿಮ್ಮ ಮಹಾರಾಜ ಪಂಢರಾಪುರದ ವಿಠ್ಠಲನ ಗರ್ಭಗುಡಿಯ ಮುಂದೆ ನಿಂತು 'ನನಗೆ ಸಂಪತ್ತು ಕೊಡು, ಸಾಮ್ರಾಜ್ಯ ಕೊಡು' ಎಂದು ಕೇಳುತ್ತಾನಲ್ಲ, ಆ ಪಂಢರಾಪುರದ ವಿಠಲನೇ ನನ್ನ ಹೃದಯ ಗರ್ಭಗುಡಿಯಲ್ಲಿ ಇರುವಾಗ ನಾನೇಕೆ ಬಡವ?' ಎಂದು ಹೇಳಿದರು.

ಈ ಜಗತ್ತಿನಲ್ಲಿ ಯಾರೂ ಬಡವರು ಇಲ್ಲ. ನಮ್ಮ ಭಾವದ ಕೊರತೆ ಇರುವುದರಿಂದ ಬಡತನ ಬಂದಿದೆ ಅಷ್ಟೇ. ಐಶ್ವರ್ಯ ಮೂಲ ದೇವರದು. ಇದು ನನ್ನದು ಎಂದು ಪೂಜಿಸುವುದಲ್ಲ, ದೇವರದು ಅಂತ ಪೂಜಿಸಿದರೆ ಬಡತನ ಇರೋದಿಲ್ಲ. ಮದುವೆಯಲ್ಲಿ ಮಾವ ಒಂದು ಉಂಗುರ ಕೊಟ್ಟಿರುತ್ತಾನೆ. ಅದನ್ನೇ ಎಲ್ಲರಿಗೂ ತೋರಿಸ್ತೀರಿ. ಮಹದೇವ ಈ ಬದುಕೇ ಕೊಟ್ಟಿದ್ದಾನೆ, ಈ ಜಗತ್ತು ಕೊಟ್ಟಿದ್ದಾನೆ. ಅವನನ್ನು ಎಷ್ಟು ನೆನಪಿಸಬೇಕು? ಮೋಕ್ಷ ಮೂಲ ಘಟ ಸಂತೃಪ್ತಿಯಿಂದೆ. ಮೋಕ್ಷ ಎಂದರೆ ಎಲ್ಲ ಮುಗಿದ ಮೇಲೆ ಎಂದುಕೊಂಡಿದ್ದೇವೆ. ಮೋಕ್ಷ ಎಂದರೆ ದುಃಖವಿಲ್ಲದ ಸ್ಥಿತಿ ಅಷ್ಟೆ. ಆನಂದವೇ ಮೋಕ್ಷ. ದುಃಖ ಯಾತನಾ ಎಂದರೆ ಬಯಸುತ್ತೀವಲ್ಲ ಅದಕ್ಕೆ. ಬಯಸದೇ ಇದ್ದರೆ ಜೀವನ ನಡೆಯುವುದೇನೋ? ಬಯಕೆ ತಪ್ಪಲ್ಲ. ಆದರೆ ಬಯಸಿದ್ದೆಲ್ಲಾ ಈ ಜಗತ್ತಿನಲ್ಲಿ ಈಡೇರುತ್ತದೆ ಎಂದು ತಿಳಿದುಕೊಳ್ಳುವುದು ತಪ್ಪು. ಈ ಜಗತ್ತಿನಲ್ಲಿ ಕೊಟ್ಟಂತವ ಜನರಿದ್ದಾರೆ. ಅವರಲ್ಲಿ ಅಂದುಕೊಂಡಂತೆಯೇ ಆಗಬೇಕು ಎಂದರೆ ಆಗುವುದಿಲ್ಲ. ಈ ಅನಂತ ವೃಕ್ಷದ ಸಣ್ಣ ಎಲೆ ನಾನು ಎನ್ನುವುದನ್ನು ತಿಳಿದುಕೊಂಡಿರಬೇಕು. ತನಗೆ ಸಿಕ್ಕಿದ್ದೆಲ್ಲಾ ಸದಾ ಸುಖ ಕೊಡುವುದಿಲ್ಲ ಎನ್ನುವುದನ್ನು ತಿಳಿದುಕೊಳ್ಳಬೇಕು ಮನುಷ್ಯ.

ಜಗತ್ತಿನ ನಿಯಮ ಏನು ಎಂದರೆ, ನಿನಗೆ ಏನು ಈಗ ಸುಖ ಕೊಡುತ್ತಿದೆಯೋ, ಅದು ಒಂದು ದಿನ ದುಃಖವನ್ನೂ ಕೊಡುತ್ತದೆ. ಅದಕ್ಕೆ ದೇವರು ನಮ್ಮ ಪಾತ್ರೆಯಲ್ಲಿ ಏನು ಹಾಕಿದ್ದಾನೆ ಅದನ್ನು ಖುಷಿಯಿಂದ ಸಂತೋಷವಾಗಿರುವುದು ಅಷ್ಟೆ. ಇನ್ನೊಬ್ಬರ ತಾಟಿನಲ್ಲಿ ಏನಿದೆ ಎಂದು ನೋಡಿ ಅಸೂಯೆ ಪಡೆಬಾರದು. ಅದೇ ಮುಕ್ತ ಜೀವನ. ಬರೆ ಕೊರತೆಗಳನ್ನು ನೋಡಬಾರದು. ಏನು ಇದೆಯೋ ಅದನ್ನು ಒಪ್ಪಿಕೊಳ್ಳಬೇಕು. ಇಲ್ಲದರ ಬಗ್ಗೆ ತಲೆ ಕೆಡಿಸಿಕೊಳ್ಳಬಾರದು. ಮನುಷ್ಯ ಈ ಪ್ರಪಂಚದಲ್ಲಿ ಇರಬೇಕು, ಆದರೆ ಪರಮಾರ್ಥವನ್ನು ಬಿಟ್ಟಿರಬಾರದು.

ಪದಬಂಧ 6032

– ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1.ಅಪ್ಪಟ ಬಂಗಾರವಿದು (4)
3.ಆಗಮಗಳನ್ನು ತಿಳಿದವನು (4)
5.ಮೂಲ ಮನೆಯ ಮಾದರಿ ಇಲ್ಲಿದೆ! (2)
7.ಹರಸುತ ನಿಂತಾಗ ಕಾಣಿಸಿದ ಮಗ (2)
8.ಮಿತ್ರನಿಗೆ ಬರೆದ ಓಲೆ (3)
10.ಮಂಕ ಹೊತ್ತಿರುವ ಬುಟ್ಟಿ (3)
11.ಕಿರೀಟ ಇಲ್ಲಿದೆ (3)
13.ಮತ ಹಾಕುವಾಗ ಅವರಿಸಿದ ಕತ್ತಲು (2)
15.ಭಿನ್ನರಾಶಿ ಕಲಿಸುವ ಮುಂದಿರುವ ಒಟ್ಟಿಲು (2)
16.ತತ್ತ್ವ ನೂರಿದು (3)
18.ವರನಿಗೆ ಕಾಣಿಸಿರುವ ಕೊಳ (4)
19.ರಾತ್ರಿ ವೇಳೆ ಸಂಚರಿಸುವ ಕಳ್ಳ ಪಿಶಾಚಿ ಇತ್ಯಾದಿ (4)

ಮೇಲಿಂದ ಕೆಳಕ್ಕೆ

1.ಅಪ್ಪನ ಆ ರೂಪ ಬಲು ವಿರಳ! (4)
2.ಜಿಪ್ಪುಣ ಹತ್ತಿರವಿರುವ ಅಹಂಕಾರ (2)
3.ಆ ಮನೆ ಮುಂದೆ ನಿಂತಿರುವ ಗಜ (2)
4.ಕನ್ನಡಿಗನು ಮಾಡಿದ ಡಿಸ್ಕೊ! (2)
6.ಗಜಪತಿಯ ವಾಹನ (3)
7.ಸಂಸ್ಕೃತ ಕಲಿತಿರುವ ಸಭ್ಯ (3)
9.ದ್ವಾದಶಿ ನಂತರದ ತಿಥಿ (4)
12.ಕೊಸು ಹುಟ್ಟುವ ಮೊದಲೆ ತಯಾರಾಗಿರುವ ಟೊಪ್ಪಿಗೆ (3)
14.ಪರಿವರ್ತನೆಯ ಕಾಲವಿದು (3)
15.ದಾಯಿರಿಂದ ಬಂದಿರುವ ನಿರಾಸ (4)
16.ಸಾಕ್ಷರನಲ್ಲಿರುವ ಸತ್ಯ (2)
17.ಈ ಮನುಷ್ಯ ಏಕೋ ತಿರುಗಿದ್ದಾನಲ್ಲಾ? (2)

6031ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಿವೆ 3.ಸುಮ
5.ಹಸ್ತಲಾಘವ 6.ಗದವ
7.ಜಗಳ 8.ದಣ್ಣಳತನ
9.ದುಮ್ಮಾನ 10.ನಾವಿತ
13.ಜಲಜನಸ 14.ರಿವು
15.ದಾನಿ

ಮೇಲಿಂದ ಕೆಳಕ್ಕೆ:
1.ವಿಸ್ಮಯ 2.ಸಲಾಕೆ
4.ಮಿದರ್ಮ 5.ಹಯವದನ
7.ಜನನಾಯಕ
9.ದುರಾಚಾರಿ 11.ತತ್ತ್ವಜ್ಞಾನಿ
12.ಗಣಜ

ಸುಡೊಕು 6417



ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6416 ಸುಡೊಕು

1	5	9	3	2	7	6	8	4
4	6	7	1	8	9	3	5	2
3	8	2	6	4	5	9	1	7
2	9	3	5	1	4	7	6	8
6	7	4	9	3	8	5	2	1
5	1	8	7	6	2	4	9	3
8	2	5	4	9	3	1	7	6
7	3	1	2	5	6	8	4	9
9	4	6	8	7	1	2	3	5

ಅಮೆರಿಕದಿಂದ ಸುಂಕ ಕಡಿತ ಪ್ರಸ್ತಾವ ನಿರೀಕ್ಷೆ

ನವದೆಹಲಿ (ಪಿಟಿಐ): ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತವು ಅಮೆರಿಕದ ಕಂಪನಿಗಳು ಮತ್ತು ರಫ್ತುದಾರರಿಗೆ ಅನುಕೂಲ ಕಲ್ಪಿಸುವ ಉದ್ದೇಶ ಹೊಂದಿದೆ. ಹಾಗಾಗಿ, ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಮಾತುಕತೆ ವೇಳೆ ಭಾರತದ ಮುಂದೆ ಸುಂಕ ಕಡಿತ ಮತ್ತು ಸುಂಕದ ನಿಯಮಾವಳಿಗಳ ಸುಧಾರಣೆ ಕುರಿತಂತೆ ಪ್ರಸ್ತಾವ ಮಂಡಿಸುವ ನಿರೀಕ್ಷೆಯಿದೆ ಎಂದು ಗ್ಲೋಬಲ್ ಟ್ರೇಡ್ ರಿಸರ್ಚ್ ಇನಿಷಿಯೇಟಿವ್ (ಜಿಟಿಆರ್‌ಐ) ಹೇಳಿದೆ.

ಭಾರತವು ಕನಿಷ್ಠ ಬೆಂಬಲ ಬೆಲೆಯಡಿ ಖರೀದಿಸಲಿರುವ ಅಕ್ಕಿ ಮತ್ತು ಗೋಧಿ ಪ್ರಮಾಣ ತಗ್ಗಿಸುವಂತೆ ಬೇಡಿಕೆ ಮಂಡಿಸಬಹುದು. ಕುಲಾಂತರಿ ತಳಿಗಳ ಮೇಲೆ ಹೇರಿರುವ ಆಮದು ನಿರ್ಬಂಧ ಸಡಿಲಿಸುವಂತೆ ಒತ್ತಾಯಿಸಬಹುದು. ಜೊತೆಗೆ, ಅಮೆರಿಕದ ಕೃಷಿ ಉತ್ಪನ್ನಗಳ ಮೇಲಿನ ಸುಂಕ ಕಡಿತಗೊಳಿಸುವಂತೆ ಪ್ರಸ್ತಾವ ಮಂಡಿಸುವ ಸಾಧ್ಯತೆಯಿದೆ ಎಂದು ಹೇಳಿದೆ.

ಭಾರತಕ್ಕೆ ಆಮದಾಗುವ ಹೈನು ಉತ್ಪನ್ನಗಳು 'ಕುಲಾಂತರಿ ತಳಿಯ ಆಹಾರವಲ್ಲ' ಎಂಬ ಪ್ರಮಾಣ ಪತ್ರ ಪಡೆಯುವುದು ಕಡ್ಡಾಯವಾಗಿದೆ. ಅಮೆರಿಕದ ಉತ್ಪನ್ನಗಳಿಗೆ ಈ ನಿಯಮದಿಂದ ವಿನಾಯಿತಿ ನೀಡುವಂತೆ ಕೋರಿಕೆ ಮಂಡಿಸುವ ಸಾಧ್ಯತೆಯಿದೆ ಎಂದು ಹೇಳಿದೆ.

'ಅಮೆಜಾನ್ ಮತ್ತು ವಾಲ್ ಮಾರ್ಟ್ ಕಂಪನಿಗಳ ವ್ಯಾಪಾರಕ್ಕೆ ಸಂಬಂಧಿಸಿದಂತೆ ಭಾರತದಲ್ಲಿ ವಿಧಿಸಿರುವ ಕೆಲವು ಷರತ್ತು ಮತ್ತು ನಿಯಮಗಳನ್ನು ಸಡಿಲಗೊಳಿಸುವಂತೆ ಕೋರುವ ಸಾಧ್ಯತೆಯಿದೆ' ಎಂದು ಜಿಟಿಆರ್‌ಐ ಸಂಸ್ಥಾಪಕ ಅಜಯ್ ಶ್ರೀವಾಸ್ತವ ಹೇಳಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

14ನೇ ವರ್ಷದ ಪುಣ್ಯಸ್ಮರಣೆ

ಬಿ. ಮರಿಯಪ್ಪನವರು
(ಐಟಿಐ–ನಿವೃತ್ತ)
ನಿಧನ: 05–05–2011
ಕವಿತಾ ವೈನ್ ಸೆಂಟರ್
ವಿಜಯನಗರ, ಬೆಂಗಳೂರು–560040
ನಿಮ್ಮ ಪ್ರೀತಿ, ಆದರ್ಶಗಳೇ ನಮಗೆ ದಾರಿದೀಪ, ನಿಮ್ಮ ಆಶೀರ್ವಾದ ಎಂದೆಂದಿಗೂ ನಮ್ಮ ಮೇಲಿರಲಿ ಎಂದು ಆಶಿಸುತ್ತಾ ಸದಾ ನಿಮ್ಮ ನೆನಪಿನಲ್ಲಿರುವ...
ಧರ್ಮಪತ್ನಿ– ಶ್ರೀಮತಿ ಹೆಚ್. ಎಸ್. ಜಯಮ್ಮ ಮತ್ತು ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಬಂಧು–ಮಿತ್ರರು. ಫೋ: 23154164

ವಿಶ್ವಸುಂದರಿ ಸ್ಪರ್ಧೆ: ತೆಲಂಗಾಣಕ್ಕೆ ಸುಂದರಿಯರು

ಹೈದರಾಬಾದ್ (ಪಿಟಿಐ): ತೆಲಂಗಾಣದಲ್ಲಿ ಮೇ 10ರಿಂದ 31ರವರೆಗೆ 72ನೇ ವಿಶ್ವಸುಂದರಿ ಸ್ಪರ್ಧೆ ನಡೆಯಲಿದ್ದು, ವಿವಿಧ ರಾಷ್ಟ್ರಗಳ ಪ್ರತಿನಿಧಿಗಳು ಈಗಾಗಲೇ ನಗರಕ್ಕೆ ಬರುತ್ತಿದ್ದಾರೆ.

ಕೆನಡಾದ ಎಮ್ಮಾ ಡಿಯನ್ನಾ ಕ್ಯಾಥರಿನ್ ಮಾರಿಸನ್ ಮತ್ತು ಬ್ರೆಜಿಲ್‌ನ ಜೆಸ್ಸಿಕಾ ಸ್ಕ್ಯಾಂಡಿಯುರುಝಿ ಪೆಡ್ರೊಸೊ ಅವರನ್ನು ಇಲ್ಲಿನ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಅಧಿಕಾರಿಗಳು ಸಾಂಪ್ರದಾಯಿಕವಾಗಿ ಸ್ವಾಗತಿಸಿದರು. ಸ್ಪರ್ಧೆ ಆಯೋಜನಾ ಸಮಿತಿಯ ಪದಾಧಿಕಾರಿಯಾದ ಜೊನಾಥನ್ ಮಾರ್ಕ್ ಶಾ ಸಹ ನಗರಕ್ಕೆ ಬಂದಿಳಿದರು.

ಉದ್ಯೋಗ ಬದಲಾವಣೆ: ಈ ಕೆಲಸ ಮರೆಯಬೇಡಿ

ಬಂಡವಾಳ ಮಾರುಕಟ್ಟೆ
ಕಾವ್ಯ ಡಿ.

ಈಗ ಇರುವ ಕೆಲಸಕ್ಕಿಂತ ಉತ್ತಮ ವೇತನ ಇರುವ ಮತ್ತೊಂದು ಕೆಲಸ ಸಿಕ್ಕಿದರೆ ಉದ್ಯೋಗಿಗಳು ಖುಷಿಯ ಅಲೆಯಲ್ಲಿ ತೇಲುತ್ತಾರೆ. ಆದರೆ ಹೊಸ ಕೆಲಸ ಸಿಕ್ಕಿದೆ, ಸಂಬಳವೂ ಹೆಚ್ಚಾಗಿದೆ ಎನ್ನುವ ಖುಷಿಯಲ್ಲಿ ತೆರಿಗೆ ನಿರ್ವಹಣೆ, ವಿಮೆ ಖಾತರಿ, ಕಾರ್ಮಿಕರ ಭವಿಷ್ಯ ನಿಧಿ (ಇಪಿಎಫ್) ವರ್ಗಾವಣೆ, ಸಾಲ ನಿರ್ವಹಣೆಯಂತಹ ಪ್ರಮುಖ ವಿಚಾರಗಳನ್ನು ಮರೆತು ಬಿಡುತ್ತಾರೆ. ಬನ್ನಿ, ಉದ್ಯೋಗ ಬದಲಿಸುವಾಗ ಯಾವೆಲ್ಲ ಅಂಶಗಳು ಗಮನದಲ್ಲಿ ಇರಬೇಕು ಎಂಬ ಬಗ್ಗೆ ತಿಳಿಯೋಣ.

ತೆರಿಗೆ ನಿರ್ವಹಣೆ ಮರೆಯಬೇಡಿ: ಕೆಲಸ ಬದಲಾಯಿಸಿದಾಗ ನಿಮ್ಮ ಹೊಸ ಉದ್ಯೋಗದಾತ ಸಂಸ್ಥೆಗೆ ನಿಮ್ಮ ಹಳೆಯ ಕಂಪನಿಯಲ್ಲಿ ಎಷ್ಟು ತೆರಿಗೆ ಕಡಿತ ಮಾಡುತ್ತಿದ್ದರು ಎನ್ನುವ ವಿವರ ಒದಗಿಸಿ. ಈ ಮಾಹಿತಿ ಕೊಡದಿದ್ದರೆ ಹೊಸ ಉದ್ಯೋಗದಾತ ಸಂಸ್ಥೆಯು ಅಗತ್ಯಕ್ಕಿಂತ ಹೆಚ್ಚಿನ ತೆರಿಗೆ ಕಡಿತ ಮಾಡಲು ಮುಂದಾಗಬಹುದು. ಕೆಲಸ ಬದಲಾಯಿಸಿದಾಗ ಸಂಬಳವೂ ಹೆಚ್ಚಳವಾಗಿರುತ್ತದೆ. ಈ ವೇಳೆ ಹಳೆಯ ವೇತನ ಎಷ್ಟಿತ್ತು? ಅದಕ್ಕೆ ತಕ್ಕಂತೆ ಪಾವತಿಸುತ್ತಿದ್ದ ಆದಾಯ ತೆರಿಗೆ ಎಷ್ಟು? ಎನ್ನುವ ವಿವರ ಒದಗಿಸುವುದು ಅತ್ಯಗತ್ಯ.

ಈ ಮಾಹಿತಿ ಸಿಕ್ಕಾಗ ನಿಮ್ಮ ವೇತನಕ್ಕೆ ತಕ್ಕಂತೆ ಪ್ರಸ್ತುತ ಉದ್ಯೋಗದಾತ ಸಂಸ್ಥೆಯು ತೆರಿಗೆ ಕಡಿತ ಮಾಡುತ್ತದೆ. ತೆರಿಗೆ ಕಡಿತವು ನಿಮ್ಮ ಆದಾಯಕ್ಕೆ ತಕ್ಕಂತೆ ಆಗುತ್ತಿದೆ ಎನ್ನುವುದನ್ನು ಖಾತರಿಪಡಿಸಿಕೊಳ್ಳಲು ಫಾರಂ 12ಬಿ ಅನ್ನು ಭರ್ತಿ ಮಾಡಿಕೊಡಿ. ಇಲ್ಲದಿದ್ದರೆ ನಿಮ್ಮ ಹಿಂದಿನ ಸಂಸ್ಥೆಯ ಸ್ಯಾಲರಿ ಸ್ಲಿಪ್ (ವೇತನ ಚೀಟಿ) ಕೊಡಿ. ಕೆಲಸ ಬದಲಾಯಿಸಿದಾಗ ಹಳೆಯ ಸಂಸ್ಥೆಯಿಂದ ಮತ್ತು ಹೊಸ ಸಂಸ್ಥೆಯಿಂದ ನಿಮ್ಮ ಫಾರಂ 16 ಪಡೆದುಕೊಳ್ಳುವುದನ್ನು ಮರೆಯದಿರಿ.

ಫಾರಂ 16 ಇದ್ದರೆ ಆದಾಯ ತೆರಿಗೆ ವಿವರ ಸಲ್ಲಿಕೆ ಸುಲಭ. ಇನ್ನು ವೇತನ ಹೆಚ್ಚಳವಾದಾಗ ತೆರಿಗೆ ಬಾಬ್ತು ಹೆಚ್ಚಾಗುತ್ತದೆ. ಆದಾಯ ತೆರಿಗೆ ಇಲಾಖೆ ನೀಡಿರುವ ವಿನಾಯಿತಿ ಬಳಸಿಕೊಂಡು ತೆರಿಗೆ ಉಳಿತಾಯ ಹೆಚ್ಚಿಸಿಕೊಳ್ಳುವುದು ಹೇಗೆ ಎನ್ನುವುದನ್ನು ಯೋಜಿಸಿ. ನಿಮ್ಮ ಮಾನವ ಸಂಪನ್ಮೂಲ ಅಧಿಕಾರಿ ಜೊತೆಗೆ ಮಾತನಾಡಿ. ಅಗತ್ಯವಿದ್ದರೆ ತೆರಿಗೆ ತಜ್ಞರ ನೆರವು ಪಡೆಯಿರಿ.

ಆರೋಗ್ಯ ವಿಮೆ ಕವರೇಜ್ ಬಗ್ಗೆ ಗಮನಕೊಡಿ: ಕೆಲಸ ಬದಲಾಯಿಸುವ ವೇಳೆ ಗಮನಿಸಿಕೊಳ್ಳಬೇಕಾದ ಪ್ರಮುಖ ವಿಚಾರ ಆರೋಗ್ಯ ವಿಮೆ. ಸಾಮಾನ್ಯವಾಗಿ ಬಹುತೇಕ ಕಂಪನಿಗಳು ಆರೋಗ್ಯ ವಿಮೆ ಕವರೇಜ್ ಒದಗಿಸಿರುತ್ತವೆ. ಆದರೆ, ಕೆಲಸ ಬದಲಿಸುವಾಗ ಹೊಸ ಕಂಪನಿಯು ನಿಮಗೆ ಮತ್ತು ನಿಮ್ಮ ಕುಟುಂಬಕ್ಕೆ ಸೂಕ್ತ ಮೊತ್ತದ ಹೆಲ್ತ್ ಇನ್ಶೂರೆನ್ಸ್ ಕವರೇಜ್ ಒದಗಿಸುತ್ತಿದೆಯೇ ಎಂಬುದನ್ನು ನೋಡಿಕೊಳ್ಳಿ. ಒಂದೊಮ್ಮೆ ಹೊಸ ಕಂಪನಿಯಲ್ಲಿ ಉತ್ತಮ ಕವರೇಜ್ ಸಿಗುತ್ತಿಲ್ಲ ಎನ್ನುವುದು ಗಮನಕ್ಕೆ ಬಂದರೆ ನಿಮ್ಮ ವೈಯಕ್ತಿಕ ಆರೋಗ್ಯ ವಿಮೆಯ ಕವರೇಜ್ ಮೊತ್ತವನ್ನು ಹೆಚ್ಚಿಸಿಕೊಳ್ಳಬೇಕಾಗುತ್ತದೆ.

ಇಪಿಎಫ್ ನಗದೀಕರಣ ಬೇಡ: ಕೆಲಸ ಬದಲಾಯಿಸುವಾಗ ಕಾರ್ಮಿಕರ ಭವಿಷ್ಯ ನಿಧಿಯ ಬಾಕಿ ಮೊತ್ತವನ್ನು ನಗದೀಕರಣ ಮಾಡಬೇಡಿ. ಬದಲಿಗೆ ಹೊಸ ಖಾತೆಗೆ ಅದನ್ನು ವರ್ಗಾಯಿಸಿಕೊಳ್ಳಿ. ಇಪಿಎಫ್ ವರ್ಗಾವಣೆ ಸುಗಮಗೊಳಿಸಿಕೊಳ್ಳಲು ನಿಮ್ಮ ಯುಎಎನ್ ನಂಬರ್ ನೀಡಿ. ಕೆಲಸ ಬದಲಾಯಿಸಿದ ಸಂದರ್ಭದಲ್ಲೆಲ್ಲಾ ಕಾರ್ಮಿಕರ ಭವಿಷ್ಯ ನಿಧಿಯಲ್ಲಿರುವ ಮೊತ್ತವನ್ನು ಬಿಡಿಸಿಕೊಂಡರೆ ತೆರಿಗೆ ಹೊರೆ ಹೆಚ್ಚಾಗುವ ಜೊತೆಗೆ ನಿವೃತ್ತಿ ಜೀವನಕ್ಕೆ ಉಳಿತಾಯ ಇಲ್ಲವಾಗುತ್ತದೆ.

ಸಾಲ ನಿರ್ವಹಣೆ: ಕೆಲಸ ಬದಲಾಯಿಸಿದಾಗ ಸಿಗುವ ವೇತನ ಹೆಚ್ಚಳವನ್ನು ಹೆಚ್ಚು ಬಡ್ಡಿ ಇರುವ ಸಾಲ ತೀರಿಸಲು ಬಳಸಿಕೊಳ್ಳಿ. ಹೆಚ್ಚು ಬಡ್ಡಿ ಇರುವ ಸಾಲಗಳನ್ನು ತೀರಿಸಿದಾಗ ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತದೆ. ಒಂದೊಮ್ಮೆ ಯಾವುದೇ ಸಾಲ ಇಲ್ಲ ಎಂದಾದಲ್ಲಿ ಆದಾಯ ಹೆಚ್ಚಳದ ಮೊತ್ತವನ್ನು ತುರ್ತು ನಿಧಿ ನಿರ್ಮಿಸಿಕೊಳ್ಳಲು ಬಳಸಿ. ನಿಮ್ಮ ಮೂರರಿಂದ ಆರು ತಿಂಗಳ ಖರ್ಚಿನ ಬಾಬ್ತು ತುರ್ತು ನಿಧಿಯಲ್ಲಿ ಇದ್ದಾಗ ಧುತ್ತೆಂದು ಬರುವ ಆರ್ಥಿಕ ಖರ್ಚುಗಳನ್ನು ನಿಭಾಯಿಸುವುದು ಸುಲಭ.

ಖರ್ಚು ಹೆಚ್ಚಿಸಿಕೊಳ್ಳಬೇಡಿ: ಒಂದು ಕಂಪನಿ ತೊರೆದು ಮತ್ತೊಂದು ಕಂಪನಿಗೆ ಸೇರಿದಾಗ ಸಾಮಾನ್ಯವಾಗಿ ವೇತನ ಹೆಚ್ಚಳವಾಗುತ್ತದೆ. ಆದರೆ, ವೇತನ ಹೆಚ್ಚಳಕ್ಕೆ ತಕ್ಕಂತೆ ಜೀವನ ಮಟ್ಟವನ್ನು ಏರಿಸಿಕೊಳ್ಳಬೇಡಿ. ಜೀವನ ಶೈಲಿಯ ಖರ್ಚುಗಳನ್ನು ಹೆಚ್ಚಿಸಿಕೊಂಡಾಗ ಕೈಯಲ್ಲಿ ಹಣ ನಿಲ್ಲುವುದಿಲ್ಲ. ಹೀಗಾದಾಗ ವೇತನ ಹೆಚ್ಚಿದರೂ ಉಳಿತಾಯ ಮತ್ತು ಹೂಡಿಕೆಯನ್ನು ಸುಧಾರಿಸಲು ಸಾಧ್ಯವಾಗುವುದಿಲ್ಲ.

(ಲೇಖಕಿ: ಚಾರ್ಟರ್ಡ್ ಅಕೌಂಟೆಂಟ್)

ಸತತ ಮೂರನೇ ವಾರ ಗಳಿಕೆ ಕಂಡ ಸೂಚ್ಯಂಕಗಳು

ಷೇರುಪೇಟೆ

ಮೇ 2ಕ್ಕೆ ಕೊನೆಗೊಂಡ ವಾರದಲ್ಲಿ ಷೇರು ಸೂಚ್ಯಂಕಗಳು ಉತ್ತಮ ಗಳಿಕೆ ದಾಖಲಿಸಿವೆ. ಸೆನ್ಸೆಕ್ಸ್ ಮತ್ತು ನಿಫ್ಟಿ ಸತತ ಮೂರನೇ ವಾರ ಗಳಿಕೆ ಕಂಡಿವೆ. 80,501 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿದ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 1.63ರಷ್ಟು ಜಿಗಿದಿದೆ. 24,346 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 1.28ರಷ್ಟು ಹೆಚ್ಚಳ ಕಂಡಿದೆ.

ಇನ್ನು ನಿಫ್ಟಿ ಮಿಡ್‌ಕ್ಯಾಪ್ ಸೂಚ್ಯಂಕ ಶೇ 0.25ರಷ್ಟು ಗಳಿಸಿಕೊಂಡಿದ್ದರೆ, ಸ್ಮಾಲ್‌ಕ್ಯಾಪ್ ಸೂಚ್ಯಂಕ ಶೇ 0.64ರಷ್ಟು ತಗ್ಗಿದೆ. ವಿದೇಶಿ ಹೂಡಿಕೆದಾರರಿಂದ ಖರೀದಿ ಉತ್ಸಾಹ, ಅಮೆರಿಕ ಮತ್ತು ಭಾರತದ ನಡುವೆ ದ್ವಿಪಕ್ಷೀಯ ವ್ಯಾಪಾರ ಒಪ್ಪಂದ ಫಲಪ್ರದವಾಗುವ ನಿರೀಕ್ಷೆ, ರಿಲಯನ್ಸ್ ಹಾಗೂ ಕೆಲ ಕಂಪನಿಗಳ ತ್ರೈಮಾಸಿಕ ಸಾಧನೆ ಉತ್ತಮವಾಗಿರುವುದು ಸೇರಿ ಹಲವು ಅಂಶಗಳು ಮಾರುಕಟ್ಟೆ ಪುಟಿದೇಳಲು ಕಾರಣವಾಗಿವೆ.

ವಾರದ ಅಂದಾಜಿನಲ್ಲಿ ವಲಯವಾರು ಪ್ರಗತಿ ನೋಡಿದಾಗ ರಿಯಲ್ ಎಸ್ಟೇಟ್ ಶೇ 2.58, ಮಾಹಿತಿ ತಂತ್ರಜ್ಞಾನ ಶೇ 0.93, ಬ್ಯಾಂಕ್ ನಿಫ್ಟಿ ಶೇ 0.83, ಸೇವಾ ವಲಯ ಶೇ 0.69, ಫಾರ್ಮಾ ಶೇ 0.67, ಎನರ್ಜಿ ಶೇ 0.54, ಫೈನಾನ್ಸ್ ಶೇ 0.44, ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 0.29ರಷ್ಟು ಗಳಿಸಿಕೊಂಡಿವೆ. ನಿಫ್ಟಿ ಮಾಧ್ಯಮ ಶೇ 1.71, ಲೋಹ ಶೇ 0.6, ಎಫ್‌ಎಂಸಿಜಿ ಶೇ 0.5ರಷ್ಟು ಕುಸಿದಿವೆ.

ಇಳಿಕೆ–ಗಳಿಕೆ: ವಾರದ ಲೆಕ್ಕಾಚಾರ ನೋಡಿದಾಗ ನಿಫ್ಟಿಯಲ್ಲಿ ಶ್ರೀರಾಮ್ ಫೈನಾನ್ಸ್ ಶೇ 7.91, ಜೆಎಸ್‌ಡಬ್ಲ್ಯು ಸ್ಟೀಲ್ ಶೇ 5.11, ಅಲ್ಟ್ರಾಟೆಕ್ ಸಿಮೆಂಟ್ ಶೇ 4.7, ಬಜಾಜ್ ಫಿನ್‌ಸರ್ವ್ ಶೇ 4.42, ಹೀರೊ ಮೋಟೊಕಾರ್ಪ್ ಶೇ 3.87, ನೆಸ್ಲೆ ಇಂಡಿಯಾ ಶೇ 3.21, ಬಜಾಜ್ ಫೈನಾನ್ಸ್ ಶೇ 2.73, ಬಜಾಜ್ ಆಟೊ ಶೇ 2.52, ಅದಾನಿ ಎಂಟರ್ ಪ್ರೈಸಸ್ ಶೇ 2.31, ಐಷರ್ ಮೋಟರ್ಸ್ ಶೇ 2.26, ಕೋಲ್ ಇಂಡಿಯಾ ಶೇ 2.11, ಎನ್‌ಟಿಪಿಸಿ ಶೇ 2.1ರಷ್ಟು ಕುಸಿದಿವೆ.

ರಿಲಯನ್ಸ್ ಇಂಡಸ್ಟ್ರೀಸ್ ಶೇ 9.38, ಅದಾನಿ ಪೋರ್ಟ್ಸ್ ಶೇ 6.28, ಮಾರುತಿ ಸುಜುಕಿ ಶೇ 6.19, ಭಾರತ್ ಎಲೆಕ್ಟ್ರಾನಿಕ್ಸ್ ಶೇ 4.66, ಎಸ್‌ಬಿಐ ಲೈಫ್ ಇನ್ಶೂರೆನ್ಸ್ ಶೇ 4.27, ಇಂಡಸ್ ಇಂಡ್ ಬ್ಯಾಂಕ್ ಶೇ 3.65, ಎಚ್‌ಡಿಎಫ್‌ಸಿ ಲೈಫ್ ಇನ್ಶೂರೆನ್ಸ್ ಶೇ 3.6, ಎಟರ್ನಲ್ ಲಿಮಿಟೆಡ್ ಶೇ 2.58, ಮಹೀಂದ್ರ ಆ್ಯಂಡ್ ಮಹೀಂದ್ರ ಶೇ 2.38, ಜಿಯೊ ಫೈನಾನ್ಶಿಯಲ್ ಶೇ 2.25, ಎಲ್ ಆ್ಯಂಡ್ ಟಿ ಶೇ 2.1 ಮತ್ತು ಏರ್‌ಟೆಲ್ ಶೇ 2.08ರಷ್ಟು ಗಳಿಸಿಕೊಂಡಿವೆ.

ಮುನ್ನೋಟ: ಈ ವಾರ ಮಹೀಂದ್ರ ಆ್ಯಂಡ್ ಮಹೀಂದ್ರ, ಸಿಎಎಂಎಸ್, ಜೀ ಮೀಡಿಯಾ, ಬಾಂಬೆ ಡೈಯಿಂಗ್, ಬ್ಯಾಂಕ್ ಆಫ್ ಬರೋಡಾ, ಪೇಟಿಎಂ, ಪಾಲಿಕ್ಯಾಬ್, ಎಚ್‌ಪಿಸಿಎಲ್, ಬಿಎಸ್‌ಇ ಲಿಮಿಟೆಡ್, ಗೋದ್ರೇಜ್ ಕನ್ಸ್ಯೂಮರ್ ಪ್ರಾಡೆಕ್ಟ್ಸ್, ಕೋಲ್ ಇಂಡಿಯಾ, ಡಾಬರ್, ಎಂಆರ್‌ಎಫ್, ಎಲ್ ಆ್ಯಂಡ್ ಟಿ, ಟೈಟನ್, ಏಷ್ಯನ್ ಪೇಂಟ್ಸ್, ಪಿಡಿಲೈಟ್ ಇಂಡಸ್ಟ್ರೀಸ್, ಕೆನರಾ ಬ್ಯಾಂಕ್, ಕಲ್ಯಾಣ್ ಜುವೆಲರ್ಸ್, ಸ್ವಿಗ್ಗಿ, ಬ್ಯಾಂಕ್ ಆಫ್ ಇಂಡಿಯಾ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ವರದಿ ಪ್ರಕಟಿಸುತ್ತಿವೆ. ಉಳಿದಂತೆ ಜಾಗತಿಕ ವಿದ್ಯಮಾನಗಳು ಹಾಗೂ ದೇಶೀಯ ಬೆಳವಣಿಗೆಗಳು ಷೇರುಪೇಟೆಯ ಮೇಲೆ ಪರಿಣಾಮ ಬೀರಲಿವೆ.

ಎನ್‌ಇಸಿಸಿ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹515
12 ಕ್ಕೆ	₹68
ಮೈಸೂರು	
100ಕ್ಕೆ	₹535

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹166-595
ದ್ವಿತಳಿ (ಬಿ.ವಿ)	₹322-661

7ರಿಂದ 10ರವರೆಗೆ ರಷ್ಯಾಕ್ಕೆ ಜಿನ್‌ಪಿಂಗ್ ಭೇಟಿ

ಬೀಜಿಂಗ್/ಮಾಸ್ಕೊ (ಪಿಟಿಐ): ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರು ಮೇ 7ರಿಂದ 10ರವರೆಗೆ ರಷ್ಯಾ ಪ್ರವಾಸ ಕೈಗೊಳ್ಳಲಿದ್ದು, ಈ ವೇಳೆ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಜೊತೆಗೆ ಅಂತರರಾಷ್ಟ್ರೀಯ ಹಾಗೂ ಪ್ರಾದೇಶಿಕ ಪ್ರಮುಖ ವಿಚಾರಗಳ ಕುರಿತಂತೆ ಚರ್ಚೆ ನಡೆಸಲಿದ್ದಾರೆ.

ಎರಡನೇ ಅವಧಿಗೆ ಅಮೆರಿಕದ ಅಧ್ಯಕ್ಷರಾಗಿ ಡೊನಾಲ್ಡ್ ಟ್ರಂಪ್ ಅಧಿಕಾರ ಸ್ವೀಕರಿಸಿದ ನಂತರ, ಜಿನ್‌ಪಿಂಗ್ ಅವರು ಮೊದಲ ಬಾರಿ ಮಾಸ್ಕೊಗೆ ಭೇಟಿ ನೀಡುತ್ತಿದ್ದಾರೆ. 2024ರ ಅಕ್ಟೋಬರ್‌ನಲ್ಲಿ ಬ್ರಿಕ್ಸ್ ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ಈ ಹಿಂದೆ ರಷ್ಯಾಗೆ ಭೇಟಿ ನೀಡಿದ್ದರು.

'ಎರಡನೇ ಮಹಾಯುದ್ಧದಲ್ಲಿ ಜರ್ಮನಿ ವಿರುದ್ಧ ಸೋವಿಯತ್ ಸಾಧಿಸಿದ ಗೆಲುವಿನ 80ನೇ ವಾರ್ಷಿಕೋತ್ಸವದಲ್ಲಿ (ಮೇ 9) ಭಾಗವಹಿಸಲು ಜಿನ್‌ಪಿಂಗ್ ಅವರು ರಷ್ಯಾಗೆ ಅಧಿಕೃತ ಪ್ರವಾಸ ಕೈಗೊಳ್ಳಲಿದ್ದಾರೆ' ಎಂದು ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರರು ಭಾನುವಾರ ಬೀಜಿಂಗ್‌ನಲ್ಲಿ ತಿಳಿಸಿದ್ದಾರೆ.

ಚೀನಾದ ಮೇಲೆ ಅಮೆರಿಕ ಸುಂಕ ಸಮರ ಆರಂಭಿಸಿರುವ ಬೆನ್ನಲ್ಲೇ ಈ ಭೇಟಿ ಮಹತ್ವ ಪಡೆದಿದೆ.

ಸಾಹಿತ್ಯ ಅಕಾಡೆಮಿ ನಡೆ ಜೈಲಿನ ಕಡೆ

ಒಂದನೇ ಪುಟದಿಂದ...

'ಕನ್ನಡ ಸಾಹಿತ್ಯ ಅತ್ಯಂತ ಮಾನವೀಯ ಮೌಲ್ಯಗಳನ್ನು ಹೊಂದಿದೆ. ಸೌಹಾರ್ದದ ಸೆಲೆಯನ್ನು ಒಳಗೊಂಡಿದೆ. ಇಂದಿನ ವಿಷಮ ಪರಿಸ್ಥಿತಿ ಹೋಗಲಾಡಿಸಲು ಅಗತ್ಯವಾದ ಸಾಂವಿಧಾನಿಕ ಆಶಯ, ಜಾತ್ಯತೀತ ಗುಣವೆಲ್ಲವನ್ನೂ ಸಾಹಿತ್ಯದ ಮೂಲಕ ಜನರಿಗೆ ಸುಲಭವಾಗಿ ತಲುಪಿಸಬಹುದು. ಈ ಕಾರಣದಿಂದ ಕಾರಾಗೃಹ ವಾಸಿಗಳನ್ನು ನಾವು ತಲುಪುತ್ತಿದ್ದೇವೆ' ಎಂದು ಎಲ್. ಎನ್. ಮುಕುಂದರಾಜ್ 'ಪ್ರಜಾವಾಣಿ'ಗೆ ತಿಳಿಸಿದರು.

'ಕನ್ನಡ ಸಾಹಿತ್ಯ ಪರಂಪರೆಯಿಂದ ಜನರು ದೂರಾಗುತ್ತಿರುವುದರಿಂದಲೇ ಅಮಾನವೀಯ ಘಟನೆಗಳು ನಡೆಯುತ್ತಿವೆ. ಇದನ್ನು ತಪ್ಪಿಸಲು ಕನ್ನಡ ಸಾಹಿತ್ಯವನ್ನು ಪಸರಿಸುವ ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ತಪ್ಪು ಮಾಡಿದವರು, ಶಿಕ್ಷೆಗೆ ಒಳಗಾದವರು, ವಿಚಾರಣಾಧೀನ ಕೈದಿಗಳೂ ಕಾರಾಗೃಹದಲ್ಲಿ ಇರುತ್ತಾರೆ. ಅವರ ಮನಸ್ಸಿಗೆ ಸಮಾಧಾನ ನೀಡಬೇಕು ಹಾಗೂ ಕೊಂಚವಾದರೂ ಬದಲಾವಣೆ ತರಬೇಕೆಂದರೆ ಕಾವ್ಯ, ನಾಟಕ, ಕಥೆ, ಕಾದಂಬರಿಗಳ ಮೂಲಕ ನಾವು ಪ್ರವೇಶ ಮಾಡಬೇಕಾಗುತ್ತದೆ. ಹಿಂದಿನ ಹಾಗೂ ಈಚಿನ ಸಾಹಿತಿಗಳನ್ನೆಲ್ಲಾ ಅವರಿಗೆ ಪರಿಚಯಿಸಲಾಗುವುದು. ಅವರಿಗೆ ಹೊಸ ಬೆಳಕನ್ನು ತೋರಿಸುವ ಸದಾಶಯ ನಮ್ಮದು' ಎನ್ನುತ್ತಾರೆ ಅವರು.

ಐಸಿಎಆರ್‌ನಿಂದ ಜಿನೋಮ್ ತಂತ್ರಜ್ಞಾನದಡಿ ತಳಿ ಅಭಿವೃದ್ಧಿ

ಎರಡು ಹೊಸ ಭತ್ತದ ತಳಿ ಬಿಡುಗಡೆ

ಶಿವರಾಜ್ ಸಿಂಗ್ ಚೌಹಾಣ್

ನವದೆಹಲಿ (ಪಿಟಿಐ): ದೇಶದಲ್ಲಿ ಮೊದಲ ಬಾರಿಗೆ ಭಾರತೀಯ ಕೃಷಿ ಅನುಸಂಧಾನ ಪರಿಷತ್‌ನಿಂದ (ಐಸಿಎಆರ್) ಜಿನೋಮ್ ಎಡಿಟಿಂಗ್ ಮೂಲಕ ಅಭಿವೃದ್ಧಿಪಡಿಸಿರುವ ಎರಡು ಹೊಸ ಭತ್ತದ ತಳಿಗಳನ್ನು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರು, ಭಾನುವಾರ ಬಿಡುಗಡೆ ಮಾಡಿದ್ದಾರೆ.

ಬಳಿಕ ಮಾತನಾಡಿದ ಅವರು, 'ಡಿಆರ್‌ಆರ್ ಧನ್ 100' (ಕಮಲಾ) ಮತ್ತು 'ಪೂಸಾ ಡಿಎಸ್‌ಟಿ ರೈಸ್ 1' ಹೆಸರಿನ ಈ ತಳಿಗಳು ರೋಗ ನಿರೋಧಕ ಶಕ್ತಿ ಹೊಂದಿದ್ದು, ಶೇ 30ರಷ್ಟು ಹೆಚ್ಚು ಇಳುವರಿ ನೀಡುತ್ತವೆ ಎಂದರು.

ಈ ತಳಿಗಳು ನೀರಿನ ಸಂರಕ್ಷಣೆ ಮತ್ತು ಹಸಿರುಮನೆ ಅನಿಲ ಹೊರಸೂಸುವಿಕೆಯ ಪ್ರಮಾಣ ತಗ್ಗಿಸುವಲ್ಲಿ ನೆರವಾಗಲಿವೆ. ಶೀಘ್ರವೇ, ದೇಶದ ರೈತರಿಗೆ ಈ ತಳಿಗಳನ್ನು ವಿತರಿಸಲಾಗುವುದು ಎಂದು ತಿಳಿಸಿದರು.

ದೇಶದಲ್ಲಿ ಅತಿ ಹೆಚ್ಚಾಗಿ ಬೆಳೆಯುವ ಸಾಂಬಾ ಮಹಸೂರಿ (ಬಿಪಿಟಿ5204) ಮತ್ತು ಕೊಟ್ಟೊಂಡೊರಾ ಸನ್ನಾಲು (ಎಂಟಿಯು1010) ಭತ್ತದ ತಳಿ ಬಳಸಿಕೊಂಡು ಈ ಹೊಸ ತಳಿಗಳನ್ನು ಅಭಿವೃದ್ಧಿಪಡಿಸಲಾಗಿದೆ. ಹವಾಮಾನ ಸಹಿಷ್ಣು ಮತ್ತು ಅತಿಹೆಚ್ಚು ಇಳುವರಿ ನೀಡುತ್ತವೆ. ಮೂಲ ಭತ್ತದ ವಂಶವಾಹಿ ಗುಣಗಳನ್ನು ಉಳಿಸಿಕೊಂಡೇ ಈ ತಳಿಗಳನ್ನು ವಿಜ್ಞಾನಿಗಳು ಅಭಿವೃದ್ಧಿಪಡಿಸಿದ್ದಾರೆ.

ಅತಿಹೆಚ್ಚು ಭತ್ತ ಬೆಳೆಯುವ ಆಂಧ್ರಪ್ರದೇಶ, ತೆಲಂಗಾಣ, ಕರ್ನಾಟಕ, ತಮಿಳುನಾಡು, ಕೇರಳ, ಪುದುಚೇರಿ, ಬಿಹಾರ, ಛತ್ತೀಸಗಢ, ಮಹಾರಾಷ್ಟ್ರ, ಮಧ್ಯಪ್ರದೇಶ, ಒಡಿಶಾ, ಜಾರ್ಖಂಡ್, ಬಿಹಾರ ಮತ್ತು ಪಶ್ಚಿಮ ಬಂಗಾಳದ ರೈತರಿಗೆ ಈ ತಳಿಗಳನ್ನು ನೀಡಲು ನಿರ್ಧರಿಸಲಾಗಿದೆ.

'ಡಿಆರ್‌ಆರ್ ಧನ್ 100 ತಳಿಯ ಭತ್ತವು ಮೂಲ ಭತ್ತಕ್ಕಿಂತ 20 ದಿನಕ್ಕೂ ಮೊದಲೇ ಕಟಾವಿಗೆ ಬರುತ್ತದೆ. ಬೇಗ ಕೊಯ್ಲು ಮಾಡುವುದರಿಂದ ಬೆಳೆ ಮಾರ್ಪಾಡು ಮಾಡಿಕೊಳ್ಳಲು ಅಥವಾ ಬಹು ಬೆಳೆ ಬೆಳೆಯಲು ರೈತರಿಗೆ ನೆರವಾಗಲಿದೆ. ಈ ಭತ್ತವು ಕಡಿಮೆ ಅವಧಿಯಲ್ಲಿ ಕಟಾವಿಗೆ ಬರುವುದರಿಂದ ವರ್ಷದಲ್ಲಿ ಮೂರು ಫಸಲು ತೆಗೆಯಲು ನೆರವಾಗಲಿದೆ' ಎಂದು ಚೌಹಾಣ್ ಹೇಳಿದರು.

ಈ ಎರಡು ಹೊಸ ತಳಿಗಳನ್ನು 50 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆ ಮಾಡುವುದರಿಂದ ಹೆಚ್ಚುವರಿಯಾಗಿ 45 ಲಕ್ಷ ಟನ್‌ನಷ್ಟು ಭತ್ತದ ಉತ್ಪಾದನೆಯಾಗಲಿದೆ ಎಂದರು.

ಕೃಷಿ ಕ್ಷೇತ್ರದ ಅಭಿವೃದ್ಧಿಯಾಗದ ಹೊರತು ಭಾರತ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಲು ಸಾಧ್ಯವಿಲ್ಲ. ಇದಕ್ಕಾಗಿ ನವೀನ ತಂತ್ರಜ್ಞಾನಗಳನ್ನು ಬಳಸಬೇಕಿದೆ. ಐಸಿಎಆರ್ ವಿಜ್ಞಾನಿಗಳು ವಿವಿಧ ತಳಿಯ ದ್ವಿದಳ ಧಾನ್ಯಗಳು ಮತ್ತು ಎಣ್ಣೆ ಬೀಜಗಳನ್ನು ಅಭಿವೃದ್ಧಿಪಡಿಸುವ ಮೂಲಕ ಆಮದು ಪ್ರಮಾಣವನ್ನು ತಗ್ಗಿಸಬೇಕಿದೆ ಎಂದರು.

ಜಿನೋಮ್ ಎಡಿಟಿಂಗ್ ಎಂದರೇನು?

ಜೀವಿಗಳ ಪ್ರತಿಯೊಂದು ಜೀವಕೋಶದಲ್ಲೂ ತಳಿಸೂತ್ರವಿದೆ. ಜೀವಕೋಶದ ಡಿಎನ್‌ಎಯನ್ನು ಕೃತಕವಾಗಿ ಬದಲಿಸುವ ವಿಧಾನಕ್ಕೆ ಜಿನೋಮ್ ಎಡಿಟಿಂಗ್ ಎಂದು ಕರೆಯಲಾಗುತ್ತದೆ.

ಜೀವಿಯೊಂದರ ವಂಶವಾಹಿಯನ್ನು ತೆಗೆದು ಅದನ್ನು ಮತ್ತೊಂದು ಜೀವಿಗೆ (ಪ್ರಾಣಿ ಅಥವಾ ಸಸ್ಯ ಅಥವಾ ಸೂಕ್ಷ್ಮಾಣು) ಸೇರಿಸಿ ಅದರ ದೈಹಿಕ ಗುಣಲಕ್ಷಣಗಳಲ್ಲಿ ಬದಲಾವಣೆ ತರಬಹುದಾಗಿದೆ. ಆ ಮೂಲಕ ನಿಸರ್ಗದಲ್ಲಿ ಕಾಣದಿದ್ದ ಹೊಸ ಜೀವಿ ಅಥವಾ ಸಸ್ಯಗಳ ತಳಿ ಸೃಷ್ಟಿಸಲು ಸಾಧ್ಯವಾಗಲಿದೆ.

ಗುಂಡು ಹಾರಿಸಿ ಗೌರವ: ಎಫ್‌ಐಆರ್ ದಾಖಲು

ಇಂಫಾಲ್ (ಪಿಟಿಐ): ಮಣಿಪುರದಲ್ಲಿ ಜನಾಂಗೀಯ ಘರ್ಷಣೆಯ ವೇಳೆ ಮೃತಪಟ್ಟಿದ್ದವರ ಗೌರವಾರ್ಥ ಈಚೆಗೆ ಕಾಂಗ್‌ಪೋಕ್ಪಿ ಜಿಲ್ಲೆಯಲ್ಲಿ ಗಾಳಿಯಲ್ಲಿ ಗುಂಡು ಹಾರಿಸಿ ನೀಡಲಾದ 'ಗೌರವ ವಂದನೆ' ಸಂಬಂಧ ಎಫ್‌ಐಆರ್ ದಾಖಲಾಗಿದೆ.

ಜನಾಂಗೀಯ ಘರ್ಷಣೆ ಆರಂಭವಾಗಿ ಎರಡು ವರ್ಷವಾದ ನಿಮಿತ್ತ ಸೈಕುಲ್‌ನಲ್ಲಿ ನಡೆದಿದ್ದ ಕಾರ್ಯಕ್ರಮದಲ್ಲಿ ಗೌರವ ವಂದನೆ ಸಲ್ಲಿಸಲಾಗಿತ್ತು. ಪೊಲೀಸರು ಇಲ್ಲಿ ಐದು ಶಸ್ತ್ರಾಸ್ತ್ರಗಳನ್ನು ವಶಕ್ಕೆ ಪಡೆದಿದ್ದಾರೆ.

ಕುಕಿ ಸಮುದಾಯದ ಪ್ರಾಬಲ್ಯವುಳ್ಳ ಕಾಂಗ್‌ಪೋಕ್ಪಿ ಜಿಲ್ಲೆಯಲ್ಲಿ ನಡೆದಿದ್ದ ಗೌರವ ವಂದನೆ ಕಾರ್ಯಕ್ರಮದಲ್ಲಿ ಸೇನಾ ಸಿಬ್ಬಂದಿಯೂ ಭಾಗವಹಿಸಿದ್ದರು.

ಈ ಬಗ್ಗೆ ಪ್ರಕರಣ ದಾಖಲಿಸಲಾಗಿದೆ. ಸ್ಥಳೀಯ ಮುಖಂಡರನ್ನು ಠಾಣೆಗೆ ಕರೆಸಿ ವಿಚಾರಣೆ ನಡೆಸಲಾಗಿದೆ ಎಂದು ಅಧಿಕಾರಿಗಳು ವಿವರಿಸಿದ್ದಾರೆ.

ಉತ್ತರ ಗೋವಾ ಜಿಲ್ಲೆಯ ಶಿರಗಾಂವ್ ಗ್ರಾಮದ ದೇವಸ್ಥಾನದಲ್ಲಿ ಕಾಲ್ತುಳಿತ ಸಂಭವಿಸಿದ ಬಳಿಕ ಸ್ಥಳಕ್ಕೆ ಭೇಟಿ ನೀಡಿದ ಪೊಲೀಸರು ಪರಿಶೀಲನೆ ನಡೆಸಿದರು ಪಿಟಿಐ ಚಿತ್ರ

ಗೋವಾ: ದೇವಸ್ಥಾನದಲ್ಲಿ ಮುಂದುವರಿದ ಪೂಜಾವಿಧಿ

ಪಣಜಿ (ಪಿಟಿಐ): ಉತ್ತರ ಗೋವಾದಲ್ಲಿ ದೇವಸ್ಥಾನದ ಉತ್ಸವ ಸಮಾರಂಭದಲ್ಲಿ ಸಂಭವಿಸಿದ ಕಾಲ್ತುಳಿತದಲ್ಲಿ 6 ಜನರು ಸಾವಿಗೀಡಾದ ಒಂದು ದಿನದ ನಂತರ ಭಾನುವಾರ ಮತ್ತೆ ಪೂಜಾ ಕಾರ್ಯಕ್ರಮ ಹಾಗೂ ವಿವಿಧ ಆಚರಣೆಗಳು ಮುಂದುವರಿದವು. ದೇವಸ್ಥಾನಕ್ಕೆ ಬಾರದಂತೆ ಅದರ ಆಡಳಿತ ಸಮಿತಿಯು ಜನರಲ್ಲಿ ಮನವಿ ಮಾಡಿದೆ.

ನೂರಾರು ಭಕ್ತರು ಭಾನುವಾರ ಗ್ರಾಮಕ್ಕೆ ಭೇಟಿ ನೀಡಿದ್ದಾರೆ. ಸ್ಥಳೀಯರ ಮನೆಗಳಿಗೆ ದೇವಿಯು ಭೇಟಿ ಕೊಡುತ್ತಾಳೆ (ಕೌಲ ಎಂದು ಕರೆಯಲಾಗುತ್ತದೆ) ಎಂಬ ನಂಬಿಕೆ ಇದೆ. ದೇವಸ್ಥಾನದಲ್ಲಿ 'ಹೋಮಕುಂಡ' ಆಚರಣೆಯ ಮರುದಿವಸ ಇದು ನಡೆಯುತ್ತದೆ. ದೊಡ್ಡ ಬೆಂಕಿ ಹಚ್ಚಲಾಗುತ್ತದೆ. ಭಕ್ತರು ಕೆಂಡದ ಮೇಲೆ ನಡೆದು ತಮ್ಮ ಸೇವೆ ಸಲ್ಲಿಸುತ್ತಾರೆ.

'ಈ 'ಕೌಲ' ಅವಧಿಯಲ್ಲಿ ಆಚರಣೆಗಳನ್ನು ನಿಲ್ಲಿಸಲು ಸಾಧ್ಯವಿಲ್ಲ. ಕಾಲ್ತುಳಿತ ದುರಂತವು ದುರದೃಷ್ಟಕರ. ಗ್ರಾಮಕ್ಕೆ ಬಾರದೇ ಇರುವಂತೆ ಸಾರ್ವಜನಿಕರಲ್ಲಿ ನಾವು ಮನವಿ ಮಾಡಿದ್ದೇವೆ. ಸ್ಥಳದಲ್ಲಿ ಬಿಗಿ ಬಂದೋಬಸ್ತ್ ನಿಯೋಜಿಸಲಾಗಿದೆ' ಎಂದು ದೇವಸ್ಥಾನ ಆಡಳಿತ ಮಂಡಳಿಯ ಅಧ್ಯಕ್ಷರು ತಿಳಿಸಿದರು.

'ಕಾಂಗ್ರೆಸ್‌ನ ಎಲ್ಲ ತಪ್ಪುಗಳ ಹೊಣೆ ಹೊರುತ್ತೇನೆ'

ಒಂದನೇ ಪುಟದಿಂದ...

ಸಿಖ್ ದಂಗೆ ಕುರಿತಂತೆ ಮಾತನಾಡಿದ ವಿದ್ಯಾರ್ಥಿ, 'ಸಿಖ್ ಸಮುದಾಯದ ಜತೆಗೆ ಸಂಬಂಧವನ್ನು ಸುಧಾರಿಸುವುದಕ್ಕಾಗಿ ನೀವು ಯಾವೆಲ್ಲ ಪ್ರಯತ್ನಗಳನ್ನು ಮಾಡಿದ್ದೀರಿ' ಎಂದು ರಾಹುಲ್‌ರನ್ನು ಪ್ರಶ್ನಿಸಿದ್ದಾರೆ. ಅಲ್ಲದೇ, ಈ ಹಿಂದೆ ಅಮೆರಿಕಕ್ಕೆ ರಾಹುಲ್ ಭೇಟಿ ನೀಡಿದ್ದಾಗ ಸಿಖ್ಖರ ಪಗಡಿ ಧಾರಣೆ ಕುರಿತಂತೆ ನೀಡಿದ್ದ ಹೇಳಿಕೆ ಬಗ್ಗೆಯೂ ಪ್ರಸ್ತಾಪಿಸಿದ್ದಾರೆ.

ಇದಕ್ಕೆ ಉತ್ತರಿಸಿರುವ ರಾಹುಲ್, 'ಸಿಖ್ ಸಮುದಾಯವು ಯಾವುದನ್ನಾದರೂ ಭಯಪಡುತ್ತದೆ ಎಂದು ನನಗೆ ಅನಿಸುವುದಿಲ್ಲ. ಯಾವುದೇ ಒಬ್ಬ ವ್ಯಕ್ತಿ ತನ್ನ ಧರ್ಮದ ಬಗ್ಗೆ ಹೇಳಿಕೊಳ್ಳಲು ಹಿಂಜರಿಯಬೇಕಾದ ಪರಿಸ್ಥಿತಿ ಭಾರತದಲ್ಲಿ ನಿರ್ಮಾಣವಾಗುವುದು ನಮಗೆ ಬೇಕೇ ಎಂಬುದಷ್ಟೇ ಈ ಹಿಂದೆ ನಾನು ನೀಡಿದ್ದ ಹೇಳಿಕೆಯ (ಟರ್ಬನ್ ಕುರಿತು) ಅರ್ಥ' ಎಂದು ಸ್ಪಷ್ಟನೆ ನೀಡಿದ್ದಾರೆ.

'ಕಾಂಗ್ರೆಸ್‌ನಿಂದ ತಪ್ಪುಗಳು ಆದಾಗ ನಾನು ಇರಲಿಲ್ಲ. ಆದರೂ ಅವುಗಳ ಹೊಣೆ ಹೊರುತ್ತೇನೆ. ಪ್ರಸಕ್ತ ಭಾರತದಲ್ಲಿರುವ ಸಿಖ್ ಸಮುದಾಯದ ಜತೆಗೆ ನನ್ನ ಬಾಂಧವ್ಯ ಅತ್ಯುತ್ತಮವಾಗಿದೆ' ಎಂದೂ ಹೇಳಿದ್ದಾರೆ.

ಬಿಜೆಪಿ ಸಿದ್ಧಾಂತ ಒಪ್ಪುವುದಿಲ್ಲ: ರಾಹುಲ್

ಬಿಜೆಪಿ ಪ್ರತಿಪಾದಿಸುವ ಚಿಂತನೆಗಳನ್ನು ಹಿಂದೂ ಚಿಂತನೆಗಳೆಂದು ನಾನು ಪರಿಗಣಿಸುವುದಿಲ್ಲ. ಬಿಜೆಪಿಯವರು ಅಧಿಕಾರದ ಚುಕ್ಕಾಣಿ ಹಿಡಿದಿರಬಹುದು. ಆದರೆ, ಭಾರತೀಯ ಚಿಂತಕರನ್ನು ಅವರು ಎಂದಿಗೂ ಪ್ರತಿನಿಧಿಸಲಾರರು ಎಂದು ರಾಹುಲ್ ಹೇಳಿದ್ದಾರೆ. ಜತೆಗೆ 'ಬುದ್ಧ, ಗುರುನಾನಕ್, ಬಸವಣ್ಣ, ಗಾಂಧಿ, ಅಂಬೇಡ್ಕರ್ ಹಾಗೂ ಪೌರಾಣಿಕ ವ್ಯಕ್ತಿ ರಾಮ ಇವರು ಯಾರೂ ಮತಾಂಧರಾಗಿರಲಿಲ್ಲ. ಇವರು ಯಾರೂ ನಾವು ಜನರನ್ನು ಕೊಲ್ಲುತ್ತೇವೆ ಎಂದವರಲ್ಲ. ಬದಲಿಗೆ ಸತ್ಯ ಮತ್ತು ಅಹಿಂಸೆಯನ್ನು ಪ್ರತಿಪಾದಿಸಿದ್ದರು. ಇದೇ ಭಾರತದ ಇತಿಹಾಸ ಹಾಗೂ ತಳಹದಿ' ಎಂದಿದ್ದಾರೆ.

> 1980ರ ದಶಕದಲ್ಲಿ ಏನಾಗಿತ್ತೋ ಅದು ತಪ್ಪು ಎಂಬುದನ್ನು ನಾನು ಈಗಾಗಲೇ ಸಾರ್ವಜನಿಕವಾಗಿ ಒಪ್ಪಿಕೊಂಡಿದ್ದೇನೆ
> **ರಾಹುಲ್ ಗಾಂಧಿ,** ಕಾಂಗ್ರೆಸ್ ನಾಯಕ

ಬಿಜೆಪಿ ಆಕ್ಷೇಪ: ರಾಮನನ್ನು ಪೌರಾಣಿಕ ವ್ಯಕ್ತಿ ಎಂದಿದ್ದಕ್ಕೆ ಬಿಜೆಪಿ ಐಟಿ ಮುಖ್ಯಸ್ಥ ಅಮಿತ್ ಮಾಳವೀಯ ಆಕ್ಷೇಪಿಸಿದ್ದಾರೆ. ರಾಮ ಬರೀ ಪೌರಾಣಿಕ ವ್ಯಕ್ತಿಯಲ್ಲ. ಭಾರತದ ಮೌಲ್ಯ, ಸಂಪ್ರದಾಯ, ಅಧ್ಯಾತ್ಮದ ಸಾರ. ರಾಮ ಭಾರತದ ಉಸಿರು. ರಾಹುಲ್ ಗಾಂಧಿ ರೀತಿಯ ವ್ಯಕ್ತಿಗಳು, ರಾಜಕೀಯ ಪಕ್ಷಗಳು ಬರುತ್ತವೆ ಹೋಗುತ್ತವೆ. ಆದರೆ, ಭಗವಾನ್ ರಾಮ ಧರ್ಮದ ಪ್ರತೀಕವಾಗಿ ಸದಾ ಉಳಿದಿರುತ್ತಾರೆ ಎಂದು ಮಾಳವೀಯ ಹೇಳಿದ್ದಾರೆ.

ಸಿಂಗಪುರ: ಪ್ರಧಾನಿ ವಾಂಗ್ ನೇತೃತ್ವದ ಪಕ್ಷಕ್ಕೆ ಮತ್ತೆ ಬಹುಮತ

ಸಿಂಗಪುರ (ಪಿಟಿಐ): ಜಾಗತಿಕ ಆರ್ಥಿಕ ಅನಿಶ್ಚಿತತೆ ಮಧ್ಯೆಯೇ ಸಿಂಗಪುರದಲ್ಲಿ ನಡೆದ ಚುನಾವಣೆಯಲ್ಲಿ ಪ್ರಧಾನಿ ಲಾರೆನ್ಸ್ ವಾಂಗ್ ನೇತೃತ್ವದ ಪೀಪಲ್ಸ್ ಆ್ಯಕ್ಷನ್ ಪಕ್ಷ (ಪಿಎಪಿ) ಮತ್ತೆ ಭರ್ಜರಿ ಬಹುಮತ ಪಡೆದಿದೆ.

ಶನಿವಾರ (ಮೇ 3) ನಡೆದ ಚುನಾವಣೆಯಲ್ಲಿ ಒಟ್ಟು 97 ಕ್ಷೇತ್ರಗಳ ಪೈಕಿ 87ರಲ್ಲಿ ಪಿಎಪಿ ಗೆದ್ದು, ಸರ್ಕಾರ ರಚನೆಗೆ ಮುಂದಾಗಿದೆ.

ಪಿಎಪಿ 23,86,452 ಮತಗಳನ್ನು ಪಡೆಯುವ ಮೂಲಕ ಚಲಾವಣೆಯಾದ ಒಟ್ಟು ಮತದಲ್ಲಿ ಶೇ 65.57ರಷ್ಟನ್ನು ಪಡೆದಿದೆ. 2024ರ ಚುನಾವಣೆಯಲ್ಲಿ ಶೇ 61.24ರಷ್ಟು ಮತವನ್ನು ಪಡೆದಿತ್ತು. ಸಿಂಗಪುರದ ಅತ್ಯಂತ ಹಳೆಯ ಮತ್ತು ಅತಿ ದೊಡ್ಡ ರಾಜಕೀಯ ಪಕ್ಷವಾಗಿರುವ ಪಿಎಪಿ 1965ರಿಂದಲೂ ಅಧಿಕಾರದಲ್ಲಿದೆ.

ಪ್ರಬಲ ವಿರೋಧ ಪಕ್ಷವಾದ 'ದಿ ವರ್ಕರ್ಸ್ ಪಕ್ಷ'ವು (ಡಬ್ಲ್ಯುಪಿ) 10 ಸಂಸತ್ ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದೆ.

ಸ್ವಾತಂತ್ರ್ಯ ನಂತರದ 14ನೇ ಸಾರ್ವತ್ರಿಕ ಚುನಾವಣೆಯಲ್ಲಿ 24,29,281 ಮತಗಳು ಚಲಾವಣೆಯಾಗಿದ್ದವು.

ಫಲಿತಾಂಶ ಘೋಷಣೆಯಾದ ಬಳಿಕ ಮಾತನಾಡಿದ ವಾಂಗ್, 'ದೇಶದ ಸಮೃದ್ಧಿಗಾಗಿ ಕೆಲಸ ಮಾಡಿದ ಪಕ್ಷಕ್ಕೆ ಸಿಂಗಪುರದ ಜನರು ಮತ್ತೆ ಬಹುಮತ ನೀಡಿದ್ದಾರೆ. ಪ್ರಬಲ ಪ್ರತಿಸ್ಪರ್ಧೆ ಇರುವುದು ರಾಜಕೀಯ ಪಕ್ಷಗಳ ಮಧ್ಯೆ ಅಲ್ಲ, ಸಿಂಗಪುರ ಮತ್ತು ಅದರ ಎದುರಿಗಿರುವ ಸವಾಲುಗಳ ಮಧ್ಯೆ' ಎಂದು ಒತ್ತಿ ಹೇಳಿದರು.

ಇಸ್ರೇಲ್ ವಿಮಾನ ನಿಲ್ದಾಣದ ಮೇಲೆ ಹುಥಿ ದಾಳಿ

ಟೆಲ್ ಅವೀವ್/ನವದೆಹಲಿ (ಎಎಫ್‌ಪಿ/ಪಿಟಿಐ): ಇಸ್ರೇಲ್‌ನ ಟೆಲ್ ಅವೀವ್ ವಿಮಾನ ನಿಲ್ದಾಣದ ಮೇಲೆ ಭಾನುವಾರ ಕ್ಷಿಪಣಿ ದಾಳಿ ನಡೆದಿದೆ. ದಾಳಿಯಿಂದಾಗಿ ಆರು ಜನರಿಗೆ ಗಾಯಗಳಾಗಿವೆ. ಹುಥಿ ಬಂಡುಕೋರರು ಈ ದಾಳಿಯ ಹೊಣೆ ಹೊತ್ತಿದ್ದಾರೆ.

ಕ್ಷಿಪಣಿಯನ್ನು ಆಕಾಶದಲ್ಲಿಯೇ ಹೊಡೆದುರುಳಿಸಲು ಹಲವು ಪ್ರಯತ್ನಗಳನ್ನು ನಡೆಸಲಾಗಿತ್ತು ಎಂದು ಇಸ್ರೇಲ್ ಸೇನೆ ಹೇಳಿದೆ. ವಿಮಾನ ನಿಲ್ದಾಣದ ಮೂಲಸೌಕರ್ಯಕ್ಕೆ ಹಾನಿ ಆಗಿಲ್ಲ. ವಿಮಾನ ನಿಲ್ದಾಣದ ವಾಹನ ನಿಲ್ದಾಣ ಪ್ರದೇಶದಲ್ಲಿ ಕ್ಷಿಪಣಿ ಅಪ್ಪಳಿಸಿದೆ.

ಟರ್ಮಿನಲ್ ಹಾಗೂ ರನ್‌ವೇ ಸನಿಹದಲ್ಲಿ ಕ್ಷಿಪಣಿ ದಾಳಿ ನಡೆದಿರುವುದು ಇದೇ ಮೊದಲು ಎಂದು ಇಸ್ರೇಲ್ ವಿಮಾನ ನಿಲ್ದಾಣ ಪ್ರಾಧಿಕಾರ ಹೇಳಿದೆ.

ಹುಥಿಗಳನ್ನು ಗುರಿಯಾಗಿಸಿಕೊಂಡು ಬಹು ಹಂತಗಳ ಪ್ರತಿಕ್ರಿಯೆ ನೀಡಲಾಗುವುದು ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಹೇಳಿದ್ದಾರೆ. ಇರಾನ್ ಬೆಂಬಲಿತ ಬಂಡುಕೋರರನ್ನು ಗುರಿಯಾಗಿಸಿಕೊಂಡು ಇಸ್ರೇಲ್ ಹಿಂದೆಯೂ ಕಾರ್ಯಾಚರಣೆ ನಡೆಸಿದೆ, ಮುಂದೆಯೂ ನಡೆಸಲಿದೆ ಎಂದು ನೆತನ್ಯಾಹು ಹೇಳಿದ್ದಾರೆ.

ವಿಮಾನ ಹಾರಾಟ ರದ್ದು: ಇಸ್ರೇಲ್‌ನ ಟೆಲ್ ಅವೀವ್ ವಿಮಾನ ನಿಲ್ದಾಣದ ಬಳಿ ನಡೆದ ಕ್ಷಿಪಣಿ ದಾಳಿಯಿಂದಾಗಿ, ದೆಹಲಿಯಿಂದ ಟೆಲ್ ಅವೀವ್‌ಗೆ ಭಾನುವಾರ ಹಾರಾಟ ನಡೆಸಿದ್ದ ಏರ್ ಇಂಡಿಯಾ ವಿಮಾನವು ಅಬುಧಾಬಿಗೆ ಮಾರ್ಗ ಬದಲಾಯಿಸಿದೆ ಎಂದು ಮೂಲಗಳು ತಿಳಿಸಿವೆ.

ಏರ್ ಇಂಡಿಯಾ ವಿಮಾನವು ಇಳಿಯುವ ಒಂದು ಗಂಟೆ ಮೊದಲು ನಿಲ್ದಾಣದ ಬಳಿ ಕ್ಷಿಪಣಿ ದಾಳಿ ನಡೆದಿದೆ. ಮುಂಜಾಗ್ರತಾ ಕ್ರಮವಾಗಿ ಅಬುಧಾಬಿಯಲ್ಲಿ ವಿಮಾನವು ಸುರಕ್ಷಿತವಾಗಿ ಇಳಿದಿದೆ. ಶೀಘ್ರವೇ ದೆಹಲಿಗೆ ಮರಳಲಿದೆ ಎಂದು ತಿಳಿಸಿವೆ.

ಪ್ರಯಾಣಿಕರು ಮತ್ತು ಸಿಬ್ಬಂದಿಯ ಸುರಕ್ಷತೆ ದೃಷ್ಟಿಯಿಂದ ಮಂಗಳವಾರದವರೆಗೆ ಟೆಲ್ ಅವೀವ್‌ಗೆ ವಿಮಾನಗಳ ಹಾರಾಟವನ್ನು ಸ್ಥಗಿತಗೊಳಿಸಲಾಗಿದೆ ಎಂದು ಏರ್ ಇಂಡಿಯಾ ವಿಮಾನಯಾನ ಸಂಸ್ಥೆ ತಿಳಿಸಿದೆ.

EDUCATION CORNER
ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಕಂಪ್ಯೂಟರ್ ತರಬೇತಿ ಕೇಂದ್ರಗಳಿಗೆ ಅರ್ಜಿ ಆಹ್ವಾನ
ಸರಕಾರದ ಅಂಗೀಕೃತ ಕಂಪ್ಯೂಟರ್, ವಿವಿಧ ಕೋರ್ಸುಗಳನ್ನು ನಡೆಸಲು ಸುವರ್ಣಾಕಾಶ
ಶಾಲೆ ಕಾಲೇಜುಗಳಲ್ಲಿ ಖಾತರಿ ಉದ್ಯೋಗ ಕಲ್ಪಿಸುವ 1 ವರುಷದ
ನರ್ಸರಿ ಟೀಚರ್ಸ್ ಟ್ರೈನಿಂಗ್ ಕೋರ್ಸ್
Diploma in Computer Teachers Training Course
DIPLOMA IN COMPUTER DATA ENTRY OPERATOR
6 ತಿಂಗಳ DIT, DCA, DOA ಇತ್ಯಾದಿ ಕೋರ್ಸುಗಳು [Qual: SSLC/PUC]
ಸರಕಾರದ PM ವಿಶ್ವಕರ್ಮ ಹಾಗೂ ವಿವಿಧ ಕೌಶಲ್ಯ ಯೋಜನೆಯ ಪಾಲುದಾರಿಕಾ ಸಂಸ್ಥೆ
ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿ
The RCSS
Empanelled & Recognised by Govt. of India & Karnataka
Mob. 9008419955, 9901520055, 9449198555
Email: info@thercss.co, Web: www.thercss.com

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI,Degree. ಸಂಬಳ 16,000 - 86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ಕಂಪನಿಗಳಿಗೆ ಬೇಕಾಗಿದ್ದಾರೆ. ಟಯೋಟಾ,TVS, ಟಾಟಾಮೋಟಾರ್ಸ್, ಬ್ರಿಟಾನಿಯಾಗಳಿಗೆ SSLC, PUC, Degree, ITIನವರು. 18,000/- 86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡಿಗಿಯರು ಬೇಕಾಗಿದ್ದಾರೆ ಊಟ ವಸತಿಯಿದೆ. 14,000-18,000. 8951315839, 7022770052

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000 ರಿಂದ 20,000,ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 6366625808, 6366627808.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
@50/-* PER WORDS
www.dhclassifieds.com
ಬುಕ್ ಮಾಡಿ
ಹೆಸರು ಬದಲಾವಣೆ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 7795158424
+91 9731810277 | +91 9900428036
*Conditions apply

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು!
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಡ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277
Tanveer: +91 9886213331 | Anitha: +91 9900428036

‘ಸಿಕಂದರ್ ಸೋಲಿಗೆ ಸಲ್ಮಾನ್ ಹೊಣೆಯಲ್ಲ’

ಸಲ್ಮಾನ್ ಖಾನ್ ಮತ್ತು ರಶ್ಮಿಕಾ ಮಂದಣ್ಣ ಜೋಡಿಯಾಗಿ ನಟಿಸಿದ್ದ ‘ಸಿಕಂದರ್’ ಸಿನಿಮಾ ಬಾಕ್ಸಾಫೀಸ್‌ನಲ್ಲಿ ನಿರೀಕ್ಷಿತ ಯಶಸ್ಸು ಕಂಡಿಲ್ಲ. ಇದಕ್ಕೆ ನಾಯಕ ಹೊಣೆಯಲ್ಲ, ನಿರ್ದೇಶಕ ಎ.ಆರ್. ಮುರುಗದಾಸ್ ಹೊಣೆ ಎಂದಿದ್ದಾರೆ ನಟ ನವಾಜುದ್ದೀನ್ ಸಿದ್ದಿಕಿ. ‘ನಿರ್ದೇಶಕರು ಉತ್ತಮ ಸ್ಕ್ರಿಪ್ಟ್ ಜತೆಗೆ ಸ್ಟಾರ್ ಸಿನಿಮಾ ಗೆಲ್ಲಲು ಬೇಕಾದ ಎಲ್ಲ ಅಂಶಗಳನ್ನು ಸೇರಿಸಬೇಕಿತ್ತು’ ಎಂದಿದ್ದಾರೆ ಸಿದ್ದಿಕಿ.

ಸ್ಟಾರ್‌ಗಿಂತ ಕಂಟೆಂಟ್ ಮುಖ್ಯ

ಕುಮಾರ್ ಬಂಗಾರಪ್ಪ, ರಾಗಿಣಿ ದ್ವಿವೇದಿ ಜೋಡಿಯಾಗಿರುವ ‘ಸರ್ಕಾರಿ ನ್ಯಾಯಬೆಲೆ ಅಂಗಡಿ’ ಚಿತ್ರ ಇತ್ತೀಚೆಗಷ್ಟೇ ಸೆಟ್ಟೇರಿದೆ. ತಮಿಳು, ತೆಲುಗು ಸಿನಿಮಾಗಳಲ್ಲಿಯೂ ಸಕ್ರಿಯರಾಗಿರುವ ರಾಗಿಣಿ ತಮ್ಮ ಸಿನಿ ಜರ್ನಿಯ ಅಪ್‌ಡೇಟ್ ನೀಡಿದ್ದಾರೆ...

ರಾಗಿಣಿ

ವಿನಾಯಕ ಕೆ.ಎಸ್

‘ಈ ಸಿನಿಮಾದಲ್ಲಿ ಸಣ್ಣ ಪಟ್ಟಣದ ಸಾಮಾನ್ಯ ಗೃಹಿಣಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಪಡಿತರ ಚೀಟಿ ಎಂಬುದು ಗ್ರಾಮೀಣ ಭಾಗದ ಹೆಣ್ಣುಮಕ್ಕಳ ಬದುಕಿನ ಭಾಗವೇ ಆಗಿದೆ. ಆ ಕುರಿತು ಕಥೆಯನ್ನು ಹೊಂದಿರುವ ಚಿತ್ರ. ನ್ಯಾಯಬೆಲೆ ಅಂಗಡಿಯಲ್ಲಿನ ಅನ್ಯಾಯವನ್ನು ಪ್ರತಿಭಟಿಸಿ ಹೋರಾಡುವ ಗೃಹಿಣಿಯಾಗಿರುವೆ. ಮಂಡ್ಯ ಸುತ್ತಮುತ್ತ ಚಿತ್ರದ ಚಿತ್ರೀಕರಣ ನಡೆಯಲಿದೆ’ ಎಂದು ರಾಗಿಣಿ ಸಿನಿಮಾ ಕುರಿತು ವಿವರಿಸಿದರು.

‘ಸರ್ಕಾರಿ ನ್ಯಾಯಬೆಲೆ ಅಂಗಡಿ’ ಚಿತ್ರಕ್ಕೆ ಸಾತ್ವಿಕ್ ಪವನ್‌ಕುಮಾರ್ ನಿರ್ದೇಶನ, ಛಾಯಾಚಿತ್ರಗ್ರಹಣವಿದೆ. ಬಿ.ರಾಮಮೂರ್ತಿ ಕಥೆ–ಸಂಭಾಷಣೆ ಬರೆದಿದ್ದಾರೆ. ಅನಂತ್ ಆರ್ಯನ್ ಸಂಗೀತ ನಿರ್ದೇಶನವಿದೆ. ದೊಡ್ಡಣ್ಣ ಸೇರಿದಂತೆ ಅನೇಕ ಕಲಾವಿದರು ಚಿತ್ರದಲ್ಲಿದ್ದಾರೆ.

‘ಇವತ್ತು ಸ್ಟಾರ್‌ಗಿರಿಗೆ ಬೆಲೆಯಿಲ್ಲ. ಒಟಿಟಿಯಿಂದ ಬಹಳ ಪೈಪೋಟಿಯಿದೆ. ಹೀಗಾಗಿ ಕಂಟೆಂಟ್ ಬಹಳ ಮುಖ್ಯ. ಜನ ಚಿತ್ರಮಂದಿರಕ್ಕೆ ಬರಬೇಕೆಂದರೆ ವಿಭಿನ್ನ ಕಥೆಯ ಸಿನಿಮಾಗಳು ತೆರೆಗೆ ಬರಬೇಕು. ಉತ್ತಮ ಕಥೆ, ಗಟ್ಟಿಯಾದ ಹಿನ್ನೆಲೆ ಹೊಂದಿರುವ ಪಾತ್ರಗಳನ್ನು ಮಾತ್ರ ಒಪ್ಪಿಕೊಳ್ಳುತ್ತಿರುವೆ. ಕೇವಲ ಗ್ಲಾಮರ್‌ಗೆ ಆದ್ಯತೆ ನೀಡದೆ ಉತ್ತಮ ಸಿನಿಮಾಗಳನ್ನೇ ಮಾಡಬೇಕೆಂದು ನಿರ್ಧಾರ ಮಾಡಿರುವೆ. ಕಥೆ ಮತ್ತು ಪಾತ್ರದ ಆಯ್ಕೆಯಲ್ಲಿ ಬಹಳ ಜಾಗರೂಕಳಾಗಿರುವೆ’ ಎನ್ನುತ್ತಾರೆ ಅವರು.

ರಾಗಿಣಿ ಕೈಯಲ್ಲಿ ಸದ್ಯ ಹಲವು ಸಿನಿಮಾಗಳಿವೆ. ಇತ್ತೀಚೆಗಷ್ಟೇ ಘೋಷಣೆಯಾದ ‘ಸಿಂಧೂರಿ’ ಚಿತ್ರದಲ್ಲಿ ಧರ್ಮ ಕೀರ್ತಿರಾಜ್‌ಗೆ ನಾಯಕಿಯಾಗಿದ್ದಾರೆ. ಶಂಕರ್ ಕೋಮನಹಳ್ಳಿ ನಿರ್ದೇಶನದ ‘ಬಿಂಗೊ’ ಚಿತ್ರದಲ್ಲಿ ಭಿನ್ನ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಈ ಸಿನಿಮಾ ಬಿಡುಗಡೆಗೆ ಸಿದ್ಧವಿದೆ. ಮೋಹನ್ ಲಾಲ್ ಜತೆ ‘ವೃಷಭ’ ಚಿತ್ರದಲ್ಲಿ ನಟಿಸಿದ್ದಾರೆ. ಹಲವು ಭಾಷೆಗಳಲ್ಲಿ ಸಿದ್ಧಗೊಳ್ಳುತ್ತಿರುವ ಈ ಪ್ಯಾನ್ ಇಂಡಿಯಾ ಚಿತ್ರಕ್ಕೆ ನಂದಕಿಶೋರ್ ನಿರ್ದೇಶನವಿದೆ.

‘ಮೋಹನ್‌ಲಾಲ್ ಜತೆ ‘ಹೃದಯಪೂರ್ವಂ’ ಎಂಬ ಮತ್ತೊಂದು ಮಲಯಾಳ ಸಿನಿಮಾದಲ್ಲಿ ನಟಿಸಿರುವೆ. ಆಶೀರ್ವಾದ್ ಸಿನಿಮಾಸ್ ನಿರ್ಮಾಣದ ಚಿತ್ರವಿದು. ನವೀನ್ ಚಂದ್ರ ಜತೆ ತೆಲುಗು ಸಿನಿಮಾವೊಂದರಲ್ಲಿ ಕಾಣಿಸಿಕೊಂಡಿರುವೆ. ಅನುರಾಗ್ ಕಶ್ಯಪ್ ಅವರೊಂದಿಗೆ ತಮಿಳು ಸಿನಿಮಾವೊಂದರ ಚಿತ್ರೀಕರಣ ನಡೆಯುತ್ತಿದೆ. ಚಿತ್ರರಂಗದಲ್ಲಿ ಸೋಲು, ಗೆಲುವುಗಳು ಸಹಜ. ಇವೆಲ್ಲ ಬದುಕಿನ ಹಂತಗಳಷ್ಟೆ’ ಎಂದರು.

ಮೋಹನ್ ಲಾಲ್ ಜತೆ ರಾಗಿಣಿ

ಹೊಸಬರ ಟೈಮ್ ಪಾಸ್

ಬಹುತೇಕ ಹೊಸಬರಿಂದಲೇ ಕೂಡಿರುವ ‘ಟೈಮ್ ಪಾಸ್’ ಚಿತ್ರದ ಫಸ್ಟ್ ಲುಕ್ ಪೋಸ್ಟರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಚೇತನ್ ಜೋಡಿದಾರ್ ನಿರ್ದೇಶನದ ಚಿತ್ರ ಚಿತ್ರೀಕರಣ ಮುಗಿಸಿಕೊಂಡು, ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ.

‘ಚಿತ್ರರಂಗದ ಪ್ರಸ್ತುತ ಸ್ಥಿತಿಗತಿಗಳಿಗೆ ಕನ್ನಡಿ ಹಿಡಿಯುವ ನೈಜ ಘಟನೆಗಳನ್ನು ಆಧರಿಸಿದ ಕಥೆ. ಇದು ಡಾರ್ಕ್ ಹ್ಯೂಮರ್ ಜಾನರ್‌ಗೆ ಸೇರುವ ಚಿತ್ರ. ಸಿನಿಮಾ ವ್ಯಾಮೋಹ ಹೊಂದಿರುವ ಏಳು ಪಾತ್ರಗಳು ಒಂದೆಡೆ ಸೇರಿದಾಗ ತೆರೆದುಕೊಳ್ಳುವ ರೋಚಕ ಕಥೆಯನ್ನು ಹಾಸ್ಯದ ಧಾಟಿಯಲ್ಲಿ ನಿರೂಪಿಸಲಾಗಿದೆ. ನಾಲ್ಕು ಹಾಡುಗಳು ಮತ್ತು ಎರಡು ಫೈಟ್‌ಗಳು ಚಿತ್ರದಲ್ಲಿವೆ’ ಎಂದರು ನಿರ್ದೇಶಕರು.

ಗುಂಡೂರು ಶೇಖರ್, ಕಿರಣ್ ಕುಮಾರ್ ಶೆಟ್ಟಿ, ಎಂ.ಹೆಚ್ ಕೃಷ್ಣಮೂರ್ತಿ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಇಮ್ರಾನ್ ಪಾಷಾ, ವೈಸಿರಿ ಕೆ ಗೌಡ, ನವೀನ್ ಕುಮಾರ್ ಮುಂತಾದವರು ಪ್ರಮುಖ ಪಾತ್ರದಲ್ಲಿದ್ದಾರೆ. ಡಿ.ಎಂ. ಉದಯ ಕುಮಾರ್ ಸಂಗೀತ ನಿರ್ದೇಶನ, ರಾಜೀವ್ ಗಣೇಶ್ ಛಾಯಾಚಿತ್ರಗ್ರಹಣ, ಹರಿ ಪರಮ್ ಸಂಕಲನವಿದೆ.

ಪ್ರೈಮ್‌ನಲ್ಲಿ ವಿದ್ಯಾಪತಿ, ಕೆರೆಬೇಟೆ


ಮಲೈಕಾ ವಸುಪಾಲ್

ಡಾಲಿ ಧನಂಜಯ ನಿರ್ಮಿಸಿ, ನಾಗಭೂಷಣ್ ನಾಯಕನಾಗಿ ನಟಿಸಿರುವ ‘ವಿದ್ಯಾಪತಿ’ ಹಾಗೂ ರಾಜ್‌ಗುರು ನಿರ್ದೇಶಿಸಿ, ಗೌರಿಶಂಕರ್ ನಾಯಕನಾಗಿರುವ ‘ಕೆರೆಬೇಟೆ’ ಚಿತ್ರಗಳು ಅಮೆಜಾನ್ ಪ್ರೈಮ್ ಒಟಿಟಿಯಲ್ಲಿ ವೀಕ್ಷಕರಿಗೆ ಲಭ್ಯವಿವೆ.

ಇಶಾಂ ಹಾಗೂ ಹಸೀಂ ಖಾನ್ ನಿರ್ದೇಶನದ ‘ವಿದ್ಯಾಪತಿ’ ಸಿನಿಮಾ 2025ರ ಏಪ್ರಿಲ್ 10ರಂದು ತೆರೆಗೆ ಬಂದಿತ್ತು. ‘ಉಪಾಧ್ಯಕ್ಷ’ ಮೂಲಕ ಸ್ಯಾಂಡಲ್‌ವುಡ್‌ಗೆ ಎಂಟ್ರಿ ಕೊಟ್ಟಿದ್ದ ಮಲೈಕಾ ವಸುಪಾಲ್ ನಾಯಕಿಯಾಗಿ ನಟಿಸಿದ್ದಾರೆ. ಡಾಲಿ ಧನಂಜಯ ಅತಿಥಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದು, ಇದೀಗ ಈ ಚಿತ್ರ ಒಟಿಟಿಯಲ್ಲಿ ಲಭ್ಯವಿದೆ. ರಂಗಾಯಣ ರಘು ಪ್ರಮುಖ ಪಾತ್ರದಲ್ಲಿದ್ದು, ಲವಿತ್ ಛಾಯಾಚಿತ್ರಗ್ರಹಣ, ಡಾಸ್ಮೋಡ್ ಸಂಗೀತ ನಿರ್ದೇಶನ ಚಿತ್ರಕ್ಕಿದೆ.

ಮಲೆನಾಡು ಭಾಗದಲ್ಲಿ ಮೀನು ಬೇಟೆಯಾಡುವ ಕೆರೆಬೇಟೆಯನ್ನೇ ಕಥೆಯಾಗಿ ಹೊಂದಿರುವ ಚಿತ್ರ 2024ರ ಮಾರ್ಚ್‌ನಲ್ಲಿ ತೆರೆಕಂಡಿತ್ತು. ಗೌರಿಶಂಕರ್‌ಗೆ ಬಿಂದು ಶಿವರಾಮ್ ನಾಯಕಿಯಾಗಿ ನಟಿಸಿದ್ದಾರೆ. ಗೋಪಾಲಕೃಷ್ಣ ದೇಶಪಾಂಡೆ, ಹರಿಣಿ ಶ್ರೀಕಾಂತ್, ಸಂಪತ್ ಮೈತ್ರೇಯ ಮುಂತಾದವರು ತಾರಾಗಣದಲ್ಲಿದ್ದಾರೆ. ‘ಜನಮನ ಸಿನಿಮಾ’ ಬ್ಯಾನರ್ ಅಡಿಯಲ್ಲಿ ನಿರ್ಮಾಣಗೊಂಡ ಚಿತ್ರಕ್ಕೆ ಗಗನ್ ಬದೇರಿಯ ಸಂಗೀತ ನಿರ್ದೇಶನ, ಕೀರ್ತನ್ ಪೂಜಾರಿ ಛಾಯಾಚಿತ್ರಗ್ರಹಣವಿದೆ.


ಗೌರಿಶಂಕರ್

ಸಂಕ್ಷಿಪ್ತ ಸುದ್ದಿ

ಚುನಾವಣೆ: ಸಮಗ್ರ ಮಾಹಿತಿಗೆ ‘ಇಸಿಐನೆಟ್’ ಆ್ಯಪ್

ನವದೆಹಲಿ (ಪಿಟಿಐ): ಚುನಾವಣೆಗೆ ಸಂಬಂಧಿಸಿದಂತೆ ಒಂದೇ ವೇದಿಕೆಯಲ್ಲಿ ಸಮಗ್ರ ಮಾಹಿತಿ, ಸೇವೆ ಒದಗಿಸುವ ಹೊಸ ಕಿರು ತಂತ್ರಾಂಶ (ಆ್ಯಪ್) ಬಿಡುಗಡೆಗೊಳಿಸಲು ಚುನಾವಣಾ ಆಯೋಗವು ಸಿದ್ಧತೆ ನಡೆಸಿದೆ.

ಮತದಾರರು, ರಾಜಕೀಯ ಪಕ್ಷಗಳು ಹಾಗೂ ಅಧಿಕಾರಿಗಳಿಗೆ ನೂತನ ಆ್ಯಪ್‌ನಲ್ಲಿ ಮಾಹಿತಿ ಸಿಗಲಿದ್ದು, ಈಗಿರುವ 40 ಮೊಬೈಲ್ ಅಪ್ಲಿಕೇಷನ್‌ಗಳು ಒಂದೇ ಆ್ಯಪ್‌ನಲ್ಲಿ ಸಂಯೋಜನೆಗೊಳ್ಳಲಿವೆ ಎಂದು ಆಯೋಗವು ತಿಳಿಸಿದೆ.

ಆಯೋಗಕ್ಕೆ ಸಂಬಂಧಿಸಿದಂತೆ ಯಾವುದೇ ಕೆಲಸ ಮಾಡಲು ಪ್ರತ್ಯೇಕ ಆ್ಯಪ್ ಡೌನ್‌ಲೋಡ್ ಮಾಡಿ, ಲಾಗಿನ್ ಮಾಡಬೇಕಾದ ಅನಿವಾರ್ಯ ಇತ್ತು. ಈ ಸಮಸ್ಯೆ ಕೊನೆಗಾಣಿಸಲು, ಹೊಸ ಆ್ಯಪ್ ಅಭಿವೃದ್ಧಿಪಡಿಸಲಾಗುವುದು ಎಂದು ಮುಖ್ಯ ಆಯುಕ್ತ ಜ್ಞಾನೇಶ್ ಕುಮಾರ್ ಅವರು ಇತ್ತೀಚೆಗೆ ತಿಳಿಸಿದ್ದರು.

‘ಇಸಿಐನೆಟ್’ ಆ್ಯಪ್ ಸ್ಮಾರ್ಟ್‌ಫೋನ್ ಜೊತೆಗೆ ಡೆಸ್ಕ್‌ಟಾಪ್‌ನಲ್ಲಿಯೂ ಲಭ್ಯವಾಗಲಿದೆ. ಚುನಾವಣೆಗೆ ಸಂಬಂಧಿಸಿದಂತೆ ಅಧಿಕೃತ ಅಂಕಿಅಂಶಗಳನ್ನು ಆಯೋಗವೇ ಪರಿಷ್ಕರಿಸಲಿದ್ದು, ಸಾಧ್ಯವಾದಷ್ಟು ನಿಖರ ಮಾಹಿತಿಯನ್ನು ಪಡೆಯಬಹುದಾಗಿದೆ. ಸಮಸ್ಯೆ ಸೃಷ್ಟಿ ಆದರೆ, ಶಾಸನಬದ್ಧವಾದ ನಮೂನೆಗಳಲ್ಲಿ ಭರ್ತಿ ಮಾಡಿದ ಪ್ರಾಥಮಿಕ ದತ್ತಾಂಶಗಳನ್ನು ಮಾತ್ರ ಉಳಿಸಿಕೊಳ್ಳಲಾಗುವುದು ಎಂದು ಆಯೋಗವು ಸ್ಪಷ್ಟಪಡಿಸಿದೆ.

ಚುನಾವಣೆಗೆ ಸಂಬಂಧಿಸಿದಂತೆ, ಈಗ ‘ವೋಟರ್ ಹೆಲ್ಪ್‌ಲೈನ್’, ವೋಟರ್ ಟರ್ನ್‌ಔಟ್ ಆ್ಯಪ್, ಸಿ–ವಿಜಿಲ್, ಸುವಿಧಾ, ಸಕ್ಷಮ್, ಕೆವೈಸಿ ಆ್ಯಪ್‌ಗಳಿವೆ. ಈ ಎಲ್ಲವೂ ಸೇರಿ, 5.5 ಕೋಟಿ ಆ್ಯಪ್‌ಗಳು ಡೌನ್‌ಲೋಡ್ ಆಗಿವೆ.

ಸೇನಾ ವಾಹನ ಕಂದಕಕ್ಕೆ ಉರುಳಿ ಮೂವರು ಸಾವು

ರಾಮಬನ/ಜಮ್ಮು: ಜಮ್ಮು ಮತ್ತು ಕಾಶ್ಮೀರದ ರಾಮಬನ ಜಿಲ್ಲೆಯಲ್ಲಿ ಭಾನುವಾರ ಸೇನಾ ವಾಹನವೊಂದು ರಸ್ತೆಯಿಂದ ಜಾರಿ 700 ಅಡಿ ಆಳದ ಕಂದಕಕ್ಕೆ ಉರುಳಿ, ಮೂವರು ಸೈನಿಕರು ಮೃತಪಟ್ಟಿದ್ದಾರೆ.

ಬೆಳಿಗ್ಗೆ 11.30ರ ಸುಮಾರಿಗೆ ಬೈಟರಿ ಚಶ್ಮಾ ಬಳಿ ಅಪಘಾತ ಸಂಭವಿಸಿದೆ. ಸೇನಾ ವಾಹನವು ರಾಷ್ಟ್ರೀಯ ಹೆದ್ದಾರಿ 44ರಲ್ಲಿ ಜಮ್ಮುವಿನಿಂದ ಶ್ರೀನಗರಕ್ಕೆ ತೆರಳುತ್ತಿತ್ತು. ಸೇನೆ, ಪೊಲೀಸರು, ಎಸ್‌ಡಿಆರ್‌ಎಫ್, ಸ್ಥಳೀಯ ಸ್ವಯಂಸೇವಕರು ಮತ್ತು ಮೂವರು ಸೈನಿಕರಿಂದ ತಕ್ಷಣವೇ ಜಂಟಿ ರಕ್ಷಣಾ ಕಾರ್ಯಾಚರಣೆ ಆರಂಭಿಸಲಾಯಿತು. ವಾಹನದಲ್ಲಿ ಪ್ರಯಾಣಿಸುತ್ತಿದ್ದ ಮೂವರು ಸೈನಿಕರು ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪಾಕ್ ಹಾಗೂ ಬಾಂಗ್ಲಾ ಗಡಿಗಳಲ್ಲಿ ಸ್ಥಾಪಿಸಲು ಬಿಎಸ್‌ಎಫ್ ಸಿದ್ಧತೆ

ಮುಂಚೂಣಿ ನೆಲೆಗಳ ಸ್ಥಾಪನೆ

ನವದೆಹಲಿ (ಪಿಟಿಐ): ಪಾಕಿಸ್ತಾನ ಮತ್ತು ಬಾಂಗ್ಲಾದೇಶದೊಂದಿಗಿನ ಗಡಿಯಲ್ಲಿ ಎರಡು ಮುಂಚೂಣಿ ನೆಲೆಗಳನ್ನು ಸ್ಥಾಪಿಸಲು ಗಡಿ ಭದ್ರತಾ ಪಡೆ (ಬಿಎಸ್‌ಎಫ್) ತಯಾರಿ ನಡೆಸಿದೆ. ಜೊತೆಗೆ, ಇನ್ನೂ ಹೆಚ್ಚಿನ 16 ತುಕಡಿಗಳನ್ನು ರೂಪಿಸುವ ಸಿದ್ಧತೆ ನಡೆದಿದ್ದು, ಕೇಂದ್ರ ಸರ್ಕಾರದ ಒಪ್ಪಿಗೆಗಾಗಿ ಬಿಎಸ್‌ಎಫ್ ಕಾಯುತ್ತಿದೆ.

ನೆಲೆ ಮತ್ತು 16 ತುಕಡಿ ರೂಪಿಸಲು ಕೇಂದ್ರ ಸರ್ಕಾರದಿಂದ ಈಗಾಗಲೇ ತಾತ್ವಿಕ ಒಪ್ಪಿಗೆ ಸಿಕ್ಕಿದೆ. ಆದರೆ, ಹಣಕಾಸು ಸಚಿವಾಲಯದಿಂದ ಅಂತಿಮ ಒಪ್ಪಿಗೆ ಬರಬೇಕಿದೆ. ಇದು ಕೂಡ ಆದಷ್ಟು ಬೇಗ ಆಗಲಿದೆ ಎಂದು ಮೂಲಗಳು ಹೇಳಿವೆ. ಮುಂದಿನ 5–6 ವರ್ಷಗಳಲ್ಲಿ ನೂತನ ತುಕಡಿಗಳು ಕಾರ್ಯನಿರ್ವಹಿಸಲಿವೆ.

ಜಮ್ಮು, ಪಂಜಾಬ್ ಸೇರಿ ಭಾರತ–ಪಾಕಿಸ್ತಾನ ಗಡಿಯ ಉದ್ದಕ್ಕೂ ಈಗಾಗಲೇ ಹಲವು ವಲಯಗಳಿವೆ. ಬಾಂಗ್ಲಾದೇಶದ ಗಡಿ ಉದ್ದಕ್ಕೂ ಅಸ್ಸಾಂ ಹಾಗೂ ಮಣಿಪುರದಲ್ಲಿ ವಲಯಗಳಿವೆ. ಆದರೆ, ಇತ್ತೀಚೆಗೆ ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿ ಮತ್ತು ಬಾಂಗ್ಲಾದೇಶದಲ್ಲಿ ಶೇಖ್ ಹಸೀನಾ ಅವರ ಸರ್ಕಾರ ಪತನವಾದ ಹಿನ್ನೆಲೆಯಲ್ಲಿ ಮುಂಚೂಣಿ ನೆಲೆಗಳನ್ನು ಸ್ಥಾಪಿಸಲು ನಿರ್ಧರಿಸಲಾಗಿದೆ.

ನೆಲೆಗಳ ಸ್ಥಾಪನೆಗೆ ಒಂದು ವೇಳೆ ಕೇಂದ್ರ ಸರ್ಕಾರವು ಒಪ್ಪಿಗೆ ನೀಡಿದರೆ ಇದೊಂದು ಶಕ್ತಿಯುತವಾದ, ಸಕಾರಾತ್ಮಕ ಕ್ರಮವಾಗಲಿದೆ. ಕೇಂದ್ರ ಸ್ಥಾನಗಳ ಸ್ಥಾಪನೆಗೆ ಕೇಂದ್ರ ಗೃಹ ಸಚಿವಾಲಯವು ಒಪ್ಪಿಗೆ ನೀಡಿದೆ.

ಭಾರತ–ಜಪಾನ್ ಮಾತುಕತೆ: ರಕ್ಷಣಾ ಸಚಿವ ರಾಜನಾಥ ಸಿಂಗ್ ಹಾಗೂ ಜಪಾನ್ ರಕ್ಷಣಾ ಸಚಿವ ನಕತಾನಿ ಅವರು ಸೋಮವಾರ ಮಾತುಕತೆ ನಡೆಸಲಿದ್ದಾರೆ. ಪಹಲ್ಗಾಮ್ ವಿಚಾರವಾಗಿ ಭಾರತ ಮತ್ತು ಪಾಕಿಸ್ತಾನ ಮಧ್ಯೆ ಉಂಟಾಗಿರುವ ಉದ್ವಿಗ್ನ ಸ್ಥಿತಿ ಮತ್ತು ದಕ್ಷಿಣ ಚೀನಾ ಸಮುದ್ರದಲ್ಲಿ ಚೀನಾವು ಆಕ್ರಮಣಕಾರಿ ವರ್ತನೆ ತೋರುತ್ತಿರುವ ಹಿನ್ನೆಲೆಯಲ್ಲಿ ಈ ಸಭೆಯು ಮಹತ್ವ ಪಡೆದಿದೆ.

ಅಂಕಿ ಅಂಶ

193
ಬಿಎಸ್‌ಎಫ್‌ನಲ್ಲಿರುವ ಒಟ್ಟು ತುಕಡಿಗಳ ಸಂಖ್ಯೆ

17,000
16 ಹೆಚ್ಚುವರಿ ತುಕಡಿಗಳಲ್ಲಿ ಇರಲಿರುವ ಯೋಧರ ಸಂಖ್ಯೆ

ಶೀಘ್ರವೇ ನೇಮಕಾತಿ ಆರಂಭ

‘16 ತುಕಡಿಗಳಿಗೆ ಪುರುಷರು ಮತ್ತು ಮಹಿಳೆಯರನ್ನು ನೇಮಕ ಮಾಡಿಕೊಳ್ಳುವ ಪ್ರಕ್ರಿಯೆಯನ್ನು ಬಿಎಸ್‌ಎಫ್ ಶೀಘ್ರವೇ ಆರಂಭಿಸಲಿದೆ. ನೇಮಕಾತಿ ಬಳಿಕ ತರಬೇತಿಗಳನ್ನು ನೀಡಲಾಗುತ್ತದೆ. ಮುಂದಿನ 5–6 ವರ್ಷಗಳಲ್ಲಿ ಈ ತುಕಡಿಗಳು ಗಡಿ ಕಾಯಲು ಸಿದ್ಧವಾಗಲಿವೆ’ ಎಂದು ಮೂಲಗಳು ಹೇಳಿವೆ.

ಮೊದಲೇ ಒಪ್ಪಿಗೆ ಕೇಳಲಾಗಿತ್ತು

‘ಬಿಎಸ್‌ಎಫ್‌ನಲ್ಲಿ 2.70 ಲಕ್ಷ ಯೋಧರು ಇದ್ದಾರೆ. ಬೇರೆ ಬೇರೆ ದೇಶಗಳ ರಾಜಕೀಯ ಚಿತ್ರಣಗಳು ಬದಲಾಗುತ್ತಿವೆ, ಭದ್ರತಾ ವಿಚಾರಗಳಲ್ಲಿಯೂ ಕ್ಷಿಪ್ರವಾಗಿ ಬದಲಾವಣೆಗಳಾಗುತ್ತಿವೆ. ಆದ್ದರಿಂದ 20–21 ಹೊಸ ತುಕಡಿಗೆ ಅನುಮತಿ ನೀಡವಂತೆ ಗೃಹ ಸಚಿವಾಲಯಕ್ಕೆ ಕೆಲವು ವರ್ಷಗಳ ಹಿಂದೆ ಕೇಳಲಾಗಿತ್ತು’ ಎಂದು ಅಧಿಕಾರಿಗಳು ಹೇಳಿದರು. ಈಗ 16 ತುಕಡಿಗೆ ತಾತ್ವಿಕವಾಗಿ ಅನುಮತಿ ನೀಡಲಾಗಿದೆ.

‘ಲವ್ ಜಿಹಾದ್ ತಡೆಗೆ ಸನಾತನಿ ಸೇನಾ’

• ಸಂಜಯ್ ಪಾಂಡೆ

ಲಖನೌ: ವಿಶ್ವ ಹಿಂದೂ ಪರಿಷತ್ತು (ವಿಎಚ್‌ಪಿ) ಭಾನುವಾರ ಇಲ್ಲಿ ಆಯೋಜಿಸಿದ್ದ ಧರ್ಮ ಸಂಸತ್ತಿನಲ್ಲಿ ಭಾಗಿಯಾಗಿದ್ದ ಸ್ವಾಮೀಜಿಗಳು ‘ಲವ್ ಜಿಹಾದ್’ ತಡೆಯುವ ಉದ್ದೇಶದಿಂದ ‘ಸನಾತನಿ ಸೇನಾ’ ರೂಪಿಸಲು ತೀರ್ಮಾನಿಸಿದ್ದಾರೆ. ಅಲ್ಲದೆ, ಭಾರತವನ್ನು ‘ಹಿಂದೂ ರಾಷ್ಟ್ರ’ವೆಂದು ಘೋಷಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಮುಸ್ಲಿಮರು ಹೆಚ್ಚಿನ ಸಂಖ್ಯೆಯಲ್ಲಿ ಇರುವ ಪ್ರದೇಶಗಳಲ್ಲಿ ‘ಸನಾತನ ಕವಚ’ ಹೆಸರಿನಲ್ಲಿ ಕಚೇರಿಗಳನ್ನು ಆರಂಭಿಸಲು ವಿಎಚ್‌ಪಿ ತೀರ್ಮಾನಿಸಿದೆ. ಈ ಕಚೇರಿಗಳನ್ನು ತೆರೆಯುತ್ತಿರುವ ಉದ್ದೇಶ, ಹಿಂದೂಗಳಿಗೆ ಮತ್ತು ದೇವಸ್ಥಾನಗಳಿಗೆ ‘ರಕ್ಷಣೆ ಒದಗಿಸುವುದು’ ಎಂದಿದೆ. ಹಿಂದೂಗಳು, ಸನಾತನ ಧರ್ಮ ಮತ್ತು ದೇವಸ್ಥಾನಗಳಿಗೆ ಸಂಬಂಧಿಸಿದಂತೆ ಏಳು ನಿರ್ಣಯಗಳನ್ನು ಧರ್ಮ ಸಂಸತ್ತಿನಲ್ಲಿ ಕೈಗೊಳ್ಳಲಾಗಿದೆ ಎಂದು ಹನುಮಗಢಿ ದೇವಸ್ಥಾನದ ಮಹಂತ ರಾಜು ದಾಸ್ ತಿಳಿಸಿದರು.

ಪಶ್ಚಿಮ ಬಂಗಾಳದ ಮುರ್ಶಿದಾಬಾದ್‌ನಲ್ಲಿ ಈಚೆಗೆ ನಡೆದ ಹಿಂಸಾಚಾರವನ್ನು ಖಂಡಿಸಿ ಜೂನ್‌ನಿಂದ ದೇಶದಾದ್ಯಂತ ಸನಾತನ ಯಾತ್ರೆಯನ್ನು ಆಯೋಜಿಸಲು ನಿರ್ಧರಿಸಲಾಗಿದೆ. ಯಾತ್ರೆಯು ಮುರ್ಶಿದಾಬಾದ್‌ನಿಂದಲೇ ಶುರುವಾಗಲಿದೆ.

ಉತ್ತರ ಪ್ರದೇಶದ ಉಪ ಮುಖ್ಯಮಂತ್ರಿ ಬ್ರಜೇಶ್ ಪಾಠಕ್ ಕೂಡ ಧರ್ಮ ಸಂಸತ್ತಿನಲ್ಲಿ ಭಾಗಿಯಾಗಿದ್ದರು. ಕೆಲವು ತಿಂಗಳ ಹಿಂದೆ ಮಹಾ ಕುಂಭಮೇಳ ಆಯೋಜನೆ ಆಗಿದ್ದ ಸಂದರ್ಭದಲ್ಲಿಯೂ ಧರ್ಮ ಸಂಸತ್ ನಡೆದಿತ್ತು. ಆಗಲೂ ‘ಹಿಂದೂ ರಾಷ್ಟ್ರ’ ಕುರಿತ ಬೇಡಿಕೆಯನ್ನು ಮಂಡಿಸಲಾಗಿತ್ತು.

ನಾನೇ ಬಾಹುಬಲಿ... ಪಶ್ಚಿಮ ಬಂಗಾಳದ ನಾದಿಯಾದಲ್ಲಿ ಬಿಸಿಲಿನ ಝಳಕ್ಕೆ ಬಸವಳಿದ ಎಮ್ಮೆಗಳಿಗೆ ಸ್ನಾನ ಮಾಡಿಸುತ್ತ, ತಾವೂ ಸಂಭ್ರಮಿಸಿದ ಚಿಣ್ಣರು –ಪಿಟಿಐ ಚಿತ್ರ

ವಕ್ರದೃಷ್ಟಿ ಬೀರಿದವರಿಗೆ ತಕ್ಕ ತಿರುಗೇಟು: ಸಚಿವ ರಾಜನಾಥ್ ಸಿಂಗ್

‘ಭಾರತದ ಮೇಲೆ ವಕ್ರದೃಷ್ಟಿ ಬೀರುವವರಿಗೆ ತಕ್ಕನಾದ ಪ್ರತ್ಯುತ್ತರ ಕೊಡುವುದು ನನ್ನ ಕರ್ತವ್ಯ’ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಭಾನುವಾರ ಹೇಳಿದ್ದಾರೆ.

ಪಹಲ್ಗಾಮ್ ದಾಳಿಗೆ ಕಾರಣರಾದ ಯಾರನ್ನೂ ಸುಮ್ಮನೆ ಬಿಡುವುದಿಲ್ಲ ಎಂದು ಕೇಂದ್ರ ಸರ್ಕಾರ ಎಚ್ಚರಿಕೆ ನೀಡಿರುವ ಬೆನ್ನಲ್ಲೇ ರಾಜನಾಥ್ ಅವರು ಈ ಹೇಳಿಕೆ ನೀಡಿರುವುದು ಮಹತ್ವ ಪಡೆದಿದೆ.

ದೆಹಲಿಯಲ್ಲಿ ಕಾರ್ಯಕ್ರಮವೊಂದರಲ್ಲಿ ಭಾಗಿಯಾಗಿ ಮಾತನಾಡಿದ ಸಚಿವ, ‘ಪ್ರಧಾನಿ ನರೇಂದ್ರ ಮೋದಿ ಅವರ ಆಡಳಿತ ಶೈಲಿ, ಅವರ ದಿಟ್ಟ ನಿರ್ಧಾರ, ಜೀವನದಲ್ಲಿ ಅವರು ತೆಗೆದುಕೊಳ್ಳುವ ಸವಾಲುಗಳ ಬಗ್ಗೆ ಜನರಿಗೆ ಈಗಾಗಲೇ ತಿಳಿದಿದೆ. ಮೋದಿ ಸರ್ಕಾರದಿಂದ ನೀವು ಏನು ಆಗಬೇಕೆಂದು ಬಯಸಿದ್ದೀರೋ, ಅದು ಖಂಡಿತ ಆಗಲಿದೆ’ ಎಂದಿದ್ದಾರೆ.

ಅಲ್ಲದೇ, ‘ಈ ದೇಶದ ರಕ್ಷಣಾ ಸಚಿವನಾಗಿ ಭದ್ರತಾ ಪಡೆಗಳ ಬೆನ್ನಿಗೆ ನಿಲ್ಲುವುದು, ಗಡಿ ಸುರಕ್ಷತೆ ಖಾತರಿ ಪಡಿಸಿಕೊಳ್ಳುವುದು ಹಾಗೂ ದೇಶದ ಮೇಲೆ ವಕ್ರದೃಷ್ಟಿ ಬೀರಿದವರಿಗೆ ತಕ್ಕ ತಿರುಗೇಟು ನೀಡುವುದು ನನ್ನ ಕರ್ತವ್ಯ’ ಎಂದೂ ರಾಜನಾಥ್ ಹೇಳಿದ್ದಾರೆ.

‘ರಾಷ್ಟ್ರಪತಿ ಆಡಳಿತ: ಆಯ್ಕೆ ಮುಕ್ತವಾಗಿರಲಿ’

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಮುರ್ಶಿದಾಬಾದ್ ಜಿಲ್ಲೆಯಲ್ಲಿ ಇತ್ತೀಚೆಗೆ ನಡೆದಿದ್ದ ಕೋಮುಗಲಭೆ ಕುರಿತಂತೆ ರಾಜ್ಯಪಾಲ ಸಿ.ವಿ.ಆನಂದ ಬೋಸ್ ಅವರು ಕೇಂದ್ರ ಗೃಹ ಸಚಿವಾಲಯಕ್ಕೆ ವರದಿ ಸಲ್ಲಿಸಿದ್ದಾರೆ. ‘ಮೂಲಭೂತವಾದಿತನ ಮತ್ತು ತೀವ್ರಗಾಮಿತನ ಎಂಬ ಪಿಡುಗುಗಳು ರಾಜ್ಯವನ್ನು ತೀವ್ರವಾಗಿ ಕಾಡುತ್ತಿವೆ’ ಎಂದು ಉಲ್ಲೇಖಿಸಿದ್ದಾರೆ.

ಕೋಮುಗಲಭೆ ತನಿಖೆಗೆ ಆಯೋಗ ರಚಿಸಬೇಕು, ಬಾಂಗ್ಲಾದ ಗಡಿ ಜಿಲ್ಲೆಗಳಲ್ಲಿ ಕೇಂದ್ರ ಪಡೆಗಳ ಉಪಠಾಣೆ ಸ್ಥಾಪಿಸಬೇಕು ಎಂದು ಸಲಹೆ ಮಾಡಿದ್ದಾರೆ. ವರದಿ ಕುರಿತ ಪ್ರಶ್ನೆಗೆ ಅಧಿಕಾರಿ ಯೊಬ್ಬರು, ‘ವಿಧಿ 356ರ ಪ್ರಕಾರ ಕೇಂದ್ರದ ಕ್ರಮಕ್ಕೆ (ರಾಷ್ಟ್ರಪತಿ ಆಡಳಿತ)ಮುಂದಾಗಬೇಕು ಎಂದು ರಾಜ್ಯಪಾಲರು ಹೇಳಿಲ್ಲ. ಆದರೆ, ರಾಜ್ಯದಲ್ಲಿ ಪರಿಸ್ಥಿತಿ ಮತ್ತಷ್ಟು ಹದಗೆಟ್ಟರೆ ಆ ಆಯ್ಕೆಯನ್ನು ಕೇಂದ್ರ ಮುಕ್ತವಾಗಿ ಇರಿಸಿಕೊಂಡಿರಬೇಕು’ ಎಂಬುದು ಇದರ ಉದ್ದೇಶ’ ಎಂದು ಉತ್ತರಿಸಿದ್ದಾರೆ.

ಪಾಕ್ ಯುವತಿ ಜತೆ ಮದುವೆಗೆ ಅನುಮತಿ ಪಡೆದಿದ್ದೆ: ಯೋಧ

ಜಮ್ಮು (ಪಿಟಿಐ): ಪಾಕಿಸ್ತಾನದ ಯುವತಿಯೊಂದಿಗೆ ವಿವಾಹವಾಗಿರುವ ಬಗ್ಗೆ ಮಾಹಿತಿ ನೀಡದ ಆರೋಪದ ಮೇಲೆ ಸೇವೆಯಿಂದ ವಜಾಗೊಂಡಿರುವ ಯೋಧ ಮುನೀರ್ ಅಹ್ಮದ್ ಅವರು, ‘ಕಳೆದ ವರ್ಷ ಕೇಂದ್ರೀಯ ಮೀಸಲು ಪೊಲೀಸ್ ಪಡೆಯ (ಸಿಆರ್‌ಪಿಎಫ್) ಮುಖ್ಯ ಕಚೇರಿಯಿಂದ ಅನುಮತಿ ಪಡೆದ ಒಂದು ತಿಂಗಳ ನಂತರ ವಿವಾಹವಾಗಿದ್ದೆ’ ಎಂದು ಭಾನುವಾರ ತಿಳಿಸಿದರು.

ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ‘ಎರಡೂ ಕುಟುಂಬಸ್ಥರು ಸೇರಿ ಮದುವೆ ನಿಶ್ಚಯಿಸಿದ್ದರು. ಸೇವೆಯಿಂದ ವಜಾಗೊಳಿಸಿರುವುದನ್ನು ನ್ಯಾಯಾಲಯದಲ್ಲಿ ಪ್ರಶ್ನಿಸುತ್ತೇನೆ’ ಎಂದರು.

ವಿವಾಹಕ್ಕೂ ಮುನ್ನ ನಿಯಮದ ಪ್ರಕಾರ ಎಲ್ಲ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದ್ದೆ. ಹೀಗಾಗಿ ಪ್ರಕರಣವನ್ನು ಪುನರ್ ಪರಿಶೀಲಿಸಿ ಎಂದು ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಮತ್ತು ಸಿಆರ್‌ಪಿಎಫ್ ಅನ್ನು ಕೋರಿದರು.

‘ನನ್ನ ತಾಯಿಯ ಸಹೋದರನ ಪುತ್ರಿಯನ್ನು ವಿವಾಹವಾಗಿದ್ದೇನೆ. ಅವರು 1947ರ ದೇಶ ವಿಭಜನೆ ಸಂದರ್ಭದಲ್ಲಿ ಜಮ್ಮುವಿನಿಂದ ಪಾಕಿಸ್ತಾನಕ್ಕೆ ಹೋಗಿದ್ದರು’ ಎಂದು ತಿಳಿಸಿದರು.

ತಮ್ಮ ಹೇಳಿಕೆಯನ್ನು ಸಮರ್ಥಿಸುವ ದಾಖಲೆಗಳನ್ನು ಮಾಧ್ಯಮಗಳಿಗೆ ತೋರಿಸಿದರು.

2010ರ ಅಧ್ಯಯನ ವರದಿಯಲ್ಲಿನ ಮಾಹಿತಿ

ಕಾಶ್ಮೀರ ಸೇಬು: ಕೀಟನಾಶಕದಿಂದ ಕ್ಯಾನ್ಸರ್

• ಝುಲ್ಫೀಕರ್ ಮಜೀದ್

ಶ್ರೀನಗರ: ಕಣ್ಮನ ಸೆಳೆಯುವ ಕಾಶ್ಮೀರದ ಸೇಬಿನ ತೋಟಗಳಲ್ಲಿ ಸಮಸ್ಯೆಯೊಂದು ಸೃಷ್ಟಿಯಾಗುತ್ತಿದೆ. ‘ಇಂಡಿಯನ್ ಜರ್ನಲ್ ಆಫ್ ಅಕ್ಯುಪೇಷನಲ್ ಆ್ಯಂಡ್ ಎನ್ವಿರಾನ್ಮೆಂಟಲ್ ಮೆಡಿಸಿನ್’ ನಿಯತಕಾಲಿಕದಲ್ಲಿ ಪ್ರಕಟವಾಗಿರುವ 2010ರ ಅಧ್ಯಯನ ವರದಿಯೊಂದರ ಪ್ರಕಾರ, ಕಾಶ್ಮೀರದಲ್ಲಿ ತೋಟ ಹೆಚ್ಚು ಇರುವ ಪ್ರದೇಶಗಳಲ್ಲಿ ಮಿದುಳಿನ ಕ್ಯಾನ್ಸರ್‌ಗೆ ತುತ್ತಾಗಿರುವವರಲ್ಲಿ ಶೇಕಡ 90ರಷ್ಟು ಮಂದಿ ಕೀಟನಾಶಕಗಳ ಸಂಪರ್ಕಕ್ಕೆ ಒಳಗಾದವರು.

ಅನಂತನಾಗ್, ಬಡಗಾಂ ಮತ್ತು ಬಾರಾಮುಲ್ಲಾ ಜಿಲ್ಲೆಗಳ ತೋಟಗಳಲ್ಲಿ ಕೆಲಸ ಮಾಡುವವರನ್ನು ಕೇಂದ್ರೀಕರಿಸಿ ಅಧ್ಯಯನ ನಡೆಸಲಾಗಿದೆ. ಕಣಿವೆಯ ಸೇಬಿನ ತೋಟಗಳಲ್ಲಿ ಶೇಕಡ 90ರಷ್ಟು ಇಲ್ಲೇ ಇವೆ. ಕುಲ್ಗಾಂ, ಶೋಪಿಯಾನ್ ಜಿಲ್ಲೆಗಳಲ್ಲಿ ಜನಸಂಖ್ಯೆ ಕಡಿಮೆ ಇದ್ದರೂ ಅಲ್ಲಿ ಕ್ಯಾನ್ಸರ್ ಪ್ರಕರಣಗಳು ಹೆಚ್ಚು ವರದಿಯಾಗಿವೆ.

ಕಾಶ್ಮೀರದ ಸೇಬಿನ ತೋಟವೊಂದರಲ್ಲಿ ಕೊಯ್ಲಿಗೆ ಸಿದ್ಧವಾಗಿರುವ ಹಣ್ಣುಗಳು –ಪಿಟಿಐ ಸಂಗ್ರಹ ಚಿತ್ರ

ಮನುಷ್ಯನ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಉಂಟುಮಾಡುವುದಷ್ಟೇ ಅಲ್ಲದೆ, ಕೆಲವು ಕೀಟನಾಶಕಗಳು ಹಣ್ಣಿನ ಗುಣಮಟ್ಟವನ್ನು ಹಾಳು ಮಾಡುತ್ತಿವೆ. ಕಣಿವೆಯಲ್ಲಿ ಬಳಕೆಯಲ್ಲಿರುವ ‘ಮ್ಯಾಂಕೊಜೆಬ್’ ಹೆಸರಿನ ಕೀಟನಾಶಕವನ್ನು ಕ್ಯಾನ್ಸರ್‌ಕಾರಕ ಎಂದು ಐರೋಪ್ಯ ಒಕ್ಕೂಟದಲ್ಲಿ ನಿಷೇಧಿಸಲಾಗಿದೆ. ಆದರೆ ಕಾಶ್ಮೀರದಲ್ಲಿ ಇದರ ಬಳಕೆಗೆ ನಿಯಂತ್ರಣ ಇಲ್ಲ.

ಕೀಟನಾಶಕಗಳು ಕಾಶ್ಮೀರದ ಜಲಮೂಲಗಳನ್ನು ಪ್ರವೇಶಿಸುತ್ತಿವೆ ಎಂದು ತಜ್ಞರು ಎಚ್ಚರಿಸಿದ್ದಾರೆ. ತೋಟಗಾರಿಕೆಯಲ್ಲಿ ತೊಡಗಿರುವವರು ಮಲಿನ ನೀರನ್ನು ಬೆಳೆಗೆ ನೀರುಣಿಸಲು ಬಳಸುತ್ತಿದ್ದಾರೆ. ಆ ಮೂಲಕ ವಿಷಕಾರಕಗಳನ್ನು ಅವರು ಆಹಾರ ಸರಪಳಿಯೊಳಗೆ ಮತ್ತೆ ತರುತ್ತಿದ್ದಾರೆ.

‘ಕೀಟನಾಶಕಗಳ ಗುಣಮಟ್ಟದ ಮೇಲೆ ಹೆಚ್ಚು ನಿಗಾ ಇರಿಸುವುದು, ಕೀಟಗಳ ಬಾಧೆಯನ್ನು ತಾಳಿಕೊಳ್ಳುವ ಹಣ್ಣಿನ ತಳಿಗಳನ್ನು ಹೆಚ್ಚಾಗಿ ಬೆಳೆಯುವುದು, ಸಾವಯವ ಕೃಷಿ ಮಾದರಿ ಅನುಸರಿಸುವುದು ಈಗಿನ ಬಿಕ್ಕಟ್ಟಿನಿಂದ ಹೊರಬರುವ ಮಾರ್ಗ ಆಗಿರಬಹುದು’ ಎಂದು ಕ್ಯಾನ್ಸರ್ ತಜ್ಞ ಡಾ. ಅಝರ್ ಜಾನ್ ಹೇಳಿದರು.

‘ಆಹಾರ ಮತ್ತು ಜಲ ಸರಪಳಿಯಲ್ಲಿ ಕೀಟನಾಶಕಗಳ ಇರುವಿಕೆಯ ಬಗ್ಗೆ ಇನ್ನಷ್ಟು ಸಂಶೋಧನೆಗಳನ್ನು ನಡೆಸುವ ಅಗತ್ಯ ಇದೆ. ತಕ್ಷಣವೇ ಕೆಲವು ಕ್ರಮಗಳನ್ನು ಕೈಗೊಳ್ಳದೆ ಇದ್ದರೆ ನಾವು ಆರೋಗ್ಯದ ವಿಚಾರದಲ್ಲಿ ದೊಡ್ಡ ಸಮಸ್ಯೆಗೆ ಸಿಲುಕುತ್ತೇವೆ’ ಎಂದು ಅವರು ಎಚ್ಚರಿಸಿದರು.

ನೀಟ್ ಅಭ್ಯರ್ಥಿಗೆ ₹40 ಲಕ್ಷ ವಂಚನೆ ಯತ್ನ: ಮೂವರ ಸೆರೆ

ಜೈಪುರ (ಪಿಟಿಐ): ನೀಟ್ ಅಭ್ಯರ್ಥಿಗೆ ಪ್ರಶ್ನೆಪತ್ರಿಕೆ ನೀಡುವುದಾಗಿ ಆಶ್ವಾಸನೆ ನೀಡಿ ₹40 ಲಕ್ಷ ವಂಚಿಸಲು ಯತ್ನಿಸಿದ ಆರೋಪದಲ್ಲಿ ಮೂವರನ್ನು ರಾಜಸ್ಥಾನ ಪೊಲೀಸ್ ವಿಶೇಷ ಕಾರ್ಯ ಪಡೆಯು ಬಂಧಿಸಿದೆ ಎಂದು ಅಧಿಕಾರಿಯೊಬ್ಬರು ಭಾನುವಾರ ತಿಳಿಸಿದರು.

ಆರೋಪಿ ಗಳನ್ನು ಬಲವಾನ್ (27), ಮುಕೇಶ್ ಮೀನಾ (40), ಹರದಾಸ್ (38) ಎಂದು ಗುರುತಿಸಲಾಗಿದೆ.



ಮೂವರು ಆರೋಪಿಗಳು ವಿದ್ಯಾರ್ಥಿ ಮತ್ತು ಕುಟುಂಬದ ಸದಸ್ಯರನ್ನು ಗುರುಗ್ರಾಮಕ್ಕೆ ಶುಕ್ರವಾರ ಕರೆದುಕೊಂಡು ಹೋಗಿ ಹಣ ಕೇಳಿದ್ದರು. ವಿದ್ಯಾರ್ಥಿ ಕುಟುಂಬವು ಪ್ರಶ್ನೆಪತ್ರಿಕೆ ನೀಡುವಂತೆ ಕೇಳಿತ್ತು. ಪ್ರಶ್ನೆಪತ್ರಿಕೆ ನೀಡಲು ನಿರಾಕರಿಸಿದಾಗ ಅವರು ಪೊಲೀಸರಿಗೆ ವಿಷಯ ತಿಳಿಸಿದ್ದರು. ನಂತರ ಪೊಲೀಸರು ಅವರನ್ನು ಶನಿವಾರ ಬಂಧಿಸಿದರು.

ಕೆಕೆಆರ್ ರೋಚಕ ಗೆಲುವಿನ ಕೇಕೆ

ರಸೆಲ್ ಅರ್ಧಶತಕ • ಹರ್ಷಿತ್, ವರುಣ್ ಅಮೋಘ ಬೌಲಿಂಗ್ • ಶತಕದ ಸನಿಹ ಎಡವಿದ ರಿಯಾನ್

ಕೋಲ್ಕತ್ತ (ಪಿಟಿಐ): ರಿಯಾನ್ ಪರಾಗ್ ಅವರ ಅಬ್ಬರಕ್ಕೆ ತಡೆಯೊಡ್ಡಿದ ಹರ್ಷಿತ್ ರಾಣಾ ಅಮೋಘ ಬೌಲಿಂಗ್ ಬಲದಿಂದ ಹಾಲಿ ಚಾಂಪಿಯನ್ ಕೋಲ್ಕತ್ತ ನೈಟ್ ರೈಡರ್ಸ್ ತಂಡವು ರಾಜಸ್ಥಾನ ರಾಯಲ್ಸ್ ಎದುರು ಒಂದು ರನ್ ಅಂತರದ ರೋಚಕ ಜಯ ಸಾಧಿಸಿತು.

ಈಡನ್ ಗಾರ್ಡನ್‌ನಲ್ಲಿ ಭಾನುವಾರ ನಡೆದ ಪಂದ್ಯವು ಕೋಲ್ಕತ್ತ ತಂಡಕ್ಕೆ ಮಹತ್ವದ್ದಾಗಿತ್ತು. ಈ ಪಂದ್ಯದಲ್ಲಿ ಸೋತಿದ್ದರೆ ತಂಡಕ್ಕೆ ಪ್ಲೇ ಆಫ್ ಹಾದಿಯು ಕಡುಕಠಿಣವಾಗುವ ಸಾಧ್ಯತೆ ಇತ್ತು.

ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಕೋಲ್ಕತ್ತ ತಂಡವು ಆ್ಯಂಡ್ರೆ ರಸೆಲ್ (ಔಟಾಗದೇ 57; 25ಎಸೆತ) ಅವರ ಮಿಂಚಿನ ಅರ್ಧಶತಕದ ಬಲದಿಂದ 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 206 ರನ್ ಗಳಿಸಿತು. ಅದಕ್ಕುತ್ತರವಾಗಿ ರಾಜಸ್ಥಾನ ರಾಯಲ್ಸ್ ತಂಡವು ವಿರೋಚಿತ ಹೋರಾಟವನ್ನೇ ಮಾಡಿತು. ನಾಯಕ ರಿಯಾನ್ ಪರಾಗ್ (95; 45ಎ) ಅವರ ಆಟದಿಂದಾಗಿ ತಂಡವು ಗೆಲುವಿನ ಸನಿಹಕ್ಕೆ ಬಂದಿತ್ತು. ಆದರೆ 18ನೇ ಓವರ್ ಬೌಲಿಂಗ್ ಮಾಡಿದ ಹರ್ಷಿತ್ ರಾಣಾ (41ಕ್ಕೆ 2) ಅವರು ರಿಯಾನ್ ಆಟಕ್ಕೆ ತಡೆಯೊಡ್ಡಿದರು. ರಾಣಾ ಎಸೆತದಲ್ಲಿ ದೊಡ್ಡ ಹೊಡೆತಕ್ಕೆ ಯತ್ನಿಸಿದ ಪರಾಗ್, ವೈಭವ್ ಅರೋರಾಗೆ ಕ್ಯಾಚ್ ಕೊಟ್ಟರು. 16ನೇ ಓವರ್‌ನಲ್ಲಿ ಹರ್ಷಿತ್ ಅವರು ಶಿಮ್ರಾನ್ ಹೆಟ್ಮೆಯರ್ (29. 23ಎ) ವಿಕೆಟ್ ಕೂಡ ಗಳಿಸಿದ್ದರು.

ಇಂಪ್ಯಾಕ್ಟ್ ಪ್ಲೇಯರ್ ಶುಭಂ ದುಬೆ (ಔಟಾಗದೇ 25) ಮತ್ತು ಜೋಫ್ರಾ ಆರ್ಚರ್ (12 ರನ್) ಅವರು ಹೋರಾಟವನ್ನು ಜೀವಂತವಾಗಿಟ್ಟರು. ವೈಭವ್ ಹಾಕಿದ ಕೊನೆಯ ಓವರ್‌ನಲ್ಲಿ ತಂಡದ ಗೆಲುವಿಗೆ 22 ರನ್ ಅಗತ್ಯವಿದ್ದಾಗ ಇವರಿಬ್ಬರೂ ಬೀಸಾಟವಾಡಿದರು. ಆದರೆ ಕೊನೆ ಎಸೆತದಲ್ಲಿ ಜೋಫ್ರಾ ಅವರನ್ನು ರನ್ ಔಟ್ ಮಾಡುವಲ್ಲಿ ರಿಂಕು ಸಿಂಗ್ ಮತ್ತು ಅರೋರಾ ಯಶಸ್ವಿಯಾದರು. ರಾಜಸ್ಥಾನ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 205 ರನ್ ಗಳಿಸಿತು.

ಒಂದೇ ಓವರ್‌ನಲ್ಲಿ ಪರಾಗ್ 5 ಸಿಕ್ಸರ್: ಟೂರ್ನಿಯುದ್ದಕ್ಕೂ ಅಸ್ಥಿರ ಲಯದಲ್ಲಿದ್ದ ರಿಯಾನ್ ಪರಾಗ್ ಈ ಪಂದ್ಯದಲ್ಲಿ ಮಿಂಚಿದರು. ಅನುಭವಿ ಸ್ಪಿನ್ನರ್ ಮೊಯಿನ್ ಅಲಿ ಹಾಕಿದ 13ನೇ ಓವರ್‌ನಲ್ಲಿ ಐದು ಸಿಕ್ಸರ್‌ಗಳನ್ನು ಹೊಡೆದರು. ಈ ಓವರ್‌ನ ಮೊದಲ ಎಸೆತದಲ್ಲಿ ಹೆಟ್ಮೆಯರ್ ಒಂಟಿ ರನ್ ಗಳಿಸಿದರು. ಕ್ರೀಸ್‌ಗೆ ಬಂದ ಪರಾಗ್ ಉಳಿದ ಐದು ಎಸೆತಗಳಲ್ಲಿಯೂ ಸಿಕ್ಸರ್ ಬಾರಿಸಿದರು. ಈ ಓವರ್‌ನಲ್ಲಿ ಒಂದು ವೈಡ್ ಸೇರಿದಂತೆ ಒಟ್ಟು 32 ರನ್‌ಗಳು ಸೇರಿದವು. ವರುಣ್ ಚಕ್ರವರ್ತಿ ಹಾಕಿದ 14ನೇ ಓವರ್‌ನಲ್ಲಿ ಮೊದಲ ಎಸೆತದಲ್ಲಿ ಹೆಟ್ಮೆಯರ್ ಒಂದು ರನ್ ಪಡೆದರು. ನಂತರದ ಎಸೆತದಲ್ಲಿ ಕ್ರೀಸ್‌ಗೆ ಬಂದ ರಿಯಾನ್ ಸಿಕ್ಸರ್‌ಗೆತ್ತಿದರು.



ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಆ್ಯಂಡ್ರೆ ರಸೆಲ್ ಬ್ಯಾಟಿಂಗ್ ಪಿಟಿಐ ಚಿತ್ರ

ಐಪಿಎಲ್: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಅಂಕ	ಎನ್‌ಆರ್‌ಆರ್
ರಾಯಲ್ ಚಾಲೆಂಜರ್ಸ್ ಬೆಂಗಳೂರು	11	8	3	16	0.482
ಪಂಜಾಬ್ ಕಿಂಗ್ಸ್	11	7	3	15	0.376
ಮುಂಬೈ ಇಂಡಿಯನ್ಸ್	11	7	4	14	1.274
ಗುಜರಾತ್ ಟೈಟನ್ಸ್	10	7	3	14	0.867
ಡೆಲ್ಲಿ ಕ್ಯಾಪಿಟಲ್ಸ್	10	6	4	12	0.362
ಕೋಲ್ಕತ್ತ ನೈಟ್ ರೈಡರ್ಸ್	11	5	5	11	0.249
ಲಖನೌ ಸೂಪರ್ ಜೈಂಟ್ಸ್	11	5	6	10	-0.469
ರಾಜಸ್ಥಾನ ರಾಯಲ್ಸ್	12	3	9	6	-0.718
ಸನ್‌ರೈಸರ್ಸ್ ಹೈದರಾಬಾದ್	10	3	7	6	-1.192
ಚೆನ್ನೈ ಸೂಪರ್ ಕಿಂಗ್ಸ್	11	2	9	4	-1.117

ಆರೇಂಜ್ ಕ್ಯಾಪ್
ವಿರಾಟ್ ಕೊಹ್ಲಿ
(ಆರ್‌ಸಿಬಿ) 505 ರನ್

ಪರ್ಪಲ್ ಕ್ಯಾಪ್
ಪ್ರಸಿದ್ಧ ಕೃಷ್ಣ
(ಜಿಟಿ) 19 ವಿಕೆಟ್

ಸ್ಕೋರ್ ಕಾರ್ಡ್

ಕೋಲ್ಕತ್ತ ನೈಟ್ ರೈಡರ್ಸ್
4ಕ್ಕೆ 206 (20 ಓವರ್‌ಗಳಲ್ಲಿ)
ಗುರ್ಬಾಜ್ ಸಿ ಹೆಟ್ಮೆಯರ್ ಬಿ ತೀಕ್ಷಣ 35 (25ಎ, 4x4, 6x1)
ಸುನಿಲ್ ಬಿ ಯುದ್ಧವೀರ್ 11 (9ಎ, 4x1, 6x1)
ರಹಾನೆ ಸಿ ಜುರೆಲ್ ಬಿ ಪರಾಗ್ 30 (24ಎ, 4x1, 6x2)
ರಘುವಂಶಿ ಸಿ ಅಶೋಕ್ ಶರ್ಮಾ (ಸಬ್) ಬಿ ಆರ್ಚರ್ 44 (31ಎ, 4x5)
ಆ್ಯಂಡ್ರೆ ರಸೆಲ್ ಔಟಾಗದೇ 57 (25ಎ, 4x4, 6x6)
ರಿಂಕು ಸಿಂಗ್ ಔಟಾಗದೇ 19 (6ಎ, 4x1, 6x2)
ಇತರೆ: 10 (ಬೈ 1, ಲೆಗ್‌ಬೈ 2, ವೈಡ್ 7)
ವಿಕೆಟ್ ಪತನ: 1-13 (ಸುನಿಲ್ ನಾರಾಯಣ್, 1.6), 2-69 (ರಹಮಾನುಲ್ಲಾ ಗುರ್ಬಾಜ್, 7.3), 3-111 (ಅಜಿಂಕ್ಯ ರಹಾನೆ, 12.4), 4-172 (ಅಂಗಕ್ರಿಶ್ ರಘುವಂಶಿ, 18.1)
ಬೌಲಿಂಗ್: ಜೋಫ್ರಾ ಆರ್ಚರ್ 4-0-30-1, ಯುದ್ಧವೀರ್ ಸಿಂಗ್ 2-0-26-1, ಮಹೀಷ ತೀಕ್ಷಣ 4-0-41-1, ಆಕಾಶ್ ಮಧ್ವಾಲ್ 3-0-50-0, ವನಿಂದು ಹಸರಂಗ 4-0-35-0, ರಿಯಾನ್ ಪರಾಗ್ 3-0-21-1

ರಾಜಸ್ಥಾನ ರಾಯಲ್ಸ್
8ಕ್ಕೆ 205 (20 ಓವರ್‌ಗಳಲ್ಲಿ)
ಜೈಸ್ವಾಲ್ ಸಿ ರಿಂಕು ಬಿ ಮೊಯಿನ್ 34 (21ಎ, 4x5, 6x1)
ವೈಭವ್ ಸಿ ರಹಾನೆ ಬಿ ಅರೋರಾ 4 (2ಎ, 4x1)
ಕುನಾಲ್ ಸಿಂಗ್ ಸಿ ರಸೆಲ್ ಬಿ ಮೊಯಿನ್ 0 (5ಎ)
ಪರಾಗ್ ಸಿ ಅರೋರಾ ಬಿ ರಾಣಾ 95 (45ಎ, 4x6, 6x8)
ಜುರೆಲ್ ಬಿ ವರುಣ್ 0 (1ಎ)
ಹಸರಂಗ ಬಿ ವರುಣ್ 0 (2ಎ)
ಹೆಟ್ಮೆಯರ್ ಸಿ ಸುನಿಲ್ ಬಿ ರಾಣಾ 29 (23ಎ, 4x1, 6x1)
ಶುಭಂ ದುಬೆ ಔಟಾಗದೇ 25 (14ಎ, 4x1, 6x2)
ಆರ್ಚರ್ ರನೌಟ್ (ರಿಂಕು/ಅರೋರಾ) 12 (8ಎ, 4x1)
ಇತರೆ: 6 (ಬೈ 1, ನೋಬಾಲ್ 1, ವೈಡ್ 4)
ವಿಕೆಟ್ ಪತನ: 1-5 (ವೈಭವ್ ಸೂರ್ಯವಂಶಿ, 0.4), 2-8 (ಕುನಾಲ್ ಸಿಂಗ್ ರಾಥೋಡ್, 1.5), 3-66 (ಯಶಸ್ವಿ ಜೈಸ್ವಾಲ್, 6.6), 4-71 (ಧ್ರುವ್ ಜುರೆಲ್, 7.3), 5-71 (ವನಿಂದು ಹಸರಂಗ, 7.5), 6-163 (ಶಿಮ್ರಾನ್ ಹೆಟ್ಮೆಯರ್, 15.5), 7-173 (ರಿಯಾನ್ ಪರಾಗ್, 17.4), 8-205 (ಜೋಫ್ರಾ ಆರ್ಚರ್, 19.6)
ಬೌಲಿಂಗ್: ವೈಭವ್ ಅರೋರಾ 4-0-50-1, ಮೊಯಿನ್ ಅಲಿ 3-0-43-2, ಹರ್ಷಿತ್ ರಾಣಾ 4-0-41-2, ವರುಣ್ ಚಕ್ರವರ್ತಿ 4-0-32-2, ಸುನಿಲ್ 4-0-27-0, ಆ್ಯಂಡ್ರೆ ರಸೆಲ್ 1-0-11-0
ಪಂದ್ಯದ ಆಟಗಾರ: ಆ್ಯಂಡ್ರೆ ರಸೆಲ್

ಫಲಿತಾಂಶ: ಕೋಲ್ಕತ್ತ ನೈಟ್ ರೈಡರ್ಸ್ ತಂಡಕ್ಕೆ 1ರನ್ ಜಯ

ಈ ಹಿಂದೆ ಐಪಿಎಲ್‌ನಲ್ಲಿ ಒಂದೇ ಓವರ್‌ನಲ್ಲಿ ಐದು ಸಿಕ್ಸರ್ ಹೊಡೆದ ಸಾಧನೆಯನ್ನು ಕ್ರಿಸ್ ಗೇಲ್, ರಾಹುಲ್ ತೆವಾಟಿಯಾ, ರವೀಂದ್ರ ಜಡೇಜ ಹಾಗೂ ರಿಂಕು ಸಿಂಗ್ ಮಾಡಿದ್ದರು.

ರಸೆಲ್ ಅಬ್ಬರ: ಬ್ಯಾಟಿಂಗ್ ಆರಂಭಿಸಿದ ಕೋಲ್ಕತ್ತ ತಂಡಕ್ಕೆ ಉತ್ತಮ ಆರಂಭ ದೊರೆಯಲಿಲ್ಲ. ಎರಡನೇ ಓವರ್‌ನಲ್ಲಿಯೇ ಸುನಿಲ್ ನಾರಾಯಣ್ ಅವರನ್ನು ಕ್ಲೀನ್‌ಬೌಲ್ಡ್ ಮಾಡುವಲ್ಲಿ ಯುದ್ಧವೀರ್ ಸಿಂಗ್ ಸಫಲರಾದರು. ಇನ್ನೊಬ್ಬ ಆರಂಭಿಕ ಬ್ಯಾಟರ್ ಗುರ್ಬಾಜ್ (35ರನ್) ಅವರ ವಿಕೆಟ್ ಗಳಿಸಿದ ಸ್ಪಿನ್ನರ್ ತೀಕ್ಷಣ ಪೆಟ್ಟು ಕೊಟ್ಟರು. ಈ ಹಂತದಲ್ಲಿ ಅಜಿಂಕ್ಯ ರಹಾನೆ ಮತ್ತು ಅಂಗಕ್ರಿಷ್ ರಘುವಂಶಿ ಅವರು ಇನಿಂಗ್ಸ್‌ಗೆ ಚೇತರಿಕೆ ನೀಡಿದರು. ಮೂರನೇ ವಿಕೆಟ್ ಜೊತೆಯಾಟದಲ್ಲಿ 42 ರನ್ ಸೇರಿಸಿದರು. ಆದರೆ ಅಜಿಂಕ್ಯ ಅವರ ವಿಕೆಟ್ ಗಳಿಸಿದ ರಿಯಾನ್ ಪರಾಗ್ ರನ್ ಗಳಿಕೆಯ ವೇಗಕ್ಕೆ ಅಡ್ಡಿಯಾದರು.

ಕ್ರೀಸ್‌ಗೆ ಬಂದ ಆ್ಯಂಡ್ರೆ ರಸೆಲ್ ತಮ್ಮ ಹಳೆಯ ವೈಭವವನ್ನು ಪ್ರದರ್ಶಿಸಿದರು. ಅರ್ಧಡಜನ್ ಸಿಕ್ಸರ್ ಸಿಡಿಸಿದರು. 4 ಬೌಂಡರಿ ಬಾರಿಸಿದರು. ಅವರೊಂದಿಗೆ ರಿಂಕು ಸಿಂಗ್ 6 ಎಸೆತಗಳಲ್ಲಿ 19 ರನ್ ಗಳಿಸಿದರು. ಇದರಿಂದಾಗಿ ತಂಡವು ದ್ವಿಶತಕದ ಗಡಿ ದಾಟಿತು.

ಅರ್ಷದೀಪ್‌ಗೆ 3 ವಿಕೆಟ್: ಲಖನೌ ತಂಡಕ್ಕೆ ಸೋಲು

ಪ್ರಭಸಿಮ್ರನ್ ಆಟಕ್ಕೆ ಗೆಲುವು

ಧರ್ಮಶಾಲಾ (ಪಿಟಿಐ): ಪ್ರಭಸಿಮ್ರನ್ ಸಿಂಗ್ (91;48ಎ, 4x6, 6x7) ಅವರ ಅಬ್ಬರದ ಬ್ಯಾಟಿಂಗ್ ಬಳಿಕ ಅರ್ಷದೀಪ್ ಸಿಂಗ್ (16ಕ್ಕೆ 3) ಅವರ ಪರಿಣಾಮಕಾರಿ ಬೌಲಿಂಗ್ ದಾಳಿಯ ನೆರವಿನಿಂದ ಪಂಜಾಬ್ ಕಿಂಗ್ಸ್ ತಂಡವು ಭಾನುವಾರ ಐಪಿಎಲ್ ಪಂದ್ಯದಲ್ಲಿ ಲಖನೌ ಸೂಪರ್ ಜೈಂಟ್ಸ್ ವಿರುದ್ಧ 37 ರನ್‌ಗಳ ಜಯ ಸಾಧಿಸಿತು.

ಈ ಗೆಲುವಿನೊಂದಿಗೆ ಶ್ರೇಯಸ್ ಅಯ್ಯರ್ ನಾಯಕತ್ವದ ಕಿಂಗ್ಸ್ ತಂಡವು 15 ಅಂಕಗಳೊಂದಿಗೆ ಪಾಯಿಂಟ್ಸ್ ಪಟ್ಟಿಯಲ್ಲಿ ನಾಲ್ಕರಿಂದ ಎರಡನೇ ಸ್ಥಾನಕ್ಕೆ ಬಡ್ತಿ ಪಡೆದು ಪ್ಲೇ ಆಫ್‌ಗೆ ಹತ್ತಿರವಾಯಿತು. ಮತ್ತೊಂದೆಡೆ ರಿಷಭ್ ಪಂತ್ ಸಾರಥ್ಯದ ಲಖನೌ ತಂಡದ ಪ್ಲೇ ಆಫ್ ಹಾದಿ ಕಠಿಣವಾಯಿತು.

ಹಿಮಾಲಯದ ಮಡಿಲಲ್ಲಿರುವ ಎಚ್‌ಪಿಸಿಎ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಲಖನೌ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಪ್ರಭಸಿಮ್ರನ್ ಅವರ ಆಟದ ನೆರವಿನಿಂದ ಪಂಜಾಬ್ 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 236 ರನ್ ಗಳಿಸಿತು.

ಗುರಿಯನ್ನು ಬೆನ್ನಟ್ಟಿದ ಲಖನೌ ತಂಡಕ್ಕೆ ಆರಂಭದಲ್ಲೇ ಅರ್ಷದೀಪ್ ಸಿಂಗ್ ಬಲವಾದ ಪೆಟ್ಟು ನೀಡಿದರು. ತಂಡವು 27 ರನ್ ಗಳಿಸುವಷ್ಟರಲ್ಲಿ ಅಗ್ರ ಕ್ರಮಾಂಕದ ಬ್ಯಾಟರ್‌ಗಳಾದ ಏಡನ್ ಮರ್ಕರಂ (13), ಮಿಚೆಲ್ ಮಾರ್ಷ್ (0) ಮತ್ತು ನಿಕೋಲಸ್ ಪೂರನ್ (6) ಅವರಿಗೆ ಪೆವಿಲಿಯನ್ ದಾರಿ ತೋರಿಸಿದರು. ನಂತರ ಬಂದ ರಿಷಭ್ ಪಂತ್ (18) ಮತ್ತು ಡೇವಿಡ್ ಮಿಲ್ಲರ್ (11) ಕೂಡ ಹೆಚ್ಚು ಹೊತ್ತು ನಿಲ್ಲಲಿಲ್ಲ.

ಆದರೆ, ಯುವ ಬ್ಯಾಟರ್ ಆಯುಷ್ ಬಡೋನಿ (74;40ಎ, 4x5, 6x5) ಮತ್ತು ಅಬ್ದುಲ್ ಸಮದ್ (45;24ಎ, 4x2, 6x4) ಮಧ್ಯಮ ಕ್ರಮಾಂಕದಲ್ಲಿ ಪ್ರತಿರೋಧ ತೋರಿದರು. ಅವರಿಬ್ಬರು ಆರನೇ ವಿಕೆಟ್ ಜೊತೆಯಾಟದಲ್ಲಿ 81 (41ಎಸೆತ) ರನ್ ಸೇರಿಸಿದರೂ ಗೆಲುವಿನ ಗುರಿ ಬಹಳ ದೂರವಿತ್ತು. ಲಖನೌ ತಂಡ 20 ಓವರ್‌ಗಳಲ್ಲಿ 7 ವಿಕೆಟ್‌ಗೆ 199 ರನ್ ಗಳಿಸಿ ಸವಾಲನ್ನು ಕೊನೆಗೊಳಿಸಿತು.

ಪ್ರಭಸಿಮ್ರನ್ ಅಬ್ಬರ: ಪಂಜಾಬ್ ತಂಡದ ಆರಂಭಿಕ ಬ್ಯಾಟರ್ ಪ್ರಭಸಿಮ್ರನ್ ಕೇವಲ ಒಂಬತ್ತು ರನ್‌ಗಳ ಅಂತರದಿಂದ ಶತಕ ಕೈತಪ್ಪಿಸಿಕೊಂಡರು. ಅವರು ಈ ಆವೃತ್ತಿಯಲ್ಲಿ (11 ಪಂದ್ಯ) ನಾಲ್ಕನೇ ಅರ್ಧಶತಕ ದಾಖಲಿಸಿದರು.

ಮೊದಲ ಓವರ್‌ನಲ್ಲಿಯೇ ಆಕಾಶ್ ಮಹಾರಾಜ್ ಸಿಂಗ್ ಎಸೆತವನ್ನು ಆಡುವ ಯತ್ನದಲ್ಲಿ ಪ್ರಿಯಾಂಶ್ ಆರ್ಯ (1) ಔಟಾದರು. ಈ ಪೆಟ್ಟಿನಿಂದ ತಂಡಕ್ಕೆ ಹಿನ್ನಡೆಯಾಗದಂತೆ ಪ್ರಭಸಿಮ್ರನ್ ನೋಡಿಕೊಂಡರು. ಜೋಷ್ ಇಂಗ್ಲಿಸ್ (30; 14ಎ) ಅವರೊಂದಿಗೆ ಎರಡನೇ ವಿಕೆಟ್ ಜೊತೆಯಾಟದಲ್ಲಿ 48 ರನ್ ಸೇರಿಸಿದರು. ನಂತರ ನಾಯಕ ಶ್ರೇಯಸ್ ಅಯ್ಯರ್ (45; 25ಎ, 4X4, 6X2) ಅವರೊಂದಿಗೆ 3ನೇ ವಿಕೆಟ್ ಜೊತೆಯಾಟದಲ್ಲಿ 78 ರನ್ ಸೇರಿಸಿದರು. ಇದರಿಂದಾಗಿ ತಂಡವು ದೊಡ್ಡ ಮೊತ್ತ ಗಳಿಸಲು ವೇದಿಕೆ ಸಿದ್ಧವಾಯಿತು.

ಅರ್ಧಶತಕ ದಾಖಲಿಸಿದ ಸಂಭ್ರಮದಲ್ಲಿ ಪ್ರಭಸಿಮ್ರನ್ ಸಿಂಗ್ ಪಿಟಿಐ ಚಿತ್ರ

ಭರವಸೆಯ ಸ್ಪಿನ್ನರ್ ದಿಗ್ವೇಶ್ ರಾಠಿ ಅವರು 13ನೇ ಓವರ್‌ನಲ್ಲಿ ಶ್ರೇಯಸ್ ಅವರ ವಿಕೆಟ್ ಗಳಿಸಿ ಮತ್ತೊಮ್ಮೆ ನೋಟ್‌ಬುಕ್ ಸಂಭ್ರಮ ಆಚರಿಸಿದರು. ಶತಕದತ್ತ ಸಾಗಿದ್ದ ಪ್ರಭಸಿಮ್ರನ್ ಅವರನ್ನೂ 19ನೇ ಓವರ್‌ನಲ್ಲಿ ಔಟ್ ಮಾಡಿದ ದಿಗ್ವೇಶ್ ಮಿಂಚಿದರು.

ಸಂಕ್ಷಿಪ್ತ ಸ್ಕೋರು: ಪಂಜಾಬ್ ಕಿಂಗ್ಸ್: 20 ಓವರ್‌ಗಳಲ್ಲಿ 5ಕ್ಕೆ236 (ಪ್ರಭಸಿಮ್ರನ್ ಸಿಂಗ್ 91, ಜೋಶ್ ಇಂಗ್ಲಿಸ್ 30, ಶ್ರೇಯಸ್ ಅಯ್ಯರ್ 45, ಶಶಾಂಕ್ ಸಿಂಗ್ ಔಟಾಗದೇ 33, ಆಕಾಶ್ ಮಹಾರಾಜ ಸಿಂಗ್ 30ಕ್ಕೆ2, ದಿಗ್ವೇಶ್ ರಾಠಿ 46ಕ್ಕೆ2) ಲಖನೌ ಸೂಪರ್ ಜೈಂಟ್ಸ್: 20 ಓವರ್‌ಗಳಲ್ಲಿ 7ಕ್ಕೆ 199 (ಆಯುಷ್ ಬಡೋನಿ 74, ಅಬ್ದುಲ್ ಸಮದ್ 45, ಆವೇಶ್ ಖಾನ್ ಔಟಾಗದೇ 19; ಅರ್ಷದೀಪ್ ಸಿಂಗ್ 16ಕ್ಕೆ 3, ಅಜ್ಮತ್‌ವುಲ್ಲಾ ಒಮರ್‌ಜೈ 33ಕ್ಕೆ 2). ಪಂದ್ಯದ ಆಟಗಾರ: ಪ್ರಭಸಿಮ್ರನ್ ಸಿಂಗ್

ಆರ್‌ಸಿಬಿ ಅಭಿಮಾನಿಗಳ ಮನ ಗೆದ್ದ ಯಶ್ ದಯಾಳ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎರಡು ವರ್ಷಗಳ ಹಿಂದೆ, ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಯಶ್ ದಯಾಳ್ ಅವರು ಗುಜರಾತ್ ಟೈಟನ್ಸ್ ತಂಡದಲ್ಲಿ ಆಡಿದ್ದರು. ಕೋಲ್ಕತ್ತ ನೈಟ್ ರೈಡರ್ಸ್ ಎದುರಿನ ಪಂದ್ಯದಲ್ಲಿ ಯಶ್ ದಯಾಳ್ ಹಾಕಿದ್ದ ನಿರ್ಣಾಯಕ ಓವರ್‌ನಲ್ಲಿ ರಿಂಕು ಸಿಂಗ್ ಐದು ಸಿಕ್ಸರ್ ಹೊಡೆದಿದ್ದರು.

ಇದರಿಂದಾಗಿ ಯಶ್ ಅವರು ಗುಜರಾತ್ ಅಭಿಮಾನಿಗಳಿಂದ ಬಹಳಷ್ಟು ಟೀಕೆಗಳನ್ನು ಎದುರಿಸಬೇಕಾಯಿತು. ಅಷ್ಟೇ ಅಲ್ಲ. ಅವರನ್ನು ತಂಡವು ರಿಲೀಸ್ ಕೂಡ ಮಾಡಿತು. ಆದರೆ ಹೋದ ವರ್ಷದ ಆವೃತ್ತಿಯ ಟೂರ್ನಿಯಲ್ಲಿ ಆಡಲು, ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಯಶ್ ಅವರನ್ನು ಖರೀದಿಸಿದಾಗ ಬಹಳಷ್ಟು ಮಂದಿ ಅಚ್ಚರಿಗೊಂಡರು. ಆರ್‌ಸಿಬಿ ಅಭಿಮಾನಿಗಳು ಅಸಮಾಧಾನ ವ್ಯಕ್ತಪಡಿಸಿದ್ದರು. ಸಾಮಾಜಿಕ ಜಾಲತಾಣಗಳಲ್ಲಿ ವ್ಯಂಗ್ಯಭರಿತ ಪೋಸ್ಟ್‌ಗಳು ಹರಿದಾಡಿದ್ದವು.

ಆದರೆ ದಯಾಳ್ ಅವರು ಅದೇ ವರ್ಷ ಎಲ್ಲ ಟೀಕೆಗಳಿಗೂ ಉತ್ತರ ಕೊಟ್ಟರು. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಎದುರಿನ ಪಂದ್ಯದ ಕೊನೆಯ ಓವರ್‌ನಲ್ಲಿ ಎಡಗೈ ವೇಗಿ ತೋರಿದ ಕೈಚಳಕವು ಅಭಿಮಾನಿಗಳ ಮನಗೆದ್ದಿತು. ಆ ಓವರ್‌ನಲ್ಲಿ ಅವರು ಮಹೇಂದ್ರಸಿಂಗ್ ಧೋನಿ ವಿಕೆಟ್ ಉರುಳಿಸಿದ್ದರು. ಅದರಿಂದಾಗಿ ಚೆನ್ನೈ ತಂಡವು ಪಂದ್ಯ ಸೋತು, ಪ್ಲೇಆಫ್ ಅವಕಾಶ ಕಳೆದುಕೊಂಡಿತ್ತು.

ಶನಿವಾರ ಮತ್ತೊಮ್ಮೆ ಯಶ್ ದಯಾಳ್ ಮತ್ತು ಚೆನ್ನೈನ ಕೊನೆಯ ಓವರ್‌ನ ಥ್ರಿಲ್ಲರ್ ಮರುಕಳಿಸಿತು. 214 ರನ್‌ಗಳ ಗುರಿ ಬೆನ್ನಟ್ಟಿದ್ದ ಚೆನ್ನೈ ತಂಡಕ್ಕೆ ಕೊನೆ ಓವರ್‌ನಲ್ಲಿ ಗೆಲುವಿಗೆ 16 ರನ್‌ಗಳು ಬೇಕಾಗಿದ್ದವು. ಯಶ್ ಎಸೆತದಲ್ಲಿ ಧೋನಿ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು. ಆರ್‌ಸಿಬಿ 2 ರನ್‌ಗಳ ರೋಚಕ ಜಯ ಸಾಧಿಸಿತು.

ಉತ್ತರಪ್ರದೇಶ ಅಲಹಾಬಾದಿನ ಯಶ್ ಏಕಾಗ್ರತೆ ಮತ್ತು ದಿಟ್ಟತನವು ಗಮನ ಸೆಳೆಯಿತು.

ವೈಭವ್ ಆಟಕ್ಕೆ ಮೋದಿ ಶ್ಲಾಘನೆ

ವೈಭವ್

ಪಟ್ನಾ (ಪಿಟಿಐ): 14ರ ಹರೆಯದ ಬ್ಯಾಟರ್ ವೈಭವ್ ಸೂರ್ಯವಂಶಿ ಅವರನ್ನು 'ಬಿಹಾರದ ಪುತ್ರ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಬಣ್ಣಿಸಿದ್ದಾರೆ.

ಬಿಹಾರದ ಪಟ್ನಾದಲ್ಲಿ ನಡೆಯುತ್ತಿರುವ ಖೇಲೊ ಇಂಡಿಯಾ ಯುವ ಕ್ರೀಡಾಕೂಟದ ಉದ್ಘಾಟನೆಯ ವೇಳೆ ವರ್ಚುವಲ್ ಭಾಷಣದಲ್ಲಿ ವೈಭವ್ ಅವರ ಬ್ಯಾಟಿಂಗ್ ಕೌಶಲವನ್ನು ಮೋದಿ ಉಲ್ಲೇಖಿಸಿದರು.

'ಐಪಿಎಲ್‌ನಲ್ಲಿ ಬಿಹಾರದ ಪುತ್ರ ವೈಭವ್ ಅದ್ಭುತ ಆಟವನ್ನು ನೋಡಿದ್ದೇನೆ. ಚಿಕ್ಕ ವಯಸ್ಸಿನಲ್ಲಿ ದೊಡ್ಡ ದಾಖಲೆ ನಿರ್ಮಿಸಿದ್ದಾನೆ' ಎಂದು ಮೋದಿ ಶ್ಲಾಘಿಸಿದರು.

ರಾಜಸ್ಥಾನ ರಾಯಲ್ಸ್ ತಂಡವನ್ನು ಪ್ರತಿನಿಧಿಸುತ್ತಿರುವ ವೈಭವ್ ಈಚೆಗೆ ಗುಜರಾತ್ ಟೈಟನ್ಸ್ ವಿರುದ್ಧದ ಪಂದ್ಯದಲ್ಲಿ 35 ಎಸೆತಗಳಲ್ಲಿ ಶತಕ ಬಾರಿಸಿದ್ದರು. ಇದು ಐಪಿಎಲ್‌ನಲ್ಲಿ ದಾಖಲಾದ ಎರಡನೇ ಅತಿವೇಗದ ಶತಕವಾಗಿದೆ.

ಇಂದು ಹೈದರಾಬಾದ್‌ನಲ್ಲಿ ಪ್ಯಾಟ್ ಕಮಿನ್ಸ್ ಪಡೆಯ ವಿರುದ್ಧ ಹಣಾಹಣಿ

ಗೆಲುವಿನ ಹಳಿಗೆ ಮರಳಲು ಡೆಲ್ಲಿ ತವಕ


ಪ್ಯಾಟ್ ಕಮಿನ್ಸ್

ಹೈದರಾಬಾದ್ (ಪಿಟಿಐ): ತವರಿನಲ್ಲಿ ಸತತ ಎರಡು ಪಂದ್ಯಗಳನ್ನು ಸೋತಿರುವ ಡೆಲ್ಲಿ ಕ್ಯಾಪಿಟಲ್ಸ್ ತಂಡ ಸೋಮವಾರ ನಡೆಯುವ ಐಪಿಎಲ್ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ಎದುರಿಸಲಿದ್ದು, ಗೆಲುವಿನ ಹಳಿಗೆ ಮರಳುವ ಪ್ರಯತ್ನ ನಡೆಸಲಿದೆ. ಸನ್‌ರೈಸರ್ಸ್ ತಂಡ ಪ್ಲೇಆಫ್‌ನ ಗುಟುಕು ಆಸೆಗೆ ಜೀವತುಂಬುವ ವಿಶ್ವಾಸದಲ್ಲಿದೆ.

ಕೊನೆಯ ಪಂದ್ಯದಲ್ಲಿ 14 ರನ್‌ಗಳಿಂದ ಕೋಲ್ಕತ್ತ ನೈಟ್ ರೈಡರ್ಸ್‌ಗೆ ಸೋತಿರುವುದು ಡೆಲ್ಲಿ ಅಭಿಯಾನಕ್ಕೆ ಹಿನ್ನಡೆ ಉಂಟುಮಾಡಿತು. ಆದರೆ ತವರಿನಿಂದಾಚೆಗಿನ ಪಂದ್ಯಗಳಲ್ಲಿ ಉತ್ತಮ ಸಾಧನೆ ತೋರಿದ ಪರಿಣಾಮ ಅಕ್ಷರ್ ಪಟೇಲ್ ಬಳಗದ ಪ್ಲೇ ಆಫ್ ಆಸೆ ಜೀವಂತವಾಗಿದೆ.

ಏ. 30ರಂದು ಕೆಕೆಆರ್ ವಿರುದ್ಧದ ಪಂದ್ಯದ ವೇಳೆ ಎಡಗೈಗೆ ಗಾಯವಾದ ಪರಿಣಾಮ ಅಕ್ಷರ್ ಪಟೇಲ್ ಮೈದಾನ ತೊರೆದಿದ್ದರು. ಆದರೆ ನಾಲ್ಕು ದಿನಗಳ ಅವಧಿಯಲ್ಲಿ ಈ ಉತ್ಸಾಹಿ ಆಲ್‌ರೌಂಡರ್ ಚೇತರಿಸಿಕೊಂಡಿದ್ದಾರೆಯೇ ಎಂಬುದನ್ನು ಕಾದುನೋಡಬೇಕಿದೆ. ಗಾಯದ ನಂತರವೂ ಬ್ಯಾಟಿಂಗ್ ವೇಳೆ ಅವರು 23 ಎಸೆತಗಳಲ್ಲಿ 43 ರನ್ ಹೊಡೆದಿದ್ದರು.

ಕೊನೆಯ ಐದು ಪಂದ್ಯಗಳಲ್ಲಿ ಮೂರನ್ನು ಸೋತಿರುವ ಡೆಲ್ಲಿ ತಂಡ ಲೀಗ್ ಮುಕ್ತಾಯದ ಹಂತದಲ್ಲಿ ಎಡವಟ್ಟಾಗದಂತೆ ಎಚ್ಚರಿಕೆ ವಹಿಸಬೇಕಿದೆ. ಕೋಲ್ಕತ್ತ ವಿರುದ್ಧ ಪಂದ್ಯದಲ್ಲಿ ಆರಂಭ ಆಟಗಾರ ಫಫ್ ಡುಪ್ಲೆಸಿ ಅವರ ಅರ್ಧಶತಕ ತಂಡಕ್ಕೆ ಸಕಾರಾತ್ಮಕ ಅಂಶ. 9 ಪಂದ್ಯಗಳಿಂದ 371 ರನ್‌ಗಳೊಡನೆ ತಂಡದ ಯಶಸ್ವಿ ಬ್ಯಾಟರ್ ಎನಿಸಿರುವ ಕೆ.ಎಲ್. ರಾಹುಲ್ ನಿಧಾನಗತಿಯ ಅಂಕಣಗಳಲ್ಲಿ ರನ್ ವೇಗ ಹೆಚ್ಚಿಸುವತ್ತ ಗಮನ ನೀಡಬೇಕಾಗಿದೆ. ಅವರಿಗೆ ಇಲ್ಲಿ ಪ್ಯಾಟ್ ಕಮಿನ್ಸ್, ಮೊಹಮ್ಮದ್ ಶಮಿ ಮತ್ತು ಹರ್ಷಲ್ ಪಟೇಲ್ ಅವರ ಸವಾಲು ಇದೆ. ಅಭಿಷೇಕ್ ಪೊರೆಲ್ ಉತ್ತಮ ಆರಂಭ ಪಡೆದರೂ ಅದನ್ನು ದೊಡ್ಡಮೊತ್ತವಾಗಿ ಪರಿವರ್ತಿಸುತ್ತಿಲ್ಲ. ಆದರೆ ಡೆಲ್ಲಿ ತಂಡದ ಪ್ರಮುಖ ಅಸ್ತ್ರ ಅದರ ಬೌಲಿಂಗ್. ಅನುಭವಿ ಮಿಚೆಲ್ ಸ್ಟಾರ್ಕ್, ದುಷ್ಮಂತ ಚಾಮೀರ, ಮುಕೇಶ್ ಜೊತೆಗೆ ಸ್ಪಿನ್ನರ್ ಕುಲದೀಪ್ ಯಾದವ್ ಇದ್ದಾರೆ.

ಸನ್‌ರೈಸರ್ಸ್ ತಂಡದಲ್ಲಿ ಅನುಭವಿಗಳಾದ ಕಮಿನ್ಸ್, ಶಮಿ, ಟ್ರಾವಿಸ್ ಹೆಡ್, ಇಶಾನ್ ಕಿಶನ್, ಹೆನ್ರಿಚ್ ಕ್ಲಾಸೆನ್ ಮತ್ತು ಜೈದೇವ್ ಉನದ್ಕತ್ ಇದ್ದರೂ ತಂಡವು ಈ ಋತುವಿನಲ್ಲಿ ಪರದಾಡಿದ್ದೇ ಹೆಚ್ಚು. ಶುಕ್ರವಾರ ಗುಜರಾತ್ ಟೈಟನ್ಸ್ ಎದುರಿನ ಸೋಲು ತಂಡದ ಪ್ಲೇಆಫ್ ಆಸೆಯನ್ನು ಬಹುತೇಕ ಭಗ್ನಗೊಳಿಸಿದೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್

ಡೆಲ್ಲಿ ಕ್ಯಾಪಿಟಲ್ಸ್ ತಂಡದ ನಾಯಕ ಅಕ್ಷರ್ ಪಟೇಲ್

ಪಂಜಾಬ್ ಕಿಂಗ್ಸ್‌ಗೆ ಮಿಚ್ ಒವೆನ್ಸ್

ಮುಲ್ಲನಪುರ (ಪಿಟಿಐ): ಬೆರಳಿನ ಮೂಳೆಮುರಿತದಿಂದ ಐಪಿಎಲ್‌ನಿಂದ ಹೊರಬಿದ್ದಿರುವ ಆಲ್‌ರೌಂಡರ್ ಗ್ಲೆನ್ ಮ್ಯಾಕ್ಸ್‌ವೆಲ್ ಅವರ ಸ್ಥಾನಕ್ಕೆ ಪಂಜಾಬ್ ಕಿಂಗ್ಸ್ ತಂಡವು, ಆಸ್ಟ್ರೇಲಿಯಾದ ಇನ್ನೊಬ್ಬ ಆಲ್‌ರೌಂಡರ್ ಮಿಚ್ ಒವೆನ್ ಅವರನ್ನು ಸೇರ್ಪಡೆ ಮಾಡಿಕೊಂಡಿದೆ.

ಮ್ಯಾಕ್ಸ್‌ವೆಲ್ ಈ ಬಾರಿ ದಯನೀಯವಾಗಿ ವಿಫಲರಾಗಿದ್ದರು. ಏಳು ಇನಿಂಗ್ಸ್‌ಗಳಲ್ಲಿ ಬರೇ 48 ರನ್ ಗಳಿಸಿದ್ದರು. ಇದರಲ್ಲಿ ಆರು ಬಾರಿ ಒಂದಂಕಿ ಮೊತ್ತಕ್ಕೆ ನಿರ್ಗಮಿಸಿದ್ದರು.

ಕೋಲ್ಕತ್ತ ನೈಟ್ ವಿರುದ್ಧದ ಪಂದ್ಯದಲ್ಲಿ ಮ್ಯಾಕ್ಸ್‌ವೆಲ್ ಗಾಯಾಳಾಗಿದ್ದರು. ಸಿಎಸ್‌ಕೆ ವಿರುದ್ಧ ಪಂದ್ಯದಲ್ಲಿ ಮ್ಯಾಕ್ಸ್‌ವೆಲ್ ಸ್ಥಾನದಲ್ಲಿ ಸೂರ್ಯಾಂಶ್ ಶೆಡ್ಗೆ ಆಡಿದ್ದರು.

ತಾಸ್ಮೇನಿಯಾದ 23 ವರ್ಷ ವಯಸ್ಸಿನ ಒವೆನ್ ಬಲಗೈ ಬ್ಯಾಟರ್ ಮತ್ತು ಬಲಗೈ ವೇಗಿಯಾಗಿದ್ದು 14 ಪ್ರಥಮ ದರ್ಜೆ ಪಂದ್ಯಗಳನ್ನು ಆಡಿದ್ದಾರೆ.

34 ಟಿ20 ಪಂದ್ಯಗಳಲ್ಲಿ ಎರಡು ಶತಕ ಸೇರಿದಂತೆ 646 ರನ್ ಗಳಿಸಿದ್ದಾರೆ. 108 ಅತ್ಯಧಿಕ. 10 ವಿಕೆಟ್‌ಗಳನ್ನು ಪಡೆದಿದ್ದಾರೆ. ಅವರು ₹3 ಕೋಟಿ ಮೊತ್ತಕ್ಕೆ ಶ್ರೇಯಸ್ ಅಯ್ಯರ್ ಬಳಗ ಸೇರಿಕೊಳ್ಳಲಿದ್ದಾರೆ.

7 ವರ್ಷಗಳ ಬಳಿಕ ಭಾರತ ವಿರುದ್ಧ ಗೆದ್ದ ಲಂಕಾ

ಕೊಲಂಬೊ (ಪಿಟಿಐ): ಅನುಭವಿ ಆಲ್‌ರೌಂಡರ್ ನೀಲಾಕ್ಷಿಕಾ ಸಿಲ್ವ ಅವರ ಆಕ್ರಮಣಕಾರಿ ಆಟದ (33 ಎಸೆತಗಳಲ್ಲಿ 56) ನೆರವಿನಿಂದ ಶ್ರೀಲಂಕಾ ತಂಡ ಮಹಿಳಾ ತ್ರಿಕೋನ ಸರಣಿ ಏಕದಿನ ಪಂದ್ಯದಲ್ಲಿ ಭಾರತ ತಂಡದ ಮೇಲೆ ಭಾನುವಾರ ಮೂರು ವಿಕೆಟ್‌ಗಳ ಜಯ ಪಡೆಯಿತು. ಇದು ದ್ವೀಪರಾಷ್ಟ್ರವು, ಭಾರತ ತಂಡದ ವಿರುದ್ಧ ಏಳು ವರ್ಷಗಳಲ್ಲಿ ದಾಖಲಿಸಿದ ಮೊದಲ ಜಯ ಎನಿಸಿತು.

ಲಂಕಾಕ್ಕೆ ಇದು ಟೂರ್ನಿಯಲ್ಲಿ ಎರಡನೇ ಗೆಲುವು ಆಗಿದ್ದು, ಅದು ಫೈನಲ್‌ಗೆ ಹತ್ತಿರವಾಯಿತು. ಇದು ಸರಣಿಯಲ್ಲಿ ಭಾರತಕ್ಕೆ ಮೊದಲ ಸೋಲು. ಆದರೆ ಈ ಹಿಂದೆ ಎರಡು ಗೆಲುವುಗಳನ್ನು ಸಾಧಿಸಿದ ಕಾರಣ ಫೈನಲ್ ತಲುಪುವ ನಿರೀಕ್ಷೆಯಿದೆ. ಎರಡೂ ತಂಡಗಳಿಗೂ ದಕ್ಷಿಣ ಆಫ್ರಿಕಾ ವಿರುದ್ಧ ತಲಾ ಒಂದು ಪಂದ್ಯ ಬಾಕಿ ಇದೆ. ಇದೇ 11ರಂದು ಫೈನಲ್ ನಡೆಯಲಿದೆ.

ಬ್ಯಾಟ್ ಮಾಡಲು ಕಳುಹಿಸಲ್ಪಟ್ಟ ಭಾರತ 9 ವಿಕೆಟ್‌ಗೆ 275 ರನ್ ಗಳಿಸಿತು. ವಿಕೆಟ್ ಕೀಪರ್ –ಬ್ಯಾಟರ್ ರಿಚಾ ಘೋಷ್ 48 ಎಸೆತಗಳಲ್ಲಿ 58 ರ್ ಬಾರಿಸಿದರು. ಒಂದು ಹಂತದಲ್ಲಿ 33ನೇ ಓವರಿನ ನಂತರ 4 ವಿಕೆಟ್‌ಗೆ 152 ರನ್ ಗಳಿಸಿ ಪರದಾಡುತ್ತಿದ್ದ ಲಂಕಾ ತಂಡ ಅಂತಿಮವಾಗಿ ಐದು ಎಸೆತಗಳಿರುವಂತೆ 7 ವಿಕೆಟ್‌ಗೆ 278 ರನ್ ಹೊಡೆಯಿತು.

ಪಂದ್ಯದ ಆಟಗಾರ್ತಿ ಗೌರವಕ್ಕೆ ಪಾತ್ರರಾದ ನೀಲಾಕ್ಷಿಕಾ ಮೂರು ಸಿಕ್ಸರ್, ಐದು ಬೌಂಡರಿಗಳನ್ನು ಬಾರಿಸಿದರು.

ಸಂಕ್ಷಿಪ್ತ ಸ್ಕೋರು: ಭಾರತ: 50 ಓವರುಗಳಲ್ಲಿ 9ಕ್ಕೆ 275 (ಪ್ರತಿಕಾ ರಾವಲ್ 35, ಹರ್ಲೀನ್ ಡಿಯೋಲ್ 29, ಹರ್ಮನ್‌ಪ್ರೀತ್ ಕೌರ್ 30, ಜೆಮಿಮಾ ರಾಡ್ರಿಗಸ್ 37, ರಿಚಾ ಘೋಷ್ 58, ದೀಪ್ತಿ ಶರ್ಮಾ 24; ಸುಗಂಧಿಕಾ ಕುಮಾರಿ 44ಕ್ಕೆ3, ಚಾಮರಿ ಅಟ್ಟಪಟ್ಟು 45ಕ್ಕೆ3); ಶ್ರೀಲಂಕಾ: 49.1 ಓವರುಗಳಲ್ಲಿ 7 ಕ್ಕೆ 278 (ವಿಶ್ಮಿ ಗುಣರತ್ನೆ 33, ಹರ್ಷಿತಾ ಸಮರವಿಕ್ರಮ 53, ಕವಿಶಾ ದಿಲ್ಹಾರಿ 35, ನೀಲಾಕ್ಷಿಕಾ ಸಿಲ್ವ 56; ಸ್ನೇಹ ರಾಣಾ 45ಕ್ಕೆ3).

ರಾಷ್ಟ್ರೀಯ ಮುಕ್ತ ಚೆಸ್: ಶ್ಯಾಮ್ ಅಜೇಯ ಓಟ

ಅಗ್ರಸ್ಥಾನದಲ್ಲಿ ಬಾಲಪ್ರತಿಭೆ ಆರುಷ್

ಪ್ರಜಾವಾಣಿ ವಾರ್ತೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಆರುಷ್ ಭಟ್ ಅವರು ಕ್ಲಾಸಿಕಲ್ ರೇಟೆಡ್ ರಾಷ್ಟ್ರೀಯ ಮುಕ್ತ ಚೆಸ್ ಟೂರ್ನಿಯ ಎರಡನೇ ದಿನವಾದ ಭಾನುವಾರ ಅಗ್ರಸ್ಥಾನ ಹಂಚಿಕೊಂಡಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲಾ ಚೆಸ್ ಸಂಸ್ಥೆ ಆಶ್ರಯದಲ್ಲಿ ನಗರದ ಪುರಭವನ ಆವರಣದಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಆರುಷ್ ಜೊತೆ ಇತರ ಆರು ಮಂದಿ ಅಜೇಯ ಓಟ ಮುಂದುವರಿಸಿದ್ದಾರೆ.

ಅಗ್ರಶ್ರೇಯಾಂಕದ ಆಟಗಾರ ತಮಿಳುನಾಡಿನ ಶ್ಯಾಮ್ ಆರ್, ದಕ್ಷಿಣ ಕನ್ನಡದ ಆರುಷಿ ಸೆವರಿನ್ ಡಿಸಿಲ್ವ ಮತ್ತು ಲಕ್ಷಿತ್ ಬಿ.ಸಾಲಿಯಾನ್, ಉಡುಪಿಯ ನಿಶಾಂತ್ ಡಿಸೋಜ, ಛತ್ತೀಸ್‌ಗಢದ ಅಜಯ್ ಕುಮಾರ್ ಮತ್ತು ಕರ್ನಾಟಕದ ನಿರಂಜನ್ ವಾರಿಯರ್ ಅಗ್ರಸ್ಥಾನ ಹಂಚಿಕೊಂಡಿರುವ ಇತರರು. ಮೊದಲ ದಿನ ಅಗ್ರಸ್ಥಾನ ಹಂಚಿಕೊಂಡಿದ್ದ ಎರಡನೇ ಶ್ರೇಯಾಂಕದ ಆಟಗಾರ ಕರ್ನಾಟಕದ ಅನೀಶ್ ಅಡಿಗ ಮೂರು ಪಾಯಿಂಟ್‌ಗಳೊಂದಿಗೆ 26ನೇ ಸ್ಥಾನಕ್ಕೆ ಕುಸಿದರು.

ಶನಿವಾರ ಎರಡೂ ಸುತ್ತುಗಳಲ್ಲಿ ಜಯಭೇರಿ ಮೊಳಗಿಸಿದ್ದ 13 ವರ್ಷದೊಳಗಿನ ಆಟಗಾರ ಆರುಷ್ ಭಟ್ ಭಾನುವಾರವೂ ಗೆಲುವಿನ ಓಟ ಮುಂದುವರಿಸಿದರು. 1825 ರೇಟಿಂಗ್ ಹೊಂದಿರುವ ಅವರು ಮೂರನೇ ಸುತ್ತಿನಲ್ಲಿ ಆರಾಧ್ಯಾ ಎ.ಶೆಟ್ಟಿ (1605 ರೇಟಿಂಗ್) ಮತ್ತು ನಾಲ್ಕನೇ ಸುತ್ತಿನಲ್ಲಿ ಅರವಿಂದ ಬಿ.ಆರ್ (1717) ವಿರುದ್ಧ ಗೆಲುವು ಸಾಧಿಸಿದರು. 2122 ರೇಟಿಂಗ್ ಪಾಯಿಂಟ್ ಇರುವ ಶ್ಯಾಮ್ ದಿನದ ಎರಡೂ ಸುತ್ತುಗಳಲ್ಲಿ ತಮಗಿಂತ ಕಡಿಮೆ ರೇಟಿಂಗ್‌ನ ಆಟಗಾರರನ್ನು ಮಣಿಸಿದರು.

ಆರುಷ್ ಭಟ್

1736 ರೇಟಿಂಗ್‌ನ ನಿಶಾಂತ್ ಡಿಸೋಜ ನಾಲ್ಕನೇ ಸುತ್ತಿನಲ್ಲಿ ಮಿಂಚಿದರು. ತಮಗಿಂತ ಹೆಚ್ಚು ರೇಟಿಂಗ್ (1993) ಇರುವ ಅನೀಶ್ ಅಡಿಗ ವಿರುದ್ಧ ಅವರು ಜಯಭೇರಿ ಮೊಳಗಿಸಿದರು. ಐದನೇ ಸುತ್ತಿನಲ್ಲಿ ನಿಶಾಂತ್ ಮತ್ತು ಆರುಷ್ ಭಟ್ ಸೋಮವಾರ ಮುಖಾಮುಖಿಯಾಗಲಿದ್ದಾರೆ. ಆರುಷಿ ಸೆವರಿನ್ ಮತ್ತು ಶ್ಯಾಮ್ ನಡುವಿನ ಹೋರಾಟಕ್ಕೂ ಐದನೇ ಸುತ್ತು ಸಾಕ್ಷಿಯಾಗಲಿದೆ.

ನಾಲ್ಕನೇ ಸುತ್ತಿನ ಪ್ರಮುಖ ಫಲಿತಾಂಶಗಳು: ಕರ್ನಾಟಕದ ಅಚಿಂತ್ಯ ಭಟ್ ವಿರುದ್ಧ ತಮಿಳುನಾಡಿನ ಶ್ಯಾಮ್ ಆರ್ ಜಯಭೇರಿ; ಕರ್ನಾಟಕದ ನಿಶಾಂತ್ ಡಿಸೋಜಗೆ ಕರ್ನಾಟಕದ ಅನೀಶ್ ಅಡಿಗ ವಿರುದ್ಧ ಗೆಲುವು; ಕರ್ನಾಟಕದ ನಿರಂಜನ್ ವಾರಿಯರ್‌ಗೆ ಕರ್ನಾಟಕದ ಅನ್ಮೂಲ್ ಪಣಿಕ್ಕರ್ ವಿರುದ್ಧ, ಕರ್ನಾಟಕದ ಲಕ್ಷಿತ್ ಸಾಲಿಯಾನ್‌ಗೆ ತಮಿಳುನಾಡಿನ ಮಾಧವಕೃಷ್ಣನ್ ವಿರುದ್ಧ, ಕರ್ನಾಟಕದ ಆರುಷ್ ಭಟ್‌ಗೆ ಕರ್ನಾಟಕದ ಅರವಿಂದ ಬಿ.ಆರ್ ವಿರುದ್ಧ, ಕರ್ನಾಟಕದ ಆರುಷಿ ಸೆವೆರಿನ್ ಡಿಸಿಲ್ವಗೆ ಗೋವಾದ ವಿಹಾನ್ ತಾರಿ ವಿರುದ್ಧ ಜಯ; ಕರ್ನಾಟಕದ ಹರ್ಷಿಲ್ ಮಿಶ್ರಾ ಮತ್ತು ಕರ್ನಾಟಕದ ರಜಸ್ ದಹಳೆ, ಕರ್ನಾಟಕದ ರುದ್ರ ರಾಜೀವ್ ಮತ್ತು ಕರ್ನಾಟಕದ ಸ್ಯಾಮ್ಯುಯೆಲ್ ಅಜಿತ್, ನವದೆಹಲಿಯ ಪ್ರದೀಪ್ ತಿವಾರಿ ಮತ್ತು ತಮಿಳುನಾಡಿನ ರಕ್ಷಿತ್ ಎಂ, ಗೋವಾದ ಜೋಶುವಾ ಮಾರ್ಕ್ ಟೆಲಿಸ್ ಮತ್ತು ಕೇರಳದ ನೀರದ್ ನಡುವಿನ ಪಂದ್ಯ ಡ್ರಾ.

ನವನೀತ್ ಮಿಂಚು: ಭಾರತಕ್ಕೆ ಜಯ

ಪರ್ತ್ (ಪಿಟಿಐ): ಉಪನಾಯಕಿ ನವನೀತ್ ಕೌರ್ ಅವರ ಅಮೋಘ ಆಟದ ಬಲದಿಂದ ಭಾರತ ವನಿತೆಯರ ತಂಡವು ಹಾಕಿ ಸರಣಿಯ ಕೊನೆಯ ಪಂದ್ಯದಲ್ಲಿ 1–0ಯಿಂದ ಆಸ್ಟ್ರೇಲಿಯಾ ವಿರುದ್ಧ ರೋಚಕ ಜಯ ಸಾಧಿಸಿತು.

ಮೂರು ಪಂದ್ಯಗಳ ಸರಣಿಯನ್ನು ಆತಿಥೇಯ ತಂಡವು 2–1ರಿಂದ ಗೆದ್ದುಕೊಂಡಿತು. ಸರಣಿಯ ಮೊದಲೆರಡು ಪಂದ್ಯಗಳಲ್ಲಿ ಭಾರತ ತಂಡವು ಕ್ರಮವಾಗಿ 0–2 ಮತ್ತು 2–3 ಗೋಲುಗಳಿಂದ ಪರಾಭವಗೊಂಡಿತ್ತು.

ಪರ್ತ್ ಹಾಕಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಅನುಭವಿ ಸ್ಟ್ರೈಕರ್ ನವನೀತ್ ಅವರು 21ನೇ ನಿಮಿಷದಲ್ಲಿ ಗೆಲುವಿನ ಗೋಲು ದಾಖಲಿಸಿದರು. ಈ ಮೂಲಕ ಆಸ್ಟ್ರೇಲಿಯಾ ಪ್ರವಾಸದಲ್ಲಿ ಏಕೈಕ ಜಯವನ್ನು ಭಾರತ ತಂಡಕ್ಕೆ ತಂದುಕೊಟ್ಟರು. ಸರಣಿಗೂ ಮುನ್ನ ನಡೆದ ಎರಡು ಅಭ್ಯಾಸ ಪಂದ್ಯಗಳಲ್ಲೂ ಸಲೀಮಾ ಟೆಟೆ ಬಳಗ ಕ್ರಮವಾಗಿ 3–5 ಮತ್ತು 2–3ರಿಂದ ಆಸ್ಟ್ರೇಲಿಯಾ ಎ ತಂಡಕ್ಕೆ ಮಣಿದಿದ್ದರು.

ಮೊದಲ ಕ್ವಾರ್ಟರ್‌ನಲ್ಲಿ ಆಸ್ಟ್ರೇಲಿಯಾ ತಂಡವು ಪ್ರಾಬಲ್ಯ ಸಾಧಿಸಿ, ಎರಡು ಪೆನಾಲ್ಟಿ ಕಾರ್ನರ್ ಅವಕಾಶಗಳನ್ನು ಪಡೆಯಿತು. ಅವೆರಡನ್ನೂ ವ್ಯರ್ಥವಾಗುವಂತೆ ಭಾರತದ ವನಿತೆಯರು ನೋಡಿಕೊಂಡರು. ಎರಡನೇ ಕ್ವಾರ್ಟರ್ ಆರಂಭವಾದ ಆರು ನಿಮಿಷಗಳಲ್ಲಿ ನವನೀತ್ ಅವರು ಅಮೋಘ ರೀತಿಯಲ್ಲಿ ಫೀಲ್ಡ್ ಗೋಲು ಮೂಲಕ ಭಾರತ ತಂಡಕ್ಕೆ ಮುನ್ನಡೆ ಒದಗಿಸಿದರು. ಶನಿವಾರ ನಡೆದಿದ್ದ ಎರಡನೇ ಪಂದ್ಯದಲ್ಲೂ ಅವರು ಒಂದು ಗೋಲು ಗಳಿಸಿದ್ದರು.


ಭಾರತ ತಂಡದ ನವನೀತ್ ಕೌರ್

ದ್ವಿತೀಯಾರ್ಧದಲ್ಲೂ ಉಭಯ ತಂಡಗಳಿಂದ ತೀವ್ರ ಪೈಪೋಟಿ ನಡೆಯಿತು. ಸಮಬಲಕ್ಕೆ ಪ್ರಯತ್ನ ನಡೆಸುತ್ತಿದ್ದ ಆಸ್ಟ್ರೇಲಿಯಾ ತಂಡಕ್ಕೆ ಕೊನೆಯ ಕ್ವಾರ್ಟರ್‌ನಲ್ಲಿ ನಿರ್ಣಾಯಕ ಪೆನಾಲ್ಟಿ ಕಾರ್ನರ್ ಅವಕಾಶ ಲಭಿಸಿತು. ಇದು ಭಾರತದ ಪಾಳಯದಲ್ಲಿ ಒಂದು ಕ್ಷಣ ಆತಂಕ ಮೂಡಿಸಿತ್ತು. ಆದರೆ, ಎದುರಾಳಿಯ ಗೋಲು ಅವಕಾಶವನ್ನು ಯಶಸ್ವಿಯಾಗಿ ತಡೆದು ಸಂಭ್ರಮಿಸಿತು.

ಸಂಕ್ಷಿಪ್ತ ಸುದ್ದಿ

ದೇವಾಂಗ ತಂಡಕ್ಕೆ ಗೆಲುವು

ಬೆಂಗಳೂರು: ರೋಹನ್ ಸಂಗಲ್ ಮತ್ತು ರಿಷಿ ಅವರ ಆಟದ ಬಲದಿಂದ ದೇವಾಂಗ ಯೂನಿಯನ್ ತಂಡವು ಎಂ.ಸಿ.ಶ್ರೀನಿವಾಸ ಸ್ಮರಣಾರ್ಥ ಟ್ರೋಫಿಗಾಗಿ ನಡೆಯುತ್ತಿರುವ ರಾಜ್ಯ ಬಿ ಡಿವಿಷನ್ ಪುರುಷರ ಬ್ಯಾಸ್ಕೆಟ್‌ಬಾಲ್ ಲೀಗ್‌ನ ಪಂದ್ಯದಲ್ಲಿ 74–55ರಿಂದ ವೈಎಂಎಂಎ ತಂಡವನ್ನು ಮಣಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ರೆಲೀಗೇಶನ್ ಲೀಗ್ ಪಂದ್ಯದಲ್ಲಿ ವಿರಾಮದ ವೇಳೆಗೆ 46–32 ಅಂತರದ ಮುನ್ನಡೆ ಪಡೆದಿದ್ದ ಯೂನಿಯನ್ ತಂಡವು ಉತ್ತರಾರ್ಧದಲ್ಲೂ ಪ್ರಾಬಲ್ಯ ಮೆರೆಯಿತು. ರೋಹನ್ ಮತ್ತು ರಿಷಿ ಕ್ರಮವಾಗಿ 32 ಮತ್ತು 22 ಅಂಕ ಗಳಿಸಿದರು. ವೈಎಂಎಂಎ ತಂಡದ ಪ್ರಭಾತ್ ತೋಮರ್ 31, ಪ್ರಶಾಂತ್ ತೋಮರ್ 19 ಪಾಯಿಂಟ್ಸ್ ಸಂಪಾದಿಸಿದರು.

ಬೆಂಗಳೂರು ವ್ಯಾನ್ಗಾರ್ಡ್ಸ್ ತಂಡವು 85–72ರಿಂದ ಬಾಷ್ ತಂಡವನ್ನು ಸೋಲಿಸಿತು. ಮಧ್ಯಂತರದ ವೇಳೆ 46–38 ಮುನ್ನಡೆ ಗಳಿಸಿದ್ದ ವ್ಯಾನ್ಗಾರ್ಡ್ಸ್ ತಂಡ ನಂತರವೂ ಮೇಲುಗೈ ಸಾಧಿಸಿತು. ಅನಿರುದ್ಧ್ (24) ಮತ್ತು ಅಕ್ಷನ್ ರಾವ್ (20) ವ್ಯಾನ್ಗಾರ್ಡ್ಸ್ ಪರ ಮಿಂಚಿದರು.

ಹ್ಯಾಂಡ್‌ಬಾಲ್: ಗುಜರಾತ್‌ಗೆ ಪ್ರಶಸ್ತಿ

ಶ್ರೀರಂಗಪಟ್ಟಣ: ಗುಜರಾತ್ ತಂಡವು ಭಾನುವಾರ ಇಲ್ಲಿ ನಡೆದ ಬಾಲಕಿಯರ 39ನೇ ರಾಷ್ಟ್ರೀಯ ಸಬ್ ಜೂನಿಯರ್ ಹ್ಯಾಂಡ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಆತಿಥೇಯ ಕರ್ನಾಟಕವನ್ನು ಮಣಿಸಿ ಪ್ರಶಸ್ತಿ ಎತ್ತಿಹಿಡಿಯಿತು.

ಇಲ್ಲಿನ ತಾಲ್ಲೂಕು ಕ್ರೀಡಾಂಗಣದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಗುಜರಾತ್ 26–14 ಅಂಕಗಳಿಂದ ಗೆದ್ದು ಬೀಗಿತು. ಕರ್ನಾಟಕ ರನ್ನರ್ ಅಪ್ ಆಯಿತು. ಕರ್ನಾಟಕ ಹ್ಯಾಂಡ್‌ಬಾಲ್ ಸಂಸ್ಥೆ, ಜಿಲ್ಲಾ ಹ್ಯಾಂಡ್ ಬಾಲ್ ಅಸೋಸಿಯೇಷನ್, ರೋಟರಿ ಕ್ಲಬ್, ಉದ್ಯೋಗದಾತ ಸಂಸ್ಥೆ ಹಾಗೂ ಅಚೀವರ್ಸ್ ಅಕಾಡೆಮಿಯಿಂದ ಈ ಟೂರ್ನಿ ಆಯೋಜಿಸಲಾಗಿತ್ತು.

ಚೀನಾಕ್ಕೆ ಸುಧೀರ್‌ಮನ್ ಕಪ್

ಷಾಮೆನ್ (ಚೀನಾ), (ಪಿಟಿಐ): ಆತಿಥೇಯ ಚೀನಾ ಭಾನುವಾರ ನಡೆದ ಫೈನಲ್‌ನಲ್ಲಿ 3–1 ರಿಂದ ದಕ್ಷಿಣ ಕೊರಿಯಾ ತಂಡವನ್ನು ಸೋಲಿಸಿ ಸುದೀರ್‌ಮನ್ ಕಪ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ದಾಖಲೆಯ ಓಟವನ್ನು ಮುಂದುವರಿಸಿತು. ಎರಡು ವರ್ಷಕ್ಕೊಮ್ಮೆ ಮಿಶ್ರ ತಂಡ ವಿಭಾಗದಲ್ಲಿ ನಡೆಯುವ ಈ ಟೂರ್ನಿಯನ್ನು ಚೀನಾ 14ನೇ ಬಾರಿ ಗೆದ್ದುಕೊಂಡಿತು.

ಈ ಹಿಂದಿನ ಮೂರು ಆವೃತ್ತಿಗಳಲ್ಲಿ ಜಯಭೇರಿ ಬಾರಿಸಿದ್ದ ಚೀನಾ, ನಾಲ್ಕು ಬಾರಿಯ ಚಾಂಪಿಯನ್ ದಕ್ಷಿಣ ಕೊರಿಯಾ ವಿರುದ್ಧ ಫೈನಲ್‌ನಲ್ಲಿ ಗೆಲ್ಲುವ ನೆಚ್ಚಿನ ತಂಡವೆನಿಸಿತ್ತು.